ಹುಬ್ಬಳ್ಳಿ
ಶುಕ್ರವಾರ, 19 ಜೂನ್ 2026
ಸಂಪುಟ 16, ಸಂಚಿಕೆ 86, ಪುಟಗಳು 12
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ ₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಇಪಿಎಫ್ ಬಡ್ಡಿ ದರ ಶೇ.8.25ಕ್ಕೆ ಒಪ್ಪಿಗೆ | 02
ವಿಯೆಟ್ನಾಂ ಜತೆ ಬ್ರಹ್ಮೋಸ್ ಒಪ್ಪಂದ | 02
ಶಿರಡಿ ಸಾಯಿಗೆ ₹660 ಕೋಟಿ ದೇಣಿಗೆ | 02

ಪರಿಷತ್ ಫಲಿತಾಂಶ: ಕೈ 5ನೇ ಸ್ಥಾನ ಗೆಲುವಿಗೆ ಅಡ್ಡಮತ ನೆರವು

ಕಾಂಗ್ರೆಸ್ 5, ಬಿಜೆಪಿ 2



ಮುಖ್ಯಮಂತ್ರಿ ಡಿಕೆಶಿ ಜತೆ ಪರಿಷತ್ ಚುನಾವಣೆ ಗೆದ್ದ ಕೈ ಅಭ್ಯರ್ಥಿಗಳು.



ಬಿಜೆಪಿ ಅಭ್ಯರ್ಥಿಗಳಿಗೆ ಪಕ್ಷದ ಮುಖಂಡರ ಅಭಿನಂದನೆ.

ಬೆಂಗಳೂರು: ವಿಧಾನಸಭೆಯಿಂದ ವಿಧಾನ ಪರಿಷತ್‌ನ 7 ಸ್ಥಾನಗಳಿಗೆ ನಡೆದ ದ್ವೈವಾರ್ಷಿಕ ಚುನಾವಣೆಯಲ್ಲಿ ನಿರೀಕ್ಷೆಯಂತೆ ಕಾಂಗ್ರೆಸ್ 5 ಸ್ಥಾನಗಳಲ್ಲಿ ಜಯಗಳಿಸಿದ್ದು, ಬಿಜೆಪಿ ಎರಡು ಸ್ಥಾನಗಳಲ್ಲಿ ಜಯಭೇರಿ ಭಾರಿಸಿದೆ. ಜೆಡಿಎಸ್ ಅಭ್ಯರ್ಥಿ ಗೋವಿಂದರಾಜು ಸೋಲು ಅನುಭವಿಸಿದ್ದಾರೆ. ಕಾಂಗ್ರೆಸ್‌ನ 5ನೇ ಅಭ್ಯರ್ಥಿ ಗೆಲುವಿಗೆ ಅಡ್ಡಮತದಾನ ನೆರವಾಗಿದೆ.



ಸಂಖ್ಯಾಬಲ ಪ್ರಕಾರ ಕಾಂಗ್ರೆಸ್ ನಾಲ್ಕು, ಬಿಜೆಪಿ ಎರಡು ಸ್ಥಾನಗಳನ್ನು ಸುಲಭವಾಗಿ ಗೆಲ್ಲಬಹುದಿತ್ತು, ಕಾಂಗ್ರೆಸ್ ಐದನೆ ಅಭ್ಯರ್ಥಿಯನ್ನು ಹಾಗೂ ಎನ್‌ಡಿಎಯಿಂದ ಜೆಡಿಎಸ್ ಅಭ್ಯರ್ಥಿಯನ್ನು ಕಣಕ್ಕಿಳಿಸಿರುವುದರಿಂದ ಚುನಾವಣೆ ನಡೆದಿತ್ತು. ಅಚ್ಚರಿ ಎಂಬಂತೆ ಕಾಂಗ್ರೆಸ್‌ನಿಂದ ಐದನೇ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ವಿನಯ್ ಕಾರ್ತಿಕ್ ನಿರೀಕ್ಷೆಗಿಂತ ಹೆಚ್ಚು ಬರೋಬ್ಬರಿ 32 ಮತಗಳನ್ನು ಪಡೆದಿದ್ದಾರೆ. ಜೆಡಿಎಸ್ ಅಭ್ಯರ್ಥಿ ಕೇವಲ 14 ಮತಗಳನ್ನು ಪಡೆಯುವ ಮೂಲಕ ಸೋಲು ಅನುಭವಿಸಿದ್ದಾರೆ.

ಯಾರ್‍ಯಾರಿಗೆ ಗೆಲುವು: ಕಾಂಗ್ರೆಸ್‌ನಿಂದ ಬಿ.ಕೆ. ಹರಿಪ್ರಸಾದ್, ತಿಪ್ಪಣ್ಣಪ್ಪ ಕಮಕನೂರ, ಪಿ.ವಿ. ಮೋಹನ್, ವಿನಯ್ ಕಾರ್ತಿಕ್, ಶಿವಣ್ಣ ಮಳವಳ್ಳಿ ಸೇರಿ 5 ಜನ ಗೆಲುವು ಸಾಧಿಸಿ ಪರಿಷತ್ ಪ್ರವೇಶಿಸಿದ್ದಾರೆ. ಬಿಜೆಪಿಯಿಂದ ರಘು ಕೌಟಿಲ್ಯ ಮತ್ತು ಲಿಂಗರಾಜ್ ಪಾಟೀಲ್ ವಿಜಯಶಾಲಿಗಳಾಗಿ ಪರಿಷತ್‌ಗೆ ಆಯ್ಕೆಯಾಗಿದ್ದಾರೆ. ಜೆಡಿಎಸ್‌ನಿಂದ ಗೋವಿಂದರಾಜು ಸೋಲುಂಡಿದ್ದಾರೆ.

ಬಿಜೆಪಿ-ಜೆಡಿಎಸ್ ಶಾಸಕರಿಂದ ಅಡ್ಡ ಮತದಾನ: ಜೆಡಿಎಸ್ ಹಾಗೂ ಬಿಜೆಪಿ ಶಾಸಕರು ಅಡ್ಡ ಮತದಾನ ಮಾಡಿದ್ದು, ಕಾಂಗ್ರೆಸ್‌ನ ಐದನೇ ಅಭ್ಯರ್ಥಿ ಗೆಲುವಿಗೆ ಕಾರಣವಾಗಿದೆ. ➡ಪುಟ ೪

ಪಡೆದ ಪ್ರಥಮ ಪ್ರಾಶಸ್ತ್ಯದ ಮತಗಳು

- ವಿನಯ್ ಕಾರ್ತಿಕ್ – 32
- ಬಿ.ಕೆ. ಪರಿಪ್ರಸಾದ್ – 30
- ತಿಪ್ಪಣ್ಣಪ್ಪ ಕಮಕನೂರ – 30
- ಶಿವಣ್ಣ ಮಳವಳ್ಳಿ – 30
- ಪಿ.ವಿ. ಮೋಹನ್ – 29
- ರಘು ಕೌಟಿಲ್ಯ – 29
- ಲಿಂಗರಾಜ್ ಪಾಟೀಲ್ – 27
- ಗೋವಿಂದ ರಾಜು – 14

- ಕಾಂಗ್ರೆಸ್ 136 ಮತಗಳು
- ಬಿಜೆಪಿ 62 ಮತಗಳು
- ಜೆಡಿಎಸ್ 18 ಮತಗಳು
- ಪಕ್ಷೇತರ 2 ಮತಗಳು
- ಸರ್ವೋದಯ ಪಕ್ಷ 1 ಮತ
- ಬಿಜೆಪಿ ಉಚ್ಚಾಟಿತ 3 ಮತಗಳು
- ಒಬ್ಬ ಅಭ್ಯರ್ಥಿ ಗೆಲುವಿಗೆ ಬೇಕಾದ್ದು 28 ಮತಗಳು

“ಹೊಸ ಸರ್ಕಾರ ಬಂದ ಬಳಿಕ ನಡೆದ ಚುನಾವಣೆಯಲ್ಲಿ ಶಾಸಕರ ಬೆಂಬಲ ನೋಡಿ ಆಶ್ಚರ್ಯವಾಗುತ್ತಿದೆ. ನಮ್ಮ ಸರ್ಕಾರಕ್ಕೆ ನೀವು ಮುಂದುವರಿಯಿರಿ ಎಂದು ರಾಜ್ಯದ ಜನರ ಅಭಿಪ್ರಾಯದ ಬೆಂಬಲ ಇದಾಗಿದೆ. ನಮಗೆ ಬೇರೆ ಪಕ್ಷದವರೂ ಮತ ನೀಡಿದ್ದಾರೆ.

■ **ಡಿ.ಕೆ. ಶಿವಕುಮಾರ್,** ಮುಖ್ಯಮಂತ್ರಿ

“ಅಡ್ಡ ಮತದಾನವಾಗಿದ್ದರ ಬಗ್ಗೆ ಪಕ್ಷ ಪರಿಶೀಲನೆ ಮಾಡಲಿದೆ. ಲಿಂಗರಾಜ ಪಾಟೀಲ್ ಅವರ ಮೂರು ಮತಗಳು ಅಡ್ಡ ಮತದಾನವಾಗಿದೆ. ರಘು ಅವರ 30 ಮತಗಳಲ್ಲಿ ಒಂದು ಮತ ಅಸಿಂಧುವಾಗಿದೆ. ಇದನ್ನು ಯಾರು ಮಾಡಿದ್ದಾರೆ, ಯಾಕೆ ಮಾಡಿದ್ದಾರೆ ಎಂಬುದನ್ನು ಮುಂದೆ ಪರಿಶೀಲನೆ ನಡೆಸಲಾಗುವುದು.

■ **ಬಿ.ವೈ. ವಿಜಯೇಂದ್ರ,** ಬಿಜೆಪಿ ರಾಜ್ಯಾಧ್ಯಕ್ಷ

6 ಸಂಸದರ ಬಂಡಾಯ | ಶಿಂಧೆ ಬಣದತ್ತ ಹೆಜ್ಜೆ

ಉದ್ಧವ್ ಶಿವಸೇನೆಗೆ ಮತ್ತೊಂದು ಆಘಾತ



ಮುಂಬೈ: ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆಗೆ ಮತ್ತೊಮ್ಮೆ ದೊಡ್ಡ ರಾಜಕೀಯ ಹಿನ್ನಡೆ ಎದುರಾಗಿದೆ. ಪಕ್ಷದ ಆರು ಬಂಡಾಯ ಸಂಸದರು ಬುಧವಾರ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರನ್ನು ಭೇಟಿ ಮಾಡಿ ತಮ್ಮ ನಿಲುವು ಸ್ಪಷ್ಟಪಡಿಸಿದ್ದಾರೆ. ಪಕ್ಷವು ತನ್ನ ಮೂಲ ಸಿದ್ಧಾಂತದಿಂದ ದೂರ ಸರಿದಿದ್ದು, ಭವಿಷ್ಯದಲ್ಲಿ ಕಾಂಗ್ರೆಸ್‌ನೊಂದಿಗೆ ವಿಲೀನಗೊಳ್ಳುವ ಯೋಜನೆ ರೂಪಿಸಲಾಗುತ್ತಿದೆ ಎಂಬ ಗಂಭೀರ ಆರೋಪವನ್ನು ಅವರು ಮಾಡಿದ್ದಾರೆ.

ಮೂಲಗಳ ಪ್ರಕಾರ, ಇದೇ ಕಾರಣದಿಂದ ಅವರು ಉದ್ಧವ್ ಠಾಕ್ರೆ ಬಣವನ್ನು ತೊರೆದು ಮುಖ್ಯಮಂತ್ರಿ ಏಕನಾಥ್ ಶಿಂಧೆ ನೇತೃತ್ವದ ಶಿವಸೇನೆ ಬಣದೊಂದಿಗೆ ಕೈಜೋಡಿಸಲು ನಿರ್ಧರಿಸಿದ್ದಾರೆ. ಜತೆಗೆ, ಲೋಕಸಭೆಯಲ್ಲಿ ಶಿಂಧೆ ಬಣದ ಸಂಸದರ ಆಸನಗಳ ಸಮೀಪದಲ್ಲೇ ತಮ್ಮ ಆಸನಗಳನ್ನು ಮರುಹಂಚಿಕೆ ಮಾಡಬೇಕೆಂದು ಸ್ಪೀಕರ್‌ಗೆ ಮನವಿ ಮಾಡಿದ್ದಾರೆ.

ದಿಲ್ಲಿಯಲ್ಲಿ ರಹಸ್ಯ ಸಭೆ: ಕಳೆದ ಎರಡು ದಿನಗಳಿಂದ ಸಂಪರ್ಕಕ್ಕೆ ಸಿಗದಿದ್ದ ಆರು ಸಂಸದರು ಇದೀಗ ಬಹಿರಂಗವಾಗಿ ತಮ್ಮ ನಿಲುವು ಪ್ರಕಟಿಸಿದ್ದಾರೆ. ನಂದೇಡ್‌ನ ನಾಗೇಶ್ ಅಷ್ಟೀಕರ್, ಭೌಸಾಹೇಬ್ ವಾಘಚೌರೆ, ಸಂಜಯ್ ದಿನಾ ಪಾಟೀಲ್, ಓಂರಾಜೆ ನಿಂಬಾಳ್ಕರ್, ಸಂಜಯ್ ದೇಶಮುಖ್ ಹಾಗೂ ಸಂಜಯ್ ಜಾಧವ್ ಈ ಬಂಡಾಯ ಗುಂಪಿನ ಸದಸ್ಯರಾಗಿದ್ದಾರೆ. ಇವರು ವಿವಿಧ ನಗರಗಳಿಂದ ಖಾಸಗಿ ವಿಮಾನಗಳಲ್ಲಿ ದಿಲ್ಲಿಗೆ ಆಗಮಿಸಿ, ನೋಯ್ಡಾದ ಹೋಟೆಲ್‌ನಲ್ಲಿ ತಂಗಿದ್ದರು. ಬಳಿಕ ಏಕನಾಥ್ ಶಿಂಧೆ ಹಾಗೂ ಅವರ ಪುತ್ರ ಶ್ರೀಕಾಂತ್ ಶಿಂಧೆ ಅವರೊಂದಿಗೆ ಸಭೆ ನಡೆಸಿ ಸ್ಪೀಕರ್‌ರನ್ನು ಭೇಟಿಯಾಗಿದ್ದಾರೆ. ➡ಪುಟ ೪

ನಾಯಕತ್ವದ ವಿರುದ್ಧ ಅಸಮಾಧಾನ

ಬಂಡಾಯ ಸಂಸದರು ಉದ್ಧವ್ ಠಾಕ್ರೆ ಅವರ ನಾಯಕತ್ವದ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ತಮ್ಮ ಕ್ಷೇತ್ರಗಳಿಗೆ ಭೇಟಿ ನೀಡಲು ನಾಯಕತ್ವ ಆಸಕ್ತಿ ತೋರಲಿಲ್ಲ, ಚುನಾವಣೆ ಸಂದರ್ಭ ಅಗತ್ಯ ಬೆಂಬಲ ದೊರೆಯಲಿಲ್ಲ. ಉದ್ಧವ್ ಪುತ್ರ ಆದಿತ್ಯ ಠಾಕ್ರೆ ಅವರನ್ನೂ ಸಂಪರ್ಕಿಸುವುದು ಕಷ್ಟವಾಗಿತ್ತು ಎಂದು ಅವರು ಆರೋಪಿಸಿದ್ದಾರೆ.

ಬಂಡಾಯ ಸಂಸದರಿಗೆ ವೈ-ಪ್ಲಸ್ ಭದ್ರತೆ

ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆ (ಯುಬಿಟಿ) ಪಕ್ಷದ ವಿರುದ್ಧ ಬಂಡಾಯ ಎದ್ದಿರುವ ಆರು ಲೋಕಸಭಾ ಸದಸ್ಯರಿಗೆ ಮಹಾರಾಷ್ಟ್ರ ಪೊಲೀಸರು ವೈ-ಪ್ಲಸ್ ಭದ್ರತೆ ಒದಗಿಸಿದ್ದಾರೆ. ಗುಪ್ತಚರ ವಿಭಾಗದ ಆಯುಕ್ತ ಶಿರೀಷ್ ಜೈನ್ ಸಹಿ ಮಾಡಿರುವ ಪತ್ರದ ಪ್ರಕಾರ, ಸಂಜಯ್ ದಿನಾ ಪಾಟೀಲ್, ಸಂಜಯ್ ದೇಶಮುಖ್, ಸಂಜಯ್ ಜಾಧವ್, ಭೌಸಾಹೇಬ್ ವಾಕ್‌ಚೌರೆ, ನಾಗೇಶ್ ಪಾಟೀಲ್-ಅಷ್ಟೀಕರ್ ಹಾಗೂ ಓಂಪ್ರಕಾಶ್ ರಾಜೆ ನಿಂಬಾಳ್ಕರ್ ಅವರಿಗೆ ತಕ್ಷಣದಿಂದಲೇ ಈ ಭದ್ರತೆ ನೀಡಲಾಗಿದೆ. ವೈ-ಪ್ಲಸ್ ಭದ್ರತೆಯಲ್ಲಿ 11 ಭದ್ರತಾ ಸಿಬ್ಬಂದಿ ಇರುತ್ತಾರೆ.

ಅಮೆರಿಕದ ಎಐ ನಿರ್ಬಂಧಗಳ ನಡುವೆ ಪ್ರಧಾನಿ ಮೋದಿ ಕರೆ

ತಂತ್ರಜ್ಞಾನ ಎಲ್ಲರಿಗೂ ತಲುಪಲಿ

ಪ್ಯಾರಿಸ್: ತಂತ್ರಜ್ಞಾನವು ಕೆಲವರ ಕೈಯಲ್ಲಿ ಸೀಮಿತವಾಗದೆ ಎಲ್ಲರಿಗೂ ಲಭ್ಯವಾಗಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದರು. ಯುರೋಪಿನ ಅತಿದೊಡ್ಡ ತಂತ್ರಜ್ಞಾನ ಮತ್ತು ನಾವೀನ್ಯತಾ ಸಮಾವೇಶವಾದ ವಿವಾಟೆಕ್ 2026ನಲ್ಲಿ ಮಾತನಾಡಿದ ಅವರು, ಭಾರತಕ್ಕೆ ಎಐ(ಕೃತಕ ಬುದ್ಧಿಮತ್ತೆ) ಎಂದರೆ 'ಆಲ್ ಇನ್‌ಕ್ಲೂಸಿವ್' (ಎಲ್ಲರನ್ನೂ ಒಳಗೊಂಡ) ಎಂಬುದಾಗಿದೆ ಎಂದರು. ಅಮೆರಿಕ ಸರ್ಕಾರವು ಕೆಲವು ಸುಧಾರಿತ ಎಐ ಮಾದರಿಗಳ ಬಳಕೆಗೆ ನಿರ್ಬಂಧ ಹೇರಿದ ಹಿನ್ನೆಲೆ ಜಾಗತಿಕ ಮಟ್ಟದಲ್ಲಿ ತಂತ್ರಜ್ಞಾನ ಲಭ್ಯತೆ ಕುರಿತು ಚರ್ಚೆಗಳು ನಡೆಯುತ್ತಿರುವ ಸಮಯದಲ್ಲೇ ಮೋದಿ ಈ ಅಭಿಪ್ರಾಯ ವ್ಯಕ್ತಪಡಿಸಿದರು. ತಂತ್ರಜ್ಞಾನದಲ್ಲಿ ನಾವೀನ್ಯತೆಯ ಜತೆಗೆ ಅದರ ಪ್ರವೇಶವೂ ಅತ್ಯಂತ ಮುಖ್ಯ. ತಂತ್ರಜ್ಞಾನವು ಪ್ರಗತಿಗೆ ಕಾರಣವಾಗಬೇಕಾದರೆ ಅದು ಜನಸಾಮಾನ್ಯರಿಗೂ ತಲುಪಬೇಕು. ➡ಪುಟ ೪



ಭಾರತಕ್ಕೆ ಎಐ ಎಂದರೆ 'ಆಲ್ ಇನ್‌ಕ್ಲೂಸಿವ್'


ಸ್ಟಾರ್ಟ್‌ಅಪ್ ಶಕ್ತಿಕೇಂದ್ರ

ಭಾರತದಲ್ಲಿ 2 ಲಕ್ಷಕ್ಕೂ ಅಧಿಕ ಸ್ಟಾರ್ಟ್‌ಅಪ್‌ಗಳಿದ್ದು, ವಿಶ್ವದ ಅತ್ಯಂತ ಚುರುಕು ನಾವೀನ್ಯತಾ ಪರಿಸರ ವ್ಯವಸ್ಥೆಗಳಲ್ಲಿ ಒಂದಾಗಿದೆ. ವಿವಾಟೆಕ್‌ನಲ್ಲಿ ಸ್ಥಾಪಿಸಲಾದ ಭಾರತದ ಪೆವಿಲಿಯನ್‌ಗೆ ಭೇಟಿ ನೀಡುವಂತೆ ಆಹ್ವಾನಿಸಿದ ಅವರು, 3ಡಿ ಮುದ್ರಿತ ರಾಕೆಟ್ ಎಂಜಿನ್‌ಗಳು, ಜಿನೋಮಿಕ್ ಚಿಕಿತ್ಸೆಗಳು, ಕ್ಯಾನ್ಸರ್ ಪತ್ತೆಹಚ್ಚುವ ಎಐ ಪರಿಹಾರಗಳು, ಸೈಬರ್ ಭದ್ರತಾ ತಂತ್ರಜ್ಞಾನ, ಸ್ವಯಂಚಾಲಿತ ರೋಬೋಟ್‌ಗಳು, ಸ್ಮಾರ್ಟ್ ಸಿಟಿ ಮತ್ತು ಮೊಬಿಲಿಟಿ ಪರಿಹಾರಗಳನ್ನು ಮೋದಿ ಉಲ್ಲೇಖಿಸಿದರು.

ಆರೆಸ್ಸೆಸ್ ಕಚೇರಿ ಮೇಲೆ ಪೆಟ್ರೋಲ್ ಬಾಂಬ್ ದಾಳಿ ಪ್ರಕರಣ

ಬಂಧಿತರಿಗೆ ಪಾಕ್ ಉಗ್ರ ಸಂಪರ್ಕ

ರಾಂಚಿ: ಜಾರ್ಖಂಡ್‌ನ ರಾಂಚಿಯಲ್ಲಿರುವ ಆರ್‌ಎಸ್‌ಎಸ್ ಕಚೇರಿ ಮೇಲೆ ಪೆಟ್ರೋಲ್ ಬಾಂಬ್ ಎಸೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಪಾಕಿಸ್ತಾನ ಮೂಲದ ಉಗ್ರ ಸಂಘಟನೆಗಳ ಸಂಪರ್ಕ ಶಂಕೆ ಹಿನ್ನೆಲೆ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.



ಬಂಧಿತರಲ್ಲಿ ಒಬ್ಬನಾದ ಸೈಫ್ ಅನ್ಸಾರಿ ಅಲಿಯಾಸ್ ರೋಹಿತ್ ವಿಚಾರಣೆ ವೇಳೆ ಪೊಲೀಸ್ ವಶದಿಂದ ತಪ್ಪಿಸಿಕೊಂಡು ನಂತರ ನಡೆದ ಗುಂಡಿನ ಚಕಮಕಿಯಲ್ಲಿ ಗಾಯಗೊಂಡು ಮತ್ತೆ ಸೆರೆಸಿಕ್ಕಿದ್ದಾನೆ. ರಾಂಚಿಯ ನಿವಾರಣಪುರ ಪ್ರದೇಶದಲ್ಲಿರುವ ಆರ್‌ಎಸ್‌ಎಸ್ ಕಚೇರಿ ಮೇಲೆ ಬುಧವಾರ ಮುಂಜಾನೆ ಪೆಟ್ರೋಲ್ ಬಾಂಬ್ ದಾಳಿ ನಡೆದಿತ್ತು. ಈ ಘಟನೆ ಹಿನ್ನೆಲೆಯಲ್ಲಿ ಪೊಲೀಸರು ವಿಶೇಷ ತನಿಖಾ ತಂಡ(ಎಸ್‌ಐಟಿ) ರಚಿಸಿ ತನಿಖೆ ಆರಂಭಿಸಿದ್ದರು. ಇಬ್ಬರು ಆರೋಪಿಗಳನ್ನು ಬುಧವಾರ ರಾತ್ರಿ ಲೋಹಾರ್ಡಾಗಾ ಜಿಲ್ಲೆಯಲ್ಲಿ ಬಂಧಿಸಲಾಗಿದ್ದು, ದಾಳಿಗೆ ಬಳಸಿದ್ದ ಕಾರನ್ನೂ ವಶಪಡಿಸಿಕೊಳ್ಳಲಾಗಿದೆ. ➡ಪುಟ ೪

■ ಒಬ್ಬ ಆರೋಪಿ ಪರಾರಿಯಾಗಿ ಮತ್ತೆ ಬಂಧನ
■ ಗುಂಡಿನ ಚಕಮಕಿಯಲ್ಲಿ ಆರೋಪಿಗೆ ಗಾಯ



ಐಎಸ್‌ಐ ಸಂಪರ್ಕ ಶಂಕೆ

ಆರೋಪಿಗಳಿಗೆ ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಅಥವಾ ಇತರ ಉಗ್ರ ಸಂಘಟನೆಗಳ ಸಂಪರ್ಕವಿದೆಯೇ ಎಂಬ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಧ್ಯಪ್ರಾಚ್ಯ ಯುದ್ಧಕ್ಕೆ ವಿರಾಮ

- ಮಧ್ಯಂತರ ಒಪ್ಪಂದಕ್ಕೆ ಅಮೆರಿಕ-ಇರಾನ್ ಸಹಿ
- ಪರಮಾಣು ಮಾತುಕತೆಗೆ 60 ದಿನಗಳ ಕಾಲಾವಕಾಶ
- ಹಾರ್ಮುಜ್‌ನಲ್ಲಿ ಹಡಗುಗಳಿಗೆ ಮುಕ್ತ ಸಂಚಾರ
- 60 ದಿನಗಳಿಗೆ ಇರಾನ್ ಶುಲ್ಕ ವಿಧಿಸುವಂತಿಲ್ಲ



ಎವಿಯನ್-ಲೆ-ಬೈನ್ಸ್(ಫ್ರಾನ್ಸ್): ಇರಾನ್‌ನೊಂದಿಗಿನ ಮಧ್ಯಂತರ ಒಪ್ಪಂದಕ್ಕೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಹಿ ಹಾಕಿದ್ದಾರೆ. ಮಧ್ಯಂತರ ಒಪ್ಪಂದಕ್ಕೆ ಟ್ರಂಪ್ ಸಹಿ ಮಾಡುವುದರೊಂದಿಗೆ 111 ದಿನಗಳ ಮಧ್ಯಪ್ರಾಚ್ಯ ಯುದ್ಧವು ತಾತ್ಕಾಲಿಕ ಅಂತ್ಯವನ್ನು ಕಂಡಿದ್ದು, ಒಪ್ಪಂದದಂತೆ ಹಾರ್ಮುಜ್ ಜಲಸಂಧಿ ತಕ್ಷಣವೇ ತೆರೆಯಲಾಗುವುದು. ➡ಪುಟ ೪

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಆಶ್ಲೇಷ

ದಿನದ ಮಾತು

ತನ್ನಿಂದ ಜಯಿಸಲು ಸಾಧ್ಯ ಎಂದು ನಂಬುವವರಿಂದಲೇ ಜಯವನ್ನು ಪಡೆಯಲು ಸಾಧ್ಯ.
▲ನಾಣ್ನುಡಿ

ಎಲ್ಲಾ ಪಕ್ಷಗಳು ರೆಸಾರ್ಟ್ ಸಂಸ್ಕೃತಿಗೆ ಕೊನೆ ಹಾಡಲಿ

ಲೇಖನ
• ಸುರೇಶ್ ಕುಮಾರ್
• ಪುಟ ೬

ಕಿರುಸುದ್ದಿ

ಜಾರ್ಖಂಡ್, ಮಿಜೋರಾಂ: ಎನ್‌ಡಿಎ ಅಭ್ಯರ್ಥಿ ಗೆಲುವು

ರಾಂಚಿ: ಎನ್‌ಡಿಎ ಬೆಂಬಲಿತ ಜಾರ್ಖಂಡ್‌ನ ಸ್ವತಂತ್ರ ಅಭ್ಯರ್ಥಿ ಪರಿಮಲ್ ನಥವಾನಿ ಹಾಗೂ ಮಿಜೋರಾಂನ ಜೆಪಿಎಂ ಅಭ್ಯರ್ಥಿ ಕೆ.ಲಾಲ್ವ್ ಲುವಾಂಗ್ ಕಿಮಾ ಗುರುವಾರ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ. ಜಾರ್ಖಂಡ್‌ನಲ್ಲಿ ಕಾಂಗ್ರೆಸ್ ಮಿತ್ರಪಕ್ಷಗಳ ಅಡ್ಡಮತದಾನ ಎನ್‌ಡಿಎ ಬೆಂಬಲಿತ ಸ್ವತಂತ್ರ ಅಭ್ಯರ್ಥಿ ಪರಿಮಲ್ ನಥವಾನಿ ಗೆಲುವಿಗೆ ಸಹಕಾರಿಯಾಗಿದೆ.

• ಪುಟ 02

ಪ್ಯಾರಿಸ್‌ನಲ್ಲಿ ಪ್ರಧಾನಿ ಮೋದಿಗೆ ಭವ್ಯ ಸ್ವಾಗತ

• ಪುಟ 02

ಒಪ್ಪಂದ ತ್ವರಿತಗೊಳಿಸಲು ಮೋದಿ, ಟ್ರಂಪ್ ಕರೆ

• ಪುಟ 02

ಪಿಎಂ ಕಿಸಾನ್ ಕಂತು ವರ್ಗಾವಣೆ ನಾಳೆ

• ಪುಟ 02

ವದಂತಿಗೆ ಕಿವಿಗೊಡದಿರಿ: ನೀಟ್ ಅಭ್ಯರ್ಥಿಗಳಿಗೆ ಸಲಹೆ


• ಪುಟ 02

ಮೇಕೆದಾಟು, ತ.ನಾಡು ಜತೆ ಚರ್ಚೆಗೆ ಸಿದ್ಧ: ಸಿಎಂ

• ಪುಟ ೩

ತೇಜೋವಧೆ ಸಲ್ಲದು: ಮಟ್ಟಣ್ಣನವರ್‌ಗೆ ಹೈ ತಾಕೀತು

• ಪುಟ ೩



ಭಾರತದ ಚೊಚ್ಚಲ 8 ಪಥದ ರಸ್ತೆ ಸುರಂಗ
• ಪುಟ 02
ಸುದ್ದಿ ಸಮಗ್ರ

ಹಿಂದೂ ಯುವತಿ ಕರೆದೊಯ್ದ ಮುಸ್ಲಿಂ ಯುವಕನ ಬಂಧನ

ಭಟ್ಕಳ: ಸೂಪರ್ ಮಾರ್ಕೆಟೊಂದರಲ್ಲಿ ಕೆಲಸಕ್ಕಿದ್ದ ಹಿಂದೂ ಯುವತಿಯೊಬ್ಬಳನ್ನು ಕಾರಿನಲ್ಲಿ ಕರೆದೊಯ್ದ ಮುಸ್ಲಿಂ ಯುವಕ ಶಾಹೀದ್ ಖಾನ್ ಎಂಬಾತನನ್ನು ಯುವತಿ ನೀಡಿದ ದೂರಿನ ಮೇರೆಗೆ ಪೊಲೀಸರು ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು, ನ್ಯಾಯಾಲಯ ನ್ಯಾಯಾಂಗ ಬಂಧನ ವಿಧಿಸಿದೆ. • ವಿವರ ಪುಟ ೩

ಕಿರುಸುದ್ದಿ

ಸಮಾರಂಭ ಇಂದು

ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಬಂಟರ ಸಂಘದ ವತಿಯಿಂದ ಜೂ.19ರಂದು ಸಂಜೆ 4 ಗಂಟೆಗೆ ನಗರದ ಇಂದಿರಾ ಗಾಜಿನ ಮನೆ ಹತ್ತಿರವಿರುವ ಆರ್. ಎನ್. ಶೆಟ್ಟಿ ಕಲ್ಯಾಣ ಮಂಟಪದಲ್ಲಿ 'ಬಂಟರ ಬಾಂಧವ್ಯ ಸಮಾರಂಭ'ವನ್ನು ಆಯೋಜಿಸಲಾಗಿದೆ.

ಬಂಟ ಸಮುದಾಯದ ಬಾಂಧವರನ್ನು ಒಗ್ಗೂಡಿಸುವ ಮತ್ತು ಸಂಘಟನೆಯನ್ನು ಬಲಪಡಿಸುವ ಉದ್ದೇಶದಿಂದ ಈ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಸಂಘದ ಸಂಸ್ಥಾಪಕರು, ಹಿರಿಯರು, ದಾನಿಗಳು ಹಾಗೂ ಮಾಜಿ ಅಧ್ಯಕ್ಷರುಗಳು ಸಮಾರಂಭ ಯಶಸ್ವಿಗೆ ಕೈಜೋಡಿಸಿದ್ದಾರೆ ಎಂದು ಹುಬ್ಬಳ್ಳಿ-ಧಾರವಾಡ ಬಂಟರ ಸಂಘದ ಅಧ್ಯಕ್ಷ ರಾಜೇಂದ್ರ ಎ. ಶೆಟ್ಟಿ ತಿಳಿಸಿದ್ದಾರೆ. ಸಂಜೆ 4.30 ರಿಂದ ಬಂಟ ಸಮುದಾಯದವರಿಂದ ಸಾಂಸ್ಕೃತಿಕ ಮನರಂಜನಾ ಕಾರ್ಯಕ್ರಮಗಳು ನಡೆಯಲಿವೆ. ಸಂಜೆ 5 ಕ್ಕೆ ಮದುವೆಯಾದ ನೂತನ ವಧು-ವರರಿಗೆ ಹಿರಿಯರಿಂದ ಗೌರವ ಸನ್ಮಾನ, 5.30ಕ್ಕೆ ರಂಗಮಂಚದ ಕಾರ್ಯಕ್ರಮ ಮುಂದುವರಿಯಲಿದ್ದು, ಜೂನಿಯರ್ ರಾಜ್‌ಕುಮಾರ್, ಜೂನಿಯರ್ ಅಂಬರೀಶ್, ಜೂನಿಯರ್ ವಿಷ್ಣುವರ್ಧನ್ ಮತ್ತು ಜೂನಿಯರ್ ಕುಮಾರ್ ಸಾನು ಮುಂತಾದವರಿಂದ ಮನರಂಜನಾ ಕಾರ್ಯಕ್ರಮ ಜರುಗಲಿವೆ. 6ಕ್ಕೆ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ನಡೆಯಲಿದ್ದು, ವಿವಿಧ ಉಪಸಮಿತಿ ಸಂಚಾಲಕರು ಮತ್ತು ಮಹಿಳಾ ಸಂಚಾಲಕರ ಪದಗ್ರಹಣ ಮಾಡಿಕೊಡಲಾಗುವುದು. ಸಂಜೆ 7ಕ್ಕೆ ಸಂಘದ ಹಿರಿಯರಿಂದ ಶುಭನುಡಿ ಹಾಗೂ ರಾತ್ರಿ 8 ಗಂಟೆಗೆ ಅಧ್ಯಕ್ಷೀಯ ನುಡಿ ಇರಲಿದೆ. ರಾತ್ರಿ 8.30ಕ್ಕೆ ಕಾರ್ಯಕ್ರಮದ ಮುಖ್ಯಾಂಶದ ನಂತರ 'ಬಂಟರ ಭೋಜನ'ದ ವ್ಯವಸ್ಥೆ ಮಾಡಲಾಗಿದೆ ಎಂದಿದ್ದಾರೆ.

ಸಾರ್ವಜನಿಕ ಸಂಪರ್ಕ ಕಾರ್ಯಕ್ರಮ ಇಂದು

ಹುಬ್ಬಳ್ಳಿ: ಇಲ್ಲಿಯ ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆ (ಇಪಿಎಫ್ ಒ) ಪ್ರಾದೇಶಿಕ ಕಚೇರಿ ಆಶ್ರಯದಲ್ಲಿ ಪ್ರಧಾನ ಮಂತ್ರಿ, ವಿಕಸಿತ ಭಾರತ ಉದ್ಯೋಗ ಯೋಜನೆ (ಪಿಎಂ ವಿಬಿಆರ್‌ವೈ) ಅಡಿಯಲ್ಲಿ ನಗರದ ಬಿವಿಬಿ ಕ್ಯಾಂಪಸ್‌ನಲ್ಲಿರುವ ದೇಶಪಾಂಡೆ ಫೌಂಡೇಷನ್‌ನಲ್ಲಿ ಜೂನ್ 19ರಂದು ಸಂಜೆ 4ಕ್ಕೆ ಸಾರ್ವಜನಿಕ ಸಂಪರ್ಕ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಪಿಎಫ್ ಪ್ರಾದೇಶಿಕ ಆಯುಕ್ತ ಆಶುತೋಷ ತಿಳಿಸಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೆಹಲಿಯ ವಿಜ್ಞಾನ ಭವನದಿಂದ ಕಾರ್ಯಕ್ರಮವು ಅಂದು ಪ್ರಧಾನಿ ನರೇಂದ್ರ ಮೋದಿ ಅವರು ಚಾಲನೆ ನೀಡಲಿದ್ದು, ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಶಾಸಕ ಮಹೇಶ ಟೆಂಗಿನಕಾಯಿ, ಮೇಯರ್ ಜ್ಯೋತಿ ಪಾಟೀಲ, ವಿಮಾನ ನಿಲ್ದಾಣ ನಿರ್ದೇಶಕ ರೂಪೇಶ ಕುಮಾರ, ಕೆಸಿಸಿಐ ಪದಾಧಿಕಾರಿಗಳು, ಅತಿಥಿಗಳಾಗಿ ಭಾಗವಹಿಸುವರು ಎಂದರು. ಸಾಮಾಜಿಕ ಭದ್ರತಾ ಯೋಜನೆಗಳು, ಹೊಸದಾಗಿ ನೇಮಕಗೊಂಡ ನೌಕರರಿಗೆ ನೇಮಕಾತಿ ಪತ್ರ ವಿತರಣೆ, ಕಾರ್ಮಿಕ ಕಲ್ಯಾಣ ಯೋಜನೆಗಳ ಬಗ್ಗೆ ಜಾಗೃತಿ ಮೂಡಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ ಎಂದರು. 2025ರ ಆಗಸ್ಟ್ 15ರಂದು ಪ್ರಾರಂಭವಾದ ಪಿಎಂ-ವಿಬಿಆರ್‌ವೈ ಅಡಿ ಉದ್ಯೋಗದಾತರು ಹಾಗೂ ಫಲಾನುಭವಿಗಳ ನಡುವೆ ಸಂವಹನ ಸುಗಮಗೊಳಿಸಲಾಗುತ್ತಿದೆ. ಇದುವರೆಗೆ ಈವರೆಗೆ ದೇಶದಲ್ಲಿ 1.09 ಕೋಟಿ ಉದ್ಯೋಗ ಸೃಷ್ಟಿಯಾಗಿ ಅವರೆಲ್ಲ ಯೋಜನೆ ವ್ಯಾಪ್ತಿಗೆ ಒಳಪಟ್ಟಿದ್ದಾರೆ ಎಂದರು. ಎರಡು ವರ್ಷದ ಅವಧಿಯಲ್ಲಿ ಒಟ್ಟು 3.5 ಕೋಟಿಗೂ ಹೆಚ್ಚು ಉದ್ಯೋಗ ಸೃಷ್ಟಿಸಲು ಯೋಜನೆಯಡಿ ಪ್ರೋತ್ಸಾಹ ನೀಡಲಾಗುತ್ತಿದೆ. ಈ ಯೋಜನೆಯಡಿ ಹುಬ್ಬಳ್ಳಿ ಪ್ರಾದೇಶಿಕ ಕಚೇರಿ ವ್ಯಾಪ್ತಿಯಲ್ಲಿ 7056 ಉದ್ಯೋಗದಾತರು ಸಕ್ರಿಯರಾಗಿದ್ದು, ಯೋಜನೆಯಡಿ ನೋಂದಣಿ ಮಾಡಿಕೊಂಡಿದ್ದಾರೆ. ಖಾಸಗಿ ಹಾಗೂ ಸರ್ಕಾರಿ ರಂಗದಲ್ಲಿ 5.77 ಲಕ್ಷ ಜನ ರಾಜ್ಯದಲ್ಲಿ ಮೊದಲ ಬಾರಿ ಉದ್ಯೋಗ ಸೇರಿದ್ದು, ಪಿಎಫ್ ಖಾತೆ ಸೃಜನೆಯಾಗಿದೆ ಎಂದು ತಿಳಿಸಿದರು. ಪಿಎಫ್ ಅಕೌಂಟ್ಸ್ ಆಫೀಸರ್ ಮಂಜುನಾಥ ಜಿ.ಎ. ಇದ್ದರು.

₹2.24 ಲಕ್ಷ ವಂಚನೆ

ಹುಬ್ಬಳ್ಳಿ: ಕಂಪನಿಯೊಂದರ ಹಣವನ್ನು ದುರುಪಯೋಗ ಮಾಡಿದ ನಾಲ್ವರ ವಿರುದ್ಧ ಬೆಂಡಿಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅಭಿಷೇಕ ಸಣ್ಣ, ದಿಲೀಪ ಬಾಯ್ ಗಳಾದ ನಾಗರಾಜ ಸಾಲುಂಕೆ, ವಿಷ್ಣು ಸಾವಂತ, ಖಲೀಲ ಮನಿಯಾರ ಎಂಬವರ ವಿರುದ್ಧ ಟ್ಯೂಬಿಟಿಸ್ ಲಾಜಿಸ್ಟಿಕ್ ಸೊಲ್ಯೂಷನ್ ಪ್ರೈ.ಲಿಮಿಟೆಡ್‌ನ ಹುಬ್ಬಳ್ಳಿ ಶಾಖೆಯ ಎಲ್‌ಎಲ್‌ಪಿ ವಿಭಾಗದ ಮ್ಯಾನೇಜರ್ ಎಂ.ಶ್ರೀಕಾಂತ ಎಂಬುವರು ದೂರು ದಾಖಲಿಸಿದ್ದಾರೆ. ಶಾಖಾ ವ್ಯವಸ್ಥಾಪಕ ಅಭಿಷೇಕ ಹಾಗೂ ಮೂವರು ಸಿಬ್ಬಂದಿಗಳು ಸೇರಿಕೊಂಡು 1.34 ಲಕ್ಷ ರೂ. ಹಣವನ್ನು ಜಮಾ ಮಾಡದೇ ಈ ಬ್ರ್ಯಾಂಚ್‌ಗೆ ಕಳುಹಿಸಲಾಗಿದ್ದ 90,402 ರೂ. ಮೌಲ್ಯದ 126 ಪಾರ್ಸೆಲ್ ನೀಡದೆ ವಂಚಿಸಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಗಂಗವ್ವ ಗಂಗಾಯಿ ನಿಧನ

ಕುಂಡಗೋಳ: ಪಟ್ಟಣದ ದುರ್ಗಾದೇವಿ ಓಣಿಯ ನಿವಾಸಿ ಗಂಗವ್ವ ತಿಪ್ಪಣ್ಣ ಗಂಗಾಯಿ (80) ಬುಧವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.





ಹುಬ್ಬಳ್ಳಿ: ಇಲ್ಲಿಯ ಅರವಿಂದ ನಗರದ ಬಿಜೆಪಿ ಕಚೇರಿಯಲ್ಲಿ ಪ್ರಧಾನಿ ನರೇಂದ್ರಮೋದಿ ಅವರ ಆರೋಗ್ಯಕರ ಜೀವನ ಶೈಲಿಯ ಸಂದೇಶದಂತೆ ಹುಬ್ಬಳ್ಳಿ ಧಾರವಾಡ ಜಿಲ್ಲಾ ಮಹಿಳಾ ಮೋರ್ಚಾದ ವತಿಯಿಂದ ಆಯೋಜಿಸಿದ್ದ(ನೋ ಗ್ಯಾಸ್, ನೋ ಆಯಿಲ್) ಅಡುಗೆ ಎಣ್ಣೆ ಹಾಗೂ ಯಾವುದೇ ಇಂಧನ (ಬೆಂಕಿ) ಬಳಸದೆ ರುಚಿಕರವಾದ ಹಾಗೂ ಆರೋಗ್ಯ ಯುತವಾದ ಅಡುಗೆ ಮಾಡುವ ಸ್ಪರ್ಧೆ ನಡೆಯಿತು.

ವಿವಿಧ ಬೇಡಿಕೆ ಈಡೇರಿಸಲು ಒತ್ತಾಯಿಸಿ ಪ್ರತಿಭಟನೆ

ಹುಬ್ಬಳ್ಳಿ: ಡೀಸೆಲ್ ದರ ಏರಿಕೆ ಹಿಂಪಡೆಯಬೇಕು ಸೇರಿದಂತೆ ವಿವಿಧ ಬೇಡಿಕೆ ಈಡೇರಿಸಬೇಕು ಎಂದು ಆಗ್ರಹಿಸಿ ಹು-ಧಾ ಗೂಡ್ಸ್ ಟ್ರಾನ್ಸ್‌ಪೋರ್ಟರ್ಸ್ ಆ್ಯಂಡ್ ಲಾರಿ ಓನರ್ಸ್ ಅಸೋಸಿಯೇಷನ್ ಸದಸ್ಯರು ನಗರದಲ್ಲಿ ಪ್ರತಿಭಟನೆ ನಡೆಸಿತು.

ಗುರುವಾರ ನಗರದ ಮಿನಿ ವಿಧಾನ ಸೌಧದ ಎದುರು ಸಮಾವೇಶಗೊಂಡ ಪ್ರತಿಭಟನಾಕಾರರು, ಕೇಂದ್ರ, ಸರ್ಕಾರ ಡೀಸೆಲ್ ದರ ಏರಿಕೆ ಹಿಂಪಡೆಯಬೇಕು ಎಂಬ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಡೀಸೆಲ್ ದರ ಹೆಚ್ಚಾಗಿದ್ದರಿಂದ ಸರಕು, ಸಾಗಣೆ ವೆಚ್ಚ ಗಣನೀಯವಾಗಿ ಹೆಚ್ಚಾಗಿದೆ. ಆದರೆ ಸರಕು ಸಾಗಣೆ ದರಗಳಲ್ಲಿ ಸಮರ್ಪಕ ಏರಿಕೆ ಇಲ್ಲದ ಕಾರಣ ಲಾರಿ ಮಾಲೀಕರು ನಷ್ಟ ಅನುಭವಿಸುತ್ತಿದ್ದಾರೆ. ಆದ್ದರಿಂದ ಕೇಂದ್ರ, ಸರ್ಕಾರ ತಕ್ಷಣ ಡೀಸೆಲ್ ದರ ಏರಿಕೆ ಹಿಂಪಡೆಯಬೇಕು ಎಂದು ಆಗ್ರಹಿಸಿದರು. ಸರಕು ವಾಹನಗಳಿಗೆ ವಿವಿಧೆಡೆ ಕಡ್ಡಾಯ ಜಾರಿಗೊಳಿಸಿದ ವಿನಾಯಿತಿ ನೀಡಬೇಕು, ಆರು ತಿಂಗಳ ಇಎಂಐ ಮೊರಟೋರಿಯಂ ಘೋಷಿಸಬೇಕು, ಸಂಪೂರ್ಣ ಟೋಲ್ ಶುಲ್ಕದ ವಿನಾಯಿತಿ ನೀಡಬೇಕು, ರಸ್ತೆ ಸಾರಿಗೆ ಉದ್ಯಮಕ್ಕೆ ವಿಶೇಷ ನೆರವು ಪ್ಯಾಕೇಜ್ ಘೋಷಿಸಬೇಕು, ಹು-ಧಾ ಜನಪ್ರತಿನಿಧಿಗಳ ಟ್ರಕ್ ಟರ್ಮಿನಲ್ ಸ್ಥಾಪಿಸದಿರುವುದು ವಿಷಾದನೀಯ ಸಂಗತಿ. ಇದರಿಂದ ರಸ್ತೆ ಪಕ್ಕದಲ್ಲಿಯೇ ವಾಹನಗಳ ನಿಲ್ಲಿಸುವ ಅನಿವಾರ್ಯ ಎದುರಾಗಿದ್ದು, ತಕ್ಷಣ ಟ್ರಕ್ ಟರ್ಮಿನಲ್ ಸ್ಥಾಪಿಸಿ ಅನುಕೂಲ ಮಾಡಿಕೊಡಬೇಕು ಎಂದು ಆಗ್ರಹಿಸಿದರು. ತಹಶೀಲ್ದಾರ್ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಅಸೋಸಿಯೇಷನ್ ಗೌರವ ಕಾರ್ಯದರ್ಶಿ ರವೀಂದ್ರ ಬೆಳಮಕರ, ಶೇಖರಯ್ಯ ಮಠಪತಿ ಸೇರಿದಂತೆ ಅನೇಕರಿದ್ದರು.



ಹುಬ್ಬಳ್ಳಿ: ಡೀಸೆಲ್ ದರ ಏರಿಕೆ ಹಿಂಪಡೆಯಬೇಕು ಸೇರಿದಂತೆ ವಿವಿಧ ಬೇಡಿಕೆ ಈಡೇರಿಸಬೇಕು ಎಂದು ಆಗ್ರಹಿಸಿ ಹು-ಧಾ ಗೂಡ್ಸ್ ಟ್ರಾನ್ಸ್‌ಪೋರ್ಟರ್ಸ್ ಆ್ಯಂಡ್ ಲಾರಿ ಓನರ್ಸ್ ಅಸೋಸಿಯೇಷನ್ ಸದಸ್ಯರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಮಲೇರಿಯಾ ಮುಕ್ತ ಜಿಲ್ಲೆಗೆ ಕೈಜೋಡಿಸಿ

ಧಾರವಾಡ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ ಹಾಗೂ ವಿವಿಧ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಹುಬ್ಬಳ್ಳಿಯ ಸನಾ ಇನ್ಸಿಟ್ಯೂಷನ್ ಆಫ್ ಪ್ಯಾರಾಮೆಡಿಕಲ್ ಸೈನ್ಸ್ ಕಾಲೇಜಿನಲ್ಲಿ ಮಲೇರಿಯಾ ವಿರೋಧಿ ಮಾಸಾಚರಣೆ ಜಾಗೃತಿ ಅಭಿಯಾನ ಜರುಗಿತು.

ಉದ್ಘಾಟಿಸಿದ ಡಿಎಚ್‌ಒ ಡಾ.ಪರಶುರಾಮ ಎಫ್. ಕೆ. ಮಾತನಾಡಿ, ಮಳೆಗಾಲದ ಆರಂಭದೊಂದಿಗೆ ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆ ಹೆಚ್ಚಿರುವ ಕಾರಣದಿಂದ ಸಾರ್ವಜನಿಕರು ಅಗತ್ಯ ಮುನ್ನೆಚ್ಚರಿಕೆಗಳನ್ನು ವಹಿಸುವಂತೆ ಹೇಳಿದರು.

ಈ ಸಂದರ್ಭದಲ್ಲಿ ಡಾ.ಮಹೇಶ ಗದಗ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕೀಟ ತಜ್ಞ ಮಂಜುನಾಥ ಟಿ.ಪಿ., ಡಾ. ಅಬ್ದುಲ್ ರಜಾಕ್ ಹೊನ್ನುಟಗಿ, ಬಿ.ಆರ್.ಪಾತ್ರೋಟ, ಓಂಕಾರಗೌಡ, ಎಸ್.ಎಸ್.ತಿವಾರಿ, ಅಧಿಕಾರಿಗಳು, ಸಿಬ್ಬಂದಿ, ಉಪನ್ಯಾಸಕರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



- ಸೋಂಕಿತ ಹೆಣ್ಣು ಅನಾಫಿಲಿಸ್ ಸೊಳ್ಳೆಯ ಕಚ್ಚುವಿಕೆಯಿಂದ ಹರಡುವ ಮಲೇರಿಯಾ ರೋಗ
- ಜ್ವರ, ನಡುಕ, ತಲೆನೋವು, ವಾಂತಿ ಹಾಗೂ ದೌರ್ಬಲ್ಯ ಮಲೇರಿಯಾದ ಪ್ರಮುಖ ಲಕ್ಷಣಗಳು
- ಸಮಯಕ್ಕೆ ಸರಿಯಾಗಿ ಪರೀಕ್ಷೆ ಮತ್ತು ಚಿಕಿತ್ಸೆ ಅವಶ್ಯ
- ಮಲೇರಿಯಾ ತಡೆಗೆ ಮನೆಯ ಸುತ್ತಮುತ್ತ ನೀರು ನಿಲ್ಲದಿರಲಿ
- ವಾರಕ್ಕೊಮ್ಮೆ ನೀರಿನ ಪಾತ್ರೆಗಳನ್ನು ಖಾಲಿಮಾಡಿ ಸ್ವಚ್ಛಗೊಳಿಸಲು ಹೇಳಿದ ಅಧಿಕಾರಿ ಡಾ.ಮಂಜುನಾಥ

> ಆರೋಗ್ಯಕರ ಸಮಾಜ ನಿರ್ಮಾಣ ಆರೋಗ್ಯ ಇಲಾಖೆಯ ಜವಾಬ್ದಾರಿ ಮಾತ್ರ ಅಲ್ಲ, ಪ್ರತಿ ನಾಗರಿಕರ ಕರ್ತವ್ಯ. ಎಲ್ಲರೂ ಸೇರಿ ಕೆಲಸ ಮಾಡಿದರೆ ಮಲೇರಿಯಾ ರಹಿತ ಜಿಲ್ಲೆ ನಿರ್ಮಿಸಿ, ಪ್ರಾಣಾಪಾಯ ತರುವ ಸೊಳ್ಳೆಗಳ ನಿಯಂತ್ರಿಸಬೇಕಿದೆ.
> ■ ಡಾ.ಪರಶುರಾಮ ಎಫ್. ಕೆ., ಡಿಎಚ್‌ಒ

ಪ್ರಕಾಶರಾಜ್ ಬಂಧನಕ್ಕೆ ಮುತಾಲಿಕ್ ಆಗ್ರಹ
ಬುರಡೆ ಪ್ರಕರಣದಲ್ಲಿ ಪ್ರಕಾಶ್ ರಾಜ್ ಕೈವಾಡ

ಧಾರವಾಡ: ಧರ್ಮಸ್ಥಳದ ಬುರಡೆ ಪ್ರಕರಣದಲ್ಲಿ ಚಿನ್ನಯ್ಯ ಹೇಳಿದಂತೆ ಚಿತ್ರನಟ ಪ್ರಕಾಶ್ ರಾಜ್ ಕೈವಾಡದ ಬಗ್ಗೆ ಅವರೇ ಒಪ್ಪಿಕೊಂಡಿದ್ದು, ತಕ್ಷಣ ಅವರನ್ನು ಬಂಧಿಸುವಂತೆ ಶ್ರೀರಾಮ ಸೇನೆಯ ರಾಷ್ಟ್ರೀಯ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಒತ್ತಾಯಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಪ್ರಕಾಶ ರಾಜ್ ಭಾವಚಿತ್ರ ಹರಿದು ಅವರು, ಪವಿತ್ರ ಧರ್ಮಸ್ಥಳಕ್ಕೆ ಕಳಂಕ ತರಲು ಹಣ ನೀಡಿದ ಆರೋಪ ಕೇಳಿಬಂದಿದ್ದು, ತಕ್ಷಣವೇ ಎಸ್‌ಐಟಿ ಪ್ರಕಾಶ್ ರಾಜ್‌ರನ್ನು ಬಂಧಿಸಿ ವಿಚಾರಣೆ ನಡೆಸಬೇಕು. ಪ್ರಕಾಶ ರಾಜ್ ಅವರು ಓರ್ವ ನಾಸ್ತಿಕ, ಕಮ್ಯುನಿಸ್ಟ್ ಮತ್ತು ಪ್ರಖರ ಹಿಂದುತ್ವದ ವಿರೋಧಿ. ಶಿಕ್ಷಣ, ಆರೋಗ್ಯ ಸೇರಿದಂತೆ ನೂರಾರು ಸಮಾಜಮುಖಿ ಮತ್ತು ಜನಪರ ಕೆಲಸ ಮಾಡುವ ಧರ್ಮಸ್ಥಳದ ಸಂಸ್ಥೆ ಹೆಸರಿಗೆ ಮಸಿ ಬಳಿಯಲು ಸಂಚು ರೂಪಿಸಿದ್ದಾಗಿ ದೂರಿದರು. ಈ ಪ್ರಕರಣದ ಬೇರುಗಳು ಪಕ್ಕದ ಕೇರಳ ರಾಜ್ಯದವರೆಗೂ ಚಾಚಿವೆ. ಧರ್ಮಸ್ಥಳ ಹೆಸರು ಕೆಡಿಸಲು ಕೇರಳದಿಂದ ಹಣ ಹರಿದು ಬಂದಿದೆ.

3 ಇಂಚಿನ ತ್ರಿಶೂಲ ಬಳಕೆ

ಮಹಿಳೆಯರ ಆತ್ಮರಕ್ಷಣೆ, ಸುರಕ್ಷೆ ಮತ್ತು ಭದ್ರತೆಯ ದೃಷ್ಟಿಯಿಂದ ಆಂತರಿಕವಾಗಿ ನಡೆದ ತ್ರಿಶೂಲ ಕಾರ್ಯಕ್ರಮದ ಆಯೋಜಕರ ವಿರುದ್ಧವೇ ಪೊಲೀಸರು ಕೇಸ್ ದಾಖಲಿಸಿ, ಮಹಿಳಾ ವಿರೋಧಿ ಧೋರಣೆ ಅನುಸರಿಸಿದ್ದಾರೆ ಎಂದು ಪೊಲೀಸರ ನಡೆಯನ್ನು ಖಂಡಿಸಿದ ಪ್ರಮೋದ್ ಮುತಾಲಿಕ್ ಅವರು, ಕಾರ್ಯಕ್ರಮದಲ್ಲಿ ಬಳಸಿರುವುದು ಕೇವಲ ಮೂರು ಇಂಚಿನ ತ್ರಿಶೂಲಗಳು ಮಾತ್ರ. ಕಾನೂನಿನ ಪ್ರಕಾರ ಇದು ಆಯುಧದ ವ್ಯಾಪ್ತಿಗೆ ಬರುವುದಿಲ್ಲ. ಆರು ಇಂಚು ಅಥವಾ ಅದಕ್ಕಿಂತ ದೊಡ್ಡ ತ್ರಿಶೂಲ ಬಳಸಿದರೆ, ಆಯುಧವಾಗಿ ಪರಿಗಣಿಸುವ ನಿಯಮ ವಿವರಿಸಿದರು.

ಹೀಗಾಗಿ ಎಸ್‌ಐಟಿ ತನಿಖೆ ತೀವ್ರಗೊಂಡು ಇವರನ್ನು ಕೂಡಲೇ ಜೈಲಿಗಟ್ಟಬೇಕು ಎಂದರು.



ಸುಳ್ಳು ದೂರು ವಾಪಸ್ ಪಡೆಯಿರಿ

ದರೋಡೆ, ಕೊಲೆ, ಸುಲಿಗೆಕೋರರು ಹಿಡಿಯುವುದು ಬಿಟ್ಟು, ಸ್ತ್ರೀಯರ ರಕ್ಷಣೆಗೆ ಧಾರ್ಮಿಕ ಕಾರ್ಯಕ್ರಮ ಹಮ್ಮಿಕೊಂಡವರ ವಿರುದ್ಧ ದೂರು ದಾಖಲಿಸಿರುವುದು ಎಷ್ಟು ಸರಿ? ಈ ದೂರು ಸಂಪೂರ್ಣ ರಾಜಕೀಯ ಪ್ರೇರಿತವಾಗಿದೆ ಎಂದು ಪ್ರಮೋದ್ ಮುತಾಲಿಕ್ ಟೀಕೆ ಮಾಡಿದರು. ರಾಜ್ಯ ಸರ್ಕಾರ ಮತ್ತು ಪೊಲೀಸ್ ಇಲಾಖೆ ತಕ್ಷಣವೇ ಸಂಘಟಕರ ಮೇಲಿನ ಸುಳ್ಳು ದೂರನ್ನು ವಾಪಸ್ ಪಡೆಯಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ತೀವ್ರವಾಗಿ ಪ್ರತಿಭಟನೆ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ವಿಶ್ವ ಯೋಗ ದಿನ: ಪೂರ್ವಭಾವಿ ಸಭೆ

ಹುಬ್ಬಳ್ಳಿ: ವಿಶ್ವ ಯೋಗ ದಿನದ ಅಂಗವಾಗಿ ಇಲ್ಲಿಯ ಕಾರವಾರ ರಸ್ತೆ ಅರವಿಂದ ನಗರದ ಬಿಜೆಪಿ ಕಚೇರಿಯಲ್ಲಿ ಹು-ಧಾ ಮಹಾನಗರ ಜಿಲ್ಲಾ ವತಿಯಿಂದ ಗುರುವಾರ ಪೂರ್ವಭಾವಿ ಸಭೆ ನಡೆಯಿತು.

ಮಹಾನಗರ ಜಿಲ್ಲಾಧ್ಯಕ್ಷ ತಿಪ್ಪಣ್ಣಾ ಮಜ್ಜಗಿ ಮಾತನಾಡಿ, ವಿಶ್ವ ಯೋಗದಿನ ಜೂ. 21 ರಂದು ನಡೆಯಲಿದ್ದು, ಕಾರ್ಯಕರ್ತರು ಹಾಗೂ ಮುಖಂಡರು ತಪ್ಪದೇ ಭಾಗವಹಿಸಬೇಕು. ನೂತನವಾಗಿ ರಾಜ್ಯಸಭೆಗೆ ಹಾಗೂ ವಿಧಾನ ಪರಿಷತ್‌ಗೆ ಆಯ್ಕೆಯಾಗಿರುವ ಎಂ. ನಾಗರಾಜ ಹಾಗೂ ಲಿಂಗರಾಜ ಪಾಟೀಲ ಅವರಿಗೆ ಜೂ. 21 ರಂದು ಮಧ್ಯಾಹ್ನ 3.30 ಕ್ಕೆ ಭವ್ಯ ಸ್ವಾಗತ ಮಾಡಲು ಎಲ್ಲರೂ ಆಗಮಿಸಬೇಕು. ಕಾರವಾರ ರಸ್ತೆ ಇಎಸ್‌ಐ ಆಸ್ಪತ್ರೆಯಿಂದ ಪಕ್ಷದ ಕಚೇರಿ ವರೆಗೆ ಭವ್ಯ ಮರೆವಣಿಗೆ ನಡೆಸಲಾಗುವುದು. ಅಂದು ಸಂಜೆ 5.30ಕ್ಕೆ ಬಿವಿಬಿ ಕಾಲೇಜ್ ಹಾಲ್‌ನಲ್ಲಿ ನಡೆಯುವ ವಿಕಸಿತ ಭಾರತ ಸಮಾರಂಭದಲ್ಲಿ ಭಾಗವಹಿಸಲು ತಿಳಿಸಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗಳಾದ ವಸಂತ ನಾಡಜೋಶಿ, ರಾಜ್ಯ ಎಸ್ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಮಹೇಂದ್ರ ಕೌತಾಳ, ಸೆಂಟ್ರಲ್ ಕ್ಷೇತ್ರದ ಅಧ್ಯಕ್ಷ ರಾಜು ಕಾಳೆ, ಹು-ಧಾ ಪೂರ್ವ ವಿಧಾನ ಸಭಾ ಕ್ಷೇತ್ರದ ಅಧ್ಯಕ್ಷ ಮಂಜುನಾಥ ಕಾಟಕರ, ಪಶ್ಚಿಮ ಕ್ಷೇತ್ರದ ಅಧ್ಯಕ್ಷ ಮಂಜುನಾಥ ಮಲ್ಲಿಗವಾಡ, ಮಹಿಳಾ ಮೋರ್ಚಾ ಅಧ್ಯಕ್ಷ ಸೀಮಾ ಲದ್ವಾ ಇದ್ದರು.



ಮಹಾರಾಣಾ ಪ್ರತಾಪ್ ಸಿಂಹರ ತತ್ವಾದರ್ಶ ಸರ್ವರಿಗೂ ತಿಳಿಸಿ

ಧಾರವಾಡ: ಮಹಾವೀರ, ಧರ್ಮನಿಷ್ಠ, ಕ್ಷೇತ್ರ ಧರ್ಮ ಪರಿಪಾಲಕ, ರಘುವಂಶದ ಪರಾಕ್ರಮಿ, ರಾಷ್ಟ್ರ ಪ್ರೇಮಿ ಮಹಾರಾಣಾ ಪ್ರತಾಪ್ ಸಿಂಹ ಅವರಿಗೆ ಈ ಎಲ್ಲ ಗುರುದಾವಳಿಗಳು ಬರಲು ಕಾರಣವೇನೆಂದರೆ ಅವರು ತಮ್ಮ ಒಂದು ಜೀವಿತ ಅವಧಿಯಲ್ಲಿ ದೇಶಕ್ಕಾಗಿ ದುಡಿದು ತಮ್ಮ ಜೀವನವನ್ನು ಮುಡುಪಾಗಿಟ್ಟಿದ್ದ ರಿಂದ ಅವರಿಗೆ ಅನೇಕ ಬಿರುದಾವಳಿಗಳು ಲಭಿಸಿವೆ. ಆದ್ದರಿಂದ ಅಂತಹ ಮಹಾನ್ ರಾಷ್ಟ್ರ ಪ್ರೇಮಿಯ ಬಗ್ಗೆ ಈ ಮುಂದಿನ ಯುವ ಪೀಳಿಗೆಗೆ ತಿಳಿಸುವ ಕಾರ್ಯವು ನಮ್ಮೆಲ್ಲರಿಂದ ಆಗಬೇಕಾಗಿದೆ ಎಂದು ಧಾರವಾಡದ ಖ್ಯಾತ ಉದ್ಯಮಿ ಮಂಜುನಾಥ ಶಿವಪ್ಪ ಮಕ್ಕಳಗೇರಿ ಹೇಳಿದರು.

ಅವರು ಧಾರವಾಡದ ಸರಸ್ವತಿ ನಿಕೇತನ ದುರ್ಗಾದೇವಿಗುಡಿಹತ್ತಿರದಸಭಾಭವನದಲ್ಲಿಕಾನ್ಯ ಕುಬ್ಜ ಬ್ರಾಹ್ಮಣ ರಜಪುತ್ ಸಮಾಜದ ವತಿಯಿಂದ ಆಚರಿಸಿದ ಮಹಾರಾಣಾ ಪ್ರತಾಪ್ ಸಿಂಹ ಅವರ 486ನೇ ಜಯಂತ್ಯುತ್ಸವದ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು. ಅತಿಥಿ ಉಪನ್ಯಾಸಕರಾಗಿ ದೊಡವಾಡದ ಲಕ್ಷ್ಮಣ ಸಿಂಗ್ ಹಜೇರಿ ಮಾತನಾಡಿದರು. ಸಂಗ್ರಾಮ್ ಸಿಂಗ್ ರಜಪೂತ ಸ್ವಾಗತಿಸಿ, ಪ್ರಾಸ್ತಾವಿಸಿದರು. ಸಮೃದ್ಧಿ ಶ್ರೀ ಬಡಿಗೇರ್ ಪ್ರಾರ್ಥಿಸಿದರು. ಧಾರವಾಡ ಕೆಕೆ ಬಿ ರಜಪೂತ ಸಮಾಜದ ಅಧ್ಯಕ್ಷ ಜೈಸಿಂಗ್ ಡಿ. ರಜಪೂತ ಅಧ್ಯಕ್ಷತೆ ವಹಿಸಿದ್ದರು .ನಂತರ ಮಹಾರಾಣಾ ಪ್ರತಾಪ್ ಸಿಂಹ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಗೌರವಿಸಲಾಯಿತು . ಡಾ.ಪ್ರತಾಪ್ ಸಿಂಗ್, ದಿಲೀಪ್ ಸಿಂಗ್ ಆರ್. ನವಲೂರ, ಅವಿನಾಶಪ್ರಸಾದ್ ಸಿ ಪಾಂಡೆ, ಅಜಿತ್ ಸಿಂಗ್ ಪಿ ರಜಪೂತ, ನಾರಾಯಣಸಿಂಗ್ ರಾ ಯಂಕಂಚಿ, ಗಂಗಾರಾಮ್ ಸಿಂಗ್ ರಾ ಅಂಗಡಿ, ಪ್ರತಾಪ್ ಸಿಂಗ್ ಹಜೇರಿ, ಆರ್ ಬಾಲಾಜಿ ಸಿಂಗ್, ಸುಮಿತ್ರಬಾಯಿ ಹಜೇರಿ, ಸಂಧ್ಯಾ ಅಗ್ನಿಹೋತ್ರಿ, ಮುಖ್ಯೋಪಾಧ್ಯಾಯ ಹಾಗೂ ಕಲಾವಿದ ರಾಜೀವ್ ಸಿಂಗ್ ಆರ್ ಹಲವಾಯಿ ಅವರನ್ನು ಸನ್ಮಾನಿಸಲಾಯಿತು. ರಕ್ಷಾ ರಜಪೂತ ನಿರೂಪಿಸಿ, ವಂದಿಸಿದರು. ಹಿಂದಿ ಭಾಷೆ ಸಮಾಜ ಕೋ ಅಪ್ ಕ್ರೆಡಿಟ್ ಸೊಸೈಟಿ ಧಾರವಾಡ ಆಡಳಿತ ಮಂಡಳಿಯ ನಿರ್ದೇಶಕರು ಇದ್ದರು. 2025-26ನೇ ಸಾಲಿನಲ್ಲಿ ಎಸ್‌ಎಸ್ ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಮತ್ತು ಸರ್ಕಾರಿ ಮತ್ತು ಅರೆ ಸರ್ಕಾರಿ ಕೆಲಸದಲ್ಲಿ ನಿವೃತ್ತಿ ಹೊಂದಿದವರಿಗೆ, ಎಪ್ಪತ್ತು ವರ್ಷದ ದಂಪತಿಗಳಿಗೆ ವಿಶೇಷ ಸನ್ಮಾನ ಕಾರ್ಯಕ್ರಮವನ್ನು ಕಾನ್ಯ ಕುಬ್ಜ ಬ್ರಾಹ್ಮಣ ರಜಪೂತ ಸಮಾಜದ ವತಿಯಿಂದ ಸನ್ಮಾನಿಸಲಾಯಿತು. ಸಮಾಜದ ವತಿಯಿಂದ ನೇತ್ರದಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು . ಸಮಾಜದ ಎಲ್ಲ ಮುಖಂಡರು ಹಾಗೂ ಮಹಿಳಾ ಮುಖಂಡರು ಇದ್ದರು.



ಇಂದಿನ ಮಕ್ಕಳು ಭವಿಷ್ಯದ ಶಿಲ್ಪಿಗಳು: ವೆಂಕಟೇಶ್ ಕಾಟವೆ

ಹುಬ್ಬಳ್ಳಿ: ಇಲ್ಲಿನ ಬೆಂಡಿಗೇರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿರುವ ದಿ ಕರ್ನಾಟಕ ನ್ಯಾಷನಲ್ ಇಂಗ್ಲಿಷ್ ಶಾಲೆಯಲ್ಲಿ ವೆಂಕಟೇಶ್ ಕಾಟವೆ ನೇತೃತ್ವದ ವಿ.ಎ.ಕೆ ಫೌಂಡೇಶನ್ ವತಿಯಿಂದ ಶಾಲಾ ಮಕ್ಕಳಿಗೆ ಉಚಿತವಾಗಿ ಶಾಲಾ ಬ್ಯಾಗ್, ಪುಸ್ತಕಗಳು ಹಾಗೂ ಪರೀಕ್ಷಾ ಕಿಟ್‌ಗಳನ್ನು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ವೆಂಕಟೇಶ್ ಕಾಟವೆ ಅವರು, ಶಿಕ್ಷಣವೇ ಸಮಾಜದ ಅಭಿವೃದ್ಧಿಗೆ ಮೂಲ ಅಡಿಪಾಯ. ಇಂದಿನ ಮಕ್ಕಳು ನಾಳಿನ ದೇಶದ ಪ್ರಜೆಗಳು ಮತ್ತು ನಾಯಕರಾಗಲಿದ್ದಾರೆ. ಅವರ ಶಿಕ್ಷಣ, ಸಂಸ್ಕಾರ ಮತ್ತು ವ್ಯಕ್ತಿತ್ವ ವಿಕಸನಕ್ಕೆ ಅಗತ್ಯವಾದ ಸೌಲಭ್ಯಗಳನ್ನು ಒದಗಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ರಾಜ್ಯ ಸರ್ಕಾರ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಇನ್ನಷ್ಟು ಒತ್ತು ನೀಡಿ, ಗುಣಮಟ್ಟದ ಶಿಕ್ಷಣ ಹಾಗೂ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಿದರೆ ಮಕ್ಕಳ ಭವಿಷ್ಯ ಇನ್ನಷ್ಟು ಉಜ್ವಲವಾಗಲಿದೆ ಎಂದರು.

ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೆರವು ನೀಡುವುದು ಕೇವಲ ಸಮಾಜಸೇವೆ ಮಾತ್ರವಲ್ಲ, ಉತ್ತಮ ಸಮಾಜ ನಿರ್ಮಾಣದ ಕಾರ್ಯವಾಗಿದೆ. ವಿ.ಎ.ಕೆ ಫೌಂಡೇಶನ್ ಶಿಕ್ಷಣ, ಪರಿಸರ, ಆರೋಗ್ಯ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ನಿರಂತರವಾಗಿ ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಮಾಜದ ಅಭಿವೃದ್ಧಿಗೆ ತನ್ನದೇ ಆದ ಕೊಡುಗೆಯನ್ನು ನೀಡುತ್ತಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ವಿದ್ಯಾರ್ಥಿಗಳಿಗೆ ನೆರವು ನೀಡಿ, ಶಿಕ್ಷಣ ಕ್ರಾಂತಿಗೆ ಕೈಜೋಡಿಸುವ ಸಂಕಲ್ಪ ಹೊಂದಿದ್ದೇವೆ ಎಂದು ತಿಳಿಸಿದರು.

ಪಾಲಿಕೆ ಸದಸ್ಯೆ ದುರ್ಗಮ್ಮ ಬಿಜವಾಡ, ಬಿಜೆಪಿ ಮುಖಂಡ ಶಶಿಕಾಂತ್ ಬಿಜವಾಡ, ಹಿರಿಯರಾದ ಮದನ ಪೈ, ರಾಜಶೇಖರ ಜೈನ, ಶಾಲೆಯ ಮುಖ್ಯಸ್ಥರಾದ ಎ.ಎಸ್. ಕಟ್ಟಿ, ಜಿ.ಎಸ್. ಅಕ್ಕಿ, ವಾಸಣ್ಣ ಸುಳ್ಳದ, ಸಿ.ಜೆ. ಜಾಬಿನ, ಅಶೋಕ್ ಮಿಷಿ, ಪ್ರವೀಣ ವಂಚಳ್ಳಿಮಠ, ಎನ್.ಸಿ. ಪಾಟೀಲ, ಸಚಿನ್ ಕಾಟವೆ, ಶ್ರೀಧರ್ ಕಲ್ಬುರ್ಗಿ ಸೇರಿದಂತೆ ಶಾಲೆಯ ಮುಖ್ಯೋಪಾಧ್ಯಾಯ, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಶಿಕ್ಷಕರಿಗೆ ಅರ್ಹತಾ ಪರೀಕ್ಷೆ ಕಡ್ಡಾಯ: ವಿನಾಯಿತಿ ನೀಡಲು ಪಿಎಂ, ಸಿಎಂಗೆ ಮನವಿ

ಹುಬ್ಬಳ್ಳಿ: ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಧಾರವಾಡ ಜಿಲ್ಲಾ ನಿಯೋಗ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯ ಶಿಕ್ಷಕರ ಅರ್ಹತಾ ಪರೀಕ್ಷಾ ಕುರಿತು 29 ಮೇ 2026 ರಂದು ನೀಡಿದ ತೀರ್ಪಿನಿಂದ 2010 ರೊಳಗೆ ನೇಮಕಗೊಂಡು ಸೇವೆಯಲ್ಲಿರುವ ದೇಶಾದ್ಯಂತ 17 ಲಕ್ಷ ಶಿಕ್ಷಕರಲ್ಲಿ ಸೇವಾ ಭದ್ರತೆ ಮತ್ತು ಭವಿಷ್ಯದ ಬಗ್ಗೆ ಅಭದ್ರತೆಯ ಭಾವನೆ ನಿರ್ಮಾಣವಾಗಿದೆ. ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ ಆಗಸ್ಟ್ 23, 2010 ರಿಂದ ಶಿಕ್ಷಕರಾಗಿ ನೇಮಕಾತಿ ಹೊಂದುವವರಿಗೆ ಕಡ್ಡಾಯವಾಗಿ ಶಿಕ್ಷಕರ ಅರ್ಹತಾ ಪರೀಕ್ಷೆಯನ್ನು ಉತ್ತೀರ್ಣವಾಗಿರಬೇಕೆಂದು ಕಡ್ಡಾಯ ಮಾಡಿದೆ. ಶಿಕ್ಷಕರ ನೇಮಕಾತಿ ನಿಯಮಾವಳಿಗಳ ಪ್ರಕಾರ 23/08/2010 ಮುಂಚೆ ನೇಮಕಗೊಂಡ ಶಿಕ್ಷಕರಿಗೆ ಅರ್ಹತಾ ಪರೀಕ್ಷಾ ಕಡ್ಡಾಯ ಅವಶ್ಯಕತೆಯಿಂದ ವಿನಾಯಿತಿ ನೀಡುವುದು ನ್ಯಾಯ ಸಮ್ಮತವಾಗಿದೆ. ಜಿಲ್ಲಾಧಿಕಾರಿ ಸ್ನೇಹಲ್ ಆರ್. ಮುಖಾಂತರ ಪ್ರಧಾನಮಂತ್ರಿಗಳು, ಕೇಂದ್ರ ಶಿಕ್ಷಣ ಸಚಿವರು ಮತ್ತು ಮುಖ್ಯಮಂತ್ರಿಗಳಿಗೆ ಶಿಕ್ಷಕರ ಪರವಾಗಿ ವಕಾಲತು ಹಾಕುವಂತೆ ಮನವಿ ಸಲ್ಲಿಸಲಾಯಿತು.

ನಿಯೋಗದಲ್ಲಿ ರಾಜ್ಯ ಅಧ್ಯಕ್ಷ ಸಂದೀಪ ಬೂದಿಹಾಳ, ರಾಜ್ಯ ಕಾರ್ಯದರ್ಶಿ ಶ್ರೀಧರ ಪಾಟೀಲ ಕುಲಕರ್ಣಿ, ವಿಭಾಗದ ಪ್ರಮುಖ ಬಸವರಾಜ ದೇವರಮನಿ, ಜಿಲ್ಲಾ ಅಧ್ಯಕ್ಷ ಎಚ್.ಆರ್. ವೇಣುಗೋಪಾಲ, ಪದಾಧಿಕಾರಗಳಾದ ವಿಠ್ಠಲ ವಾಗ್ಮೋಡೆ, ಭರಮಪ್ಪ ನವಲಗುಂದ, ಆರ್.ಕೆ. ರಂಗಣ್ಣವರ, ಅಶೋಕ ಚಂಚಿ, ನಾಗವೇಣಿ ಹಾದಿಮನಿ ಮತ್ತು ಭೀಮಣ್ಣ ಮಲ್ಲಿಗವಾಡ ಇತರರಿದ್ದರು.



ಕ್ಷಮೆ ಕೇಳಿದ ಹಜರತ್ ಅಲಿ ಜೋಡಮನಿ



ಕುಂದಗೋಳ: ಮಾತನಾಡುವ ಭರದಲ್ಲಿ ಬ್ರಾಹ್ಮಣ ಸಮುದಾಯದ ಕುರಿತು ವ್ಯಕ್ತವಾದ ನನ್ನ ಕೆಲವು ಹೇಳಿಕೆಗಳಿಂದ ಸಮಾಜದ ಬಾಂಧವರ ಭಾವನೆಗಳಿಗೆ ಧಕ್ಕೆಯಾಗಿದ್ದರೆ ವಿಷಾದ ವ್ಯಕ್ತಪಡಿಸುತ್ತಾ ಕ್ಷಮೆ ಕೋರುತ್ತೇನೆ ಎಂದು ಮುಸ್ಲಿಂ ಸಮಾಜದ ಮುಖಂಡ ಹಜರತ್ ಅಲಿ ಜೋಡಮನಿ ತಿಳಿಸಿದರು.

ಅವರು ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಪಟ್ಟಣದಲ್ಲಿ ಅಂಜುಮನ್ ಎ-ಇಸ್ಲಾಂ ಸಮಿತಿ ಹಮ್ಮಿಕೊಂಡಿದ್ದ ಗೋಹತ್ಯೆಯನ್ನು ಸಂಪೂರ್ಣವಾಗಿ ನಿಷೇಧಿಸಿ, ಗೋಮಾತೆಯನ್ನು ರಾಷ್ಟ್ರೀಯ ಪ್ರಾಣಿಯನ್ನಾಗಿ ಕೇಂದ್ರ ಸರ್ಕಾರ ತಕ್ಷಣ ಘೋಷಿಸಬೇಕೆಂದು ಒತ್ತಾಯಿಸಿ ನಡೆದ ಪ್ರತಿಭಟನೆಯಲ್ಲಿ ಭಾಷಣ ಮಾಡುವ ವೇಳೆ ಭಾವೋದ್ವೇಗಕ್ಕೆ ಒಳಗಾಗಿ ಮಾತನಾಡಿದ್ದೆ. ಆ ಸಂದರ್ಭದಲ್ಲಿ ಬ್ರಾಹ್ಮಣ ಸಮಾಜದ ಕುರಿತು ಆಡಿದ ಕೆಲವು ಮಾತುಗಳಿಂದ ಸಮಾಜದವರಿಗೆ ನೋವಾಗಿದ್ದರೆ ಕ್ಷಮೆ ಕೋರುತ್ತೇನೆ. ನಮ್ಮ ನೆಲ ಕೋಮು ಸೌಹಾರ್ದತೆಯ ನೆಲೆಯಾಗಿದ್ದು, ನನ್ನ ರಾಜಕೀಯ ಹಾಗೂ ಸಾಮಾಜಿಕ ಜೀವನದಲ್ಲಿ ಎಲ್ಲ ಸಮುದಾಯಗಳೊಂದಿಗೆ ಸಹೋದರತ್ವದ ಭಾವನೆಯಿಂದ ನಡೆದುಕೊಂಡು ಬಂದಿದ್ದೇನೆ. ಬ್ರಾಹ್ಮಣ ಸಮಾಜದವರು ನಾನು ಆಡಿದ ಮಾತುಗಳಿಗೆ ಬೇಸರಗೊಳ್ಳದೆ ಪರಸ್ಪರ ಸೌಹಾರ್ದತೆಯಿಂದ ಒಂದಾಗಿ ಸಾಗೋಣ ಎಂದರು.

ಅಂಜುಮನ್ ಸಮಿತಿಯ ಅಧ್ಯಕ್ಷ ಕೈಯಿಮ್ ನಾಲಬಂದ, ಕಾಂಗ್ರೆಸ್ ನಗರ ಬ್ಲಾಕ್ ಅಧ್ಯಕ್ಷ ಸಲಿಮ್ ಕ್ಯಾಲಕೊಂಡ, ಫಿರೋಜ್ ಕೂರಟ್ಟಿ ಇರ್ಷಾದ್ ಮುಲ್ಲಾ, ದಾದಾಪೀರ್ ರಾಟಿಮನಿ ಮತ್ತಿತರರಿದ್ದರು.

ಪ್ರತಿಭಟನೆಯಲ್ಲಿ ಆತ್ಮಹತ್ಯೆಗೆ ಯತ್ನ


ಹುಬ್ಬಳ್ಳಿ: ಶಾಸಕ ಪ್ರಸಾದ ಅಬ್ಬಯ್ಯ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿ ಹಿರಿಯರು, ಮಾರ್ಗದರ್ಶಕರು, ಅಭಿಮಾನಿಗಳು ಹಾಗೂ ವಿವಿಧ ದಲಿತರಪರ ಸಂಘಟನೆಗಳ ವತಿಯಿಂದ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಯಿತು.

ಪ್ರಸಾದ ಅಬ್ಬಯ್ಯ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಅವರ ಭಾವ ಚಿತ್ರಗಳ ಹಿಡಿದು, ವಾರ್ಡ್‌ಗಳಿಂದ ತಂಡೋಪ ತಂಡವಾಗಿ ಬೈಕ್ ಹಾಗೂ ವಿವಿಧ ವಾಹನಗಳ ಮೂಲಕ ಆಗಮಿಸಿ ಪ್ರತಿಭಟನೆಯಲ್ಲಿ ಭಾಗವಹಿಸಿದರು. ವಿವಿಧ ದಲಿತರ ಪರ ಸಂಘಟನೆಗಳ ಸಂಘದ ಗುರುನಾಥ ಉಳ್ಳಿಕಾಶಿ ಮಾತನಾಡಿದರು.

ತಹಶೀಲ್ದಾರ್ ಮೂಲಕ ಪಕ್ಷದ ಹೈಕಮಾಂಡ್, ವರಿಷ್ಠರು ಹಾಗೂ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದರು. ಕಾಂಗ್ರೆಸ್ ಮುಖಂಡರಾದ ಅನಿಲಕುಮಾರ ಪಾಟೀಲ, ಅಲ್ತಾಪ ಹಳ್ಳೂರ, ಸಂದಾನಂದ ಡಂಗನವರ, ಪ್ರೇಮನಾಥ ಚಿಕ್ಕತುಂಬಳ, ಗಣೇಶ ಟಗರಗುಂಟೆ, ಇಮ್ರಾನ್ ಯಲಿಗಾರ, ದೊರೆರಾಜ ಮಣಿಕುಂಟ್ಲಾ, ಸುವರ್ಣ ಕಲ್ಲಕುಂಟ್ಲಾ ಇದ್ದರು. ಮಿನಿವಿಧಾನ ಸೌಧದ ಎದುರು ಪ್ರತಿಭಟನೆ ನಡೆಸುತ್ತಿರುವ ಶಾಸಕ ಪ್ರಸಾದ ಅಬ್ಬಯ್ಯ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿ ಇಬ್ಬರು ಅಭಿಮಾನಿಗಳಾದ ಇಂದಿರಾ ನಗರದ ನಾಗರಾಜ ಕತ್ರಿಬೈಲ್ ಹಾಗೂ ಕೆ.ಬಿ. ನಗರದ ರಾಹುಲ್ ಬೆಳದಡಿ ಎಂಬುವರು ಪಿನೈಲ್ ಕುಡಿದು ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದರು. ಈ ವೇಳೆ ಸ್ಥಳದಲ್ಲಿದ್ದ ಪೊಲೀಸರು ಅದನ್ನು ತಡೆದು ವಶಕ್ಕೆ ಪಡೆದು ಪೊಲೀಸ್ ಠಾಣೆಗೆ ಕರೆದೊಯ್ದರು.



ರಸಗೊಬ್ಬರ ಅಂಗಡಿಗಳ ವಿರುದ್ಧ ಕ್ರಮವಾಗಲಿ



ನವಲಗುಂದ: ಯೂರಿಯಾ ಗೊಬ್ಬರಕ್ಕೆ ಇತರೆ ಕೃಷಿ ಪರಿಕರಗಳ ಲಿಂಕ್ ಕಡ್ಡಾಯ ಮಾಡಿ ಮಾರಾಟ ಮಾಡುತ್ತಿರುವ ಮತ್ತು ನಿಗದಿಗಿಂತ ಹೆಚ್ಚಿನ ಬೆಲೆ ವಸೂಲಿ ಮಾಡುತ್ತಿರುವ ರಸಗೊಬ್ಬರ ಅಂಗಡಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ಸಾಮಾಜಿಕ ಕಾರ್ಯಕರ್ತ ಮಾಬುಸಾಬ ಯರಗುಪ್ಪಿ ಆಗ್ರಹಿಸಿದರು.

ಈ ಕುರಿತು ತಹಶೀಲ್ದಾರ್ ಕಚೇರಿಯ ಶಿರಸ್ತೆದಾರ ಗಣೇಶ ಬಳಕೇರಿ ಅವರ ಮೂಲಕ ಜಿಲ್ಲಾಧಿಕಾರಿಕಾರಿಗಳಿಗೆ ಹಾಗೂ ಜಂಟಿ ಕೃಷಿ ನಿರ್ದೇಶಕರಿಗೆ ಮನವಿ ನೀಡಿ ಮಾತನಾಡಿದ ಅವರು, ಪ್ರಸ್ತುತ ಬಿತ್ತನೆ ಹಂಗಾಮು ಆರಂಭವಾಗಿದ್ದು, ರೈತರಿಗೆ ಯೂರಿಯಾ ರಸಗೊಬ್ಬರದ ಅವಶ್ಯಕತೆ ಹೆಚ್ಚಾಗಿದೆ. ಆದರೆ ಪಟ್ಟಣದಲ್ಲಿರುವ ಕೆಲವು ರಸಗೊಬ್ಬರ ಮಾರಾಟಗಾರರು ರೈತರ ಅಸಹಾಯಕತೆಯನ್ನು ದುರುಪಯೋಗಪಡಿಸಿಕೊಂಡು ಸರ್ಕಾರದ ನಿಯಮಗಳನ್ನು ಗಾಳಿಗೆ ತೂರಿ ಅಕ್ರಮ ಎಸಗುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ರೈತ ಮುಖಂಡ ಮಲ್ಲಿಕಾರ್ಜುನಸ್ವಾಮಿ ಮಠಪತಿ ಮಾತನಾಡಿ, ರೈತರು ಯೂರಿಯಾ ಗೊಬ್ಬರ ಕೇಳಿದರೆ ಅದರ ಜೊತೆಗೆ ತಮಗೆ ಬೇಡದ ಕೃಷಿ ಟಾನಿಕ್‌ಗಳು, ಪೌಷ್ಟಿಕಾಂಶಗಳು ಅಥವಾ ಇತರೆ ಕೃಷಿ ಪರಿಕರಗಳನ್ನು ಕಡ್ಡಾಯವಾಗಿ ಖರೀದಿಸಬೇಕೆಂದು ಒತ್ತಾಯಿಸುತ್ತಿದ್ದಾರೆ. ಲಿಂಕ್ ಮಾಡಿದ ವಸ್ತುಗಳನ್ನು ಖರೀದಿಸದಿದ್ದರೆ ಯೂರಿಯಾ ಗೊಬ್ಬರ ಕೊಡುವುದಿಲ್ಲ ಎಂದು ರೈತರನ್ನು ವಾಪಸ್ ಕಳುಹಿಸುತ್ತಿದ್ದು, ಅಂತಹ ಗೊಬ್ಬರ ಮಾರಾಟಗಾರರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕೆಂದು ಆರೋಪಿಸಿದರು. ಬಶೀರಅಹ್ಮದ ಹುನಗುಂದ, ಇಮಾಮಸಾಬ ನರಗುಂದ, ಬಸವರಾಜ ಮಲ್ಲದಾಸರ, ಜಾವೀದ ಪಟವೇಗಾರ, ಕುಮಾರ ಹೊನಕುದುರಿ ಇತರರಿದ್ದರು.

ಅಗ್ನಿವೀರ ಆಯ್ಕೆಯಾದವರಿಗೆ ಸನ್ಮಾನ

ಅಳ್ನಾವರ: ದೇಶ ರಕ್ಷಣೆಯಂತಹ ಮಹತ್ತರ ಕೆಲಸ ರಾಷ್ಟ್ರಾಭಿಮಾನಿಗಳಿಗೆ ಮಾತ್ರ ದೊರೆಯಲು ಸಾಧ್ಯ ಎಂದು ಎಂ.ಎಸ್.ಐ.ಎಲ್.ಮಾಜಿ ನಿರ್ದೇಶಕ ಶಿವಾಜಿ ಡೊಳ್ಳಿನ ಹೇಳಿದರು.

ತಾಲೂಕಿನಿಂದ ಅಗ್ನಿವೀರ ಹುದ್ದೆಗೆ ಆಯ್ಕೆಯಾಗಿರುವ ಯುವಕರನ್ನು ಸನ್ಮಾನಿಸಿ ಮಾತನಾಡಿದ ಅವರು, ಸೈನಿಕ ನೋಡುಗರಿಗೆ ಸರಳವಾಗಿ ಕಾಣಿಸಬಹುದು. ಆದರೆ ಅವರ ಕಾರ್ಯ ಮಾತ್ರ ಕಠಿಣವಾಗಿದ್ದು ದೇಶದ ಪ್ರತಿಯೊಬ್ಬರೂ ನೆಮ್ಮದಿಯಿಂದ ಇರಬೇಕಾದರೆ ಸೈನಿಕರೇ ಕಾರಣವಾಗಿದ್ದು ಪ್ರತಿ ಕುಟುಂಬವೂ ಒಬ್ಬ ಸದಸ್ಯರನ್ನು ಸೈನ್ಯಕ್ಕೆ ಸೇರಿಸಲು ಪ್ರತಿಜ್ಞೆ ಮಾಡುವುದು ಅವಶ್ಯವಿದೆ ಎಂದರು.

ದೇಶದಲ್ಲಿ ರೈತರು ಮತ್ತು ಸೈನಿಕರಿಗೆ ಇರುವಂತಹ ಗೌರವ ಬೇರೆ ಯಾವ ಕೆಲಸಕ್ಕೂ ಸಿಗುವದಿಲ್ಲ, ಇವರಿಬ್ಬರೂ ದೇಶದ ಅಮೂಲ್ಯ ರತ್ನಗಳೆಂದು ತಿಳಿದುಕೊಂಡು ಅವರಿಗೆ ಪ್ರೋತ್ಸಾಹಿಸುವ ಕಾರ್ಯ ಮಾಡಬೇಕೆಂದರು.

ಸುಮಾರು ಆರು ಯುವಕರನ್ನು ಸನ್ಮಾನಿಸಿ ಮಹಾದೇವ ಸಾಗರೇಕರ ಮಾತನಾಡಿ, ನೌಕರಿ ಬಹಳಷ್ಟಿವೆ. ಆದರೆ ಆಯ್ಕೆ ಮಾಡಿಕೊಳ್ಳುವ ಮನಸ್ಥಿತಿ ಅವಲಂಬಿಸಿದ್ದು ಸೈನಿಕನಾಗುವ ಬಯಕೆ ಎಲ್ಲರಲ್ಲಿ ಮೂಡಬೇಕು ಎಂದರು.

ಶಿವರಾಜ ಬೆಳಗಾವಿ ಮತ್ತು ಶಂಕರ ಚಡಚಾಳ ಅವರನ್ನು ಸನ್ಮಾನಿಸಲಾಯಿತು. ಬಸವರಾಜ ಇನಾಮದಾರ, ಏಕನಾಥ ಹೊನಗೇಕರ, ಮಧುಕರ ಖಾನಾಪೂರ, ಪ್ರಭಾಕರ ತಡಕೋಡ ಶಾಸ್ತ್ರೀ ಇತರರಿದ್ದರು.



ಫಲವತ್ತಾದ ಭೂಮಿಯಲ್ಲಿ ಟೌನ್‌ಶಿಪ್ ಕೈಬಿಡಿ: ಸಂಸದ

ಕುಣಿಗಲ್: ಬಿಡದಿ ಭಾಗದಲ್ಲಿ ಅಡಿಕೆ, ತೆಂಗು, ರೇಷ್ಮೆ ತೋಟಗಳಿದ್ದು, ಹೈನುಗಾರಿಕೆ ಪ್ರಮುಖ ಆಧಾರವಾಗಿದೆ. ಇಲ್ಲಿನ ರೈತರು ಪ್ರತಿ ತಿಂಗಳು 6 ಲಕ್ಷ ಲೀಟರ್ ಹಾಲು ಡೇರಿಗೆ ಹಾಕುತ್ತಿದ್ದು, ಹೈನುಗಾರಿಕೆಯಿಂದ 30 ಕೋಟಿ ರೂ. ಹಾಗೂ ರೇಷ್ಮೆಯಿಂದ 35 ಕೋಟಿ ರೂ. ವಾರ್ಷಿಕ ಆದಾಯ ಪಡೆಯುತ್ತಿದ್ದಾರೆ. ಇಂತಹ ಹಸಿರು ಭೂಮಿ



ನಾಶಪಡಿಸುವುದು ಸರಿಯಲ್ಲ ಎಂದು ಸಂಸದ ಡಾ.ಸಿ.ಎನ್. ಮಂಜುನಾಥ್ ಹೇಳಿದರು.

ಕುಣಿಗಲ್ ತಾಲೂಕಿನ ಹುತ್ರಿದುರ್ಗ ಹೋಬಳಿಯ ಸೊಂದಲಗೆರೆ ಗ್ರಾಮದಲ್ಲಿ ಸಂಸದರ ಪ್ರದೇಶಾಭಿವೃದ್ಧಿ ಯೋಜನೆಯಲ್ಲಿ 5 ಲಕ್ಷ ವೆಚ್ಚದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಬಸ್ ತಂಗುದಾಣ ಉದ್ಘಾಟಿಸಿ ಅವರು ಮಾತನಾಡಿದರು. ಬಿಡದಿಯಲ್ಲಿ ಫಲವತ್ತಾದ ಕೃಷಿ ಭೂಮಿ ವಶಪಡಿಸಿಕೊಂಡು ಟೌನ್‌ಶಿಪ್ ಮಾಡಲು ಹೊರಟಿರುವುದಕ್ಕೆ ಸಂಸದರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಬೆಂಗಳೂರಿನ ಶಿವರಾಮ ಕಾರಂತ, ವಿಶ್ವೇಶ್ವರಯ್ಯ, ಕೆಂಪೇಗೌಡ ಲೇಔಟ್‌ಗಳಲ್ಲಿ ನಿವೇಶನಗಳು ಹಾಗೂ ಸುತ್ತಮುತ್ತ ಸುಮಾರು ಮೂರು ಲಕ್ಷ ಅಪಾರ್ಟ್‌ಮೆಂಟ್‌ಗಳು ಖಾಲಿ ಇವೆ. ಹಿಂದೆ ದೇವನಹಳ್ಳಿಯಲ್ಲಿ ಟೌನ್ ಶಿಪ್ ಮಾಡಲು ಹೊರಟಾಗ ತೀವ್ರ ವಿರೋಧ ವ್ಯಕ್ತವಾಗಿದ್ದರಿಂದ ಆಗಿನ ಸಿಎಂ ಸಿದ್ದರಾಮಯ್ಯ ಕೈಬಿಟ್ಟಿದ್ದರು. ಬಿಡದಿಯಲ್ಲೂ ಮೊದಲು ಟೌನ್‌ಶಿಪ್‌ಗೆ ವಿರೋಧ ಬಂದಾಗ ಕುಮಾರಸ್ವಾಮಿ, ಯಡಿಯೂರಪ್ಪ, ಜಗದೀಶ್ ಶೆಟ್ಟರ್, ಸದಾನಂದ ಗೌಡರು ಯೋಜನೆಯನ್ನು ಕೈಬಿಟ್ಟಿದ್ದರು. ಫಲವತ್ತಾದ ಭೂಮಿಯಲ್ಲಿ ಟೌನ್‌ಶಿಪ್ ಮಾಡುವ ಅಧಿಸೂಚನೆಯನ್ನು ಕೈಬಿಡುವ ಮೂಲಕ ಈ ಭಾಗದ ರೈತರಿಗೆ ದೊಡ್ಡ ಕೊಡುಗೆ ನೀಡಿ ಎಂದು ಸಂಸದ ಡಾ. ಸಿ.ಎನ್. ಮಂಜುನಾಥ್‌ಹೇಳಿದರು.

ಒಣಗಿದ ಬಿತ್ತನೆ..



ಧಾರವಾಡ ಜಿಲ್ಲೆಯಲ್ಲಿ ಮಳೆಯಾಗದೆ ಬಿಸಿಲಿನ ಬೇಗೆಗೆ ಬಿತ್ತನೆ ಒಣಗುತ್ತಿರುವುದು.

ಕ್ರಸ್ಟ್‌ಗೇಟ್ ಲೋಕಾರ್ಪಣೆ ಸ್ಥಳ ಪರಿಶೀಲಿಸಿದ ಸಚಿವ

ಕೊಪ್ಪಳ: ರಾಜ್ಯ ಜಲ ಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ಅವರು ಪೂರ್ವ ನಿಗದಿಯಂತೆ ಜೂನ್ 18ರಂದು ಕೊಪ್ಪಳ ಜಿಲ್ಲೆಗೆ ಆಗಮಿಸಿ, ತುಂಗಭದ್ರಾ ಜಲಾಶಯಕ್ಕೆ ಹೊಸದಾಗಿ ಅಳವಡಿಸಿದ ಕ್ರಸ್ಟ್ ಗೇಟ್‌ಗಳ ಉದ್ಘಾಟನಾ ಕಾರ್ಯಕ್ರಮದ ಸ್ಥಳ ಪರಿಶೀಲಿಸಿದರು.



ಮುನಿರಾಬಾದ್ ಗ್ರಾಮದ ಹೈಸ್ಕೂಲ್ ಗ್ರೌಂಡ್ ಆವರಣದಲ್ಲಿ ವೇದಿಕೆ ನಿರ್ಮಾಣದ ಸ್ಥಳ ವೀಕ್ಷಣೆ ನಡೆಸಿ, ಸುಗಮ ಸಂಚಾರಕ್ಕೆ ಸೂಕ್ತವಾದ ರಸ್ತೆ, ಬ್ಯಾರಿಕೇಡ್ ಅಳವಡಿಕೆ ಸೇರಿದಂತೆ ನಾನಾ ಸಿದ್ಧತೆಗಳ ಬಗ್ಗೆ ಸೂಚನೆ ನೀಡಿದರು. ಟಿಬಿ ಡ್ಯಾಮ್ ಆವರಣದಿಂದ ಮುನಿರಾಬಾದ್ ಶಾಲಾ ಮೈದಾನಕ್ಕೆ ಬಂದು ಹೋಗಲು ಅನುಕೂಲವಾಗುವಂತೆ ಯಾವ ರಸ್ತೆ ಸೂಕ್ತ ಎಂಬುದರ ಬಗ್ಗೆ ನೋಡಿಕೊಳ್ಳಲು ಸಚಿವರು ತಿಳಿಸಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಮುಖ್ಯಮಂತ್ರಿಗಳು ಮತ್ತು ತಾವು ಕೇಂದ್ರದ ಜಲ ಸಂಪನ್ಮೂಲ ಸಚಿವರಿಗೆ ಭೇಟಿ ಮಾಡಿ ಮಹದಾಯಿ, ಮೇಕೆದಾಟು ಯೋಜನೆ ಸೇರಿದಂತೆ ರಾಜ್ಯದ ನಾನಾ ನೀರಾವರಿ ಯೋಜನೆಗಳ ಬಗ್ಗೆ ಚರ್ಚಿಸಿದ್ದೇವೆ. ಕಳೆದ ವರ್ಷ ತುಂಗಭದ್ರಾ ಡ್ಯಾಂನ ಗೇಟ್ ಕೊಚ್ಚಿ ಹೋದಾಗ 19ನೇ ಗೇಟ್ ಸೇರಿದಂತೆ ಬೇರೆಲ್ಲ ಗೇಟ್‌ಗಳನ್ನು ಬದಲಾಯಿಸಲು ನಿರ್ಣಯಿಸಿ ಆರಂಭಗೊಂಡ ಕಾಮಗಾರಿ ಈಗ ಪೂರ್ಣಗೊಂಡಿದೆ. ಇದಕ್ಕಾಗಿ 51 ಕೋಟಿ ರೂ. ಖರ್ಚಾಗಿದೆ. ಈ ಗೇಟ್‌ಗಳು 55ರಿಂದ 60 ವರ್ಷಗಳವರೆಗೆ ಬಾಳಿಕೆ ಬರುತ್ತವೆ ಎಂದು ತಿಳಿಸಿದರು. ಹೊಸ ಗೇಟ್‌ಗಳ ಲೋಕಾರ್ಪಣೆ ಸಮಾರಂಭಕ್ಕೆ ಕರ್ನಾಟಕ ಸೇರಿದಂತೆ ತೆಲಂಗಾಣ ಮತ್ತು ಆಂಧ್ರ ರಾಜ್ಯಗಳ ಮುಖ್ಯಮಂತ್ರಿಗಳು, ಸಚಿವರು, ಶಾಸಕರು ಆಗಮಿಸಲಿದ್ದಾರೆ.

ಕಿರುಸುದ್ದಿ

ದತ್ತಾಂಶ ಗೌಪ್ಯತೆಗೆ ಹೈಕೋರ್ಟ್ ನಿರ್ದೇಶನ

ಬೆಂಗಳೂರು: ರಾಜ್ಯದಲ್ಲಿ ಜಾತಿಗಳ ಆರ್ಥಿಕ, ಸಾಮಾಜಿಕ ಸಮೀಕ್ಷೆ ನಡೆಸಿ ಹಿಂದುಳಿದ ವರ್ಗಗಳ ಆಯೋಗ ಸಲ್ಲಿಸಿರುವ ವರದಿಯನ್ನು ಮುಚ್ಚಿದ ಲಕೋಟೆಯಿಂದ ತೆರೆಯದಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.ಸಮೀಕ್ಷೆಯ ಸಿಂಧುತ್ವವನ್ನು ಪ್ರಶ್ನಿಸಿ ಕರ್ನಾಟಕ ರಾಜ್ಯ ಒಕ್ಕಲಿಗರ ಸಂಘ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸೇರಿದಂತೆ ಹಲವು ಸಂಘಟನೆಗಳು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾಯಮೂರ್ತಿ ಕೆ.ಎಸ್. ಹೇಮಲೇಖಾ ಅವರ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು. ಆಗ ಅರ್ಜಿದಾರರ ಪರ ವಕೀಲರು, ಹಿಂದುಳಿದ ವರ್ಗಗಳ ಆಯೋಗ ಸಮೀಕ್ಷಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ.

ಚನ್ನಕೇಶವ ಟೆಂಗರಿಕರ್ ತೀರ್ಪು ಕಾಯ್ದಿರಿಸಿದ ಹೈ

ಬೆಂಗಳೂರು: ಬಿಜೆಪಿ ಮುಖಂಡ ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ನಕಲಿ ಸಾಕ್ಷಿಗಳನ್ನು ಸೃಷ್ಟಿಸಿದ ಅಪರಾಧ ಸಂಬಂಧ ಏಳು ವರ್ಷ ಜೈಲು ಶಿಕ್ಷೆಗೆ ಗುರಿಯಾಗಿರುವ ಅಮಾನತುಗೊಂಡಿರುವ ಪೊಲೀಸ್ ಇನ್‌ಸ್ಪೆಕ್ಟರ್ ಚನ್ನಕೇಶವ ಟೆಂಗರಿಕರ್ ಶಿಕ್ಷೆ ಅಮಾನತುಪಡಿಸಿ, ಜಾಮೀನು ಕೋರಿ ಸಲ್ಲಿಸಿರುವ ಅರ್ಜಿಯ ವಿಚಾರಣೆ ಪೂರ್ಣಗೊಳಿಸಿರುವ ಹೈಕೋರ್ಟ್ ಗುರುವಾರ ತೀರ್ಪು ಕಾಯ್ದಿರಿಸಿದೆ. ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ವಿಧಿಸಿರುವ ಶಿಕ್ಷೆಯನ್ನು ಅಮಾನತ್ತಿನಲ್ಲಿರಿಸಿ ಜಾಮೀನು ಮಂಜೂರು ಮಾಡುವಂತೆ ಕೋರಿ ಚನ್ನಕೇಶವ ಟೆಂಗರಿಕರ್ ಸಲ್ಲಿಸಿರುವ ಮೇಲ್ಮನವಿ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಮೊಹಮ್ಮದ್ ನವಾಜ್ ಮತ್ತು ಜಿ.ಬಸವರಾಜ ಅವರ ನೇತೃತ್ವದ ವಿಭಾಗೀಯ ಪೀಠ ನಡೆಸಿತು. ಟೆಂಗರಿಕರ್ ಪರ ಹಿರಿಯ ವಕೀಲ ಪಿ.ಪಿ ಹೆಗ್ಡೆ ಅವರು, ಪಿತೂರಿ ನಡೆಸಿದ ಹಾಗೂ ಸರಿಯಾಗಿ ತನಿಖೆ ನಡೆಸಿಲ್ಲ ಎಂಬ ಆರೋಪ ಟೆಂಗರಿಕರ್ ವಿರುದ್ಧವಿದೆ. ಅದಕ್ಕೆ ಐಪಿಸಿ ಸೆಕ್ಷನ್ 201 ಮತ್ತು 218 ಅಡಿ ಗರಿಷ್ಠ ಏಳು ವರ್ಷ ಶಿಕ್ಷೆ ವಿಧಿಸಲಾಗಿದೆ. ಇವು ಜಾಮೀನುರಹಿತ ಪ್ರಕರಣಗಳಾಗಿವೆ. ಆದ್ದರಿಂದ ಜಾಮೀನು ಮಂಜೂರು ಮಾಡಬೇಕು. ವಿಚಾರಣಾ ಹಂತದಲ್ಲೂ ಟೆಂಗರಿಕರ್ ಅವರಿಗೆ ಜಾಮೀನು ಮಂಜೂರಾಗಿತ್ತು ಎಂದರು.

ವರದಕ್ಷಿಣೆ: ಕುಕ್ಕರ್‌ನಲ್ಲಿ ಹೊಡೆದು ಪತ್ನಿ ಕೊಲೆ

ಕೋಲಾರ: ವರದಕ್ಷಿಣೆ ತಂದಿಲ್ಲ ಎನ್ನುವ ಕಾರಣಕ್ಕೆ 2 ಮಕ್ಕಳ ತಾಯಿಯನ್ನು ತನ್ನ ಪತಿಯೇ ಕುಕ್ಕರ್‌ನಲ್ಲಿ ಹೊಡೆದು ಕೊಲೆ ಮಾಡಿರುವ ಘಟನೆ ಕೋಲಾರ ತಾಲೂಕಿನ ದೊಡ್ಡ ಹಸಾಳ ಗ್ರಾಮದಲ್ಲಿ ನಡೆದಿದೆ. ತಾಲೂಕಿನ ದೊಡ್ಡ ಹಸಾಳ ಗ್ರಾಮದಲ್ಲಿ ಈ ಘಟನೆ ನಡೆದಿದ್ದು, ಸಹನಾ(24) ಪತಿಯಿಂದಲೇ ದಾರುಣವಾಗಿ ಕೊಲೆಯಾದ ಪತ್ನಿಯಾಗಿದ್ದಾಳೆ. ಡ್ರೈವರ್ ಆಗಿದ್ದ ಮಂಜುನಾಥ್ ಮದುವೆಯಾದ ಕೆಲ ದಿನಗಳಲ್ಲೆ ಗಲಾಟೆ ಮಾಡಿ ಮದುವೆಗೆ ಲಕ್ಷಾಂತರ ರೂಪಾಯಿ ಖರ್ಚಾಗಿದೆ ಎಂದು 2 ಲಕ್ಷ ಹಣ ಕೇಳಿ ಪಡೆದಿದ್ದಾನೆ. ಇತ್ತೀಚೆಗೆ ಮನೆ ಕಟ್ಟೋದಕ್ಕೆ ಎಂದು 10 ಲಕ್ಷಕ್ಕಾಗಿ ಡಿಮ್ಯಾಂಡ್ ಮಾಡಿದ್ದಾನೆ. ಈ ಮಧ್ಯೆ ಪ್ರತಿನಿತ್ಯ ಪದೇ ಪದೇ ಮನೆಯಲ್ಲಿ ಗಲಾಟೆ ನಡೆಯುತ್ತಿತ್ತು. ಆದರೆ ನಿನ್ನೆ ಗಲಾಟೆ ವಿಕೋಪಕ್ಕೆ ತಿರುಗಿ ಕುಕ್ಕರ್‌ನಲ್ಲಿ ತಲೆಗೆ ಹೊಡೆದು ಕೊಲೆ ಮಾಡಿದ್ದಾನೆ.

ಮೇಕೆದಾಟು ಯೋಜನೆಯಿಂದ ಎರಡು ರಾಜ್ಯಗಳಿಗೂ ಹಿತ: ಸಿಎಂ

ತ.ನಾಡು ಜತೆ ಚರ್ಚೆಗೆ ಸಿದ್ಧ

ಬೆಂಗಳೂರು: ಮೇಕೆದಾಟು ಯೋಜನೆಯ ವಿಚಾರವಾಗಿ ತಮಿಳುನಾಡು ಜತೆಗೆ ಯಾವಾಗ ಬೇಕಾದರೂ ಮಾತನಾಡಲು ಸಿದ್ಧನಿದ್ದೇನೆ ಎಂದು ಸಿಎಂ ಡಿ.ಕೆ ಶಿವಕುಮಾರ್ ತಿಳಿಸಿದರು. ಮೇಕೆದಾಟು ಯೋಜನೆ ದಕ್ಷಿಣ ಭಾರತದ ಹೃದಯದಂತ ಯೋಜನೆ. ಈ ಯೋಜನೆಯಲ್ಲಿ ಕರ್ನಾಟಕ ಹಾಗೂ ತಮಿಳುನಾಡಿನ ಹಿತ ಅಡಗಿದೆ ಎಂದು ಹೇಳಿದ್ದಾರೆ.

ವಿಧಾನಸೌಧದಲ್ಲಿ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಮೇಕೆದಾಟು ಕೇವಲ ನನ್ನ ಹೃದಯಕ್ಕೆ ಮಾತ್ರ ಹತ್ತಿರವಾಗಿಲ್ಲ. ಮೇಕೆದಾಟು ಯೋಜನೆ ಕರ್ನಾಟಕ ರಾಜ್ಯಕ್ಕಿಂತ ತಮಿಳುನಾಡಿಗೆ ಹೆಚ್ಚು ಅನುಕೂಲ ನೀಡಲಿದೆ. ತಮಿಳುನಾಡು ಪಾಲಿನ 177 ಟಿಎಂಸಿ ನೀರನ್ನು ಬಿಡಲು ನಾವು ಸಿದ್ಧವಾಗಿದ್ದೇವೆ. ಈ ಬಗ್ಗೆ ಸುಪ್ರೀಂ ಕೋರ್ಟ್ ಆದೇಶವೂ ಇದೆ. ಈ ಯೋಜನೆ ತೀರ್ಮಾನವನ್ನು ಕೇಂದ್ರ ಜಲ ಆಯೋಗ ಮಾಡಬೇಕು ಎಂದು ಕೋರ್ಟ್ ತಿಳಿಸಿದೆ ಎಂದರು.

ಬೆಂಗಳೂರಿನಲ್ಲಿ ಜನಸಂಖ್ಯೆ ಹೆಚ್ಚಾಗುತ್ತಿದ್ದು, ನಾವು ಕೃಷ್ಣಾದಿಂದ ನೀರನ್ನು ತರಲು ಸಾಧ್ಯವಿಲ್ಲ. ಹೀಗಾಗಿ ಕಾವೇರಿ ನಮ್ಮ ಮುಂದಿರುವ ಏಕೈಕ ಆಯ್ಕೆ ಎಂದು ತಿಳಿಸಿದರು. ತಮಿಳುನಾಡು, ಕರ್ನಾಟಕದವರು ಭಾರತೀಯರು. ನಾವು ಕಾವೇರಿ ನೀರು ಕುಡಿಯಬೇಕು. ತಮಿಳುನಾಡಿನಿಂದ ಇಲ್ಲಿಗೆ ಬಂದು ವೃತ್ತಿ ಮಾಡುತ್ತಿರುವ ಅನೇಕ ಜನರಿದ್ದಾರೆ. ಇಲ್ಲಿಂದ ಹೋಗಿ ಅಲ್ಲಿ ಕೆಲಸ ಮಾಡುತ್ತಿರುವವರೂ ಇದ್ದಾರೆ. ನಾವು ಅವರನ್ನು ಪ್ರತ್ಯೇಕಿಸುವುದಿಲ್ಲ. ಸಮತೋಲಿತ ಜಲಾನಯನ ನಿರ್ಮಾಣದಿಂದ





> ನಾವು ತಮಿಳುನಾಡಿನ ರೈತರ ಹಿತವನ್ನೂ ಕಾಪಾಡಬೇಕು. ಇದು ಸಮತೋಲಿತ ಜಲಾನಯನ. ಇಲ್ಲಿ ಒಂದೇ ಒಂದು ಬಕೆಟ್ ನೀರನ್ನೂ ನೀರಾವರಿಗೆ ಬಳಸುವುದಿಲ್ಲ. ಬೆಂಗಳೂರು ನಗರದ ಕುಡಿಯುವ ನೀರು ಪೂರೈಕೆಗೆ ಮಾತ್ರ ಬಳಸಲಾಗುವುದು.
> ■ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ

ಕಷ್ಟ ಕಾಲದಲ್ಲಿ ತಮಿಳುನಾಡಿನ ಪಾಲಿನ ನೀರನ್ನು ಹರಿಸಲು ನೆರವಾಗುತ್ತದೆ. ಅತಿ ಕಡಿಮೆ ವೆಚ್ಚದಲ್ಲಿ ಯೋಜನೆ ಆಗುವ ವಿಶ್ವಾಸವಿದೆ ಎಂದು ತಿಳಿಸಿದರು.

ಕಳೆದ ವರ್ಷ 400ಕ್ಕೂ ಹೆಚ್ಚು ಟಿಎಂಸಿ ಹೆಚ್ಚುವರಿ ನೀರು ಸಮುದ್ರ ಸೇರಿದೆ. ಅವರು ಕೆಳ ಹಂತದಲ್ಲಿ ಸಾಕಷ್ಟು ಅಣೆಕಟ್ಟು ನಿರ್ಮಾಣ ಮಾಡುತ್ತಿದ್ದು, ನಾವು ಯಾವುದಕ್ಕೂ ಆಕ್ಷೇಪ ವ್ಯಕ್ತಪಡಿಸಿಲ್ಲ. ಅವರ ನೆಲದಲ್ಲಿ ಅವರು ನಿರ್ಮಿಸಿಕೊಳ್ಳುತ್ತಿದ್ದಾರೆ.

ಇದೇ ವಿಚಾರ ಸುಪ್ರೀಂ ಕೋರ್ಟ್‌ನಲ್ಲೂ ಚರ್ಚೆಯಾಗಿದೆ. ಈ ಯೋಜನೆಗೆ ನಾವು ಯಾವುದೇ ಆರ್ಥಿಕ ನೆರವಾಗಲಿ ಇತರೆ ವಿಚಾರವನ್ನು ಕೇಳುತ್ತಿಲ್ಲ. ಈ ಯೋಜನೆಯಿಂದ 400 ಮೆ.ವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುವುದು ಇಂಧನ ಕ್ಷೇತ್ರದಲ್ಲಿ ನಮಗೆ ಅನುಕೂಲ ಮಾಡಿಕೊಡಲಿದೆ ಎಂದರು.

ತ.ನಾಡಿನ ರಾಜಕೀಯದಲ್ಲಿ ಹಸ್ತಕ್ಷೇಪವಿಲ್ಲ: ತಮಿಳುನಾಡಿನವರು ಕಳೆದ 40 ವರ್ಷಗಳಿಂದ ರಾಜಕೀಯ ಅಜೆಂಡಾ ಇಟ್ಟುಕೊಂಡಿದ್ದಾರೆ.

ಅವರ ರಾಜಕೀಯದಲ್ಲಿ ನಾನು ಹಸ್ತಕ್ಷೇಪ ಮಾಡುವುದಿಲ್ಲ. ಈ ವಿಚಾರದ ಬಗ್ಗೆ ನ್ಯಾಯಾಲಯ ನಿರ್ದೇಶನ ನೀಡಿದೆ.

ತಮಿಳುನಾಡಿನಲ್ಲಿ ರಾಜಕೀಯ ಉಳಿವಿಗಾಗಿ ಧ್ವನಿ ಎತ್ತುತ್ತಿದ್ದಾರೆ. ಸುಪ್ರೀಂ ಕೋರ್ಟ್ ತ್ರಿಸದಸ್ಯ ಪೀಠ ತೀರ್ಪು ಬಂದ ಬಳಿಕ ಮತ್ತೇನಿದೆ? ಕರ್ನಾಟಕ 177 ಟಿಎಂಸಿ ನೀರು ಬಿಡಬೇಕು ಎಂದು ನೀಡಿದ ನಿರ್ದೇಶನವನ್ನು ನಾವು ಒಪ್ಪಿಕೊಳ್ಳಲಿಲ್ಲವೇ ಎಂದರು.

ಎಲ್ಲಾ ಸಂಸದರ ಮೇಲೆ ವಿಶ್ವಾಸ: ಡಿಕೆಶಿ

ತಮಿಳುನಾಡಿನಲ್ಲಿ ನಿಮ್ಮ ಮೈತ್ರಿ ಇದೆ ಎಂದು ಕೇಳಿದಾಗ, ನಾವು ಅವರಿಗೆ ಏನು ಮನವಿ ಮಾಡಬೇಕೋ ಮನವಿ ಮಾಡುತ್ತೇವೆ. ಇಲ್ಲಿ ರಾಜಕಾರಣ ಏನಿಲ್ಲ. ಎರಡು ರಾಜ್ಯಗಳ ಜನರ ಹಿತ ಕಾಪಾಡಿಕೊಂಡು ಹೋಗೋಣ ಎಂದರು. ನಮ್ಮ ರಾಜ್ಯದಿಂದ ಆಯ್ಕೆಯಾಗಿರುವ ಕಾಂಗ್ರೆಸ್, ಬಿಜೆಪಿ, ದಳ ಎಲ್ಲಾ ಸಂಸದರು ಒಗ್ಗಟ್ಟಾಗಿ ನಮ್ಮ ರಾಜ್ಯದ ಹಿತ ಕಾಪಾಡುತ್ತಾರೆ ಎಂಬ ವಿಶ್ವಾಸ ನಮಗಿದೆ ಎಂದು ಸಿಎಂ ತಿಳಿಸಿದರು.

ಕ್ಷೀರ ಭಾಗ್ಯ, ಉಪಾಹಾರ | ಅನುದಾನ ಬಿಡುಗಡೆ

ಅಕ್ರಮ ತಡೆಗೆ ಸೂಚನೆ

ಬೆಂಗಳೂರು: ರಾಜ್ಯದಲ್ಲಿ ಜಾರಿಯಲ್ಲಿರುವ ಕ್ಷೀರ ಭಾಗ್ಯ ಮತ್ತು ಮಧ್ಯಾಹ್ನ ಉಪಾಹಾರ ಯೋಜನೆಯಲ್ಲಿ ಮೊದಲನೇ ತ್ರೈಮಾಸಿಕದ ವೆಚ್ಚವಾಗಿ 215.93 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದೆ. ಜತೆಗೆ ಈ ಯೋಜನೆಯಲ್ಲಿ ನಕಲು, ವಿದ್ಯಾರ್ಥಿಗಳ ಹಾಜರಾತಿಯಲ್ಲಿ ಅಕ್ರಮ ಮುಂತಾದವನ್ನು ತಡೆಯಲು ಹಲವು ಕಟ್ಟುನಿಟ್ಟಿನ ಸೂಚನೆ ಶಾಲಾ ಶಿಕ್ಷಣ ಇಲಾಖೆ ನೀಡಿದೆ.

ಮಕ್ಕಳ ಮುಖ ಗುರುತಿನ ಹಾಜರಾತಿ ದಿನಕ್ಕೆ ಮೂರು ಬಾರಿ (ಬೆಳಗ್ಗೆ ಎರಡು ಬಾರಿ, ಮಧ್ಯಾಹ್ನ ಒಂದು ಬಾರಿ) ಪಡೆಯುವುದು ಕಡ್ಡಾಯಗೊಳಿಸಲಾಗಿದೆ.

ಒಂದು ವೇಳೆ ಮಕ್ಕಳ ಮುಖ ಗುರುತಿನ ಹಾಜರಾತಿಯನ್ನು ದಾಖಲಿಸದೇ ಇದ್ದರೆ ಶಾಲಾ ಮುಖ್ಯ ಶಿಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿ, ಉಪ ನಿರ್ದೇಶಕರು ಮತ್ತು ಮಧ್ಯಾಹ್ನ ಉಪಹಾರ ಯೋಜನೆಯ ಶಿಕ್ಷಣಾಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಲಾಗಿದೆ. ಇನ್ನು ಸ್ಯಾಟ್ಸ್‌ನಲ್ಲಿ ಮಕ್ಕಳ ಹಾಜರಾತಿಯನ್ನು ಘಟನೋತ್ತರವಾಗಿ ದಾಖಲಿಸುವುದನ್ನು ರದ್ದುಗೊಳಿಸಬೇಕು. ವಿದ್ಯಾರ್ಥಿಗಳ ಹಾಜರಾತಿಯನ್ನು ಹೆಚ್ಚಾಗಿ ದಾಖಲಿಸುವುದು, ಹಾಜರಾತಿಯನ್ನು ಘಟನೋತ್ತರವಾಗಿ ದಾಖಲಿಸುವುದನ್ನು ಹಣಕಾಸು ಅಕ್ರಮವೆಂದು ಪರಿಗಣಿಸಲಾಗುವುದು ಎಂದು ಎಚ್ಚರಿಕೆ



ನೀಡಲಾಗಿದೆ ಎಂದು ಇಲಾಖೆ ತಿಳಿಸಿದೆ.

ಮಧ್ಯಾಹ್ನದ ಊಟ, ಬಾಳೆಹಣ್ಣು, ಮೊಟ್ಟೆ ಹಾಗೂ ಹಾಲು ಸೇವಿಸಿದ ಮತ್ತು ಸೇವಿಸದ ವಿದ್ಯಾರ್ಥಿಗಳನ್ನು ಸ್ಯಾಟ್ಸ್‌ನಲ್ಲಿ ನಮೂದಿಸುವುದು ಕಡ್ಡಾಯಗೊಳಿಸಲಾಗಿದೆ. ಮಕ್ಕಳಿಗೆ ಮೊಟ್ಟೆ ಅಥವಾ ಬಾಳೆ ಹಣ್ಣು ವಿತರಿಸುವ ಸಂದರ್ಭದಲ್ಲಿ ಪೋಷಕರ ಒಪ್ಪಿಗೆ ಪತ್ರ ಪಡೆಯುವುದು ಕಡ್ಡಾಯ. ಈ ಒಪ್ಪಿಗೆ ಪತ್ರವನ್ನು ಬದಲಾಯಿಸುವಂತಿಲ್ಲ. ಮೊಟ್ಟೆ ಕನಿಷ್ಟ 50 ಗ್ರಾಂ. ತೂಕವಿರಬೇಕು. ಎರಡು ಬಾಳೆಹಣ್ಣು ನೀಡಬೇಕು ಎಂದು ಸೂಚಿಸಲಾಗಿದೆ.

ಜತೆಗೆ ಮಕ್ಕಳಿಗೆ ಮೊಟ್ಟೆ ಹಾಗೂ ಬಾಳೆಹಣ್ಣಿನ ಪೋಷಕಾಂಶಗಳ ಪ್ರಯೋಜನ ಹಾಗೂ ಮೊಟ್ಟೆ ಮತ್ತು ಬಿಸಿ ಹಾಲು ಸೇವನೆಯ ಬಗ್ಗೆ ಮಕ್ಕಳಲ್ಲಿರಬಹುದಾದ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಲು ಬೆಳಗ್ಗಿನ ಪ್ರಾರ್ಥನೆಯ ವೇಳೆ ಹತ್ತು ನಿಮಿಷಗಳ ಕಾಲ ಸೂಕ್ತ ವೈಜ್ಞಾನಿಕ ಮಾಹಿತಿ ನೀಡುವಂತೆ ಮುಖ್ಯ ಶಿಕ್ಷಕರಿಗೆ ಸೂಚಿಸುವಂತೆ ನಿರ್ದೇಶನ ನೀಡಬೇಕು ಎಂದು ಆಯುಕ್ತರಿಗೆ ಸೂಚಿಸಲಾಗಿದೆ.

ವಿಎಸ್‌ಕೆ ಮಾಧ್ಯಮ ಪ್ರಶಸ್ತಿ ಪುರಸ್ಕೃತರ ಪಟ್ಟಿ ಪ್ರಕಟ







ಬೆಂಗಳೂರು: ವಿಶ್ವಸಂವಾದ ಕೇಂದ್ರ ಕರ್ನಾಟಕದಿಂದ ನೀಡಲಾಗುವ ವಾರ್ಷಿಕ ವಿಎಸ್‌ಕೆ ಮಾಧ್ಯಮ ಪ್ರಶಸ್ತಿ-2026ನೇ ಸಾಲಿನ ಪುರಸ್ಕೃತರ ಪಟ್ಟಿ ಪ್ರಕಟಿಸಲಾಗಿದೆ. ತಿ.ತಾ. ಶರ್ಮ ಪತ್ರಿಕೋದ್ಯಮ ಪ್ರಶಸ್ತಿಗೆ ವಿಜಯವಾಣಿ ಸಂಪಾದಕ ಕೆ.ಎನ್. ಚನ್ನೇಗೌಡ, ಬೆ.ಸು.ನಾ. ಮಲ್ಯ ಪತ್ರಿಕೋದ್ಯಮ ಪ್ರಶಸ್ತಿಗೆ ಅಡಿಕೆ ಪತ್ರಿಕೆ ಸಹಾಯಕ ಸಂಪಾದಕ ನಾ.ಕಾರಂತ ಪೆರಾಜೆ, ಎಂ.ವಿ.ಕಾಮತ್ ಪತ್ರಿಕೋದ್ಯಮ ಪ್ರಶಸ್ತಿಗೆ ಇಂಡಿಯಾ ಟುಡೇ ದಕ್ಷಿಣ ಭಾರತ ಆವೃತ್ತಿ ಸಂಪಾದಕ ನಾಗಾರ್ಜುನ್ ದ್ವಾರಕನಾಥ್, ಚಂದ್ರಶೇಖರ ಭಂಡಾರಿ ಪತ್ರಿಕೋದ್ಯಮ ಪ್ರಶಸ್ತಿಗೆ ಟಿವಿ-9 ಕನ್ನಡದ ಮುಖ್ಯ ನಿರ್ಮಾಪಕ ರಂಗನಾಥ್ ಭಾರದ್ವಾಜ್, ಹೊ.ವೆ. ಶೇಷಾದ್ರಿ ಅಂಕಣಕಾರ ಪ್ರಶಸ್ತಿ ಅಂಕಣಕಾರ ಡಾ.ಅರಕಲಗೂಡು ಸೂರ್ಯಪ್ರಕಾಶ್ ಹಾಗೂ ವಿಎಸ್‌ಕೆ ಡಿಜಿಟಲ್ ಮಾಧ್ಯಮ ಪ್ರಶಸ್ತಿಗೆ ಯೂಟ್ಯೂಬರ್ ರಶ್ಮಿ ಆರ್.ರಾವ್ (ರ್‍ಯಾಪಿಡ್ ರಶ್ಮಿ) ಆಯ್ಕೆಯಾಗಿದ್ದಾರೆ.

ವಿಎಸ್‌ಕೆ ಮಾಧ್ಯಮ ಪ್ರಶಸ್ತಿ ಪ್ರದಾನ ಸಮಾರಂಭವು ಜು.12 ಬೆಳಗ್ಗೆ 10.30ಕ್ಕೆ ಬಸವನಗುಡಿಯ ಬಿ.ಎಂ.ಎಸ್.ಇಂಜಿನಿಯರಿಂಗ್ ಕಾಲೇಜಿನ ಸಭಾಂಗಣದಲ್ಲಿ ನಡೆಯಲಿದೆ. ಪದ್ಮಭೂಷಣ ಪುರಸ್ಕೃತ ವಿದ್ವಾಂಸ ಶತಾವಧಾನಿ ಡಾ.ಆರ್. ಗಣೇಶ್ ಹಾಗೂ ವಿಶ್ವ ಸಂವಾದ ಕೇಂದ್ರ ಕರ್ನಾಟಕದ ನಿರ್ವಾಹಕ ವಿಶ್ವಸ್ಥರಾದ ಡಾ. ಎಂ.ಕೆ.ಶ್ರೀಧರನ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ತೇಜೋವಧೆ ಸಲ್ಲದು | ಇಂಥ ಕೆಲಸ ತಕ್ಷಣವೇ ನಿಲ್ಲಿಸಿ

ಮಟ್ಟಣ್ಣನವರ್‌ಗೆ ಹೈ ತಾಕೀತು

ಬೆಂಗಳೂರು: ಧರ್ಮಸ್ಥಳ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ಅವರ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ, ಪೋಸ್ಟ್ ಹಾಕಿದ ಗಿರೀಶ್ ಮಟ್ಟಣ್ಣನವರ್‌ಗೆ, ಸಾರ್ವಜನಿಕವಾಗಿ ತೇಜೋವಧೆ ಮಾಡುವುದು ಸಲ್ಲದು. ಇಂಥ ಕೆಲಸಗಳನ್ನು ತಕ್ಷಣವೇ ನಿಲ್ಲಿಸಿ ಎಂದು ಹೈಕೋರ್ಟ್ ತಾಕೀತು ಮಾಡಿದೆ.

ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಪೋಸ್ಟ್ ಹಾಕಿದ ಆರೋಪದಲ್ಲಿ ಧರ್ಮಸ್ಥಳ ಪೊಲೀಸ್



ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ರದ್ದು ಕೋರಿ ಗಿರೀಶ್ ಮಟ್ಟಣ್ಣನವರ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು.

ಪೀಠವು ಗಿರೀಶ್ ಮಟ್ಟಣ್ಣನವರ್ ಅವರನ್ನು ತೀವ್ರ ತರಾಟೆಗೆತೆಗೆದುಕೊಂಡಿತಲ್ಲದೆ,ಸಾಮಾಜಿಕಜಾಲತಾಣಗಳಲ್ಲಿ ಇಂತಹ ಬೇಜವಾಬ್ದಾರಿಯುತ ಪ್ರವೃತ್ತಿಗಳನ್ನು ತಕ್ಷಣವೇ ನಿಲ್ಲಿಸಬೇಕು ಎಂದು ಮಟ್ಟಣ್ಣನವರ್‌ಗೆ ತಾಕೀತು ಮಾಡಿತು. ಜತೆಗೆ, ಈ ಕುರಿತು ಮುಂದಿನ ವಿಚಾರಣೆಯೊಳಗೆ ನ್ಯಾಯಾಲಯಕ್ಕೆ ಪ್ರಮಾಣಪತ್ರ ಸಲ್ಲಿಸಬೇಕು ಎಂದು ತಾಕೀತು ಮಾಡಿ ವಿಚಾರಣೆ ಜೂನ್ 22ಕ್ಕೆ ಮುಂದೂಡಿತು. ಮಟ್ಟಣ್ಣನವರ ಪರ ವಕೀಲ ರಂಗನಾಥ್ ರೆಡ್ಡಿ ವಾದ ಮಂಡಿಸಿ, ಪ್ರಕರಣದಲ್ಲಿ ಸಾರ್ವಜನಿಕ ಶಾಂತಿ ಭಂಗ ಉಂಟಾದ ಅಥವಾ ಗಲಭೆ ನಡೆದ ಯಾವುದೇ ನಿರ್ದಿಷ್ಟ ಘಟನೆಯ ಉಲ್ಲೇಖವಿಲ್ಲ. ಕೇವಲ ಸಾರ್ವಜನಿಕ ಅಶಾಂತಿ ಸೃಷ್ಟಿಯಾಗಬಹುದು ಎಂಬ ಊಹೆಯ ಮೇಲೆ ಮೂರನೇ ವ್ಯಕ್ತಿಯೊಬ್ಬರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಲಾಗಿದೆ. ಹಳೆ ಪೋಸ್ಟ್‌ಗಳನ್ನೆಲ್ಲ ಹುಡುಕಿ ತಂದು ಈ ದೂರು ದಾಖಲಿಸಲಾಗಿದೆ. ಈ ಪ್ರಕಣದಲ್ಲಿ ಬಾದಿತ ವ್ಯಕ್ತಿ ದೂರು ದಾಖಲಿಸಿಲ್ಲ ಎಂದು ಪೀಠಕ್ಕೆ ವಿವರಿಸಿದರು.

ರಾಜ್ಯ ಸರ್ಕಾರಿ ಅಭಿಯೋಜಕ ಬಿ.ಎನ್.ಜಗದೀಶ್ ಅವರು, ಆರೋಪಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದ ವಿವಾದಾತ್ಮಕ ಚಿತ್ರಗಳನ್ನು ನ್ಯಾಯಾಲಯದ ಗಮನಕ್ಕೆ ತಂದರಲ್ಲದೆ, ಕ್ರಿಮಿನಲ್ ಕಾನೂನನ್ನು ಜಾರಿಗೆ ತರಲು ಕೇವಲ ಸಂತ್ರಸ್ತರೇ ಆಗಬೇಕಿಲ್ಲ, ಯಾರು ಬೇಕಾದರೂ ದೂರು ನೀಡಬಹುದು ಎಂದು ಪ್ರತಿಪಾದಿಸಿದರು.

ಇದೆಲ್ಲ ನಿಮಗೇಕೆ ಬೇಕು? ಕೋರ್ಟ್ ತರಾಟೆ

ಗಿರೀಶ್ ಮಟ್ಟಣ್ಣವರ್ ಪೋಸ್ಟ್ ಮಾಡಿದ್ದಾರೆನ್ನಲಾದ ಚಿತ್ರವನ್ನು ಗಮನಿಸಿದ ಪೀಠವು ನಿಮಗೆ ಇದೆಲ್ಲ ಏಕೆ ಬೇಕು? ಇದರ ಅಗತ್ಯವೇನಿದೆ? ನೀವು ನಿಮ್ಮ ಅಭಿಪ್ರಾಯ ವ್ಯಕ್ತಪಡಿಸಿ, ವಿಮರ್ಶೆ ಮಾಡಿ. ಯಾವುದೇ ತೊಂದರೆಯಿಲ್ಲ. ಭಿನ್ನಾಭಿಪ್ರಾಯ ಪ್ರಜಾಪ್ರಭುತ್ವದ ಸಾರವಾಗಿರಬಹುದು. ಆದರೆ ಇಂತಹ ನಡೆ ಪ್ರಜಾಪ್ರಭುತ್ವದ ಸಾರವಲ್ಲ, ಇದು ಸರಿಯಲ್ಲ ಎಂದು ಹೇಳಿತು.

ಹಿಂದೂ ಯುವತಿ ಕರೆದೊಯ್ದ ಮುಸ್ಲಿಂ ಯುವಕನ ಬಂಧನ

ಭಟ್ಕಳ: ಸೂಪರ್ ಮಾರ್ಕೆಟೊಂದರಲ್ಲಿ ಕೆಲಸಕ್ಕಿದ್ದ ಹಿಂದೂ ಯುವತಿಯೊಬ್ಬಳನ್ನು ಕಾರಿನಲ್ಲಿ ಕರೆದೊಯ್ದ ಮುಸ್ಲಿಂ ಯುವಕ ಶಾಹೀದ್ ಖಾನ್ ಎಂಬಾತನನ್ನು ಯುವತಿ ದೂರಿನ ಮೇರೆಗೆ ಪೊಲೀಸರು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಂಗ ಬಂಧನ ವಿಧಿಸಿದೆ.

ಬುಧವಾರ ಬೆಳಗ್ಗೆ ಪಟ್ಟಣದ ಸೂಪರ್ ಮಾರ್ಕೆಟೊಂದರಲ್ಲಿ ಕೆಲಸ ಮಾಡುತ್ತಿದ್ದ ಮಾರುಕೇರಿ ಭಾಗದ ಹಿಂದೂ ಯುವತಿಯೊಬ್ಬಳನ್ನು ಅದೇ ಸೂಪರ್ ಮಾರ್ಕೆಟ್‌ನಲ್ಲಿ ಸೇಲ್ಸ್‌ಮೆನ್ ಆಗಿರುವ ಕಾರಗದ್ದೆ ಶಾಹೀದ್ ಖಾನ್ ಎಂಬಾತ ಕಾರಿನಲ್ಲಿ ಕರೆದೊಯ್ಯುವಾಗ ಹಿಂದೂ ಸಂಘಟನೆ ಕಾರ್ಯಕರ್ತರು ತಡೆದು ಪೊಲೀಸರಿಗೆ ಒಪ್ಪಿಸಿದ್ದರು. ಆದರೆ, ಪೊಲೀಸರು ಆರೋಪಿ ಮೇಲೆ ಮೊದಲು ಪ್ರಕರಣ ದಾಖಲಿಸುವುದನ್ನು ಬಿಟ್ಟು ಯುವತಿಯನ್ನು ರಕ್ಷಿಸಿದ ಹಿಂದೂ ಕಾರ್ಯಕರ್ತರಿಬ್ಬರ ಮೇಲೆ ಪ್ರಕರಣ ದಾಖಲಿಸಿಕೊಂಡಿದ್ದರು.

ಇದರಿಂದ ತೀವ್ರ ಆಕ್ರೋಶಗೊಂಡ ಬಿಜೆಪಿ ಮತ್ತು ಹಿಂದೂ ಸಂಘಟನೆ ಕಾರ್ಯಕರ್ತರು ಬುಧವಾರ ರಾತ್ರಿ ನಗರ ಪೊಲೀಸ್ ಠಾಣೆ ಮುಂದೆ ಧರಣಿ ನಡೆಸಿ ಆರೋಪಿಯನ್ನು ಬಂಧಿಸಬೇಕು ಮತ್ತು ಹಿಂದೂ ಕಾರ್ಯಕರ್ತರ ಮೇಲಿನ ಪ್ರಕರಣ ವಾಪಾಸ್ ಪಡೆಯಬೇಕು ಎಂದು ಆಗ್ರಹಿಸಿದ್ದರು. ಸ್ಥಳಕ್ಕೆ ಹೆಚ್ಚುವರಿ ಎಸ್ಪಿ ಕೃಷ್ಣಮೂರ್ತಿ ಆಗಮಿಸಿ ಪ್ರಕರಣ ಗುರುವಾರ ಇತ್ಯರ್ಥ ಪಡಿಸುವ ಭರವಸೆ ನೀಡಿದ್ದರಿಂದ ಪ್ರತಿಭಟನಾಕಾರರು ಧರಣಿ ಕೈಬಿಟ್ಟಿದ್ದರು.

ಶಿರಾಡಿ ಘಾಟಿಯಲ್ಲಿ ರೈಲು, ರಸ್ತೆಗೆ ಹೊಸ ಯೋಜನೆ: ಕ್ಯಾ. ಬ್ರಿಜೇಶ್ ಚೌಟ

ಸುರಂಗ ಹಳಿ ಪ್ರತ್ಯೇಕ ನಿರ್ಮಾಣ

ಪುತ್ತೂರು: ಶಿರಾಡಿ ಘಾಟಿಯಲ್ಲಿ ರಸ್ತೆ ಸುರಂಗ ಮಾರ್ಗ ಮತ್ತು ರೈಲು ಸಂಚರಿಸುವ ಸುರಂಗ ಹಳಿ ಪ್ರತ್ಯೇಕವಾಗಿ ನಿರ್ಮಿಸಲು ನಿರ್ಧರಿಸಲಾಗಿದೆ ಎಂದು ಸಂಸದ ಕ್ಯಾ.ಬ್ರಿಜೇಶ್ ಚೌಟ ಹೇಳಿದ್ದಾರೆ.

ಗುರುವಾರ ಪುತ್ತೂರಿನಲ್ಲಿ ಮಾಧ್ಯಮಗಳ ಜತೆ ಮಾತನಾಡಿದ ಅವರು, ರಸ್ತೆ ಮತ್ತು ರೈಲು ಹಳಿ ಜಂಟಿಯಾಗಿ ನಿರ್ಮಿಸುವ



ಸಂಬಂಧ ರೈಲ್ವೆ ಮತ್ತು ಭೂಸಾರಿಗೆ ಇಲಾಖೆ ಜಂಟಿ ಸಮೀಕ್ಷೆ ನಡೆಸಿದ ಬಳಿಕ ಏಕ ಯೋಜನೆ ಕೈಬಿಟ್ಟು ಪ್ರತ್ಯೇಕ ಯೋಜನೆಗೆ ನಿರ್ಧರಿಸಲಾಗಿದೆ ಎಂದರು.

ಶಿರಾಡಿ ಘಾಟಿಯಲ್ಲಿ ಗ್ರೇಡಿಯೆಂಟ್ (ಇಳಿಜಾರು ಸಮತಟ್ಟು) 0-50ರ ಅನುಪಾತದಲ್ಲಿದೆ. ಸುರಂಗ ರೈಲು ಹಳಿ ನಿರ್ಮಿಸಲು ಇಳಿಜಾರು ಸಮತಟ್ಟು 0-10ರ ಅನುಪಾತದಲ್ಲಿ ಇರಬೇಕಾಗುತ್ತದೆ. 0-20ರ ಇಳಿಜಾರು ಸಮತಟ್ಟಿನಲ್ಲಿ ಸುರಂಗ ರಸ್ತೆ ನಿರ್ಮಿಸಲು ಸಾಧ್ಯವಿದೆ. ಎರಡರ ಜೋಡಣೆ (ಎಲೈನ್‌ಮೆಂಟ್) ಸಾಧ್ಯವಾಗದ ಕಾರಣ ಜಂಟಿ ಯೋಜನೆ ಕೈಬಿಡಲಾಗಿದೆ ಎಂದು ಹೇಳಿದರು.

ಸುರಂಗ ಹಳಿಯ ಹಾದಿಯಲ್ಲೇ ಸುರಂಗ ರಸ್ತೆ ನಿರ್ಮಿಸಿದರೆ ಘಾಟಿಯಲ್ಲಿ ಸುರಂಗದ ಉದ್ದ 88 ಕಿ.ಮೀ. ಆಗುತ್ತದೆ.

ಸುರಂಗ ರಸ್ತೆಯನ್ನು 1-50 ಇಳಿಜಾರು ಸಮತಟ್ಟು ಅನುಪಾತದಲ್ಲಿ ಮಾಡಿದರೆ 38 ಕಿ.ಮೀ.ನಲ್ಲಿ ಸಾಧ್ಯವಾಗುತ್ತದೆ. 38 ಕಿ.ಮೀ. ಸುರಂಗ ರಸ್ತೆಯನ್ನು 88 ಕಿ.ಮೀ. ಉದ್ದಕ್ಕೆ ನಿರ್ಮಿಸುವುದು ಕಾರ್ಯಸಾಧ್ಯವೂ ಇಲ್ಲ. ಹೀಗಾಗಿ ಸುರಂಗ ರಸ್ತೆಗೆ ಭೂಸಾರಿಗೆ ಇಲಾಖೆಯವರು ಪ್ರತ್ಯೇಕ ಎಲೈನ್‌ಮೆಂಟ್ ನಕ್ಷೆ ತಯಾರಿಸಿ ಡಿಪಿಆರ್ ಮಾಡಲಿದ್ದಾರೆ. ರೈಲ್ವೆಯವರು ಮುಂದಿನ ದಿನಗಳಲ್ಲಿ ಪ್ರತ್ಯೇಕ ಲೊಕೇಶನ್ ಸರ್ವೆ ಮಾಡಿ ಡಿಪಿಆರ್ ಮಾಡಲಿದ್ದಾರೆ. ಒಟ್ಟು ಮಾಡಲು ಪ್ರಯತ್ನಿಸಿದೆವು. ಭೌಗೋಳಿಕತೆಯ ಕಾರಣದಿಂದ ಸಾಧ್ಯವಾಗಲಿಲ್ಲ.

ಮಳೆಗಾಲದ ಅಧಿವೇಶನದ ಸಂದರ್ಭ ಎರಡೂ ಇಲಾಖೆಗಳ ಕಾರ್ಯದರ್ಶಿ ಮತ್ತು ಸಚಿವರನ್ನು ಭೇಟಿ ಮಾಡಿ ಶಿರಾಡಿ ಘಾಟಿ ಸುರಂಗ ಯೋಜನೆ ಜಾರಿಗೆ ಒತ್ತಾಯಿಸಲಿದ್ದೇವೆ. ಇದರಲ್ಲಿ ಸುರಂಗ ರಸ್ತೆಯು ಮೊದಲು ಜಾರಿಯಾಗುವ ಸಾಧ್ಯತೆ ಇದೆ ಎಂದು ಸಂಸದರು ಹೇಳಿದರು.


> ಮಾಣಿ-ಸಂಪಾಜೆ ಚತುಷ್ಪಥ ಹೆದ್ದಾರಿ ನನ್ನ ಆದ್ಯತೆಯಲ್ಲಿದೆ. ಎನ್‌ಎಚ್ ಮತ್ತು ಎನ್‌ಎಚ್‌ಎಐ ಸೇರ್ಪಡೆ ವಿಚಾರದಲ್ಲಿ ಸ್ವಲ್ಪ ಗೊಂದಲವಿದೆ. ಇದು ಶೀಘ್ರ ನಿವಾರಣೆಯಾಗಲಿದೆ. ಚತುಷ್ಪಥ ಸಂಬಂಧ ಒಂದು ಹಂತದ ಡಿಪಿಆರ್ ಆಗಿದೆ.
> ■ ಕ್ಯಾ.ಬ್ರಿಜೇಶ್ ಚೌಟ, ಸಂಸದ

ಮೇಜರ್ ಪಿ.ಮಣಿವಣ್ಣನ್‌ಗೆ ನಗರ ಭೂ ಸಾರಿಗೆ ಆಯುಕ್ತರ ಹೆಚ್ಚುವರಿ ಹೊಣೆ

14 ಐಎಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ರಾಜ್ಯ ಸರ್ಕಾರದಲ್ಲಿ ವರ್ಗಾವಣೆ ಪರ್ವ ಮತ್ತೆ ಮುಂದುವರಿದಿದೆ. ಗುರುವಾರ 14 ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಆದೇಶ ಹೊರಡಿಸಲಾಗಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಮೇಜರ್ ಪಿ.ಮಣಿವಣ್ಣನ್ ಅವರಿಗೆ ನಗರ ಭೂ ಸಾರಿಗೆ ನಿರ್ದೇಶನಾಲಯದ ಆಯುಕ್ತರ ಹುದ್ದೆಯ ಹೆಚ್ಚುವರಿ ಹೊಣೆಗಾರಿಕೆ ವಹಿಸಲಾಗಿದೆ. ಹೊಸದಿಲ್ಲಿಯ ಕರ್ನಾಟಕ ಭವನದ ಪ್ರಾದೇಶಿಕ ಆಯುಕ್ತೆ ಇಮ್ಕೋಂಗ್ಲಾ ಜಮೀರ್ ಅವರನ್ನು ಕರ್ನಾಟಕ ಭವನದ ಕಾರ್ಯದರ್ಶಿ(ಸಂಯೋಜನೆ)ಯಾಗಿ ವರ್ಗಾವಣೆ ಮಾಡಲಾಗಿದೆ.



ಸ್ಥಳ ನಿಯುಕ್ತಿಯ ನಿರೀಕ್ಷೆಯಲ್ಲಿದ್ದ ಡಾ. ಪ್ರಸಾದ್ ಎನ್.ವಿ. ಅವರನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಕಾರ್ಯದರ್ಶಿಯಾಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿ ಸಮೀರ್ ಶುಕ್ಲಾ ಅವರನ್ನು ಕರ್ನಾಟಕ ಭವನದ ಪ್ರಾದೇಶಿಕ ಆಯುಕ್ತರನ್ನಾಗಿ ವರ್ಗಾವಣೆ ಮಾಡಲಾಗಿದೆ.

ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಕುಮಾರ್ ಕೆ.ಬಿ. ಅವರನ್ನು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕರಾಗಿ, ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಡಾ.ರಾಮ್ ಪ್ರಸಾತ್ ಮನೋಹರ್ ವಿ. ಅವರನ್ನು ಪ್ರವಾಸೋದ್ಯಮ ಇಲಾಖೆಯ ಆಯುಕ್ತರಾಗಿ ವರ್ಗಾವಣೆ ಮಾಡಲಾಗಿದೆ. ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ ಇಲಾಖೆಯ ನಿರ್ದೇಶಕ ಡಾ.ಸತೀಶ ಬಿ.ಸಿ. ಅವರನ್ನು ಕೃಷಿ ಇಲಾಖೆಯ ಆಯುಕ್ತರನ್ನಾಗಿ ವರ್ಗಾವಣೆ ಮಾಡಲಾಗಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಕಾರ್ಯದರ್ಶಿ ತುಳಸಿ ಮದ್ದಿನೇನಿ ಅವರನ್ನು ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿಯಾಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿ(ಪಂಚಾಯತ್ ರಾಜ್) ರಣದೀಪ್ ಡಿ. ಅವರನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿಯಾಗಿ ವರ್ಗಾಯಿಸಲಾಗಿದೆ.

ಸ್ಥಳ ನಿಯುಕ್ತಿಯ ನಿರೀಕ್ಷೆಯಲ್ಲಿದ್ದ ಅಕ್ರಮ್ ಪಾಷ ಅವರನ್ನು ರಾಷ್ಟ್ರೀಯ ಆರೋಗ್ಯ ಮಿಷನ್ ಮತ್ತು ಆರೋಗ್ಯ ಆಯುಕ್ತಾಲಯದ ಯೋಜನಾ ನಿರ್ದೇಶಕರನ್ನಾಗಿ ನಿಯುಕ್ತಿ ಮಾಡಲಾಗಿದೆ. ಖಜಾನೆ ಇಲಾಖೆಯ ಆಯುಕ್ತ ರಘುನಂದನ್ ಮೂರ್ತಿ ಅವರನ್ನು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ವರ್ಗಾವಣೆ ಮಾಡಲಾಗಿದೆ. ಇದರ ಜೊತೆಗೆ ಖಜಾನೆ ಇಲಾಖೆಯ ಆಯುಕ್ತರ ಹುದ್ದೆಯ ಹೆಚ್ಚುವರಿ ಹೊಣೆಗಾರಿಕೆ ವಹಿಸಲಾಗಿದೆ.

ಸ್ಥಳ ನಿಯುಕ್ತಿಯ ನಿರೀಕ್ಷೆಯಲ್ಲಿದ್ದ ನಿತೀಶ್ ಕೆ. ಅವರನ್ನು ಪೌರಾಡಳಿತ ಇಲಾಖೆಯ ನಿರ್ದೇಶಕರಾಗಿ, ರಾಜ್ಯ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಜಂಟಿ ವ್ಯವಸ್ಥಾಪಕ ನಿರ್ದೇಶಕ ಗ್ಯಾನೇಂದ್ರ ಕುಮಾರ್ ಗಂಗವರ್ ಅವರನ್ನು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ ಇಲಾಖೆಯ ನಿರ್ದೇಶಕರನ್ನಾಗಿ ವರ್ಗಾವಣೆ ಮಾಡಲಾಗಿದೆ.

ಬಾಗಲಕೋಟೆಯ ಕೃಷ್ಣಾ ಮೇಲ್ದಂಡೆ ಯೋಜನೆಯ ಆರ್ ಆ್ಯಂಡ್ ಆರ್ ಹಾಗೂ ಭೂ ಸ್ವಾಧೀನ ವಿಭಾಗದ ಪ್ರಧಾನ ವ್ಯವಸ್ಥಾಪಕ ಗಜಾನನ ಬಾಳೆ ಅವರನ್ನು ಬಾಗಲಕೋಟೆ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ವರ್ಗಾವಣೆ ಮಾಡಲಾಗಿದೆ. ಇದರೊಂದಿಗೆ ಕೃಷ್ಣಾ ಮೇಲ್ದಂಡೆ ಯೋಜನೆಯ ಆರ್ ಆ್ಯಂಡ್ ಆರ್ ಹಾಗೂ ಭೂ ಸ್ವಾಧೀನ ವಿಭಾಗದ ಪ್ರಧಾನ ವ್ಯವಸ್ಥಾಪಕ ಹುದ್ದೆಯ ಹೆಚ್ಚುವರಿ ಹೊಣೆಗಾರಿಕೆ ನೀಡಲಾಗಿದೆ.

ಊಟದಲ್ಲಿ ಹುಳು: ವಿದ್ಯಾರ್ಥಿಗಳ ಪ್ರತಿಭಟನೆ

• **ಬೆಳಗಾವಿ:** ಊಟ ಮಾಡಲು ಹೋದರೆ ಅಡುಗೆಯಲ್ಲಿ ಹುಳು ಬರುತ್ತದೆ. ಜಳಕಕ್ಕೆ ಹೋದರೆ ನೀರೇ ಬರುವುದಿಲ್ಲ. ಕುಡಿಯಲು ಶುದ್ಧ ನೀರಿನ ವ್ಯವಸ್ಥೆಯೂ ಇಲ್ಲ. ನಲ್ಲಿ ನೀರು ಕುಡಿದು ಆಸ್ಪತ್ರೆಗೆ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆರೋಪಿಸಿ ಬೆಳಗಾವಿಯ ಸಂಗಮೇಶ್ವರ ನಗರದ ಬಾಲಕರ ಮೆಟ್ರಿಕ್ ನಂತರದ ವಸತಿ ನಿಲಯದ ವಿದ್ಯಾರ್ಥಿಗಳು ಗುರುವಾರ ವಿದ್ಯಾರ್ಥಿಗಳು ದಿಢೀರ್ ಪ್ರತಿಭಟನೆ ನಡೆಸಿದರು.

ಕಳೆದ ಹಲವು ದಿನಗಳಿಂದ ವಸತಿ ನಿಲಯದಲ್ಲಿ ತೀವ್ರ ನೀರಿನ ಅಭಾವ ಎದುರಾಗಿದ್ದು, ಶುದ್ಧ ಕುಡಿಯುವ ನೀರು ಹಾಗೂ ಮೂಲಭೂತ ಸೌಲಭ್ಯಗಳ ಕೊರತೆಯಿಂದ ವಿದ್ಯಾರ್ಥಿಗಳು ಸಂಕಷ್ಟ ಅನುಭವಿಸುತ್ತಿದ್ದಾರೆ. ಶೌಚಾಲಯ ಬಳಕೆಗೆ ಸಹ ನೀರು ಲಭ್ಯವಾಗುತ್ತಿಲ್ಲ ಎಂದು ವಿದ್ಯಾರ್ಥಿಗಳು ದೂರಿದರು.ವಸತಿ ನಿಲಯದ ಊಟದಲ್ಲಿ ಪದೇ ಪದೇ ಹುಳುಗಳು ಪತ್ತೆಯಾಗುತ್ತಿದ್ದು, ವಿದ್ಯಾರ್ಥಿಗಳ ಆರೋಗ್ಯದ ಬಗ್ಗೆ ಆತಂಕ ಹೆಚ್ಚಾಗಿದೆ.


ರಘು ಕೌಟಿಲ್ಯ, ಲಿಂಗರಾಜ್‌ಗೆ ಅಭಿನಂದನೆ

• **ಬೆಂಗಳೂರು:** ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿಯ ಅಭ್ಯರ್ಥಿಗಳಾದ ರಘು ಕೌಟಿಲ್ಯ ಮತ್ತು ಲಿಂಗರಾಜ್ ಪಾಟೀಲ್ ಅವರು ಗೆಲುವು ಸಾಧಿಸಿದ್ದಾರೆ. ಅವರನ್ನು ಅಭಿನಂದಿಸುವುದಾಗಿ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ ತಿಳಿಸಿದ್ದಾರೆ.

ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮತದಾನ ಪ್ರಕ್ರಿಯೆಯಲ್ಲಿ ನಮ್ಮ ಮೂರು ಮತಗಳು ಅಡ್ಡಮತದಾನ ಆಗಿವೆ ಎಂಬುದು ಗೊತ್ತಾಗಿದೆ. ಅದನ್ನು ಯಾರು ಮಾಡಿದ್ದಾರೆ ಎಂಬುದು ಗೊತ್ತಾಗುತ್ತದೆ. ಆ ಕುರಿತು ನಮ್ಮ ಪಕ್ಷ ತೀರ್ಮಾನ ತೆಗೆದುಕೊಳ್ಳುತ್ತದೆ ಎಂದು ತಿಳಿಸಿದರು.

ನಮ್ಮದು ಒಂದು ಮತ ಅಸಿಂಧು ಆಗಿದೆ. 30 ಮತಗಳನ್ನು ರಘು ಅವರಿಗೆ ಕೊಟ್ಟಿದ್ದೆವು. ಅದರಲ್ಲಿ ಒಂದು ಮತ ಅಸಿಂಧು ಆಗಿದೆ. 30 ಮತಗಳನ್ನು ಪಾಟೀಲ್ ಅವರಿಗೆ ಕೊಟ್ಟಿದ್ದೆವು. ಅದರಲ್ಲಿ ಮೂರು ಮತಗಳು ನಮಗೆ ಬಂದಿಲ್ಲ. ಉಳಿದ ಎರಡು ಮತಗಳನ್ನು ಜೆಡಿಎಸ್‌ಗೆ ಕೊಟ್ಟಿತ್ತು. ನಮ್ಮದು ಮೂರು ಮತಗಳು ಹೆಚ್ಚು ಕಡಿಮೆಯಾಗಿರುವುದು ಕಾಣಿಸುತ್ತಿದೆ. ಯಾರೂ ಪಕ್ಷಕ್ಕೆ ದ್ರೋಹ ಬಗೆದಿದ್ದಾರೆ ಎಂಬುದು ಗೊತ್ತಾಗಲಿದೆ ಎಂದು ಅಶೋಕ ಹೇಳಿದರು.

ರಾಮ ಬಾಣ



ಪಿತ್ರಾರ್ಜಿತ ಆಸ್ತಿ, ವಿಭಜನೆ ಬಳಿಕ ಕುಟುಂಬದ ಆಸ್ತಿಯಾಗಲ್ಲ: ಹೈ

• **ಬೆಂಗಳೂರು:** ತಾತನು ತನ್ನ ಜೀವಿತಾವಧಿಯಲ್ಲಿ ಸ್ವಂತವಾಗಿ ಸಂಪಾದಿಸಿದ ಆಸ್ತಿಯು ವಿಭಜನೆಯ ನಂತರ ಆ ಆಸ್ತಿ ತಂದೆಯ ಕೈಸೇರಿದರೂ ಅದು ತಂದೆಯ ವೈಯಕ್ತಿಕ ಆಸ್ತಿಯಾಗುತ್ತದೆಯೇ ವಿನಃ ಹಿಂದೂ ಅವಿಭಕ್ತ ಕುಟುಂಬದ ಆಸ್ತಿಯಾಗುವುದಿಲ್ಲ ಎಂದು ಹೈಕೋರ್ಟ್ ಆದೇಶಿಸಿದೆ.

ಅಲ್ಲದೆ, ಆ ರೀತಿಯಲ್ಲಿ ವಿಭಜನೆಯಾದ ಆಸ್ತಿಯಲ್ಲಿ ಮೊಮ್ಮಗಳು ಪಾಲು ಕೇಳುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ.

ಅಮೆರಿಕದಲ್ಲಿ ನೆಲೆಸಿರುವ ಉಷಾ ಎನ್ ಸ್ವಾಮಿ ಸಲ್ಲಿಸಿದ್ದ ಮೇಲ್ಮನವಿ ಕುರಿತು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಡಿ.ಕೆ.ಸಿಂಗ್ ಮತ್ತು ನ್ಯಾಯಮೂರ್ತಿ ಟಿ.ಎಂ.ನದಾಫ್ ಅವರಿದ್ದ ವಿಭಾಗೀಯ ಪೀಠ, ಈ ಮಹತ್ವದ ತೀರ್ಪು ನೀಡಿದೆ.

ವಾದ-ಪ್ರತಿವಾದ ಆಲಿಸಿ ಪ್ರಕರಣದ ಎಲ್ಲಾ ಅಂಶಗಳನ್ನು ಅವಲೋಕಿಸಿದ ಬಳಿಕ ನ್ಯಾಯಾಲಯ, ಉಷಾ ಉಲ್ಲೇಖಿಸಿರುವ ಆಸ್ತಿಗಳ ದಾಖಲೆಗಳನ್ನು ಪರಿಶೀಲಿಸಿದರೆ ಆಕೆಯ ತಾತ, ಅಂದರೆ ತಂದೆಯ ತಂದೆ ಸ್ವಂತವಾಗಿ ಸಂಪಾದಿಸಿದ್ದರೆಂಬುದು ತಿಳಿದು ಬರಲಿದೆ.

ಆ ಆಸ್ತಿಯನ್ನು ಅವರ ತಾತ, ಅವರ ಮಕ್ಕಳಿಗೆ ಕೌಟುಂಬಿಕ ಒಪ್ಪಂದದ ಮೂಲಕ ಹಂಚಿಕೆ ಮಾಡಿದ್ದಾರೆ. ತಾತನ ಸ್ವಯಾರ್ಜಿತ ಆಸ್ತಿ ಭಾಗವಾಗಿ ತಂದೆಗೆ ಬಂದಾಗ, ಅದು ಆ ತಂದೆಯ ವೈಯಕ್ತಿಕ ಆಸ್ತಿಯಾಗುತ್ತದೆ. ಆದರೆ ಪಿತ್ರಾರ್ಜಿತ ಆಸ್ತಿಯಾಗುವುದಿಲ್ಲ ಎಂದು ಆದೇಶಿಸಿದೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕನೇಜಿ

◈ ಭಾಷೆ , ಪೂಜಾ ಪದ್ಧತಿಗಳು ಬೇರೆ ಬೇರೆಯಾಗಿದ್ದರೂ ಪರೋಪಕಾರವೇ ಪುಣ್ಯ ಪರಪೀಡನೆಯೇ ಪಾಪ ಎಂಬ ತತ್ವದ ಪಾಲನೆಯಿಂದಾಗಿ ಭಾರತ ಇಂದು ಒಂದಾಗಿ ಉಳಿದಿದೆ

– ಮೋದಿ

–ದಾರಿಗಳು ಬೇರೆ ಬೇರೆಯಾಗಿದ್ದರೂ ಗುರಿ ಒಂದೇ. ನದಿಗಳು ಬೇರೆ ಬೇರೆಯಾಗಿದ್ದರೂ ಸೇರುವುದು ಒಂದೇ ಸಮುದ್ರಕ್ಕೆ. ಪಕ್ಷಗಳು ಬೇರೆ ಬೇರೆಯಾಗಿದ್ದರೂ ದೇಶ ಒಂದೇ. ಅನೇಕತೆಯಲ್ಲಿ ಏಕತೆಯೇ ಹಿಂದುತ್ವ!

ದಿನ ಭವಿಷ್ಯ

ಮೇಷ ಉದಾಸೀನ ಕಾಡಲಿದೆ. ಕಾರ್ಯ ವಿಳಂಬ. ಶೇರು ಹೂಡಿಕೆ ಲಾಭ ತರುವುದು. ಅವಿವಾಹಿತರಿಗೆ ಸಂಬಂಧ ಕೂಡಿಬರುವ ಸಾಧ್ಯತೆ.

ವೃಷಭ ಉದ್ದೇಶಿತ ಕಾರ್ಯ ಪೂರ್ಣವಾಗದೆ ನಿರಾಶೆ. ಪ್ರೀತಿಪಾತ್ರರಿಂದ ಟೀಕೆ ಕೇಳುವಿರಿ. ಹಣದ ವಿಚಾರದಲ್ಲಿ ರಿಸ್ಕ್ ಬೇಡ, ಎಚ್ಚರದ ನಡೆಯಿರಲಿ.

ಮಿಥುನ ಕೆಲಸದಲ್ಲಿ ಹೆಚ್ಚು ಪರಿಶ್ರಮ ಅಗತ್ಯ. ನಿಮ್ಮ ಕಾರ್ಯಕ್ಕೆ ಟೀಕೆ ಬಂದೀತು. ಸರಿಯಾಗಿ ತಿಳಿದಿರದ ಕ್ಷೇತ್ರದಲ್ಲಿ ಹಣ ಹೂಡುವ ರಿಸ್ಕ್ ಬೇಡ.

ಕಟಕ ಜೀವನದಲ್ಲಿ ನಿಮಗೇನು ಬೇಕು ಎಂದು ಪ್ರಶ್ನಿಸಿಕೊಳ್ಳಿ. ಸ್ಪಷ್ಟ ಗುರಿ ಇಟ್ಟುಕೊಳ್ಳಿ. ಪ್ರಸ್ತುತ ನಿಮ್ಮ ಬದುಕು ಗುರಿಯಿಲ್ಲದ ನಾವೆಯಂತಾಗಿದೆ.

ಸಿಂಹ ಭವಿಷ್ಯಕ್ಕೆ ಸೂಕ್ತ ಯೋಜನೆ ಹಾಕಿಕೊಳ್ಳಿ. ಆಸಕ್ತ ವ್ಯಕ್ತಿಯ ಭೇಟಿ, ಸಂಬಂಧ ಗಾಢವಾದೀತು. ಅಲರ್ಜಿಯಂತಹ ಸಮಸ್ಯೆ ಕಾಡಬಹುದು.

ಕನ್ಯಾ ಉತ್ತಮ ಉದ್ಯೋಗ ಅವಕಾಶ ದೊರಕೀತು. ಆತ್ಮೀಯರ ಭಾವನೆಗೆ ಸರಿಯಾಗಿ ಸ್ಪಂದಿಸಿ. ನಿರಾಸಕ್ತಿ ತೋರದಿರಿ. ಪ್ರಮುಖ ಕಾರ್ಯಸಿದ್ಧಿ.

ತುಲಾ ಕೆಲಸದ ಏಕತಾನತೆ ಬೋರ್ ಹೊಡೆಸಬಹುದು. ಹೊಸತನಕ್ಕೆ ತೆರೆದುಕೊಳ್ಳಿ. ಅನವಶ್ಯ ಶಾಪಿಂಗ್ ತಪ್ಪಿಸಿ. ಖರ್ಚು ನಿಯಂತ್ರಿಸಿ.

ವೃಶ್ಚಿಕ ಉದ್ಯಮ ವ್ಯವಹಾರದಲ್ಲಿ ಎಚ್ಚರ ವಹಿಸಿ. ವಂಚನೆ ನಡೆದೀತು. ಖಾಸಗಿ ಬದುಕಿನಲ್ಲಿ ಸ್ಥಿರತೆಗೆ ಆದ್ಯತೆ ಕೊಡಿ. ತಲೆನೋವು ಬಾಧಿಸೀತು.

ಧನು ವೃತ್ತಿಗೆ ಸಂಬಂಧಿಸಿ ಶುಭ ಬೆಳವಣಿಗೆ. ಆರೋಗ್ಯದ ವಿಚಾರ ಆತಂಕ ತರಬಹುದು. ಅಗತ್ಯ ಬಿದ್ದರೆ ವೈದ್ಯರ ಕಾಣುವುದು ಒಳಿತು.

ಮಕರ ನಿಮ್ಮ ಸುತ್ತ ಶಾಂತ ವಾತಾವರಣ. ಕಾರ್ಯ ಸುಗಮ. ಇತರರ ಸಹಕಾರ ಪಡೆಯುವಿರಿ. ಆಹಾರ ಸೇವನೆಯಲ್ಲಿ ಪಥ್ಯ ಕಾಯ್ದುಕೊಳ್ಳಿ.

ಕುಂಭ ವೃತ್ತಿ ಕಾರ್ಯದಲ್ಲಿ ಸಫಲತೆ. ಮ್ಯೂಚುವಲ್ ಫಂಡ್‌ನಲ್ಲಿ ಹಣ ಹೂಡುವಾಗ ಎಚ್ಚರ ವಹಿಸಿ. ವಿವಾಹ ಸಂಬಂಧ ಕೂಡಿಬರಬಹುದು.

ಮೀನ ಆರ್ಥಿಕ ಸಫಲತೆ. ನಿಮ್ಮ ಪ್ರಮುಖ ಗುರಿ ಸಾಧಿಸಲ್ಪಡಲಿದೆ. ರಸ್ತೆ ಸಂಚಾರದ ವೇಳೆ ತುಸು ಜಾಗ್ರತೆ ವಹಿಸಿ. ಖರ್ಚು ನಿಯಂತ್ರಣ.

ರಾಹುಕಾಲ : 10.30-12.00
ಗುಳಿಕಕಾಲ : 7.30-9.00
ಅದೃಷ್ಟ ಸಂಖ್ಯೆ : 5,9,2,7

ಮೇಲ್ಮನೆಯಲ್ಲಿ ಕೈ ಚಳಕ | ವಿರೋಧ ಪಕ್ಷಗಳಿಗೆ ಮುಖಭಂಗ

ಫಲಿಸಿದ ಕಾಂಗ್ರೆಸ್ ತಂತ್ರ

• **ಬೆಂಗಳೂರು:** ತೀವ್ರ ಕುತೂಹಲ ಮೂಡಿಸಿದ್ದ ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ರೂಪಿಸಿದ್ದ ತಂತ್ರ ಫಲಿಸಿದ್ದು, 5ನೇ ಅಭ್ಯರ್ಥಿಯನ್ನು ಅನಾಯಾಸವಾಗಿ ಗೆಲ್ಲಿಸುವ ಮೂಲಕ ವಿಪಕ್ಷಗಳಿಗೆ ತ್ರೀವ್ರ ಮುಖಭಂಗ ಆಗುವಂತೆ ಮಾಡಿದೆ.

ಈ ಚುನಾವಣೆಯಲ್ಲಿ ನಿರೀಕ್ಷೆಗಿಂತ ಹೆಚ್ಚಿಗೆಯೇ ಅಡ್ಡ ಮತದಾನ ಆಗಿರುವುದು ಮೈತ್ರಿ ಪಕ್ಷಗಳಿಗೆ ತೀವ್ರ ಆಘಾತ ಮೂಡಿಸಿದ್ದು, ಎಲ್ಲವೂ ಸರಿ ಇಲ್ಲ ಎಂಬುವುದನ್ನು ತೋರಿಸಿದೆ. ಬಿಜೆಪಿಯಿಂದ 3 ಮತ್ತು ಜೆಡಿಎಸ್‌ನಿಂದ 4 ಅಡ್ಡ ಮತದಾನವಾಗಿದೆ. ಬಿಜೆಪಿಯ ಒಂದು ಮತ ಅಸಿಂಧುವಾಗಿದೆ. ಮೈತ್ರಿ ಪಕ್ಷಗಳು ಕೊನೆ ಗಳಿಗೆಯಲ್ಲಿ ಮ್ಯಾಜಿಕ್ ಮಾಡಿ ಜೆಡಿಎಸ್ ಅಭ್ಯರ್ಥಿ ಗೆಲ್ಲಿಸಬಹುದು ಎಂಬ ನಿರೀಕ್ಷೆ ಸುಳ್ಳಾಗಿದೆ.ಈ ಗೆಲುವಿನ ಮೂಲಕ ಕಾಂಗ್ರೆಸ್ ಮೇಲ್ಮನೆಯಲ್ಲಿ ಹೆಚ್ಚುವರಿಯಾಗಿ 1 ಸ್ಥಾನವನ್ನು ಪಡೆದುಕೊಂಡರೆ, ಬಿಜೆಪಿ 1 ಸ್ಥಾನವನ್ನು ಕಳೆದುಕೊಂಡಿದ್ದು, ಜೆಡಿಎಸ್‌ಗೆ ಯಾವುದೇ ನಷ್ಟವಾಗಿಲ್ಲ. ಫಲಿತಾಂಶದ ನಂತರದ ಈಗಿನ ಸಂಖ್ಯಾಬಲ ಪ್ರಕಾರ ಕಾಂಗ್ರೆಸ್ 38, ಬಿಜೆಪಿ 28, ಜೆಡಿಎಸ್ 7 ಸ್ಥಾನ ಹೊಂದಿದ್ದರೆ, ಪಕ್ಷೇತರ 1 ಮತ್ತು ಸಭಾಧ್ಯಕ್ಷ 1 ಸ್ಥಾನ ಇದೆ.

ಕಾಂಗ್ರೆಸ್‌ನಿಂದ ಖಾಲಿಯಾದ ನಾಲ್ಕು ಸ್ಥಾನಗಳ ಪೈಕಿ ಬಿ.ಕೆ. ಹರಿಪ್ರಸಾದ್ ಮತ್ತು ತಿಪ್ಪಣ್ಣ ಕಮಕನೂರ ಮರು ಆಯ್ಕೆಯಾದರೆ, ಗೋವಿಂದ ರಾಜು, ನಸೀರ್ ಅಹ್ಮದ್ ಸ್ಥಾನಕ್ಕೆ ಪಿ.ವಿ.ಮೋಹನ್, ಬಿ.ಎಸ್. ಶಿವಣ್ಣ ಅವರು ಆಯ್ಕೆಯಾಗಿದ್ದು, ಹೆಚ್ಚುವರಿಯಾಗಿ ವಿನಯ್ ಕಾರ್ತಿಕ್ ಮೇಲ್ಮನೆ ಪ್ರವೇಶಿಸಿದ್ದಾರೆ.ಬಿಜೆಪಿಯಿಂದ ಮೂವರು ಸದಸ್ಯರು ನಿವೃತ್ತಿಗೊಂಡಿದ್ದು, ಸಂಖ್ಯಾ ಬಲದ ಆಧಾರದಲ್ಲಿ ಇಬ್ಬರನ್ನು ಮಾತ್ರ ಗೆಲ್ಲಿಸಲು ಅವಕಾಶ ಇದಿದ್ದರಿಂದ ಒಂದು ಸ್ಥಾನವನ್ನು ಕಳೆದುಕೊಂಡಿದೆ. ಈ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಸೋತಿದ್ದರೂ ಆ ಪಕ್ಷಕ್ಕೆ ಯಾವುದೇ ನಷ್ಟವಾಗಿಲ್ಲ.ಬಿಜೆಪಿ ಮತ್ತು ಜೆಡಿಎಸ್‌ನ ಅಸಮಾಧಾನಿತರನ್ನು ಸೆಳೆಯಲು ಕಾಂಗ್ರೆಸ್ ಯಶಸ್ವಿಯಾಗಿದ್ದು, ಗೆಲುವಿಗಾಗಿ ನಡೆಸಿದ ಪೂರ್ವ ಸಿದ್ಧತೆಯ ಪರಿಣಾಮ ಕಾಂಗ್ರೆಸ್‌ನ 5ನೇ ಅಭ್ಯರ್ಥಿಯು ಗೆಲ್ಲುವಂತಾಗಿದೆ. ಈ ಗೆಲುವಿನಿಂದ ವಿಧಾನ ಪರಿಷತ್‌ಗೆ ಇನ್ನೊಬ್ಬರಿಗೆ ಸಚಿವ ಸ್ಥಾನ ಸಿಗಬಹುದಾಗಿದೆ.

ಮೇಲ್ಮನೆಯಲ್ಲಿ ಬಹುಮತ?: ಮೇಲ್ಮನೆಯಲ್ಲಿ ಕಾಂಗ್ರೆಸ್‌ಗೆ 38 ಸ್ಥಾನಗಳಿದ್ದು, ಬಿಜೆಪಿಯ 28, ಜೆಡಿಎಸ್‌ನ 7 ಮತ್ತು ಸಭಾಧ್ಯಕ್ಷ 1 ಸ್ಥಾನ ಸೇರಿದರೆ 35 ಆಗಲಿದ್ದು, ಪಕ್ಷೇತರ ಸದಸ್ಯ ಲಖನ್ ಜಾರಕಿಹೊಳಿ ಅವರು ಕಾಂಗ್ರೆಸ್‌ಗೆ ಬೆಂಬಲ ನೀಡಿದರೆ ಬಹುಮತ ಸಿಗಲಿದ್ದು, ಸಭಾಪತಿ ಸ್ಥಾನ ಪಡೆಯಬಹುದಾಗಿದೆ. ಇದರ ಜತೆಗೆ ಜುಲೈ 21ಕ್ಕೆ 5 ನಾಮನಿರ್ದೇಶಿತ ಸ್ಥಾನಗಳು ಖಾಲಿಯಾಗಲಿದ್ದು, ಇದು ಕಾಂಗ್ರೆಸ್‌ಗೆ ಬೋನಸ್ ಆಗಲಿದೆ.



ನಾವು ಯಾವುದೇ ತಂತ್ರಗಾರಿಕೆ ಮಾಡಿಲ್ಲ, ಅದರ ಅವಶ್ಯಕತೆ ಇಲ್ಲ. ಎಲ್ಲರೂ ಪ್ರಜ್ಞಾವಂತರು, ಬುದ್ಧಿವಂತರಿದ್ದು ಜನರ ಪ್ರತಿನಿಧಿಗಳಾಗಿದ್ದಾರೆ. ಅವರು ತಮ್ಮ ಸ್ವಇಚ್ಛೆ ಮೇಲೆ ಯಾರಿಗೆ ಮತ ಹಾಕಬೇಕೋ ಹಾಕಿದ್ದಾರೆ. ನಾನು ನಮ್ಮ ಶಾಸಕರ ಜೊತೆ ಎರಡು ದಿನ ಕಾಲ ಕಳೆದಿದ್ದೇನೆ ಹೊರತು, ಬೇರೆ ಯಾವ ತಂತ್ರಗಾರಿಕೆ ಮಾಡಿಲ್ಲ.

■ ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿ

ಶಾಸಕರಿಗೆ ತರಬೇತಿ ನೀಡಲಾಗಿತ್ತು

ನಮ್ಮ ಪಕ್ಷದ ಶಾಸಕರ ಒಂದು ಮತವೂ ತಿರಸ್ಕೃತವಾಗಬಾರದು ಎಂದು ತರಬೇತಿ ನೀಡಲಾಗಿತ್ತು. ಇದಕ್ಕೆ ಸಹಕರಿಸಿದ ಎಲ್ಲಾ ಪದಾಧಿಕಾರಿಗಳಿಗೆ ನಾನು ವಿಶೇಷವಾಗಿ ಧನ್ಯವಾದ ಹೇಳುತ್ತೇನೆ. ಇದಕ್ಕೆ ದುಡಿದಂತಹ ಪಕ್ಷದ ಎಲ್ಲಾ ಶಾಸಕರು, ನಾಯಕರು, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲಾ ಅವರು ಹಾಗೂ ಇತರೇ ಕಾರ್ಯದರ್ಶಿಗಳನ್ನು ನಾನು ಅಭಿನಂಧಿಸುತ್ತೇನೆ ಎಂದರು. ಮಾಧ್ಯಮಗಳು ಸಹ ಸರ್ಕಾರಕ್ಕೆ ಬೆಂಬಲವಾಗಿ ಸಲಹೆ ನೀಡಿದ್ದೀರಿ. ನಿಮಗೂ ಧನ್ಯವಾದಗಳು ಎಂದರು.

ನಮಗೆ ನೀಡಿದ ವಿಶ್ವಾಸ ಜನರಿಗೆ ನೀಡಿದ ಶಕ್ತಿ: ಡಿಕೆಶಿ

ಶಾಸಕರ ಪಕ್ಷಾತೀತ ಬೆಂಬಲ

• **ಬೆಂಗಳೂರು:** ವಿಧಾನ ಪರಿಷತ್ ಚುನಾವಣೆಯಲ್ಲಿ ನಮ್ಮ ಸರ್ಕಾರಕ್ಕೆ ಶಾಸಕರ ಬೆಂಬಲ ನೋಡಿ ನನಗೆ ಆಶ್ಚರ್ಯವಾಗಿದೆ. ಇದು ನಮ್ಮ ಸರ್ಕಾರಕ್ಕೆ ಮಾತ್ರ ನೀಡಿರುವ ಬೆಂಬಲವಲ್ಲ, ರಾಜ್ಯದ ಜನತೆಯ ಹಿತಕ್ಕಾಗಿ ನಿಮ್ಮ ಜತೆ ಇದ್ದೇವೆ ಎಂದು ನೀಡಿರುವ ಬೆಂಬಲ ಎಂದು ಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.

ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ಗುರುವಾರ ನಡೆದ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಪಕ್ಷದ ಬಿ.ಕೆ.ಹರಿಪ್ರಸಾದ್, ಮಳವಳ್ಳಿ ಶಿವಣ್ಣ, ಪಿ.ವಿ.ಮೋಹನ್, ವಿನಯ್ ಕಾರ್ತಿಕ್, ತಿಪ್ಪಣ್ಣಪ್ಪ ಕಮಕನೂರು ಅವರನ್ನು ವಿಧಾನಸೌಧದಲ್ಲಿ ಅಭಿನಂದಿಸಿದ ನಂತರ ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿದರು.

ನಾವು ಯಾವ ಹೆಜ್ಜೆಯನ್ನಿಟ್ಟು ಮುಂದುವರೆಯುತ್ತಿದ್ದೇವೆಯೋ ಅದಕ್ಕೆ ನಾವೂ ಜೊತೆಗಿದ್ದೇವೆ ಎಂದು ಪಕ್ಷಾತೀತವಾಗಿ ಬೆಂಬಲ ನೀಡಿದ್ದಾರೆ. ನಮ್ಮ ಪಕ್ಷದ ಶಾಸಕರೂ ಒಗ್ಗಟ್ಟಾಗಿ ಬೆಂಬಲಿಸಿದ್ದಾರೆ. ನಮಗೆ ಹೆಚ್ಚಿನ ಮತ ನೀಡಿದ ಬೇರೆ, ಬೇರೆ ಪಕ್ಷದ ವಿಶ್ವಾಸವನ್ನು ನಾವು ಉಳಿಸಿಕೊಳ್ಳುತ್ತೇವೆ. ನಿಮ್ಮ ಭಾವನೆಯನ್ನು ಅರಿತುಕೊಂಡು ನಿಮ್ಮ ಸೇವೆಯಲ್ಲಿ ಮುಂದುವರೆಯುತ್ತೇವೆ. ನೀವು ನಮಗೆ ನೀಡಿದ ವಿಶ್ವಾಸ ಜನರಿಗೆ ನೀಡಿದ ಶಕ್ತಿ ಎಂದು ಬಣ್ಣಿಸಿದರು.

ನಮಗೆ ಹೆಚ್ಚಿನ ಮತ ನೀಡಿದ ಬೇರೆ, ಬೇರೆ ಪಕ್ಷದ ವಿಶ್ವಾಸವನ್ನು ನಾವು ಉಳಿಸಿಕೊಳ್ಳುತ್ತೇವೆ. ನಿಮ್ಮ ಭಾವನೆಯನ್ನು ಅರಿತುಕೊಂಡು ನಿಮ್ಮ ಸೇವೆಯಲ್ಲಿ ಮುಂದುವರೆಯುತ್ತೇವೆ. ನೀವು ನಮಗೆ ನೀಡಿದ ವಿಶ್ವಾಸ ಜನರಿಗೆ ನೀಡಿದ ಶಕ್ತಿ.

■ ಡಿ.ಕೆ.ಶಿವಕುಮಾರ್, ಸಿಎಂ

ಇದು ಗುಪ್ತ ಮತದಾನ: ಬೇರೆ ಪಕ್ಷದ ಆಂತರಿಕ ವಿಚಾರ ಗೊತ್ತಿಲ್ಲ

ಅಡ್ಡ ಮತದಾನಕ್ಕಾಗಿ ಕುದುರೆ ವ್ಯಾಪಾರ ನಡೆದಿದೆ ಎಂಬುದಕ್ಕೆ ಪ್ರತಿಕ್ರಿಯೆ ನೀಡಿದ ಸಿಎಂ, ಇದರ ಬಗ್ಗೆ ನನಗೆ ಗೊತ್ತಿಲ್ಲ. ಮತ ಯಾರು ಹಾಕಿದ್ದಾರೆ ಎಂಬುದೂ ನನಗೆ ಗೊತ್ತಿಲ್ಲ. ಇಲ್ಲಿ ನಡೆದಿರುವುದು ಗುಪ್ತ ಮತದಾನ. ಯಾರು ಮತ ಹಾಕಿದ್ದಾರೆ ಎಂದು ಯಾರಿಗೆ ಗೊತ್ತು. ಆತ್ಮವಿಶ್ವಾಸದ ಮತ ಹಾಕಿದ್ದಾರೆ. ನಾನು ಯಾರ ಬಳಿಯೂ ಮಾತನಾಡಲು ಹೋಗಿಲ್ಲ, ಮತ ಕೇಳಲೂ ಹೋಗಿಲ್ಲ. ನಮ್ಮ ಪಕ್ಷದಿಂದ ಐದು ಅಭ್ಯರ್ಥಿಗಳು ನಿಂತಿದ್ದರು. ನಮ್ಮ ಶಾಸಕರ ಸಂಖ್ಯಾಬಲ ಎಷ್ಟಿತ್ತು ಎಂಬುದು ಮಾಧ್ಯಮಗಳಿಗೆ ತಿಳಿದಿತ್ತು. ಐದು ಜನ ಗೆಲ್ಲುತ್ತಾರೆ ಎನ್ನುವ ವಿಶ್ವಾಸವಿತ್ತು. ಅವರು ಗೆದ್ದಿದ್ದಾರೆ ಎಂದರು. ದಳ, ಬಿಜೆಪಿ ಸೇರಿದಂತೆ ಯಾವ ಪಕ್ಷದ ಆಂತರಿಕ ವಿಚಾರ ಏನಿದೆಯೋ ಎಂಬುದು ನನಗೆ ಏನೂ ಗೊತ್ತಿಲ್ಲ ಎಂದರು.

ದಾರಿ ಇಲ್ಲದವರಿಗೆ ದಾರಿ ತೋರಿಸಿದ್ದೇವೆ: ಕಾಂಗ್ರೆಸ್‌ನವರು ಸಹಕಾರ ಕೋರಿದ್ದಾರೆ ಎಂದು ಎಸ್.ಟಿ. ಸೋಮಶೇಖರ್ ಹೇಳಿದ್ದಾರೆ ಎನ್ನುವುದಕ್ಕೆ ಉತ್ತರಿಸಿದ ಸಿಎಂ, ಅವರನ್ನು ಉಚ್ಚಾಟನೆ ಮಾಡಿ ಕಳಿಸಿದ್ದಾರಲ್ಲವೇ? ನಮ್ಮ ಹತ್ತಿರ ಇರಬೇಡಿ ಎಂದು ಕಳಿಸಿದ್ದರು. ಹೀಗೆ ಕಳಿಸಿದವರನ್ನು ದಾರಿಯಲ್ಲಿಯೇ ಬಿಡಲು ಆಗುತ್ತದೆಯೇ? ನಾವು ದಾರಿ ಇಲ್ಲದವರಿಗೆ ದಾರಿ ತೋರಿಸುವ ಕೆಲಸ ಮಾಡಿದ್ದೇವೆ ಎಂದರು.

ಮಧ್ಯಪ್ರಾಚ್ಯ ಯುದ್ಧಕ್ಕೆ ವಿರಾಮ

ಪುಟ ೧➡ ಜಿ7 ಸಮ್ಮೇಳನದ ಬಳಿಕ ಫ್ರಾನ್ಸ್‌ನ ವರ್ಸೈಲೆಸ್ ಅರಮನೆಯಲ್ಲಿ ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರಾನ್ ಹಾಗೂ ಫ್ರಾನ್ಸ್ ಪ್ರಥಮ ಮಹಿಳೆ ಬ್ರಿಗಿಟ್ಟೆ ಮ್ಯಾಕ್ರಾನ್ ಬುಧವಾರ ತಡರಾತ್ರಿ ಆಯೋಜಿಸಿದ್ದ ಔತಣಕ್ಕೂ ಮುನ್ನ ಟ್ರಂಪ್ ಮಧ್ಯಂತರ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ಈ ವೇಳೆ ಅಮೆರಿಕ ಗೃಹ ಸಚಿವಾಲಯ ಕಾರ್ಯದರ್ಶಿ ಮಾರ್ಕೊ ರುಬಿಯೊ ಜತೆಗಿದ್ದರು. ಟ್ರಂಪ್ ಸಹಿ ಹಾಕುತ್ತಲೇ ಮ್ಯಾಕ್ರಾನ್, ಶಾಭಾಷ್ ಉತ್ತಮ ಕೆಲಸ ಮಾಡಿದ್ದೀರಿ ಎಂದು ಪ್ರತಿಕ್ರಿಯಿಸಿದ್ದಾರೆ.

ಮಧ್ಯಂತರ ಒಪ್ಪಂದಕ್ಕೆ ಇರಾನ್ ಅಧ್ಯಕ್ಷ ಪೆಜೆಶ್ಕಿಯನ್ ಬುಧವಾರ ಸಹಿ ಮಾಡಿದ್ದರೂ, ಇರಾನ್ ಅಧಿಕೃತ ಹೇಳಿಕೆಗಳನ್ನು ನೀಡಿರಲಿಲ್ಲ. ಶುಕ್ರವಾರ ಜಿನೀವಾದಲ್ಲಿ ಒಪ್ಪಂದದ ಸಹಿ ಹಾಕುವ ಕಾರ್ಯಕ್ರಮ ನಡೆಯಲಿದೆ.

ಒಪ್ಪಂದ ಉಲ್ಲಂಘಿಸಿದ ಲೆಬನಾನ್ –ಇಸ್ರೇಲ್: ಲೆಬನಾನ್ ವಿಚಾರದಲ್ಲಿ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಜವಾಬ್ದಾರಿಯುತ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಟ್ರಂಪ್ ಟೀಕಿಸಿದ್ದರು. ಇದಲ್ಲದೆ, ಮಧ್ಯಂತರ ಒಪ್ಪಂದವನ್ನು ಉಲ್ಲಂಘಿಸಿ ಲೆಬನಾನ್ ಮೇಲೆ ಇಸ್ರೇಲ್ ದಾಳಿ ನಡೆಸಿದೆ. ದಾಳಿಗೆ ಮೂವರು ಲೆಬನಾನ್ ನಾಗರಿಕರು ಬಲಿಯಾಗಿದ್ದಾರೆ.

14 ಷರತ್ತುಗಳ ಒಪ್ಪಂದ

ಮಧ್ಯಂತರ ಒಪ್ಪಂದದಲ್ಲಿ 14 ಷರತ್ತುಗಳಿವೆ. ಮಧ್ಯಂತರ ಒಪ್ಪಂದ ಪ್ರಕಾರ, 60 ದಿನಗಳ ಕಾಲ ಇರಾನ್ ಶುಲ್ಕ ವಸೂಲಿ ಮಾಡದೆ ಹಾರ್ಮುಜ್ ತೆರೆಯಬೇಕು. ಅದೇ ರೀತಿ ಇಸ್ರೇಲ್ ಲೆಬನಾನ್ ಮೇಲಿನ ದಾಳಿ ನಿಲ್ಲಿಸಬೇಕು. 30 ದಿನಗಳೊಳಗೆ ಅಮೆರಿಕ ತನ್ನ ಸೇನೆ ಸಂಪೂರ್ಣ ಹಿಂಪಡೆಯಬೇಕು. ಇರಾನ್ 300 ಕೆ.ಜಿ. ಅಣು ಶೇಖರಣೆ ಬಳಸುವಂತಿಲ್ಲ ಮತ್ತು ಮುಂದಿನ 15 ವರ್ಷಗಳ ಕಾಲ ಶೇ.3.67ಕ್ಕಿಂತ ಅಧಿಕ ಯುರೇನಿಯಂ ಪುಷ್ಟೀಕರಿಸುವಂತಿಲ್ಲ.

ವರ್ಸೈಲೆಸ್‌ನಲ್ಲಿ ಐತಿಹಾಸಿಕ ಸಹಿ!: 1919ರ ಜೂ.28ರಂದು ಮೊದಲ ಮಹಾಯುದ್ಧದ ಶಾಂತಿ ಒಪ್ಪಂದವನ್ನು ವರ್ಸೈಲೆಸ್‌ನಲ್ಲಿ ಸಹಿ ಹಾಕಲಾಗಿತ್ತು. ಅಮೆರಿಕ–ಇರಾನ್ ಸೇರಿ ಹಲವು ಯುದ್ಧಗಳನ್ನು ಕೊನೆಗೊಳಿಸಲು ವರ್ಸೈಲೆಸ್‌ನಲ್ಲಿ ಶಾಂತಿ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.

ತೈಲ ಬೆಲೆ ಭಾರೀ ಇಳಿಕೆ

ತಾತ್ಕಾಲಿಕ ಒಪ್ಪಂದ ಹಿನ್ನೆಲೆ ಜಾಗತಿಕ ಕಚ್ಚಾ ತೈಲ ಬೆಲೆ ಭಾರೀ ಇಳಿಕೆಯಾಗಿದೆ. ಬ್ರೆಂಟ್ ಕಚ್ಚಾ ತೈಲ ಪ್ರತಿ ಬ್ಯಾರೆಲ್‌ಗೆ 78 ಡಾಲರ್‌ನಂತೆ ಮಾರಾಟವಾಗಿದೆ. ಜಾಗತಿಕ ಷೇರು ಪೇಟೆ ಧನಾತ್ಮಕ ಟ್ರೆಂಡ್ ತೋರಿಸಿದೆ.

ಹಾರ್ಮುಜ್ ಶೀಘ್ರ ತೆರೆಯಲಿದೆ: ಪಾಕ್

ಅಮೆರಿಕ–ಇರಾನ್ ನಡುವಿನ ಮಧ್ಯಂತರ ಒಪ್ಪಂದಕ್ಕೆ ಖಾತರಿದಾರರಾಗಿ ಸಹಿ ಹಾಕಿದ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್, ಹಾರ್ಮುಜ್ ಜಲಸಂಧಿಯನ್ನು ಶೀಘ್ರ ತೆರೆಯಲಾಗುವುದು ಎಂದು ಹೇಳಿದ್ದಾರೆ. ಇದೇ ಸಂದರ್ಭ ಅಧ್ಯಕ್ಷ ಟ್ರಂಪ್ ಮತ್ತು ಇರಾನ್ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ ಅವರಿಗೆ ಷರೀಫ್ ಕೃತಜ್ಞತೆ ಸಲ್ಲಿಸಿದ್ದಾರೆ.

ಇದೇ ಅಂತಿಮ ಒಪ್ಪಂದವಲ್ಲ. ಒಂದು ವೇಳೆ ಇರಾನ್ ಷರತ್ತುಗಳನ್ನು ಪಾಲಿಸದಿದ್ದರೆ ಅಥವಾ ನಮ್ಮ ನಿರೀಕ್ಷೆಯಂತೆ ನಡೆದುಕೊಳ್ಳದಿದ್ದರೆ ಮತ್ತೆ ಬಾಂಬ್ ದಾಳಿ ನಡೆಸುತ್ತೇವೆ.

■ ಡೊನಾಲ್ಡ್ ಟ್ರಂಪ್, ಅಮೆರಿಕ ಅಧ್ಯಕ್ಷ

ಕಾಂಗ್ರೆಸ್ 5, ಬಿಜೆಪಿ 2



ಆರ್. ರಘು ಕೌಟಿಲ್ಯ | ಲಿಂಗರಾಜ ಪಾಟೀಲ | ಬಿ.ಕೆ ಹರಿಪ್ರಸಾದ್ | ಪಿ.ವಿ. ಮೋಹನ್ | ಬಿ.ಎಸ್. ಶಿವಣ್ಣ | ತಿಪ್ಪಣ್ಣಪ್ಪ ಕಮಕನೂರ | ವಿನಯ್ ಕಾರ್ತಿಕ್

ಪುಟ ೧➡ ಬಿಜೆಪಿ ವಿಧಾನಸಭೆಯಲ್ಲಿ 62 ಸದಸ್ಯ ಬಲ ಹೊಂದಿದ್ದು, ತನ್ನ ಇಬ್ಬರು ಅಭ್ಯರ್ಥಿಗಳಿಗೆ ತಲಾ 30 ಮತಗಳ ಹಂಚಿಕೆ ಮಾಡಿತ್ತು. ಉಳಿದ ಎರಡು ಮತಗಳನ್ನು ಜೆಡಿಎಸ್ ಅಭ್ಯರ್ಥಿಗೆ ಹಾಕಲು ಸೂಚಿಸಲಾಗಿತ್ತು. ಆದರೆ, ಬಿಜೆಪಿಯ ಲಿಂಗರಾಜ್ ಪಾಟೀಲ್ ಅವರಿಗೆ ಹಂಚಿಕೆಯಾಗಿದ್ದಕ್ಕಿಂತ ಮೂರು ಮತಗಳು ಕಡಿಮೆ ಬಿದ್ದಿವೆ. ಜೆಡಿಎಸ್ 18 ಶಾಸಕರಿದ್ದರೂ ಪಕ್ಷದ ಅಭ್ಯರ್ಥಿಗೆ ಕೇವಲ 14 ಮತಗಳಷ್ಟೇ ಚಲಾವಣೆಯಾಗಿವೆ. ಇಲ್ಲಿ ಉಭಯ ಪಕ್ಷಗಳ ಶಾಸಕರು ಅಡ್ಡ ಮತದಾನ ಮಾಡಿರುವುದು ಸ್ಪಷ್ಟವಾಗಿದೆ. ಇದರಿಂದ ಎರಡನೇ ಪ್ರಾಶಸ್ತ್ಯದ ಮತಗಳೂ ಸೇರಿ 28 ಮತಗಳ ನಿರೀಕ್ಷೆಯಲ್ಲಿದ್ದ ಕಾಂಗ್ರೆಸ್‌ನ ಐದನೇ ಅಭ್ಯರ್ಥಿ ನಿರೀಕ್ಷೆ ಮೀರಿ 32 ಮೊದಲ ಪ್ರಾಶಸ್ತ್ಯದ ಮತಗಳನ್ನೇ ಪಡೆದುಕೊಂಡಿದ್ದಾರೆ.

ಬಿಜೆಪಿಯ ಒಂದು ಮತ ಅಸಿಂಧು: ಮತದಾನ ಪ್ರಕ್ರಿಯೆಯ ಕುರಿತು ತರಬೇತಿ, ಪ್ರಾತ್ಯಕ್ಷಿಕೆಯ ನಂತರವೂ ಬಿಜೆಪಿಯ ಶಾಸಕರೊಬ್ಬರ ಮತ ಅಸಿಂಧುವಾಗಿದೆ. ರಘು ಕೌಟಿಲ್ಯ ಅವರಿಗೆ 30 ಮತಗಳ ಹಂಚಿಕೆಯಾಗಿತ್ತು. ಆದರೆ, ಅವರಿಗೆ 29 ಮತಗಳಷ್ಟೇ ಬಿದ್ದಿವೆ. ಅವರ ಪಾಲಿನ ಒಂದು ಮತ ಅಸಿಂಧುವಾಗಿದೆ.

ಕರ್ನಾಟಕ ವಿಧಾನಸಭೆಯ ಒಟ್ಟು 224 ಸ್ಥಾನಗಳ ಪೈಕಿ ಸದ್ಯ 222 ಸದಸ್ಯರಿದ್ದಾರೆ. ಮಾಜಿ ಸಚಿವ ಡಿ.ಸುಧಾಕರ್ ನಿಧನ ಹಾಗೂ ಕಾಂಗ್ರೆಸ್‌ನ ವಿನಯ್ ಕುಲಕರ್ಣಿ ಅನರ್ಹತೆಯಿಂದ 2 ಸ್ಥಾನಗಳು ತೆರವಾಗಿದ್ದವು. ಅಭ್ಯರ್ಥಿಯ ಗೆಲುವಿಗೆ ಮೊದಲ ಪ್ರಾಶಸ್ತ್ಯದಲ್ಲಿ 28 ಮತಗಳ(27.63) ಅಗತ್ಯವಿತ್ತು.

ಬೆಳಗ್ಗೆ 9ರಿಂದ ಸಂಜೆ 4 ಗಂಟೆಯವರೆಗೆ ವಿಧಾನಸೌಧದ ಕೊಠಡಿ ಸಂಖ್ಯೆ 121ರಲ್ಲಿ ಮತದಾನ ನಿಗದಿಯಾಗಿತ್ತು. ಬಳಿಕ ಮತಪೆಟ್ಟಿಗೆಯನ್ನು ಸೀಲ್ ಮಾಡಲಾಯಿತು. ಸಂಜೆ 5.05ರಿಂದ ಮತ ಎಣಿಕೆ ಪ್ರಕ್ರಿಯೆ ಪ್ರಾರಂಭವಾಯಿತು. ಮೊದಲು ಮತಗಳ ಸಿಂಧುತ್ವವನ್ನು ಪರಿಶೀಲಿಸಿದಾಗ ಒಂದು ಮತ ಅಸಿಂಧುವಾಗಿರುವುದು ಪತ್ತೆಯಾಯಿತು. ತರುವಾಯ ಅಭ್ಯರ್ಥಿಗಳು ಪಡೆದಿರುವ ಮತಗಳ ಎಣಿಕೆ ಮಾಡಲಾಯಿತು.

ಕರ್ನಾಟಕ ವಿಧಾನಸಭೆ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಅವರು ಚುನಾವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದರು. ಚುನಾವಣಾ ಫಲಿತಾಂಶ ಘೋಷಿಸಿದ ಅವರು ಗೆಲುವು ಸಾಧಿಸಿದ ಅಭ್ಯರ್ಥಿಗಳಿಗೆ ಪ್ರಮಾಣಪತ್ರ ಹಸ್ತಾಂತರಿಸಿದರು.

ಬಂಧಿತರಿಗೆ ಪಾಕ್ ಉಗ್ರ ಸಂಪರ್ಕ

ಪುಟ ೧➡ ಮತ್ತೋರ್ವ ಆರೋಪಿಯನ್ನು ಗುರುವಾರ ಬಂಧಿಸಲಾಗಿದೆ.

ಕಿಟಕಿ ಒಡೆದು ಪರಾರಿ: ಕೋಟ್ವಾಲಿ ಪೊಲೀಸ್ ಠಾಣೆಯಲ್ಲಿ ವಿಚಾರಣೆ ನಡೆಯುತ್ತಿದ್ದ ವೇಳೆ ಸೈಫ್ ಅನ್ಸಾರಿ ಶೌಚಾಲಯಕ್ಕೆ ಹೋಗುವ ನೆಪದಲ್ಲಿ ಕಿಟಕಿ ಒಡೆದು ಪರಾರಿಯಾಗಿದ್ದ. ಸಿಸಿಟಿವಿ ದೃಶ್ಯಾವಳಿಗಳ ಆಧಾರದ ಮೇಲೆ ಪೊಲೀಸರು ಆತನನ್ನು ಪತ್ತೆಹಚ್ಚಿ ಚಾನ್ಹೋ ಪ್ರದೇಶದ ಟೋಲ್ ಪ್ಲಾಜಾ ಸಮೀಪ ಬಂಧಿಸಿದ್ದಾರೆ.

ಗುಂಡಿನ ಚಕಮಕಿ: ಬಂಧಿತನನ್ನು ವಾಪಸ್ ಕರೆತರುತ್ತಿದ್ದಾಗ ಆತ ಪೊಲೀಸ್ ಸಿಬ್ಬಂದಿಯಿಂದ ಶಸ್ತ್ರ ಕಸಿದುಕೊಂಡು 2–3 ಸುತ್ತು ಗುಂಡು ಹಾರಿಸಿದ್ದಾನೆ. ಪ್ರತಿಯಾಗಿ ಪೊಲೀಸರು ನಡೆಸಿದ ಗುಂಡಿನ ದಾಳಿಯಲ್ಲಿ ಆತನ ಕಾಲಿಗೆ ಗಾಯವಾಗಿದೆ.

ಬಿಜೆಪಿ ಆಕ್ರೋಶ: ಮಾಜಿ ಮುಖ್ಯಮಂತ್ರಿ ರಘುವರ್ ದಾಸ್ ಈ ದಾಳಿಯನ್ನು ಖಂಡಿಸಿದ್ದು, ಇದು ರಾಜ್ಯ ಸರ್ಕಾರದ ತುಷ್ಟೀಕರಣ ಹಾಗೂ ಮತಬ್ಯಾಂಕ್ ರಾಜಕೀಯದ ಪರಿಣಾಮ ಎಂದು ಆರೋಪಿಸಿದ್ದಾರೆ. ರಾಜ್ಯದ ಕಾನೂನು ಸುವ್ಯವಸ್ಥೆ ಬಗ್ಗೆ ಅವರು ತೀವ್ರ ಆತಂಕ ವ್ಯಕ್ತಪಡಿಸಿದ್ದಾರೆ.

ಆರೋಪಿಗಳ ಗುರುತು ಬಹಿರಂಗ ಪಡಿಸಿ: ವಿಹಿಂಪ

• **ಹೊಸದಿಲ್ಲಿ:** ರಾಂಚಿಯಲ್ಲಿರುವ ಆರ್‌ಎಸ್‌ಎಸ್ ಕಚೇರಿಯ ಮೇಲೆ ನಡೆದ ಪೆಟ್ರೋಲ್ ಬಾಂಬ್ ದಾಳಿ ಪ್ರಕರಣದ ಆರೋಪಿಗಳ ಹೆಸರು ಕೂಡಲೇ ಬಹಿರಂಗಪಡಿಸಬೇಕು ಎಂದು ವಿಶ್ವ ಹಿಂದು ಪರಿಷತ್(ವಿಹಿಂಪ) ಗುರುವಾರ ಒತ್ತಾಯಿಸಿದೆ. ಈ ಘಟನೆಯು ಕಾಂಗ್ರೆಸ್‌ನ ಆರ್‌ಎಸ್‌ಎಸ್ ವಿರೋಧಿ ಭಾವನೆಯಿಂದ ಪ್ರೇರಿತವಾಗಿದೆಯೇ ಎಂಬ ವಿಚಾರದ ಬಗ್ಗೆಯೂ ತನಿಖೆ ನಡೆಸುವಂತೆ ವಿಹಿಂಪ ಕೋರಿದೆ. ಆರ್‌ಎಸ್‌ಎಸ್ ಕಚೇರಿ ಮೇಲೆ ದಾಳಿ ನಡೆದು 36 ಗಂಟೆಗಳು ಕಳೆದರೂ, ರಾಂಚಿ ಪೊಲೀಸರು ಇನ್ನೂ ಆರೋಪಿಗಳ ಗುರುತನ್ನು ಬಹಿರಂಗಪಡಿಸಿಲ್ಲ ಏಕೆ ಎಂದು ವಿಹಿಂಪ ರಾಷ್ಟ್ರೀಯ ವಕ್ತಾರ ವಿನೋದ್ ಬನ್ಸಾಲ್ ಹೇಳಿಕೆಯಲ್ಲಿ ಪ್ರಶ್ನಿಸಿದ್ದಾರೆ.

ತಂತ್ರಜ್ಞಾನ ಎಲ್ಲರಿಗೂ ತಲುಪಲಿ

ಪುಟ ೧➡ ಭಾರತವು ತಂತ್ರಜ್ಞಾನದ ಪ್ರಜಾಪ್ರಭುತ್ವೀಕರಣವನ್ನು ನಂಬುತ್ತದೆ ಎಂದು ಮೋದಿ ಹೇಳಿದರು.ಎಐ ಮಾನವ ಜೀವನವನ್ನು ಸುಧಾರಿಸಬೇಕು, ಅವಕಾಶಗಳನ್ನು ವಿಸ್ತರಿಸಬೇಕು, ಆರ್ಥಿಕ ಬೆಳವಣಿಗೆಗೆ ನೆರವಾಗಬೇಕು ಹಾಗೂ ಪರಿಸರ ಸಂರಕ್ಷಣೆಯಲ್ಲಿಯೂ ಪಾತ್ರವಹಿಸಬೇಕು ಎಂದು ಅವರು ಅಭಿಪ್ರಾಯಪಟ್ಟರು.

ಡಿಜಿಟಲ್ ಭಾರತಕ್ಕೆ ಜಾಗತಿಕ ಮೆಚ್ಚುಗೆ: ಕಳೆದ ಹತ್ತು ವರ್ಷಗಳಲ್ಲಿ ಭಾರತವು ತಂತ್ರಜ್ಞಾನ ಆಧಾರಿತ ವೇಗದ ಪರಿವರ್ತನೆಯನ್ನು ಕಂಡಿದೆ. ವಿಶ್ವದ ಅತಿದೊಡ್ಡ ಡಿಜಿಟಲ್ ಗುರುತಿನ ವ್ಯವಸ್ಥೆ, ಡಿಜಿಟಲ್ ಪಾವತಿ ವ್ಯವಸ್ಥೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಭಾರತ ಮಾದರಿಯಾಗಿದೆ ಎಂದರು.ಜಾಗತಿಕ ಡಿಜಿಟಲ್ ವಹಿವಾಟುಗಳ ಅರ್ಧಕ್ಕಿಂತ ಹೆಚ್ಚು ಭಾರತದಲ್ಲೇ ನಡೆಯುತ್ತಿವೆ. ಹಣಕಾಸು ಸೇರ್ಪಡೆ, ಶಿಕ್ಷಣ, ಟೆಲಿಮೆಡಿಸಿನ್, ಕೃಷಿ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ತಂತ್ರಜ್ಞಾನವನ್ನು ದೊಡ್ಡ ಪ್ರಮಾಣದಲ್ಲಿ ಬಳಸಲಾಗುತ್ತಿದೆ ಎಂದು ಹೇಳಿದರು.

ಹೂಡಿಕೆದಾರರಿಗೆ ಆಹ್ವಾನ

ಭಾರತವು ಮುಕ್ತ ಸಮಾಜವಾಗಿದ್ದು, ವಿಶ್ವದ ಅತಿದೊಡ್ಡ ಪ್ರತಿಭಾ ಸಂಪನ್ಮೂಲವನ್ನು ಹೊಂದಿದೆ. ನಿಯಮಗಳನ್ನು ಸರಳಗೊಳಿಸಲಾಗಿದ್ದು, ಉದ್ಯಮ ಸ್ನೇಹಿ ವಾತಾವರಣ ನಿರ್ಮಿಸಲಾಗಿದೆ. 50 ಬಿಲಿಯನ್ ಡಾಲರ್‌ಗಿಂತ ಹೆಚ್ಚಿನ ಪ್ರೋತ್ಸಾಹಧನ ಯೋಜನೆಗಳ ಮೂಲಕ ಖಾಸಗಿ ಉದ್ಯಮಗಳಿಗೆ ಬೆಂಬಲ ನೀಡಲಾಗುತ್ತಿದೆ ಎಂದರು. ಸರ್ಕಾರ ಅವಕಾಶ ಕಲ್ಪಿಸುತ್ತದೆ, ಕೈಗಾರಿಕೆಗಳು ನಾವೀನ್ಯತೆ ತರುತ್ತವೆ, ಸ್ಟಾರ್ಟ್‌ಅಪ್‌ಗಳು ಹೊಸ ದಿಕ್ಕು ತೋರಿಸುತ್ತವೆ. ಜಾಗತಿಕ ಪಾಲುದಾರರು ನಮ್ಮೊಂದಿಗೆ ಬೆಳೆಯಬಹುದು. ಭಾರತದಲ್ಲಿ ಹೂಡಿಕೆ ಮಾಡಿ, ಎಲ್ಲರ ಅಭಿವೃದ್ಧಿಗೆ ಕೈಜೋಡಿಸಿ ಎಂದು ಪ್ರಧಾನಿ ಮೋದಿ ಕರೆ ನೀಡಿದರು.

ಅಡ್ಡ ಮತದಾನ ಬಗ್ಗೆ ಪಕ್ಷ ಪರಿಶೀಲನೆ: ಬಿವೈವಿ

• **ಬೆಂಗಳೂರು:** ಇಂದು ನಡೆದ ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನವಾಗಿದ್ದರ ಬಗ್ಗೆ ಪಕ್ಷ ಪರಿಶೀಲನೆ ಮಾಡಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ.

ವಿಧಾನಪರಿಷತ್ ಚುನಾವಣೆಯಲ್ಲಿ ಗೆದ್ದ ಅಭ್ಯರ್ಥಿಗಳಿಗೆ ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಅಭಿನಂದಿಸಿ ಅವರು ಮಾಧ್ಯಮಗಳೊಂದಿಗೆ ಮಾತನಾಡಿದರು. ಬಿಜೆಪಿಯ ಅಭ್ಯರ್ಥಿಗಳಾದ ರಘು ಕೌಟಿಲ್ಯ ಹಾಗೂ ಲಿಂಗರಾಜ ಪಾಟೀಲ್ ಅವರು, ಜಯಶೀಲರಾಗಿದ್ದು ಅವರಿಗೆ ಅಭಿನಂದನೆ. ಲಿಂಗರಾಜ ಪಾಟೀಲ್ ಅವರ ಮೂರು ಮತಗಳು ಅಡ್ಡ ಮತದಾನ ಆಗಿವೆ. ರಘು ಅವರ ಮೂವತ್ತು ಮತಗಳಲ್ಲಿ ಒಂದು ಮತ ಅಸಿಂಧು ಆಗಿದೆ. ಇದನ್ನು ಯಾರು ಮಾಡಿದ್ದಾರೆ, ಯಾಕೆ ಮಾಡಿದ್ದಾರೆ ಎಂಬುದನ್ನು ಮುಂದೆ ಪರಿಶೀಲನೆ ನಡೆಸಲಾಗುವುದು ಹಾಗೂ ಸೂಕ್ತ ತೀರ್ಮಾನವನ್ನು ಪಕ್ಷ ಕೈಗೊಳ್ಳಲಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಶಾಸಕರಾದ ಹರೀಶ್ ಪೂಂಜ, ಮಹೇಶ್ ಟೆಂಗಿನಕಾಯಿ, ವಿಧಾನಪರಿಷತ್ ಸದಸ್ಯ ಕೇಶವ ಪ್ರಸಾದ್, ಮಾಜಿ ಸಂಸದ ಎಸ್. ಮುನಿಸ್ವಾಮಿ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್. ಹರೀಶ್, ಕೇಂದ್ರ ಜಿಲ್ಲಾಧ್ಯಕ್ಷ ಸಪ್ತಗಿರಿ ಗೌಡ ಉಪಸ್ಥಿತರಿದ್ದರು.

ಉದ್ಧವ್ ಶಿವಸೇನೆಗೆ ಮತ್ತೊಂದು ಆಘಾತ

ಪುಟ ೧➡ **ನಾಳೆ ಏಕನಾಥ್ ಶಿಂಧೆ ಭೇಟಿ:** ಶನಿವಾರ ಮತ್ತೆ ಏಕನಾಥ್ ಶಿಂಧೆ ಅವರನ್ನು ಭೇಟಿಯಾಗಲಿರುವ ಬಂಡಾಯ ಸಂಸದರು, ಸ್ಪೀಕರ್‌ಗೆ ಸಲ್ಲಿಸಿರುವ ಪತ್ರದ ವಿವರಗಳನ್ನು ಬಹಿರಂಗಪಡಿಸುವ ಸಾಧ್ಯತೆ ಇದೆ. ರಾಜಕೀಯ ವಲಯದಲ್ಲಿ ಅವರ ಪಕ್ಷಾಂತರಕ್ಕೆ ಶೀಘ್ರವೇ ಅಧಿಕೃತ ಮಾನ್ಯತೆ ಸಿಗಬಹುದು ಎಂಬ ಚರ್ಚೆ ನಡೆಯುತ್ತಿದೆ.

ಶೋಕಾಸ್ ನೋಟಿಸ್ ಜಾರಿ: ಇದಕ್ಕೆ ಪ್ರತಿಯಾಗಿ ಉದ್ಧವ್ ಠಾಕ್ರೆ ಬಣವು, ಆರು ಸಂಸದರಿಗೆ ಶೋಕಾಸ್ ನೋಟಿಸ್ ಜಾರಿ ಮಾಡಿದೆ. ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿರುವ ಆರೋಪದ ಅನ್ವಯ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದೆ. ಅಲ್ಲದೆ, ಪಕ್ಷ ತೊರೆಯುವ ಹಾಗೂ ಆಸನ ಬದಲಾವಣೆ ಕುರಿತ ಅವರ ಬೇಡಿಕೆಗಳನ್ನು ತಿರಸ್ಕರಿಸುವಂತೆ ಸ್ಪೀಕರ್ ಓಂ ಬಿರ್ಲಾ ಅವರಿಗೆ ಮನವಿ ಮಾಡಲು ನಿರ್ಧರಿಸಿದೆ. ಪಕ್ಷದ ಸಭೆಗೆ ಹಾಜರಾಗುವಂತೆ ನೀಡಿದ್ದ ವಿಪ್ ಅನ್ನು ಆರು ಸಂಸದರು ನಿರ್ಲಕ್ಷಿಸಿದ ಪರಿಣಾಮ, ಠಾಕ್ರೆ ಬಣದ ಅಸಮಾಧಾನ ಮತ್ತಷ್ಟು ಹೆಚ್ಚಿದೆ. ಪ್ರಸ್ತುತ ಉದ್ಧವ್ ಠಾಕ್ರೆ ಬಣದ ಒಂಬತ್ತು ಲೋಕಸಭಾ ಸದಸ್ಯರ ಪೈಕಿ, ಸಭೆಗೆ ಕೇವಲ ಮೂವರು ಮಾತ್ರ ಹಾಜರಾಗಿದ್ದರು.

ತುಂಗಭದ್ರಾ ಅಣೆಕಟ್ಟಿನ ಮೇಲೆ ಕಾರುಗಳ ಸಂಚಾರ ನಿಷೇಧ!

▸ ಮಂಜುನಾಥ ಗಂಗಾವತಿ

• **ಕೊಪ್ಪಳ:** ತುಂಗಭದ್ರಾ ಜಲಾಶಯದ ಗೇಟ್ ಅಳವಡಿಕೆ ಪೂರ್ಣಗೊಂಡಿದ್ದು, ಜೂ.25ರಂದು ಲೋಕಾರ್ಪಣೆಗೊಳ್ಳಲಿದೆ. ಉದ್ಘಾಟನೆ ದಿನದಂದು ಜಲಾಶಯದ ಮೇಲೆ ಕಾರುಗಳ ಸಂಚಾರ ನಿಷೇಧಿಸಲಾಗಿದೆ.

ಜೂ.25ರಂದು ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ಮುನಿರಾಬಾದ್‌ನಿಂದ ತುಂಗಭದ್ರಾ ಜಲಾಶಯದ ಅಣೆಕಟ್ಟಿನ ಮೇಲೆ ತೆರಳಿ ಕ್ರಸ್ಟ್ ಗೇಟ್ ಉದ್ಘಾಟಿಸಲಿದ್ದಾರೆ. ಬಳಿಕ ಮುನಿರಾಬಾದ್‌ನ ಸರ್ಕಾರಿ ಶಾಲಾ ಮೈದಾನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಆದರೆ, ತುಂಗಭದ್ರಾ ಜಲಾಶಯದ ಮುಖ್ಯ ದ್ವಾರದಿಂದ ಕಾರಿನ ಮೂಲಕ ಅಣೆಕಟ್ಟಿನ ಕ್ರಸ್ಟ್ ಗೇಟ್ ಸ್ಥಳಕ್ಕೆ ಹೋಗುವುದಿಲ್ಲ, ಬದಲಾಗಿ ಬ್ಯಾಟರಿ ಚಾಲಿತ ಪ್ರವಾಸಿಗರನ್ನು ಕೊಂಡೊಯ್ಯುವ ವಾಹನದಲ್ಲೇ ತೆರಳಿದ್ದಾರೆ.

ದಿಗಂತ ವಿಶೇಷ

ವಾಹನದಟ್ಟಣೆತಡೆಯಲುಕ್ರಮ: ಕಾರ್ಯಕ್ರಮಕ್ಕೆ ಮೂರು ರಾಜ್ಯದ ಸಿಎಂ, ಸಚಿವರು, ಕೊಪ್ಪಳ, ಬಳ್ಳಾರಿ, ರಾಯಚೂರು ಹಾಗೂ ವಿಜಯನಗರ ಜಿಲ್ಲೆಯ ಸಂಸದರು, ಶಾಸಕರು, ಮಾಜಿ ಶಾಸಕರು ಆಗಮಿಸಲಿದ್ದು, ಜಲಾಶಯದ ಮೇಲ್ಭಾಗದಲ್ಲಿ ವಾಹನ ಹಾಗೂ ಜನ ದಟ್ಟಣೆ ಉಂಟಾಗಲಿದೆ. ಇದನ್ನು ತಡೆಯಲು ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ವಿಜಯನಗರ, ಕೊಪ್ಪಳ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದರು.

ಕೆಎಸ್‌ಆರ್‌ಪಿ ಮೈದಾನದಲ್ಲಿ ಹೆಲಿಪ್ಯಾಡ್ ನಿರ್ಮಾಣ: ಮುನಿರಾಬಾದ್‌ನ ಕೆಎಸ್‌ಆರ್‌ಪಿ ತರಬೇತಿ ಶಾಲೆಯ ಮೈದಾನದಲ್ಲಿ ಹೆಲಿಪ್ಯಾಡ್ ನಿರ್ಮಾಣವಾಗಲಿದೆ. ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು, ಉಪಮುಖ್ಯಮಂತ್ರಿ ಪವನ್ ಕಲ್ಯಾಣ ಹಾಗೂ ಕೆಲ ಸಚಿವರು, ತೆಲಂಗಾಣದ ಮುಖ್ಯಮಂತ್ರಿ ರೇವಂತ್ ರೆಡ್ಡಿ ಹಾಗೂ ಸಚಿವರು, ಕೇಂದ್ರ ಜಲಸಂಪನ್ಮೂಲ ಸಚಿವರು ಆಗಮಿಸಲಿದ್ದಾರೆ.

ಹೆಲಿಕಾಪ್ಟರ್‌ನಲ್ಲಿ ಬರುವ ಮುಖ್ಯಮಂತ್ರಿಗಳಿಗೆ ನಾಲ್ಕು ಹೆಲಿಪ್ಯಾಡ್ ನಿರ್ಮಾಣವಾಗಲಿದೆ. ವಿಮಾನ ಮೂಲಕ ಬರುವ ಗಣ್ಯರಿಗೆ ಜಿಂದಾಲ್ ವಿಮಾನ ನಿಲ್ದಾಣದಲ್ಲಿ ವ್ಯವಸ್ಥೆ ಮಾಡಲಾಗಿದೆ. ಅಲ್ಲಿಂದ ಹೆಲಿಕ್ಯಾಪ್ಟರ್ ಮೂಲಕ ಮುನಿರಾಬಾದ್‌ಗೆ ಬರಲು ವ್ಯವಸ್ಥೆ ಮಾಡಲಾಗಿದೆ.



ನವಲಿ ಸಮಾಂತರ ಜಲಾಶಯ ಮುನ್ನೆಲೆಗೆ

ತುಂಗಭದ್ರಾ ಜಲಾಶಯದ ನೀರು ಶೇ.65ರಷ್ಟು ಕರ್ನಾಟಕ ಹಾಗೂ ಶೇ.35ರಷ್ಟು ನೀರು ಆಂಧ್ರ, ತೆಲಂಗಾಣಕ್ಕೆ ಹಂಚಿಕೆಯಾಗಿದೆ. ಜಲಾಶಯದಲ್ಲಿ 33 ಟಿಎಂಸಿಯಷ್ಟು ಹೂಳು ತುಂಬಿದ್ದು, ನವಲಿ ಬಳಿ ಸಮಾನಾಂತರ ಜಲಾಶಯ ನಿರ್ಮಾಣ ಸಂಬಂಧ ಡಿಪಿಆರ್ ಸಿದ್ಧವಾಗಿದೆ. ಆದರೆ, ಸಮಾನಾಂತರ ಜಲಾಶಯಕ್ಕೆ ಆಂಧ್ರ, ತೆಲಂಗಾಣ ಸರ್ಕಾರಗಳ ಅನುಮತಿ ಸಿಗಬೇಕು. ಆದ್ದರಿಂದ ಕಾರ್ಯಕ್ರಮ ದಿನದಂದು ಈ ವಿಷಯ ಪ್ರಸ್ತಾಪ ಮಾಡುವ ಚಿಂತನೆ ಇದೆ.

ಡಿಸಿ, ಎಸ್ಪಿಗಳಿಗೆ ಟಾಸ್ಕ್

ಜಲಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ಹಾಗೂ ಐಎಎಸ್ ಹಿರಿಯ ಅಧಿಕಾರಿ ಗೌರವ್ ಗುಪ್ತ ಅವರು ಗುರುವಾರ ಮುನಿರಾಬಾದ್‌ಗೆ ಭೇಟಿ ನೀಡಿ, ಕೊಪ್ಪಳ, ವಿಜಯನಗರ ಹಾಗೂ ಬಳ್ಳಾರಿ ಡಿಸಿ, ಎಸ್ಪಿ ಜತೆ ಸಭೆ ನೀಡಿದರು. ಜೂ.25ರಂದು ನಡೆಯುವ ಕಾರ್ಯಕ್ರಮದ ರೂಪುರೇಷೆ ಸಿದ್ಧ ಪಡಿಸಿದರು. ಹೆಲಿಪ್ಯಾಡ್, ಊಟದ ವ್ಯವಸ್ಥೆ, ಅಂತರ್ ರಾಜ್ಯ ಸಿಎಂಗಳನ್ನು ಬರಮಾಡಿಕೊಳ್ಳುವುದು ಹೀಗೆ ಕಾರ್ಯಕ್ರಮದ ಸಂಪೂರ್ಣ ಯಶಸ್ವಿಗೆ ಡಿಸಿ, ಎಸ್ಪಿಗೆ ಟಾಸ್ಕ್ ನೀಡಿದರು.

'ಅನ್ನಬ್ರಹ್ಮ ಚಾತುರ್ಮಾಸ್ಯ'ದ ಆಹ್ವಾನ ಪತ್ರಿಕೆ ಲೋಕಾರ್ಪಣೆ

• **ಗೋಕರ್ಣ:** ಅನ್ನವನ್ನು ದೇವರೆಂದು ಪರಿಭಾವಿಸುವ ಪರಂಪರೆ ಸನಾತನ ಭಾರತದ್ದು. ಆಹಾರ ಇಹದಲ್ಲಿ ಮನುಷ್ಯನ ಸರ್ವಾಂಗೀಣ ಸಮೃದ್ಧಿಗೆ ಕಾರಣ ಮಾತ್ರವಲ್ಲದೇ, ಪರದಲ್ಲಿ ಉತ್ತಮ ಗತಿ ಪ್ರಾಪ್ತಿಗೂ ಕಾರಣ ಎಂದು ಶ್ರೀ ರಾಮಚಂದ್ರಾಪುರ ಮಠದ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು ಹೇಳಿದರು.

ಅವರು ಇಲ್ಲಿನ ಅಶೋಕೆಯ ಮೂಲ ಮಠದಲ್ಲಿ 'ಅನ್ನಬ್ರಹ್ಮ ಚಾತುರ್ಮಾಸ್ಯ'ದ ಆಹ್ವಾನ ಪತ್ರಿಕೆ ಲೋಕಾರ್ಪಣೆಗೊಳಿಸಿ ಮಾತನಾಡಿದರು.

ಚಾತುರ್ಮಾಸ್ಯ ವ್ರತ ಗುರುಗಳಿಗಾದರೆ, ಶಿಷ್ಯಭಕ್ತರಿಗೆ ಇದು ಹಬ್ಬ. ಈ ಹಿನ್ನೆಲೆಯಲ್ಲಿ ಜ್ಞಾನೋದ್ದೀಪನದ ಜೊತೆಗೆ ಆಹಾರದ ಕುರಿತಾದ ಋಷಿದರ್ಶನದ ಪ್ರಸ್ತುತಿಗೆ ಈ ಚಾತುರ್ಮಾಸ್ಯವನ್ನು ಬಳಸಿಕೊಳ್ಳಲಾಗುತ್ತಿದೆ. ಅನ್ನವನ್ನು ವ್ಯರ್ಥ ಮಾಡಬಾರದು. ಇಂದು ಶ್ರೀಮಂತಿಕೆ ಹೆಚ್ಚಾದಷ್ಟು ಅನ್ನವನ್ನು ವ್ಯರ್ಥ ಮಾಡುವ ದುರಾಚಾರ ಹೆಚ್ಚಾಗುತ್ತಿದೆ. ಇವೆಲ್ಲವುಗಳ ಹಿನ್ನೆಲೆಯಲ್ಲಿ ಆಹಾರದ ಕುರಿತಾದ ಜನಜಾಗೃತಿ ಮೂಡಿಸುವ ಕಾರ್ಯ ಇಲ್ಲಿ ನಡೆಯಲಿದೆ ಎಂದರು.

ಪ್ರಾಣಿ ಪಕ್ಷಿಗಳು ಹೆಚ್ಚಿನ ಸಮಯವನ್ನು ಆಹಾರ ಹೊಡುಕಿಕೊಂಡೇ ಜೀವನ ನಡೆಸುವುದನ್ನು ನೋಡುತ್ತೇವೆ. ಆದರೆ, ಅವು ಸರಿಯಾದ ಆಹಾರವನ್ನು ಮಾತ್ರ ಸ್ವೀಕರಿಸುವುದನ್ನು ಕಾಣುತ್ತೇವೆ. ಆದರೆ, ಮನುಷ್ಯ ಹಾಗಲ್ಲ. ಯೋಗ್ಯವಲ್ಲದ ಆಹಾರವನ್ನು ಹೇಗೆ ಹೇಗೋ ಸ್ವೀಕರಿಸುತ್ತಿರುವ ಪ್ರವೃತ್ತಿಯನ್ನು ನೋಡುತ್ತಿದ್ದೇವೆ. ಆಹಾರ ಜೀವನದ ಬಹುಮುಖ್ಯ ಅಂಗವಾಗಿದ್ದು, ಇಂದು ಆಹಾರದ ಹಿನ್ನೆಲೆ ಆಹಾರದ ತಯಾರಿ, ಸೇವನೆಗೆ ಸಮರ್ಪಕ ಪ್ರಾಮುಖ್ಯತೆ ನೀಡದೇ ಇರುವುದು ವಿಷಾದಕರ ಎಂದರು.

ಈ ವೇಳೆ ಶ್ರೀಮಠದ ಪ್ರಶಾಸನಾಧಿಕಾರಿ ಸಂತೋಷ್ ಹೆಗಡೆ, ವಿತ್ತಾಧ್ಯಕ್ಷ ಗಣೇಶ್ ಜೆ.ಎಲ್, ಹವ್ಯಕ ಮಹಾಮಂಡಲದ ಅಧ್ಯಕ್ಷ ಹರಿಪ್ರಸಾದ್ ಪೆರಿಯಾಪು, ಡಿ.ಡಿ ಶರ್ಮಾ, ಪ್ರದೀಪ್ ನಾಯಕ್, ಮಹೇಶ್ ಶೆಟ್ಟಿ, ಆರ್.ಎಸ್ ಹೆಗಡೆ ಹರಗಿ, ಮಂಜುನಾಥ ಸುವರ್ಣಗದ್ದೆ, ಪ್ರವೀಣ್ ಭೀಮನಕೋಣೆ, ಚಾತುರ್ಮಾಸ್ಯದ ಪ್ರಧಾನ ಸಂಯೋಜಕ ಚಂದನ್ ಶಾಸ್ತ್ರೀ ಸೇರಿದಂತೆ ಚಾತುರ್ಮಾಸ್ಯದ ಸಂಯೋಜಕರು ಹಾಗೂ ಎಲ್ಲಾ ಭಾಗಗಳ ಪ್ರಮುಖರು ಉಪಸ್ಥಿತರಿದ್ದರು.



ಅನ್ನಬ್ರಹ್ಮ ಚಾತುರ್ಮಾಸ್ಯ ವಿಶೇಷ

ಗೋಕರ್ಣದ ಅಶೋಕೆಯ ಪರಿಸರದಲ್ಲಿ ಈ ವರ್ಷದ ಚಾತುರ್ಮಾಸ್ಯ ನಡೆಯುತ್ತಿದ್ದು, ಜು.29ರಿಂದ ಸೆ.26ರ ವರೆಗೆ ಆಹಾರದ ಕುರಿತಾದ ಜಾಗೃತಿಯ 'ಅನ್ನಬ್ರಹ್ಮ ಚಾತುರ್ಮಾಸ್ಯ' ನಡೆಯಲಿದೆ. ಈ ಚಾತುರ್ಮಾಸ್ಯದ ಸಮಯದಲ್ಲಿ ಆಹಾರದ ಕುರಿತಾಗಿ ಜಾಗೃತಿ ಮೂಡಿಸುವ ಅನೇಕ ಕಾರ್ಯಕ್ರಮಗಳು ಇರಲಿದ್ದು, ಭೋಜನವೆಂಬ ತಪಸ್ಸು, ಆಹಾರ ಯಾವಾಗ ಸ್ವೀಕರಿಸಿದರೆ ಹಿತ, ಜಲಪಾನದ ನಿಯಮಗಳು, ಆಹಾರದ ಉದ್ದೇಶ, ಉಪವಾಸ, ಭೋಜನದ ಬಳಿಕ ಪಾಲಿಸಬೇಕಾದ ನಿಯಮಗಳು, ಭೋಜನ ಪಾತ್ರೆಗಳು ಸೇರಿದಂತೆ ಅನೇಕ ವಿಶಿಷ್ಟ ಪ್ರವಚನ ಮಾಲಿಕೆಗಳನ್ನು ಜಗದ್ಗುರು ಶಂಕರಾಚಾರ್ಯ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು ಅನುಗ್ರಹಿಸಲಿದ್ದಾರೆ.

ಕಿರುಸುದ್ದಿ

43.91ಲಕ ರೂ. ಕಾಣಿಕೆ ಸಂಗ್ರಹ

• **ಹುಬ್ಬಳ್ಳಿ:** ಇಲ್ಲಿಯ ಸಿದ್ಧಾರೂಢ ಸ್ವಾಮಿ ಮಠದಲ್ಲಿ ಕಾಣಿಕೆ ಪೆಟ್ಟಿಗೆ ಎಣಿಕೆ ಕಾರ್ಯಕ್ರಮ ನಡೆದಿದ್ದು, 43,91,214 ರೂ. ಸಂಗ್ರಹವಾಗಿದ್ದು, 48,699 ರೂ. ಮೌಲ್ಯದ ಬಂಗಾರ ಹಾಗೂ ಬೆಳ್ಳಿ ಸಾಮಗ್ರಿಗಳ ಕಾಣಿಕೆ ನೀಡಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆಗೆ ತಿಳಿಸಿದ ಶ್ರೀಮಠದ ಟ್ರಸ್ಟ್ ಕಮಿಟಿ, ಜಿಲ್ಲಾ ನ್ಯಾಯಾಲಯ ಶಿರಸ್ತೆದಾರ ಅನಿಲ ಮಟ್ಟಣ್ಣವರ ಅವರ ಸಮ್ಮುಖದಲ್ಲಿ ಎಣಿಕೆ ಕಾರ್ಯ ನಡೆದಿದೆ. ಮೇ 20ರಿಂದ ಜೂ. 17ರ ವರೆಗೆ 27 ದಿನಗಳಲ್ಲಿ ಸಂಗ್ರಹವಾದ ಕಾಣಿಕೆಯಾಗಿದೆ.

ಟ್ರಸ್ಟ್ ಕಮಿಟಿಯ ಚೇರ್‌ಮನ್ ಬಾಳು ಟಿ.ಮಗಜಿಕೊಂಡಿ, ಗೌರವ ಕಾರ್ಯದರ್ಶಿ ವಿನಾಯಕ ಅ.ಘೋಡಕೆ, ಧರ್ಮದರ್ಶಿ ಉದಯಕುಮಾರ ಡಿ.ನಾಯಕ, ವಸಂತ ಸಾಲಗಟ್ಟಿ, ಹಾಗೂ ಮತ್ತು ಶ್ರೀಮಠದ ಸಿಬ್ಬಂದಿವರ್ಗದವರು, ಎಸ್.ಬಿ.ಐ. ಬ್ಯಾಂಕ್ ಸಿಬ್ಬಂದಿ ಹಾಗೂ ಭಕ್ತರು ಇದ್ದರು.

ಸಾಲಬಾಧೆ: ಯುವ ರೈತ ಆತ್ಮಹತ್ಯೆ

• **ಹಾವೇರಿ:** ಸಾಲಬಾಧೆ ತಾಳಲಾರದೆ ಯುವ ರೈತರೊಬ್ಬರು ಜಮೀನಿನಲ್ಲಿ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಸೋಮನಕಟ್ಟಿ ಶಿಬಾರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಫಕೀರೇಶ ವಿರೂಪಾಕ್ಷಪ್ಪ ಈರೋಜಿ (28) ಮೃತ ದುರ್ದೈವಿ. ಇವರು ಮನೆಯ ಹಿರಿತನದ ಖರ್ಚು ವೆಚ್ಚವನ್ನು ನೋಡಿಕೊಳ್ಳುತ್ತಾ ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದರು. ತನ್ನ ತಂದೆಯ ಹೆಸರಿನಲ್ಲಿರುವ ಜಮೀನಿನಲ್ಲಿ ಕೃಷಿ ಮಾಡಿಕೊಂಡಿದ್ದು, ಕೃಷಿ ಚಟುವಟಿಕೆಗಳಿಗೆಂದು ಲಕ್ಷಾಂತರ ರೂ.ಸಾಲವನ್ನ ಮಾಡಿಕೊಂಡಿದ್ದರು. ಯಲಗಚ್ಚ ಕೆವಿಜಿ ಬ್ಯಾಂಕಿನಲ್ಲಿ 2ಲಕ್ಷ ರೂ. ಬೆಳೆಸಾಲ, ಊರಿನಲ್ಲಿ 3-4 ಲಕ್ಷ ರೂ. ಕೈಗಡಾ ಸಾಲ ಮಾಡಿಕೊಂಡಿದ್ದರು.

ಈ ವರ್ಷವೂ ಖಾಸಗಿ ವ್ಯಕ್ತಿಯ ಬಳಿ 1 ಲಕ್ಷ ರೂ. ಸಾಲ ಪಡೆದು, ಮನೆಯಲ್ಲಿದ್ದ ಆಕಳನ್ನು ಮಾರಾಟ ಮಾಡಿ ಬಂದ ಹಣದಲ್ಲಿ ಬಿತ್ತನೆ ಬೀಜ, ಗೊಬ್ಬರ ಖರೀದಿ ಬಿತ್ತನೆ ಮಾಡಿದ್ದರು. ಆದರೆ ಕಳೆದೊಂದು ವಾರದಿಂದ ಮಳೆ ಸರಿಯಾಗಿ ಬಾರದ ಹಿನ್ನೆಲೆ ಜಮೀನಿನಲ್ಲಿ ಬಿತ್ತಿದ ಬೀಜವು ಸರಿಯಾಗಿ ಹುಟ್ಟದಿರುವ ಕಾರಣ, ಮರು ಬಿತ್ತನೆ ಮಾಡಬೇಕೆಂಬ ಚಿಂತೆಯಲ್ಲಿ ತೊಡಗಿ ತೀವ್ರ ಮನನೊಂದಿದ್ದ. ಇದೇ ಕಾರಣದಿಂದಾಗಿ ಜಮೀನಿನಲ್ಲಿ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಆತನ ತಂದೆ ವಿರೂಪಾಕ್ಷಪ್ಪ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಗುತ್ತಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಭೀಮಾ ನದಿ ನೀರು ಸಮರ್ಪಕ ಬಳಸಿಕೊಳ್ಳಲು ಸರ್ಕಾರ ವಿಫಲ: ನಾಟಿಕಾರ

• **ಕಲಬುರಗಿ:** ಜಿಲ್ಲೆಯ ಜೀವನಾಡಿಯಾಗಿರುವ ಭೀಮಾ ನದಿ ಬತ್ತುತ್ತಿರುವ ಹಿನ್ನೆಲೆಯಲ್ಲಿ ಜೆಡಿಎಸ್ ರಾಜ್ಯ ಹಿಂದುಳಿದ ವರ್ಗಗಳ ಘಟಕದ ಅಧ್ಯಕ್ಷ ಶಿವಕುಮಾರ ನಾಟಿಕಾರ ಸರ್ಕಾರ ಹಾಗೂ ಜನಪ್ರತಿನಿಧಿಗಳ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಅಫಜಲಪುರ ತಾಲೂಕಿನ ಭೀಮಾ ನದಿ ತೀರಕ್ಕೆ ಭೇಟಿ ನೀಡಿದ ಶಿವಕುಮಾರ ನಾಟಿಕಾರ ಹಾಗೂ ಅವರ ತಂಡ, ನದಿಯಲ್ಲಿನ ನೀರಿನ ಕೊರತೆ ಕಂಡು ಸರ್ಕಾರದ ನಿರ್ಲಕ್ಷ್ಯವನ್ನು ಖಂಡಿಸಿ ಬಳಿಕ ಸುದ್ದಿಗಾರರೊಂದಿಗೆಮಾತನಾಡಿದಅವರು, ಬಚಾವತ್ ತೀರ್ಪಿನ ಅನ್ವಯ ಕರ್ನಾಟಕಕ್ಕೆ ಸಿಗಬೇಕಾದ ಭೀಮಾ ನದಿಯ ನೀರಿನ ಪಾಲನ್ನು ಸಮರ್ಪಕವಾಗಿ ಬಳಸಿಕೊಳ್ಳಲು ರಾಜ್ಯ ಸರ್ಕಾರ ವಿಫಲವಾಗಿವೆ ಎಂದು ಆರೋಪಿಸಿದರು.

ಕಾವೇರಿ ನೀರಿನ ವಿಚಾರವಾಗಿ ರಾಜ್ಯಾದ್ಯಂತ ಹೋರಾಟಗಳು ನಡೆಯುತ್ತವೆ. ಆದರೆ, ಭೀಮಾ ನದಿಯ ನೀರಿನ ಸಮಸ್ಯೆ ಕುರಿತು ಯಾರೂ ಧ್ವನಿ ಎತ್ತುತ್ತಿಲ್ಲ. ಅಫಜಲಪುರ ತಾಲೂಕಿನ ಮೂಲಕ ಸುಮಾರು 60 ಕಿಲೋಮೀಟರ್ ಭೀಮಾ ನದಿ ಹರಿದರೂ, ಇದುವರೆಗೆ ಸುಮಾರು 60 ಸಾವಿರ ಹೆಕ್ಟೇರ್ ಕೃಷಿ ಭೂಮಿಗೆ ನೀರು ಒದಗಿಸಲು ಸಾಧ್ಯವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.



ಬಚಾವತ್ ತೀರ್ಪಿನ ಪ್ರಕಾರ ಕರ್ನಾಟಕಕ್ಕೆ ಸುಮಾರು 42 ಟಿಎಂಸಿ ನೀರಿನ ಹಕ್ಕಿದ್ದರೂ, ಅದನ್ನು ಸಮರ್ಪಕವಾಗಿ ಬಳಸಿಕೊಳ್ಳಲಾಗದ ಕಾರಣ ಕಲ್ಯಾಣ ಕರ್ನಾಟಕ ಭಾಗದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಮಳೆಗಾಲ ಆರಂಭವಾಗಿ 15 ದಿನಗಳು ಕಳೆದಿದ್ದರೂ ಭೀಮಾ ನದಿಯಲ್ಲಿ ನೀರಿನ ಹರಿವು ಕಾಣುತ್ತಿಲ್ಲ, ಇದರಿಂದ ರೈತರ ಬೆಳೆಗಳು ಒಣಗುವ ಪರಿಸ್ಥಿತಿ ನಿರ್ಮಾಣವಾಗಿದ್ದು, ಜಾನುವಾರು ಹಾಗೂ ಪಕ್ಷಿಗಳಿಗೂ ಕುಡಿಯುವ ನೀರಿನ ಕೊರತೆ ಎದುರಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶರಣಗೌಡ ಪಾಟೀಲ, ರಾಜಕುಮಾರ ಉಕಲಿ, ಮರೆಪ್ಪ ಜಮಾದಾರ, ಮಂಜು ನಾಯ್ಕೋಡಿ, ಜಗದೀಶ ಉಡಚಾಣ, ಅಮೂಲ ಮೋರೆ, ಶ್ರೀಶೈಲಗೌಡ ಮಾಲಿಪಾಟೀಲ, ಸಿದ್ದು ನ್ಯಾವನೂರ, ಶಿವಾನಂದ ಹಿಳ್ಳಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕಲಾ ಚೇತನ ರಾಷ್ಟ್ರ ಪ್ರಶಸ್ತಿಗೆ ಆಯ್ಕೆ

• **ದೇವರ ಹಿಪ್ಪರಗಿ:** ಉತ್ತರ ಕರ್ನಾಟಕದ ಜನಪದಕಲೆಯಾದ ಡೊಳ್ಳಿನ ಹಾಡಿಕೆಯಲ್ಲಿ ಅಪಾರ ಸಾಧನೆಗೈದಿರುವ ವಿಜಯಪುರ ಜಿಲ್ಲೆಯ ದೇವರ ಹಿಪ್ಪರಗಿ ತಾಲೂಕಿನ ಇಂಗಳಗಿ ಗ್ರಾಮದ ಪ್ರಸಿದ್ಧ ಗಾಯಕಿ ಜ್ಯೋತಿ ಇಂಗಳಗಿ ಅವರು ಈ ವರ್ಷದ ಪ್ರತಿಷ್ಠಿತ 'ಕಲಾ ಚೇತನ ರಾಷ್ಟ್ರ ಪ್ರಶಸ್ತಿ'ಗೆ ಆಯ್ಕೆಯಾಗಿದ್ದಾರೆ.



ಅಂತಾರಾಷ್ಟ್ರೀಯ ಹಿಂದೂ ಮಹಾಸಭಾ ಕರ್ನಾಟಕದ ವತಿಯಿಂದ ಜೂನ್ 24ರಂದು ಬಾಗಲಕೋಟೆಯ ಲಯನ್ಸ್ ಕ್ಲಬ್ ಸಭಾಭವನದಲ್ಲಿ ಆಯೋಜಿಸಲಾಗಿರುವ ಭವ್ಯ ಸಮಾರಂಭದಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಅಂತಾರಾಷ್ಟ್ರೀಯ ಹಿಂದೂ ಮಹಾಸಭಾ ಕರ್ನಾಟಕದ ವಿದ್ಯಾರ್ಥಿ ಘಟಕದ ರಾಜ್ಯಾಧ್ಯಕ್ಷ ಸಾಗರ ಕಲಾದಗಿ ತಿಳಿಸಿದ್ದಾರೆ.

ಪ್ರಶಸ್ತಿ ಆಯ್ಕೆ ಕುರಿತು ಹರ್ಷ ವ್ಯಕ್ತಪಡಿಸಿ ಮಾತನಾಡಿದ ಜ್ಯೋತಿ ಇಂಗಳಗಿ, ಈ ಗೌರವವು ಕೇವಲ ನನ್ನ ವೈಯಕ್ತಿಕ ಸಾಧನೆಯಲ್ಲ, ಇದು ನನ್ನ ಕಲಾ ಸಂಘದ ಸದಸ್ಯರು, ಸ್ನೇಹಿತರು, ಸಮಾಜದ ಬಂಧುಗಳು, ಗುರು-ಹಿರಿಯರು ಹಾಗೂ ಶ್ರೀ ಅಮೋಘಸಿದ್ಧ ಮತ್ತು ನಮ್ಮ ಸಂಘದ ಸಾಹಿತಿಗಳಾದ ಕೆಂಚು ಮಾಸ್ತರ್ ಹಾಗೂ ಶ್ರೀ ಸಿದ್ದರತ್ನ ಮದಗೊಂಡ ಮಹಾರಾಜರವರ ಆಶೀರ್ವಾದದ ಫಲವಾಗಿದೆ. ತಮ್ಮನ್ನು ಈ ಪ್ರತಿಷ್ಠಿತ ಪ್ರಶಸ್ತಿಗೆ ಆಯ್ಕೆ ಮಾಡಿದ ಅಂತಾರಾಷ್ಟ್ರೀಯ ಹಿಂದೂ ಮಹಾಸಭಾದ ರಾಜ್ಯಾಧ್ಯಕ್ಷ ಸಾಗರ ಕಲಾದಗಿ ಹಾಗೂ ಸರ್ವ ಪದಾಧಿಕಾರಿಗಳಿಗೆ ಧನ್ಯವಾದ ತಿಳಿಸಿದ್ದಾರೆ.

ಗೃಹ ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಮುತಾಲಿಕ್ ವಾಗ್ದಾಳಿ

• **ಧಾರವಾಡ:** ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ರಾಷ್ಟ್ರೀಯ ಸ್ವಯಂಸೇವಕ ಸಂಘದ ನೋಂದಣಿ ಕುರಿತು ಕೇಳಿರುವ ಪ್ರಶ್ನೆಯ ಹಿಂದಿನ ಹಿಡನ್ ಅಜೇಂಡಾ ಏನು? ಎಂದು ಶ್ರೀರಾಮ ಸೇನೆಯ ರಾಷ್ಟ್ರೀಯ ಅಧ್ಯಕ್ಷ ಪ್ರಮೋದ ಮುತಾಲಿಕ್ ಪ್ರಶ್ನಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರದ ನಡೆ ಹಾಗೂ ಗೃಹ ಸಚಿವರ ಹೇಳಿಕೆಗೆ ತೀವ್ರವಾಗಿ ಖಂಡಿಸಿದ ಮುತಾಲಿಕ್, ಖರ್ಗೆ ಅವರ ಪ್ರಶ್ನೆಯ ಹಿಂದೆ ದೊಡ್ಡ ದೊಡ್ಡವರ ಕೈವಾಡದ ಇರುವ ಬಗ್ಗೆ ಶಂಕೆ ವ್ಯಕ್ತಪಡಿಸಿದರು.

ಗಾಂಧೀಜಿ, ನೆಹರೂ, ಇಂದಿರಾ ಗಾಂಧಿ ಅವರೇ ಕೇಳದ ಪ್ರಶ್ನೆಯನ್ನು ಈಗಿನ ಗೃಹ ಸಚಿವರು ಕೇಳುತ್ತಿದ್ದಾರೆ. ಪ್ರಿಯಾಂಕ್ ಖರ್ಗೆ ಅವರಿಗೆ ಯಾರಿಗೆ ಪತ್ರ ಬರೆಯಬೇಕೆಂಬ ಕನಿಷ್ಠ ಜ್ಞಾನವೂ ಇಲ್ಲ ಎಂದರು.

ಪ್ರಿಯಾಂಕ್ ಖರ್ಗೆ ಅವರಿಗೆ ಆರೆಸ್ಸೆಸ್ ಅನ್ನು ಪ್ರಶ್ನಿಸುವ ಯಾವುದೇ ಹಕ್ಕಿಲ್ಲ, ಸಂಘದ ನೋಂದಣಿ ಬಗ್ಗೆ ಪ್ರಶ್ನಿಸುವ ಅಧಿಕಾರ ಇರುವುದು ಕೇಂದ್ರ ಸರ್ಕಾರಕ್ಕೇ ಹೊರತು ರಾಜ್ಯದ ಗೃಹ ಸಚಿವರಿಗಲ್ಲ, ಎಂಬ ಕನಿಷ್ಠ ಜ್ಞಾನವೂ ಇಲ್ಲವೇ? ಎಂದು ಪ್ರಶ್ನಿಸಿದರು.



ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉಲ್ಲೇಖಿಸಿ ಮಾತನಾಡಿದ ಅವರು, 'ನಮಸ್ತೆ ಸದಾ ವತ್ಸಲೇ ಮಾತೃಭೂಮಿ' ದೇಶಭಕ್ತಿಯ ಗೀತೆಯನ್ನು ಖುದ್ದು ಮುಖ್ಯಮಂತ್ರಿ ಅವರೇ ಹೇಳುತ್ತಾರೆ. ಈ ಮಾನಸಿಕತೆ, ಸೌಜನ್ಯ ಗೃಹಸಚಿವರಿಗೆ ಏಕಿಲ್ಲ? ಎಂದು ಪ್ರಶ್ನಿಸಿದರು.

ಸರ್ಕಾರದ ಧಾರ್ಮಿಕ ನೀತಿ ತರಾಟೆಗೆ ತೆಗೆದುಕೊಂಡ ಮುತಾಲಿಕ್, ಕ್ರಿಶ್ಚಿಯನ್ ಹಾಗೂ ಮುಸ್ಲಿಂ ಸಮುದಾಯಗಳ ತುಷ್ಟೀಕರಣ ನಡೆಯುತ್ತಿದೆ. ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಗೆ ಬರೋಬ್ಬರಿ 36 ಸಾವಿರ ದೇವಸ್ಥಾನಗಳು ಬರುತ್ತವೆ. ಮಸೀದಿ, ದರ್ಗಾ, ಚರ್ಚ್‌ಗಳನ್ನು ಏಕೆ ನೋಂದಣಿ ವ್ಯಾಪ್ತಿಗೆ ತರುತ್ತಿಲ್ಲ? ಕೇವಲ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಓಟ್ ಬ್ಯಾಂಕ್ ಭದ್ರಪಡಿಸಿಕೊಳ್ಳಲು ಆರೆಸ್ಸೆಸ್ ವಿರುದ್ಧ ಮಾತನಾಡುವ ತೆವಲು ಬಂದಿದೆ ಎಂದು ಟೀಕಿಸಿದರು.

ಧರ್ಮಸ್ಥಳದ ಬುರಡೆ ಪ್ರಕರಣದಲ್ಲಿ ಚಿನ್ನಯ್ಯ ಹೇಳಿದಂತೆ ಚಿತ್ರನಟ ಪ್ರಕಾಶ್ ರಾಜ್ ಕೈವಾಡ ಬಗ್ಗೆ ಸ್ವತಃ ಅವರೇ ಒಪ್ಪಿಕೊಂಡಿದ್ದಾರೆ. ಧರ್ಮಸ್ಥಳಕ್ಕೆ ಕಳಂಕ ತರಲು ಹಣ ನೀಡಿದ ಆರೋಪ ಕೇಳಿಬಂದಿದೆ. ಪ್ರಕಾಶ ರಾಜ್ ಓರ್ವ ನಾಸ್ತಿಕ, ಕಮ್ಯುನಿಸ್ಟ್ ಮತ್ತು ಪ್ರಖರ ಹಿಂದುತ್ವದ ವಿರೋಧಿ. ಧರ್ಮಸ್ಥಳದ ಸಂಸ್ಥೆ ಹೆಸರಿಗೆ ಮಸಿ ಬಳಿಯಲು ಸಂಚು ರೂಪಿಸಿದ್ದಾರೆ. ತಕ್ಷಣವೇ ಎಸ್‌ಐಟಿ ಪ್ರಕಾಶ್ ರಾಜ್‌ನನ್ನು ಬಂಧಿಸಿ ವಿಚಾರಣೆ ನಡೆಸಬೇಕು.

■ **ಪ್ರಮೋದ ಮುತಾಲಿಕ್, ಶ್ರೀರಾಮ ಸೇನೆಯ ರಾಷ್ಟ್ರೀಯ ಅಧ್ಯಕ್ಷ**

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಸುಧೀರ ದೇಶಪಾಂಡೆ, ಮಂಜುನಾಥ, ವಿಶ್ವನಾಥ, ಶಿವಕುಮಾರ ಇದ್ದರು.

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ

ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

ಸಂಖ್ಯೆ: ಇ-ಆರ್‌ಡಿ 189 ಜಿಆರ್‌ಸಿ 2025 — ದಿನಾಂಕ : 12.06.2026

ಅಧಿಸೂಚನೆ

ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ ಇವರ ವರದಿಯನ್ನು ಪರಿಗಣಿಸಿದ ತರುವಾಯ ಹಾಗೂ ಠೇವಣಿದಾರರ ದೂರುಗಳ ಬಗ್ಗೆ ಯುಕ್ತ ತನಿಖೆಯ ತರುವಾಯ ಶಿವಂ ಅಸೋಶಿಯೇಟ್ಸ್, ಬೆಳಗಾವಿ ನಗರ ಇವರು ಠೇವಣಿದಾರರಿಂದ ಗುಟ್ಟಾಗಿ ಹಾಗೂ ಕಾನೂನುಬಾಹಿರವಾಗಿ ಠೇವಣಿಗಳನ್ನು ಅಥವಾ ಸಾರ್ವಜನಿಕರಿಂದ ಹಣವನ್ನು ಸಂಗ್ರಹಿಸುವ ಮೋಸದ ವ್ಯವಹಾರಗಳಲ್ಲಿ ತೊಡಗಿರುವುದು ಹಾಗೂ ಆ ತರುವಾಯ ಅವಧಿ ಮುಗಿದ ಮೇಲೆ ಅಥವಾ ಠೇವಣಿದಾರರು ಅಥವಾ ಫಿರ್ಯಾದುದಾರು ಸಲ್ಲಿಸಿದ ಬೇಡಿಕೆ ಮೇಲಾಗಲಿ ಆಶ್ವಾಸನೆ ನೀಡಿದ ಬಡ್ಡಿ ಹಾಗೂ ಇತರೆ ಖಾತರಿ ಪ್ರಯೋಜನಗಳನ್ನು ನೀಡಲು ವಿಫಲವಾಗಿರುವುದು ಹಾಗೂ ಅವರಿಗೆ ಆಶ್ವಾಸನೆ ನೀಡಿದ ಸೇವೆಗಳನ್ನು ಒದಗಿಸಲು ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಶಿವಂ ಅಸೋಶಿಯೇಟ್ಸ್, ಬೆಳಗಾವಿ ನಗರ ಹಾಗೂ ಅವರ ಸಹವರ್ತಿ ಜನರು ಠೇವಣಿದಾರರಿಂದ ಅಥವಾ ಫಿರ್ಯಾದುದಾರರಿಂದ ಸಂಗ್ರಹಿಸಲಾದ ಹಣದಿಂದ ಜಮೀನು, ಚರ ಹಾಗೂ ಸ್ಥಿರಾಸ್ತಿಗಳನ್ನು, ನಗದು ಹಾಗೂ ಇತರೆ ವಸ್ತುವನ್ನು ಅರ್ಜಿಸಿರುವುದು ಹಾಗೂ ಆ ಮೂಲಕ ಠೇವಣಿ ಹಾಗೂ ಹಣವನ್ನು ಪಡೆದಿರುವ ಉದ್ದೇಶಿತ ಉದ್ದೇಶಗಳಿಗೆ ಬಳಸದೆ ಬೇರೆ ಕಡೆ ವರ್ಗಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಶಿವಂ ಅಸೋಶಿಯೇಟ್ಸ್, ಬೆಳಗಾವಿ ನಗರ ಹಾಗೂ ಅವರ ಸಹವರ್ತಿ ಜನರು ಇವರ ಕೃತ್ಯಗಳು ಮುಗ್ಧ ಜನರಿಗೆ ವಂಚಿಸುವ ಉದ್ದೇಶದಿಂದ ಠೇವಣಿದಾರರ ಅಥವಾ ಫಿರ್ಯಾದುದಾರರ ಹಿತಾಸಕ್ತಿಗೆ ವಿರುದ್ಧವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ನಂಬಲು ಸರ್ಕಾರವು ಕಾರಣಗಳನ್ನು ಹೊಂದಿದ್ದು, ಶಿವಂ ಅಸೋಶಿಯೇಟ್ಸ್, ಬೆಳಗಾವಿ ನಗರ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವುದು ಅಗತ್ಯವಾಗಿರುತ್ತದೆ.

ಆದ್ದರಿಂದ, ಸರ್ಕಾರವು ವಿಶೇಷಾಧಿಕಾರಿಗಳು ಹಾಗೂ ಸಕ್ಷಮ ಪ್ರಾಧಿಕಾರಿಗಳು ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು ಹಾಗೂ ಸಕ್ಷಮ ಪ್ರಾಧಿಕಾರಿಗಳು ಶಿವಂ ಅಸೋಶಿಯೇಟ್ಸ್, ಬೆಳಗಾವಿ ನಗರ ಇವರ ವರದಿಯನ್ನು ಪರಿಗಣಿಸಿ ಹಾಗೂ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವುದು ತುರ್ತು ಅಗತ್ಯವಿದೆ ಎಂದು ಸ್ವಯಂ ಮನವರಿಕೆ ಮಾಡಿಕೊಂಡು ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿನ ಠೇವಣಿದಾರರ ಹಿತಾಸಕ್ತಿಯ ಸಂರಕ್ಷಣಾ ಅಧಿನಿಯಮ, 2004(2005ರ ಕರ್ನಾಟಕ ಅಧಿನಿಯಮ, 30) ರ 3ನೇ ಪ್ರಕರಣದ (2)ನೇ ಉಪ-ಪ್ರಕರಣದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಕೆಳಕಂಡಂತೆ ಆದೇಶವನ್ನು ಮಾಡುತ್ತದೆ:

"ಆದೇಶ"

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿಯ ಸಂರಕ್ಷಣಾ ಅಧಿನಿಯಮ, 2004 (2005ರ ಕರ್ನಾಟಕ ಅಧಿನಿಯಮ, 30) ರ 3ನೇ ಪ್ರಕರಣದ (2)ನೇ ಉಪ-ಪ್ರಕರಣದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಈ ಮೇಲ್ಕಂಡ ಸನ್ನಿವೇಶಗಳ ಹಿನ್ನಲೆಯಲ್ಲಿ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವ ಸಲುವಾಗಿ ಶಿವಂ ಅಸೋಶಿಯೇಟ್ಸ್, ಬೆಳಗಾವಿ ನಗರ ಸೇರಿದೆ ಎನ್ನಲಾದ ಸ್ಥಿರಾಸ್ತಿಗಳನ್ನು ಹಾಗೂ ಚರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಅವಶ್ಯಕವಾಗಿದೆ ಎಂದು ಮನಗಂಡಿರುವುದರಿಂದ, ಸದರಿ ಹಣಕಾಸು ಸಂಸ್ಥೆಯ ಅಂಥ ಹಣ ಅಥವಾ ಅಂಥ ಇತರೆ ಸ್ವತ್ತುಗಳು ಅಥವಾ ಸಂಸ್ಥೆಯ ಪ್ರವರ್ತಕರ, ಪಾಲುದಾರರ, ನಿರ್ದೇಶಕರ, ವ್ಯವಸ್ಥಾಪಕರ ಅಥವಾ ಸದಸ್ಯರ ಅಥವಾ ಯಾರೇ ಇತರೆ ವ್ಯಕ್ತಿಯ ವೈಯಕ್ತಿಕ ಆಸ್ತಿಗಳು ಠೇವಣಿಗಳನ್ನು, ಬಡ್ಡಿ ಅಥವಾ ಇತರೆ ಖಾತ್ರಿ ಪ್ರಯೋಜನಗಳನ್ನು ಠೇವಣಿದಾರರಿಗೆ ಮರುಸಂದಾಯ ಮಾಡುವುದಕ್ಕೆ ಸಂಬಂಧಿಸಿದಂತೆ ಪ್ರಯಾಪ್ತವಾಗಿಲ್ಲವೆಂದು ಗೊತ್ತಾದಲ್ಲಿ ಶಿವಂ ಅಸೋಶಿಯೇಟ್ಸ್, ಬೆಳಗಾವಿ ನಗರ ಸಂಗ್ರಹಿಸಲಾದ ಠೇವಣಿಗಳಿಂದ ತನ್ನ ಹೆಸರಿನಲ್ಲಾಗಲಿ ಅಥವಾ ಯಾರೇ ಇತರೆ ವ್ಯಕ್ತಿಗಳ ಹೆಸರಿನಲ್ಲಿ ಅರ್ಜಿಸಿದೆ ಎನ್ನಲಾಟ ಈ ಆದೇಶದ ಅನುಬಂಧ . ರಲ್ಲಿ ನಿರ್ದಿಷ್ಟ ಪಡಿಸಲಾದಂತೆ ಚರಾಸ್ತಿಗಳನ್ನು ಸರ್ಕಾರವು ಈ ಮೂಲಕ ಜಪ್ತಿ ಮಾಡಿಕೊಳ್ಳುತ್ತದೆ.

ಟಿಪ್ಪಣಿ: ವಿಶೇಷ ನ್ಯಾಯಾಲಯದ ಮುಂದಿನ ಆದೇಶದವರೆಗೆ ಬಾಕಿ ಇರಿಸಿ, ಮೇಲೆ ಹೇಳಿದ ಚರಾಸ್ತಿಗಳನ್ನು ಅಧಿಕೃತ ರಾಜ್ಯಪತ್ರದಲ್ಲಿ ಈ ಆದೇಶವು ಪ್ರಕಟಣೆಗೊಂಡ ದಿನಾಂಕದಿಂದ ಸರ್ಕಾರವು ನೇಮಕ ಮಾಡಿರುವ ಸಕ್ಷಮ ಪ್ರಾಧಿಕಾರದಲ್ಲಿ ಕೂಡಲೇ ನಿಯುತವಾಗತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
ಸಹಿ/-
(ಅನ್ವರ್ ಬಾಷ)
ಸರ್ಕಾರದ ಉಪ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು-1,
ಭೂಮಾಪನ ಮತ್ತು ವಿಶೇಷ ಕೋಶ)

ಅನುಬಂಧ

Sl. No	Name and Address of Account holder	Name of the Bank and its Branch	Account Number	Lien mark/freeze	Amount Available (in Rs)
1	Dream Adventures Services, NO 7, 3RD FLOOR WHITE FIELD MAIN ROAD, SIGMA SOFT TECH PARK, VARTHUR HOBLI, Bangalore-560066	INDIAN OVERSEAS BANK	17702000000353	Lien	179/-
2	Farooq KM S/o Mohiyddin, R/o Flat No.709, vishwas sahara Heights, Next to Forum Fiza Mall, Pandeshwar, Mangalore, Dakshina Kannada-575001.	AXIS BANK	923010003202301	Lien	20,126/-
3	Haleema Zeeyaana W/o Farooq M, R/o Flat No.709, Vishwas Sahara Heights, Next to Forum Fiza Mall, Pandeshwar, Mangalore, Dakshina Kannada-575001.	UNION BANK	520101258220577	Lien	12,856/-
4	Haleema Zeeyaana W/o Farooq M, R/o Fiat No.709, Vishwas Sahara Heights, Next to Forum Fiza Mall, Pandeshwar, Mangalore, Dakshina Kannada-575001	ICICI BANK	001401537385	Lien	21,000/-
5	Tasleem Taj D/o Shaik Ilyas Pasha, No,348 Adithya nagar, MS playa Circle Bangalore north Vidyaranyapura, Bangalore North, Bengaluru-560097	YES BANK	113991800028352	Lien	2,446/-
6	Tasleem Taj D/o Shaik Ilyas Pasha, No,348 Adithya nagar, MS playa Circle Bangalore north Vidyaranyapura, Bangalore North, Bengaluru-560097	KOTAK MAHINDRA BANK	715068364	Lien	11,833/-
7	Arun Kumar T S/o Thirupataiah N, No.78, 11th a Cross, Near Standford Public School, Vidyaranyapura, Vinayaka Nagara, Bangalore-560097	AXIS BANK	917010043051016	Lien	503/-
8	Abdul Azeez S/o Shaik Fazlullah, No.6 D No 2308, 8th Cross Kushal Nagar, Arabic College AMC Road KG Halli, Bangalore North, Bangalore-560045	AXIS BANK	917010039578662	Lien	26,784/-
9	Abdul Samad S/o U.B Ibrahim, No22-90-82, Ullala Bail, Near Jeelani Juma Masjid, Ullala, Mangaluru, Dakshin Kannada	Federal Bank	20130200004506	Lien	12,33,622/-
10	Farzana W/o Sharafuddin, No 19-85/1 Masthi Katte Ullal Mangalore, Dakshina Kannada	BANK OF BARODA	71080100009358	Lien	19, 737/-
11	Sriram Ganigaram No 1-1-379/102/A Srt 116, Street No.04 Jawaharnagar, Musheerabad, Hyderabada, Telangana	ICICI BANK	04101516452	Lien	9,729/-
				Total	Rs. 13,58,815/-

ಸಹಿ/-
(ಅನ್ವರ್ ಬಾಷ)
ಸರ್ಕಾರದ ಉಪ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು-1, ಭೂಮಾಪನ ಮತ್ತು ವಿಶೇಷ ಕೋಶ)

ವಾಸಾಸಂಇ/ವಾಪ್ರ/ಜಿಎ/1238/2026-27

ಸಂಪಾದಕೀಯ

ಸುಗಮ ಪರೀಕ್ಷೆಗಾಗಿ ನಿರ್ಬಂಧ ಅನಿವಾರ್ಯ

ದೇಶದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯವನ್ನು ನಿರ್ಧರಿಸುವ ರಾಷ್ಟ್ರೀಯ ಅರ್ಹತಾ ಹಾಗೂ ಪ್ರವೇಶ ಪರೀಕ್ಷೆ (ನೀಟ್) ಇದೇ 21ರಂದು ನಡೆಯಲಿದ್ದು, ಪರೀಕ್ಷೆಯ ಪಾವಿತ್ರ್ಯ ಮತ್ತು ಪಾರದರ್ಶಕತೆಯನ್ನು ಕಾಪಾಡುವುದು ಸರ್ಕಾರದ ಮೊದಲ ಆದ್ಯತೆಯಾಗಿದೆ. ಈ ಹಿನ್ನೆಲೆಯಲ್ಲಿ ಟೆಲಿಗ್ರಾಂ ಆ್ಯಪ್ ಮೇಲೆ ತಾತ್ಕಾಲಿಕ ನಿರ್ಬಂಧ ಹೇರಿರುವ ಕ್ರಮ ಚರ್ಚೆಗೆ ಗ್ರಾಸವಾಗಿದ್ದರೂ, ಅದರ ಹಿಂದಿನ ಉದ್ದೇಶವನ್ನು ಅರ್ಥಮಾಡಿಕೊಳ್ಳುವುದು ಅಗತ್ಯವಾಗಿದೆ. ಕಳೆದ ಕೆಲವು ವರ್ಷಗಳಲ್ಲಿ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಶ್ನೆಪತ್ರಿಕೆ ಸೋರಿಕೆ, ಅಕ್ರಮ ಮಾಹಿತಿ ವಿನಿಮಯ ಮತ್ತು ನಕಲಿ ಜಾಲಗಳ ಚಟುವಟಿಕೆಗಳಲ್ಲಿ



ಸಾಮಾಜಿಕ ಜಾಲತಾಣಗಳ ದುರ್ಬಳಕೆ ನಡೆದಿರುವುದು ಬಹಿರಂಗವಾಗಿದೆ. ಅದರಲ್ಲೂ ಟೆಲಿಗ್ರಾಂನ ಎನ್‌ಕ್ರಿಪ್ಟೆಡ್ ವ್ಯವಸ್ಥೆ ಹಾಗೂ ದೊಡ್ಡ ಪ್ರಮಾಣದ ಗುಂಪುಗಳನ್ನು ರಚಿಸುವ ಸೌಲಭ್ಯದಿಂದ ಅಕ್ರಮ ಚಟುವಟಿಕೆಗಳಿಗೆ ಅವಕಾಶ ದೊರೆಯುತ್ತಿದೆ ಎಂಬ ಆರೋಪಗಳು ಪದೇ ಪದೇ ಕೇಳಿಬಂದಿವೆ. ಪೈರೇಟೆಡ್ ವಿಷಯಗಳ ಹಂಚಿಕೆ, ಕಾನೂನುಬಾಹಿರ ಜಾಲಗಳ ಚಟುವಟಿಕೆ ಮತ್ತು ರಾಷ್ಟ್ರವಿರೋಧಿ ಶಕ್ತಿಗಳ ಸಂವಹನ ಸಾಧನವಾಗಿ ಬಳಕೆಯಾಗುತ್ತಿದೆ ಎಂಬ ಆತಂಕವನ್ನು ಕೇಂದ್ರ ಸರ್ಕಾರ ವ್ಯಕ್ತಪಡಿಸಿದೆ.

ಈ ವಿಷಯ ಇದೀಗ ನ್ಯಾಯಾಲಯದ ಪರಿಶೀಲನೆಯಲ್ಲಿದ್ದರೂ, ಪರೀಕ್ಷೆಯಂತಹ ಸೂಕ್ಷ್ಮ ಸಂದರ್ಭಗಳಲ್ಲಿ ಮುನ್ನೆಚ್ಚರಿಕೆಯ ಕ್ರಮಗಳಿಗೆ ಆದ್ಯತೆ ನೀಡುವುದು ತಪ್ಪಲ್ಲ. ಕೋಟ್ಯಂತರ ರೂಪಾಯಿ ವೆಚ್ಚ, ಲಕ್ಷಾಂತರ ವಿದ್ಯಾರ್ಥಿಗಳ ಪರಿಶ್ರಮ ಮತ್ತು ಪೋಷಕರ ನಿರೀಕ್ಷೆಗಳು ಒಂದೇ ಪರೀಕ್ಷೆಯೊಂದಿಗೆ ಜೋಡಿಕೊಂಡಿರುವಾಗ, ಯಾವುದೇ ಅಕ್ರಮಕ್ಕೆ ಅವಕಾಶ ನೀಡದಿರುವುದು ಆಡಳಿತ ಹೊಣೆಗಾರಿಕೆಯಾಗಿದೆ. ವಾಸ್ತವವಾಗಿ, ತಂತ್ರಜ್ಞಾನವು ಸಮಾಜದ ಅಭಿವೃದ್ಧಿಗೆ ಎಷ್ಟು ನೆರವಾಗುತ್ತದೆಯೋ, ಅದೇ ಪ್ರಮಾಣದಲ್ಲಿ ಅದರ ದುರ್ಬಳಕೆಯ ಸಾಧ್ಯತೆಯೂ ಇರುತ್ತದೆ. ಟೆಲಿಗ್ರಾಂ ಸೇರಿದಂತೆ ಹಲವು ಡಿಜಿಟಲ್ ವೇದಿಕೆಗಳು ಜ್ಞಾನ ಹಂಚಿಕೆ, ವ್ಯವಹಾರ ಮತ್ತು ಸಂವಹನಕ್ಕೆ ನೆರವಾಗಿವೆ. ಆದರೆ ಕೆಲವು ದುಷ್ಕರ್ಮಿಗಳು ಅವುಗಳನ್ನು ಅಕ್ರಮ ಚಟುವಟಿಕೆಗಳಿಗೆ ಬಳಸಿಕೊಳ್ಳುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಇಂತಹ ಸಂದರ್ಭಗಳಲ್ಲಿ ಸರ್ಕಾರ ಕೈಕಟ್ಟಿ ಕುಳಿತುಕೊಳ್ಳಲು ಸಾಧ್ಯವಿಲ್ಲ. ಇತ್ತೀಚಿನ ವರ್ಷಗಳಲ್ಲಿ ದೇಶದ ಹಲವು ರಾಜ್ಯಗಳಲ್ಲಿ ನಡೆದ ಪರೀಕ್ಷಾ ಅಕ್ರಮಗಳು ಯುವಜನತೆ ವಿಶ್ವಾಸವನ್ನೇ ಕುಗ್ಗಿಸಿವೆ. ಪ್ರಾಮಾಣಿಕವಾಗಿ ಓದಿದ ವಿದ್ಯಾರ್ಥಿಗಳ ಅವಕಾಶವನ್ನು ಕಸಿದುಕೊಳ್ಳುವ ಪರೀಕ್ಷಾ ಮಾಫಿಯಾಗಳು ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸುತ್ತಿರುವಾಗ, ಸರ್ಕಾರವೂ ಅಷ್ಟೇ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಪರೀಕ್ಷೆ ಮುಗಿಯುವವರೆಗೆ ಕೆಲವು ನಿರ್ಬಂಧಗಳನ್ನು ವಿಧಿಸುವುದು ಅಸಾಮಾನ್ಯ ಕ್ರಮವಲ್ಲ, ಅದು ವ್ಯವಸ್ಥೆಯನ್ನು ರಕ್ಷಿಸುವ ಪ್ರಯತ್ನವಾಗಿದೆ. ಅದೇ ವೇಳೆ, ಸಾಮಾಜಿಕ ಜಾಲತಾಣ ಸಂಸ್ಥೆಗಳೂ ತಮ್ಮ ಜವಾಬ್ದಾರಿಯನ್ನು ಅರಿಯಬೇಕು. ತಮ್ಮ ವೇದಿಕೆಗಳಲ್ಲಿ ನಡೆಯುವ ಕಾನೂನುಬಾಹಿರ ಚಟುವಟಿಕೆ ತಡೆಯಲು ಪರಿಣಾಮಕಾರಿ ಮೇಲ್ವಿಚಾರಣೆ ಮತ್ತು ಸಹಕಾರವನ್ನು ನೀಡುವುದು ಅವರ ಕರ್ತವ್ಯವಾಗಿದೆ. ಕೇವಲ ವ್ಯವಹಾರಿಕ ಹಿತಾಸಕ್ತಿಗಿಂತ ಸಾಮಾಜಿಕ ಹೊಣೆಗಾರಿಕೆಗೆ ಆದ್ಯತೆ ನೀಡಿದಾಗ ಮಾತ್ರ ಡಿಜಿಟಲ್ ಪರಿಸರ ಸುರಕ್ಷಿತವಾಗಲು ಸಾಧ್ಯ.

ಯಾವಾಗ ರೋಗಗಳು ಕಾಣಿಸುತ್ತವೆ?

ಅತ್ಯಂಬುಪಾನಂ ಕಠಿನಾಸಂನ ಚ ಧಾತುಕ್ಷಯೋ ವೇಗ ವಿಧಾರಣಂ ಚ ।
ದಿವಾಶಯೋ ಜಾಗರಣಂ ಚ ರಾತ್ರೌ ಷಡ್‌ಬಿರ್ ನರಾಣಾಂ ನಿವಸಂತಿ ರೋಗಾಃ ॥

– ಮಹಾಸುಭಾಷಿತ ಸಂಗ್ರಹ

ಹೆಚ್ಚಾಗಿ ನೀರು ಕುಡಿಯುವುದು, ಕಠಿಣವಾದ ಆಸನದಲ್ಲಿ ಕುಳಿತಿರುವುದು, ಧಾತು ಕ್ಷಯ, ವೇಗಗಳನ್ನು ತಡೆಯುವುದು, ಹಗಲು ಮಲಗುವುದು, ರಾತ್ರಿ ಎಚ್ಚರವಾಗಿರುವುದು– ಈ ಆರರಿಂದಾಗಿ ರೋಗಗಳು ಕಾಣಿಸಿಕೊಳ್ಳುತ್ತವೆ – ಎಂಬುದು ಶ್ಲೋಕಾರ್ಥ.



ಶಾರೀರಿಕ ಪ್ರಕೃತಿ, ವಾತಾವರಣ, ಜನರ ಅಜಾಗರೂಕತೆ, ಆಹಾರ ಪದ್ಧತಿಯಲ್ಲಿ ಏರುಪೇರು ಹೀಗೆ ಇನ್ನೂ ಅನೇಕ ಕಾರಣಗಳಿಂದಾಗಿ ರೋಗಗಳು ಕಾಣಿಸಿಕೊಳ್ಳುತ್ತವೆ. ಇತ್ತೀಚೆಗೆ ಮನುಷ್ಯನ ದುರಾಸೆ, ಅತಿಯಾದ ಆಕಾಂಕ್ಷೆ ಇವುಗಳಿಂದಾಗಿಯೂ ರೋಗ ಬರುತ್ತದೆ. ಪ್ರಸ್ತುತ ಶ್ಲೋಕದಲ್ಲಿ ಅತಿಯಾಗಿ ನೀರು ಕುಡಿಯುವುದು, ಗಡುಸಾದ ಆಸನದಲ್ಲಿ ಕುಳಿತುಕೊಳ್ಳುವುದು, ಧಾತುಕ್ಷಯ, ವೇಗಗಳನ್ನು ತಡೆಯುವುದು, ಹಗಲು ನಿದ್ದೆ, ರಾತ್ರಿ ಜಾಗರಣ – ಹೀಗೆ ಆರು ಅಂಶಗಳನ್ನು ಗುರುತಿಸಿ ಇವುಗಳು ರೋಗಕ್ಕೆ ಕಾರಣವೆನಿಸುತ್ತವೆ. ಇನ್ನೊಂದೆಡೆ ಸುಭಾಷಿತ ರತ್ನ ಭಾಂಡಾಗಾರದಲ್ಲಿಯೂ ರೋಗಕ್ಕೆ ಕಾರಣವು ಯಾವುದು ಎಂದು ಹೇಳಲಾಗಿದೆ. ಮೇಲಿನ ಸುಭಾಷಿತದಲ್ಲಿ ಹೇಳಿರದ ವಿಷಮಯವಾದ ಅನ್ನ ಎಂಬ ಅಂಶವನ್ನು ಅದರಲ್ಲಿ ಸೇರಿಸಲಾಗಿದೆ. ಹೆಚ್ಚಾಗಿ ನೀರು ಕುಡಿಯುವುದು ಒಳ್ಳೆಯದಲ್ಲ. ಇದರಿಂದ ಅನ್ನವು ಜೀರ್ಣವಾಗುವುದಿಲ್ಲ. ನೀರು ಕುಡಿಯದಿದ್ದರೂ ಅದೇ ದೋಷ. ಆದ್ದರಿಂದ ಜಠರಾಗ್ನಿಯನ್ನು ಹೆಚ್ಚಿಸುವುದಕ್ಕಾಗಿ ಆಗಾಗ ನೀರು ಕುಡಿಯುತ್ತಿರಬೇಕು ಎಂದು ಸುಭಾಷಿತಕಾರನು ಹೇಳುತ್ತಾನೆ. ತುಂಬಾ ಕಠಿಣವಾದ ಆಸನದಲ್ಲಿ ಕುಳಿತುಕೊಳ್ಳುವುದು, ಅತ್ಯಂತ ಮೃದುವಾದ ಸ್ಪಂಜಿನ ಆಸನದಲ್ಲಿ ಕುಳಿತುಕೊಳ್ಳುವುದೂ ಒಳ್ಳೆಯದಲ್ಲ. ಕುಳಿತುಕೊಳ್ಳುವಾಗಲೂ ಜಾಗ್ರತೆ ವಹಿಸಬೇಕು. ನಿರಂತರ ಧಾತು ಕ್ಷಯವಾಗುವುದು ಅನಾರೋಗ್ಯಕ್ಕೆ ಕಾರಣವಾಗುತ್ತದೆ. ಧಾತುಕ್ಷಯವಾಗದಂತೆ ಎಚ್ಚರ ವಹಿಸಬೇಕು. ವೇಗವಿಧಾರಣಮ್ – ಎಂದರೆ ಮಲಮೂತ್ರಾದಿಗಳನ್ನು ಕಟ್ಟಿಕೊಳ್ಳುವುದು. ಕಾಲಕಾಲಕ್ಕೆ ಇವುಗಳ ವಿಸರ್ಜನೆಯಾಗಬೇಕು. ಇದು ಆರೋಗ್ಯದ ಲಕ್ಷಣ. ಇದರ ಹೊರತಾಗಿ ಮಲಬದ್ಧತೆ, ಮೂತ್ರಕಟ್ಟುವಿಕೆ ಇವು ಇನ್ನಷ್ಟು ರೋಗಕ್ಕೆ ಕಾರಣವಾಗುತ್ತದೆ. ಇಡೀ ಶರೀರವನ್ನೇ ಬಲಿ ತೆಗೆದುಕೊಳ್ಳಬಹುದು. ಇವುಗಳನ್ನು ತಡೆಹಿಡಿಯುವುದು ಅಪಾಯಕ್ಕೆ ಕಾರಣವಾಗುತ್ತದೆ. ಆದ್ದರಿಂದ ಈ ಬಗ್ಗೆ ಎಚ್ಚರ ಸದಾ ಇರಬೇಕು.

ಹಗಲು ಎಚ್ಚರದಿಂದಿರಬೇಕು. ರಾತ್ರಿ ಮಲಗಿ ನಿದ್ದೆ ಮಾಡಬೇಕು. ಇದು ಜಗದ ನಿಯಮ. ಹಗಲು ನಿದ್ದೆ ಯಾವಾಗಲೂ ಒಳ್ಳೆಯದಲ್ಲ. ರೋಗ ಬಂದಾಗ, ಮಕ್ಕಳು, ಮುದುಕರು ಹಗಲು ನಿದ್ದೆ ಮಾಡಬಹುದು. ಇದು ಅನಾರೋಗ್ಯದ, ದೌರ್ಬಲ್ಯದ ಲಕ್ಷಣ. ಆರೋಗ್ಯ ಸರಿ ಇದ್ದವರು ಹಗಲಿಗೆ ನಿದ್ದೆ ಮಾಡಬಾರದು. 'ದಿವಾ ಮಾ ಶ್ವಪೀಃ' ಇದು ಶಾಸ್ತ್ರ ವಾಕ್ಯ. ಇದು ಆರೋಗ್ಯದ ಲಕ್ಷಣ. ರಾತ್ರಿ ಚೆನ್ನಾಗಿ ನಿದ್ದೆ ಮಾಡಬೇಕು. ರಾತ್ರಿ ಇರುವುದೇ ನಿದ್ದೆ ಮಾಡುವುದಕ್ಕೆ. ಶಾರೀರಿಕ ಸುಸ್ತನ್ನು ದೂರ ಮಾಡುವುದಕ್ಕೆ. ರಾತ್ರಿ ಸರಿಯಾಗಿ ನಿದ್ದೆ ಮಾಡದಿದ್ದರೆ ಬಗೆ ಬಗೆಯ ರೋಗಕ್ಕೆ ತುತ್ತಾಗಬೇಕಾಗುತ್ತದೆ. ರಾತ್ರಿಯ ನಿದ್ದೆ ಆರೋಗ್ಯದ ಲಕ್ಷಣ. ರಾತ್ರಿ ಪಾಳಿ, ರಾತ್ರಿಯೂ ಕೆಲಸ ಮಾಡುವುದು ಆರೋಗ್ಯಕ್ಕೆಂದೂ ಒಳ್ಳೆಯದಲ್ಲ. ಇಂದಿನ ಐಟಿ, ಬಿಟಿ ಯುಗದಲ್ಲಿ ಹಗಲು ರಾತ್ರಿಯಾಗಿದೆ, ರಾತ್ರಿ ಹಗಲಾಗಿದೆ. ಕೆಲಸ ಮಾಡುವ ಸಮಯವೇ ವ್ಯತ್ಯಾಸವಾಗಿ ಸಮಾಜದ ಸ್ವಾಸ್ಥ್ಯವೇ ಏರುಪೇರಾಗುತ್ತಿದೆ. ಇವುಗಳನ್ನೆಲ್ಲಾ ಗಮನದಲ್ಲಿರಿಸಿಕೊಂಡು ಶ್ಲೋಕ ಸಂದೇಶವನ್ನೂ ಅನುಸರಿಸಿದರೆ ಸ್ವಸ್ಥ ಜೀವನ ನಡೆಸಬಹುದು.

ಆರೆಸ್ಸೆಸ್‌ಗೆ 100: ರೇಶ್ಮಿ ಆಯಿಷಾ ಏನು ಹೇಳ್ತಾರೆ?

ರೇಶ್ಮಿ ಆಯಿಷಾ ತಿರುವನಂತಪುರಂ ಕಿಮ್ಸ್ ಹೆಲ್ತ್ ಆಸ್ಪತ್ರೆಯ ಸಿಇಒ ಮತ್ತು ನಾಗರ ಕೊಯಿಲ್‌ನ ಅದೇ ಸಮೂಹದ ಆಸ್ಪತ್ರೆಯ ನಿರ್ದೇಶಕಿ. ಆಕೆ ಆರೆಸ್ಸೆಸ್ ಸಂಘಟನೆಯನ್ನು ತಾನು ಪರಿಭಾವಿಸಿದ ಬಗ್ಗೆ, ಆ ಸಂಘಟನೆಯ ಕುರಿತ ತನ್ನ ಒಳನೋಟಗಳನ್ನು ಸಾಮಾಜಿಕ ಜಾಲತಾಣದಲ್ಲಿ ದಾಖಲಿಸಿದ್ದಾರೆ. ಆರೆಸ್ಸೆಸ್ ಬಗ್ಗೆ ರೇಶ್ಮಿ ಆಯಿಷಾ ಹೇಳಿದ್ದೇನು? ಅವರ ಮಾತುಗಳಲ್ಲೇ ಕೇಳಿ...

ಮೊದಲು ನನಗೆ ಆರ್‌ಎಸ್‌ಎಸ್ ಬಗ್ಗೆ ಸ್ಪಷ್ಟವಾದ ತಿಳಿವಳಿಕೆ ಇರಲಿಲ್ಲ. ಅಲ್ಲಿ ಇಲ್ಲಿ ಕೇಳಲ್ಪಟ್ಟ ವದಂತಿಗಳೇ ನನ್ನ ತಲೆಯೊಳಗೆ ತುಂಬಿದ್ದವು. ಮುಸ್ಲಿಮರನ್ನು ಈ ದೇಶದಿಂದ ಒದ್ದೋಡಿಸುವುದೇ ಆರ್‌ಎಸ್‌ಎಸ್‌ನ ಗುಪ್ತ ಅಜೆಂಡ ಎಂದು ಹೇಳಲಾಗುತ್ತಿದ್ದ ವದಂತಿಯನ್ನೇ ನಾನು ನಂಬಿದ್ದೆ. ಹಾಗಾಗಿ ಇದು ನನ್ನನ್ನು ಭಯಗ್ರಸ್ಥಳನ್ನಾಗಿ ಮಾಡಿತ್ತು. ಆದರಿಂದಾಗಿ ನಾನು ಭಯ ಮತ್ತು ದ್ವೇಷದ ಮನೋಭಾವದಿಂದಲೇ ಆರ್‌ಎಸ್‌ಎಸ್ ಅನ್ನು ನೋಡುತ್ತಿದ್ದೆ.



ಹೀಗಿರುವಾಗ ತನ್ನ ಸ್ನೇಹಿತನೊಬ್ಬನಿಗೆ ಚಿಕಿತ್ಸೆ ಕೊಡಿಸಲೆಂದು ಒಬ್ಬ ಆರ್‌ಎಸ್‌ಎಸ್ ಕಾರ್ಯಕರ್ತರು ನಮ್ಮ ಆಸ್ಪತ್ರೆಗೆ ಬಂದಿದ್ದರು. ಅವರ ಹೆಸರು ಸಿ.ಬಾಬು. ತನ್ನ ಪರಿಚಯ ಮಾಡಿಕೊಂಡ ಅವರು, ತಾನೊಬ್ಬ ಆರ್‌ಎಸ್‌ಎಸ್‌ನ ಪ್ರಾಂತ ಮಟ್ಟದ ಕಾರ್ಯಕರ್ತ ಎಂದು ಹೇಳಿದರು. ಆರ್‌ಎಸ್‌ಎಸ್ ಅಂದರೇನೇ ಹೆದರಿಕೊಂಡಿದ್ದ ನನಗೆ ಈತನನ್ನು ನೋಡಿ ಇನ್ನೂ ಹೆದರಿಕೆಯಾಯಿತು. ಆದರೆ ಆ ವ್ಯಕ್ತಿ ಬಲು ಮೃದುವಾಗಿ, ವಿನಯಶಾಲಿಯಾಗಿ ಮಾತನಾಡಿದರು. ಆತನ ವೇಷ –ಕೇವಲ ಒಂದು ಮುಂಡು (ಕೇರಳ ದೋತಿ), ಒಂದು ಶರಟು ಮತ್ತು ಹೆಗಲಲ್ಲೊಂದು ಬಟ್ಟೆಯ ಬ್ಯಾಗು– ಅತ್ಯಂತ ಸರಳವಾಗಿತ್ತು. ಆದರೂ ಆತ ತಾನೊಬ್ಬ ಆರ್‌ಎಸ್‌ಎಸ್‌ನ ಪ್ರಾಂತ ಮಟ್ಟದ ಪದಾಧಿಕಾರಿ ಎಂದಾಗ ನನಗೇ ಅಚ್ಚರಿ! ಇಷ್ಟು ಸರಳ ವೇಷದಲ್ಲಿರುವ ಸಂಘಟನೆಯೊಂದರ ಮುಖಂಡನನ್ನು ನಾನು ಇದುವರೆಗೆ ನೋಡಿರಲಿಲ್ಲ.



ನನಗಂತೂ ಆಶ್ಚರ್ಯವೋ ಆಶ್ಚರ್ಯ. ನಾನು ಕಲ್ಪಿಸಿಕೊಂಡ ಆರೆಸ್ಸೆಸ್ ಇದಾಗಿರಲಿಲ್ಲ. ಆರ್‌ಎಸ್‌ಎಸ್ ನನ್ನಂತಹ ಮುಸ್ಲಿಮರನ್ನು ಪಾಕಿಸ್ತಾನಕ್ಕೆ ಓಡಿಸಲು ಬಯಸುತ್ತಿದೆಯೋ ಎಂದು ನಾನು ಆತನನ್ನು ಕೇಳಿದೆ. ಆತ ತಕ್ಷಣ ನಕ್ಕರು. ನನ್ನ ಈ ಪ್ರಶ್ನೆಗೆ ತಣ್ಣಗೆ ಉತ್ತರಿಸಿದರು: ಚೆಚೀ, (ಮಲಯಾಳದಲ್ಲಿ ಅಕ್ಕ ಎಂದರ್ಥ) ಆರ್‌ಎಸ್‌ಎಸ್ ಬಗ್ಗೆ ನಿಮಗೆ ಯಾರೋ ತಪ್ಪು ಮಾಹಿತಿ ನೀಡಿದ್ದಾರೆ. ನೀವೆಲ್ಲಾ ನಮ್ಮ ಸೋದರ –ಸೋದರಿಯರ ಸಮಾನ.

ಆತ ನನಗಿಂತ ವಯಸ್ಸಿನಲ್ಲಿ ಹಿರಿಯರು. ಹಾಗಾಗಿ ನನ್ನ ಹೆಸರು ಹಿಡಿದು ಕರೆಯುವಂತೆ ಕೋರಿದೆ. ಅದಕ್ಕೆ ಅವರ ಉತ್ತರ: ನಮ್ಮ ಸಂಘಟನೆ ಮಹಿಳೆಯರನ್ನು ಗೌರವಿಸುವುದನ್ನು ಕಲಿಸಿದೆ. ಹಾಗಾಗಿ ನಮಗಿಂತ ಕಿರಿಯ ಮಹಿಳೆಯರನ್ನೂ ನಾವು ಚೆಚೀ ಎಂದೇ ಸಂಬೋಧಿಸುತ್ತೇವೆ.

ಬಾಬು ಅವರ ಈ ಹೇಳಿಕೆ ನನ್ನಲ್ಲಿ ಇನ್ನಷ್ಟು ಕುತೂಹಲ ಹುಟ್ಟಿಸಿತು.

ಇದಾದ ಮೇಲೆ, ನಾನು ಆರ್‌ಎಸ್‌ಎಸ್ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ನನ್ನದೇ ಸಂಶೋಧನೆಗೆ ಮುಂದಾದೆ. ನಾನು ಹಲವಾರು ಆರ್‌ಎಸ್‌ಎಸ್ ಕಾರ್ಯಕರ್ತರನ್ನು ಭೇಟಿಯಾದೆ. ಆರ್‌ಎಸ್‌ಎಸ್‌ನ ಹಲವು ತರಬೇತಿ ಶಿಬಿರಗಳಿಗೂ ಹೋಗಿದ್ದೆ. ಅಲ್ಲಿ ಎಲ್ಲ ಕಡೆ ಪ್ರತಿಯೊಬ್ಬರೂ ಕೈಜೋಡಿಸಿ, ವಿನಮ್ರರಾಗಿ ನನ್ನನ್ನು ಚೆಚೀ ಎಂದು ಕರೆಯುತ್ತಾ, ಗೌರವದಿಂದ ನೋಡಿಕೊಂಡರು.

ತಿರುವನಂತಪುರಂನಲ್ಲಿರುವ ಆರ್‌ಎಸ್‌ಎಸ್ ಕಚೇರಿಗೆ ನಾನು ಮೊದಲು ಭೇಟಿ ಕೊಟ್ಟಾಗ ನನಗೆ ಒಂದು ರೀತಿ ಹೆದರಿಕೆಯಾಗಿತ್ತು. ಆದರೆ ಕ್ರಮೇಣ ಆ ಹೆದರಿಕೆ ಕರಗಿ ಹೋಯಿತು. ನನ್ನ ಸೋದರರನ್ನು ಭೇಟಿ ಮಾಡುವ ಒಬ್ಬ ಸೋದರಿಯಾಗಿ ನಾನು ಬದಲಾಗಿದ್ದೆ.

ಆರ್‌ಎಸ್‌ಎಸ್ ಯಾವುದೇ ಸದಸ್ಯತ್ವದ ಗೋಜಿಲ್ಲದ ಒಂದು ಸಂಘಟನೆ. ಒಬ್ಬ ವ್ಯಕ್ತಿ ತನ್ನ ಹೃದಯ ಪ್ರೀತಿಯಿಂದ ಆರೆಸ್ಸೆಸ್ ಸದಸ್ಯನಾಗಬಹುದು. ಬಹುಶಃ ಇಂತಹದೊಂದು ಸಂಘಟನೆ ಜಗತ್ತಿನಲ್ಲಿ ಇದೊಂದೇ ಆಗಿರಬಹುದು. ಅಂತೆಯೇ ಇದೊಂದು ಜಗತ್ತಿನ ಅತಿ ದೊಡ್ಡ ಸಂಘಟನೆ. ರಾಷ್ಟ್ರವನ್ನು ಪರಂ ವೈಭವಂ (ವೈಭವದ ಪರಾಕಾಷ್ಠೆಗೆ) ಗೊಳಿಸುವುದೇ ಸ್ವಯಂಸೇವಕರ ಏಕಮೇವ ಗುರಿ. ಭಾರತ ದೇಶ ಉನ್ನತವಾಗಿ ಅಭಿವೃದ್ಧಿ ಹೊಂದಿ, ಪರಮ ವೈಭವಶಾಲಿ ರಾಷ್ಟ್ರವಾಗಬೇಕೆಂಬುದು ಆರ್‌ಎಸ್‌ಎಸ್ ಹೆಬ್ಬಯಕೆ.

ಕ್ರಮೇಣ ನಾನು ಆರೆಸ್ಸೆಸ್‌ನ ಜಿಲ್ಲಾ, ವಿಭಾಗ ಮತ್ತು ಪ್ರಾಂತ ಮಟ್ಟದ ಹಿರಿಯ ಕಾರ್ಯಕರ್ತರು ಹಾಗೂ ಕಿರಿಯ ಕಾರ್ಯಕರ್ತರಿಗೆಲ್ಲ ಚೇಚಿಯಾಗಿ ಬಿಟ್ಟೆ. ಅಂಥವರ ಪೈಕಿ ಪಿ.ಪರಮೇಶ್ವರ್ ಜಿ, ಎಸ್. ಸೇತು ಮಾಧವನ್, ಪಿ.ಪಿ. ಮುಕುಂದನ್, ದಕ್ಷಿಣ ಕೇರಳ ಪ್ರಾಂತ ಪ್ರಚಾರಕ ಎಸ್. ಸುದರ್ಶನ್ ಜಿ ಮತ್ತು ಪೂಜ್ಯ ಸರಸಂಘಚಾಲಕರಾದ ಡಾ. ಮೋಹನ ಭಾಗವತ್ ಪ್ರಮುಖರು. ಆರ್‌ಎಸ್‌ಎಸ್ ಅಂದರೆ ನಿಜವಾಗಿ ಏನು ಎಂಬುದನ್ನು ಅಂಥವರಿಂದ ಅರಿತುಕೊಂಡೆ.

ಕಳೆದ ಹತ್ತು ವರ್ಷಗಳಿಂದ ನಾನು ಅವರಿಗೆಲ್ಲ ಒಬ್ಬ ಸೋದರಿಯಾಗಿರುವೆ. ಬುರ್ಖಾ ಧರಿಸದೆ ಅವರೊಂದಿಗೆ ನಾನು ಒಟ್ಟಿಗೆ ಸಹಜವಾಗಿ ಕುಳಿತು ಮಾತಾಡಬಲ್ಲೆ. ಅವರ ನಡವಳಿಕೆಯಿಂದ ನನಗೆ ಯಾವುದೇ ಬಗೆಯ ಅನಾನುಕೂಲತೆ ಆಗಿಲ್ಲ.

ಈ ಪ್ರಚಾರಕರೆಲ್ಲ ಧರಿಸುವ ಪಂಚೆ ಮತ್ತು ಶರ್ಟುಗಳು ಅವರದ್ದಲ್ಲ. ಬಹುಶಃ ಯಾರೋ ಉಡುಗೊರೆಯಾಗಿ ನೀಡಿದ್ದು ಇರಬೇಕು. ಅನೇಕ ಸಂದರ್ಭಗಳಲ್ಲಿ ಸಂಘದ ಪ್ರಚಾರಕರ ಬಳಿ ಸ್ವಂತದ ಆಹಾರ ಸೇವನೆಗೆ ಅಥವಾ ಚಹಾ ಕುಡಿಯಲು ಹಣವೇ ಇರುವುದಿಲ್ಲ.

ದೇಶದ ಒಳಿತಿಗಾಗಿ ಅವರೆಲ್ಲ ತಮ್ಮ ಸ್ವಂತದ ಸುಖವನ್ನು ತೊರೆದು, ದೇಶ ಸೇವೆಯನ್ನು ಅಪ್ಪಿಕೊಂಡಿದ್ದಾರೆ. ವಿಲಾಸಿ ಜೀವನ ಶೈಲಿ ಅವರದ್ದಲ್ಲ. ಅವರ ಬಳಿ ದುಬಾರಿ ವಾಹನಗಳು ಇಲ್ಲ. ತಮಗೆ ಲಭ್ಯವಿರುವ ಆಹಾರವನ್ನಷ್ಟೇ ಸೇವಿಸುತ್ತಾರೆ. ಬಸ್ ನಿಲ್ದಾಣಗಳಲ್ಲೋ ಅಥವಾ ರೈಲ್ವೆ ಬೋಗಿಗಳಲ್ಲೇ ತಮ್ಮ ನಿದ್ರೆ ಪೂರೈಸಿಕೊಳ್ಳುತ್ತಾರೆ.

ಪರಂ ವೈಭವಂ–ಈ ದೇಶದ ಪರಮೋಚ್ಚ ವೈಭವ ಹಾಗೂ ಘನತೆ ಸಾಧಿಸುವುದಕ್ಕಾಗಿ ಅವರೆಲ್ಲ ತಮ್ಮ ಬದುಕನ್ನು ಸಮರ್ಪಿಸಿದ್ದಾರೆ.

ನಮ್ಮ ಪ್ರಧಾನಿ ನರೇಂದ್ರ ಮೋದಿಯವರು ಕೂಡ ಅವರಂತೆಯೇ ಹಿಂದೆ ಪ್ರಚಾರಕರಾಗಿದ್ದರು ಎಂದು ನನಗೆ ಇತ್ತೀಚೆಗೆ ತಿಳಿಯಿತು.

(ಕನ್ನಡಕ್ಕೆ: ದು.ಗು.ಲಕ್ಷ್ಮಣ)

ಪಾಕ್ ತಂಡದ ಫೀಲ್ಡಿಂಗ್ ಮತ್ತು ಪಿಒಕೆ!

ಪೃಥ್ವಿರಾಜ್ ಕುಲಕರ್ಣಿ



ಅಹಂಕಾರದಿಂದ ಸಿಂಹಾಸನದ ಮೇಲೆ ಕೂತಿದ್ದ ರಾವಣನಿಗೆ ಲಂಕಾದ ಪ್ರಜೆಗಳು ಪ್ರಶ್ನೆಯೊಂದನ್ನಿಟ್ಟರು. ವಾನರ ಸೈನ್ಯವು ಲಂಕೆಯತ್ತ ಬರಲು ರಾಮ ಸೇತುವೆ ಕಟ್ಟಿದರಂತೆ. ಇನ್ನೂ ಭಯಾನಕ ವಿಚಾರವೆಂದರೆ ಕಲ್ಲಿನ ಮೇಲೆ ಜೈ ಶ್ರೀ ರಾಮ್ ಎಂದು ಬರೆದರೆ ಅದು ತೇಲುತ್ತದೆಯಂತೆ. ನಿಮ್ಮ ಶತ್ರು ಮಾಯಾವಿ... ನಮಗೆ ತುಂಬಾ ಭಯವಾಗುತ್ತಿದೆ, ನಮ್ಮ ಗತಿಯೇನು? ಎಂದು ಅಳಲು ತೋಡಿಕೊಂಡರು. ಆಗ ಗರ್ವದಿಂದ ಮೆರೆದ ರಾವಣ, ಆ ಕಾರ್ಯ ನಾನು ಮಾಡಬಲ್ಲೆ ಬನ್ನಿ ಎಂದು ಹೇಳುತ್ತಾ ಜನರನ್ನು ಸರೋವರದ ಹತ್ತಿರ ಕರೆದುಕೊಂಡು ಹೋದ. ಕಲ್ಲೊಂದರ ಮೇಲೆ ರಾವಣೇಶ್ವರ ಎಂದು ಬರೆದು ನೀರಿನಲ್ಲಿ ತೇಲಿ ಬಿಟ್ಟ. ಕಲ್ಲು ತೇಲಿತು. ಜನರು ನಿಟ್ಟುಸಿರುಬಿಟ್ಟರು. ನಮ್ಮ ದೊರೆಯೂ ಒಬ್ಬ ಮಾಯಾವಿ! ಅವರು ಭಯವನ್ನಲ್ಲೇ ಬಿಟ್ಟು ವಿಶ್ವಾಸವಂತರಾದರು. ಆದರೆ ಮನೆಗೆ ಬರುತ್ತಿದ್ದಂತೆ ಪತ್ನಿ ಮಂಡೋದರಿ ರಾವಣನಿಗೆ, ಸ್ವಾಮಿ ನೀವು ಕಲ್ಲು ತೇಲಿಸಿದ್ದು ಹೇಗೆ ಎಂಬ ಪ್ರಶ್ನೆಯನ್ನಿಟ್ಟಳು. ಅದಕ್ಕೆ ಉತ್ತರಿಸಿದ ರಾವಣ, ನಾನು ಕಲ್ಲಿನ ಮೇಲೆ ರಾವಣೇಶ್ವರ ಎಂದೇ ಬರೆದೆ. ಆದರೆ ಅದಕ್ಕೆ ನೀನು ಮುಳುಗಿದರೆ ಶ್ರೀರಾಮನ ಮೇಲೆ ಆಣೆ ಅಂದುಬಿಟ್ಟೆ ಎಂದು ಉತ್ತರಿಸಿದ. ರಾಕ್ಷಸ ರಾವಣ ಮತ್ತು ರಾಕ್ಷಸ ಮನಸ್ಥಿತಿ ಇರುವ ಪಾಕಿಸ್ತಾನಕ್ಕೆ ಯಾವುದೇ ವ್ಯತ್ಯಾಸ ಇಲ್ಲ. ಪಾಕ್ ಕತೆ ಕೂಡ ಹೀಗೆ ಆಗುತ್ತಿದೆ.

ಇತ್ತೀಚೆಗಷ್ಟೇ ಪಾಕಿಸ್ತಾನ ಅಲ್ಲಿನ ಇಸ್ಲಾಂಪುರಕ್ಕೆ ಕೃಷ್ಣ ನಗರ ಎಂಬ ಹೆಸರನ್ನು, ಮುಸ್ತಫಾಬಾದ್ ಎಂಬ ಊರಿಗೆ ಧರ್ಮಪುರ ಎಂದು, ಬಾಬ್ರಿ ಮಸೀದಿ ಚೌಕ್ ಅನ್ನು ಜೈನ್ ಮಂದಿರ್ ಎಂದೂ ಮತ್ತು ರೆಹಮಾನ್ ಗಾಲಿ ಅನ್ನು ರಾಮ್ ಗಾಲಿ ಎಂದು ಮರುನಾಮಕರಣ ಮಾಡಿತ್ತಲ್ಲದೆ ಇತಿಹಾಸದ ಬಗ್ಗೆ ನಮಗೆ ಗೌರವವಿದೆ, ಪಾಕಿಸ್ತಾನ ಜಾತ್ಯತೀತ ವ್ಯವಸ್ಥೆಯ ಮೇಲೆ ನಂಬಿಕೆ ಇಟ್ಟಿದೆ ಎಂದೆಲ್ಲಾ ಜಂಬ ಕಚ್ಚಿಕೊಂಡಿತ್ತು. ಆದರೆ ರಾವಣನಂತೆಯೇ ತಕ್ಷಣವೇ ತನ್ನ ಅಸಲು ಕಪಟ ರೂಪ ತೋರಿಸಿ ಪಿಒಕೆ ನಿರಾಶ್ರಿತರ ಮೇಲೆ ದಾಳಿ ನಡೆಸಿತು. ಆಡಳಿತ ವೈಫಲ್ಯದಿಂದಲೇ ಇಷ್ಟು ದಿನ ಜಗತ್ತಿನ ಜನರ ಬಾಯಿಯಲ್ಲಿರುವ ಪಾಕಿಸ್ತಾನಕ್ಕೆ ದಿನಕ್ಕೊಮ್ಮೆ ಮರ್ಯಾದೆ ಕಳೆದುಕೊಳ್ಳದಿದ್ದರೆ ಸಮಾಧಾನವೇ ಆಗುವುದಿಲ್ಲ. ಆಡಳಿತ ವಿಚಾರದಲ್ಲಿ ಹಿಟ್ಟಿನ ಭಿಕ್ಷೆ ಬೇಡುವ ಸ್ಥಿತಿಗೆ ಬಂದರೂ ನಾವು ಪೊಲೀಸರಿಂದ ದಾಳಿಗಳನ್ನು ಮಾಡಿಸಿ ಸಾಮಾನ್ಯ ಜನರನ್ನು ಹೆದರಿಸುವುದನ್ನು ಬಿಟ್ಟಿಲ್ಲ. ಬಾಂಬ್ ದಾಳಿ ಮಾಡಿಸುವುದು, ಭಯೋತ್ಪಾದಕರನ್ನು ಬೆಂಬಲಿಸುವುದನ್ನು ನಿಲ್ಲಿಸುವುದಿಲ್ಲ ಎಂಬ ಮಾತು ಮತ್ತೆ ಮತ್ತೆ ಸಾಬೀತು ಮಾಡುತ್ತಾ ಬರುತ್ತಿದೆ. ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ನಡೆದ ದಾಳಿಯೂ ಇದರ ಮತ್ತೊಂದು ಸ್ವರೂಪ.

ಕಪಟತನದಿಂದ ಕಬ್ಜ ಮಾಡಿಕೊಂಡಿರುವ ಪಿಒಕೆ ಪ್ರದೇಶಗಳಲ್ಲಿ ಪಾಕಿಸ್ತಾನ ಶಾಲೆಗಳನ್ನು ಕಟ್ಟಿಲ್ಲ, ಅಲ್ಲಿ ಆಸ್ಪತ್ರೆಗಳಿಲ್ಲ. ಹೋಗಲಿ ಕನಿಷ್ಠ ಪಕ್ಷ ಒಂದು ಬಸ್‌ಸ್ಟ್ಯಾಂಡ್ ಕೂಡ ಇಲ್ಲ. ಇದರ ವಿರುದ್ಧ ಅಲ್ಲಿನವರೇ ವಿರೋಧಿಸಿ ಭಾರತವನ್ನು ಹೊಗಳಿದ ವಿಚಾರ ಮೊದಲಿನಿಂದಲೂ ನಡೆಯುತ್ತಲೇ ಬಂದಿದೆ. ಈ ನಡುವೆ ಬೆಲೆ ಏರಿಕೆ ಮಾಡಿರುವ ಪಾಕಿಸ್ತಾನ, ಅಲ್ಲಿನ ಜನರ ಜೀವನವನ್ನು ಇನ್ನಷ್ಟು ಕಠಿಣಗೊಳಿಸಿದೆ. ಇದರ ವಿರುದ್ಧ ಜನರು ಹೋರಾಟಕ್ಕಿಳಿದಿದ್ದಾರೆ. ಇದೇ ವಿಷಯಕ್ಕೆ ಪೆಚ್ಚಾದ ಪಾಕಿಸ್ತಾನ ಪೊಲೀಸ್ ದಾಳಿಗಳನ್ನು ನಡೆಸಿ ಜನರ ಜೀವ ತೆಗೆದುಕೊಳ್ಳುತ್ತಿದೆ.

ಹಾಗೆ ನೋಡಿದರೆ, ಒಂದು ಕ್ರಿಕೆಟ್ ಪಂದ್ಯ ಗೆಲ್ಲಬೇಕಾದರೆ ತಂಡದ ಫೀಲ್ಡಿಂಗ್ ಎಷ್ಟೊಂದು ಮುಖ್ಯವೋ, ಆಡಳಿತ ವಿಚಾರದಲ್ಲಿ ಪ್ರತಿಯೊಂದು ಪ್ರದೇಶದ ಮೇಲೆ ಕಣ್ಣಿಟ್ಟು ಅಭಿವೃದ್ಧಿಸುವುದು ಅಷ್ಟೇ ಮುಖ್ಯ. ಆದರೆ ಪಾಕಿಸ್ತಾನ ಮೊದಲಿನಿಂದಲೂ ಎರಡರಲ್ಲೂ ಸತತ ವೈಫಲ್ಯ ಕಾಣುತ್ತಾ ಬಂದಿದೆ. ಪಾಕಿಸ್ಥಾನಕ್ರಿಕೆಟ್ ತಂಡದಕಳಪೆಫೀಲ್ಡಿಂಗ್ ಅನ್ನು ಪಾಕಿಸ್ತಾನಿಕ್ರಿಕೆಟ್ ಅಭಿಮಾನಿಗಳೇ ಗೇಲಿ ಮಾಡುತ್ತಾರೆ. ಈಗ ಪಾಕಿಸ್ತಾನ ಆಡಳಿತವನ್ನೂ ಅಲ್ಲಿನ ಜನರೇ ಗೇಲಿ ಮಾಡುತ್ತಿದ್ದಾರೆ. ಕ್ಯಾಚ್ ಕೈಚೆಲ್ಲುವುದೆಂದರೆ ಚೆಂಡನ್ನು ಅನ್ನು ಹಿಡಿಯದಿರುವುದು. ಚೆಂಡು ಬರುವ ದಿಕ್ಕನ್ನು ತಪ್ಪಿಸಿಕೊಳ್ಳುವುದಾಗಿತ್ತು. ಪಾಕ್ ಕ್ರಿಕೆಟ್‌ನಲ್ಲಿ ಹೀಗೆ ಸುಲಭವಾಗಿ ಹಿಡಿಯಬಹುದಾದ ಚೆಂಡನ್ನು ನಿರ್ಣಾಯಕ ಸಂದರ್ಭಗಳಲ್ಲೇ ಕೈಬಿಟ್ಟ ಅನೇಕ ಉದಾಹರಣೆಗಳಿವೆ.



ಮೊದಲಿನಿಂದಲೂ ಪಾಕ್‌ನಲ್ಲಿ ರಾಜಕಾರಣಿಗಳೆಲ್ಲರೂ ಬಲೋಚಿಸ್ತಾನದ ಬಗ್ಗೆ ಮಾತನಾಡುತ್ತಾ, ಅಲ್ಲಿನ ಜನರಿಗೆ ಅನ್ಯಾಯವಾಗಿದೆ ಎಂದೂ, ಅಭಿವೃದ್ಧಿ ಮಾಡುತ್ತೇವೆ ಎಂದೂ ಹೇಳಿ ಮತ ಪಡೆಯುತ್ತಾರೆ. ಆದರೆ ಅಲ್ಲಿನ ಜನರನ್ನು ಕಂಡರೆ ಸರ್ಕಾರಕ್ಕೂ ಆಗಲ್ಲ, ಸೇನೆಗೂ ಆಗಲ್ಲ. ಅಲ್ಲಿನ ಜನರು ದಂಗೆದ್ದು ಪ್ರಶ್ನೆ ಕೇಳಿದಾಗ ಅವರ ಮೇಲೆ ಭಯೋತ್ಪಾದನಾ ದಾಳಿಗಳನ್ನು ಪಾಕಿಸ್ತಾನ ನಡೆಸಿತು.

ಕ್ರಿಕೆಟಿನಲ್ಲಿ ಇದು ಸಾಮಾನ್ಯವಾದರೂ ಪಾಕಿಸ್ತಾನಿಯರು ಕ್ಯಾಚ್ ಕೈಚೆಲ್ಲುವ ರೀತಿಗೆ ಹೊಸ ಪರಿಭಾಷೆಯನ್ನೇ ಬರೆದವರು! ಬೌಂಡರಿಯ ಬದಿಯಲ್ಲಿ ಬಾಲ್ ಮೇಲಿಂದ ಕೆಳಗೆ ಬರುವುದರಲ್ಲಿ ಇಬ್ಬರು ಫೀಲ್ಡರುಗಳು ಕ್ಯಾಚ್‌ಗಾಗಿ ಬರುವುದು. ಮೊದಲನೇ ಫೀಲ್ಡರ್ ಮುಂದಿನವನು ಹಿಡಿಯುತ್ತಾನೆ ಎಂದು ಬಿಟ್ಟರೆ ಇನ್ನೊಬ್ಬ ಮುಂದೆ ಬರುವವನು ಹಿಡಿಯುತ್ತಾನೆಂದು ಬಿಡುವುದು. ಬಾಲ್ ಬರುವಷ್ಟರಲ್ಲಿ ಇಬ್ಬರೂ ಎದುರು ಬದುರಾಗಿ ಒಬ್ಬರಿಗೊಬ್ಬರನ್ನು ನೋಡುತ್ತಾ ನಿಲ್ಲುವುದು. ಈ ಕ್ಷಣದಲ್ಲಿ ಪಾಕಿಸ್ತಾನಿ ಕ್ರಿಕೆಟಿಗರು ಏನು ಮಾಡಲು ಹೊರಟಿದ್ದಾರೆಂದೇ ತಿಳಿಯುವುದಿಲ್ಲ. ಇವತ್ತಿಗೂ ಆ ರೀತಿ ಯಾರು ಕ್ಯಾಚ್ ಬಿಡುತ್ತಾರೋ ಅವರಿಗೆ ಪಾಕಿಸ್ತಾನಿ ಅಭಿಮಾನಿಗಳೆಂದು ಗೇಲಿ ಮಾಡುವ ವಾಡಿಕೆಯಿದೆ. ಇದು ಒಂದು ಕಡೆ. ಆಡಳಿತ ವಿಚಾರಕ್ಕೆ ಬಂದರೆ ಗಡಿ ಭಾಗಗಳಲ್ಲಿ ಅಭಿವೃದ್ಧಿ ಪಡಿಸಿ ಜನರನ್ನು ಸೆಳೆಯಬೇಕೆ ಅಥವಾ ಅವರಿಗೆ ಭಯೋತ್ಪಾದನೆಯಿಂದಲೋ, ಪೊಲೀಸರಿಂದಲೋ ಹೆದರಿಸಿ ಬಾಯಿ ಮುಚ್ಚಿಸಬೇಕೆ ಎಂಬ ಗೊಂದಲ ಪಾಕ್‌ಗೆ ತನ್ನ ತಂಡದ ಆಟಗಾರರ ಕ್ರಿಕೆಟ್ ಫೀಲ್ಡಿಂಗಿನಂತೆ ಭಾಸವಾಗುತ್ತದೆ. ವಾಸ್ತವವಾಗಿ ಭಯೋತ್ಪಾನಾ ಚಟುವಟಿಕೆಗಳಿಗೆ ಉತ್ತೇಜಿಸುವುದು ಮತ್ತು ಅದಕ್ಕೆ ಬೇಕಾದ ಬೆಂಬಲ ಕೊಡುವುದು ಪಾಕಿಸ್ತಾನ ಸರ್ಕಾರ ಮತ್ತು ಅಲ್ಲಿನ ಸೇನೆಯ ಕೆಟ್ಟ ಚಾಳಿ.

ಯಾವುದೇ ವಿಚಾರದಲ್ಲಿ ಪಾಕಿಸ್ತಾನ ಸರ್ಕಾರದ ವೈಫಲ್ಯ ಕಂಡುಬಿಟ್ಟರೆ ಅಲ್ಲಿ ಭಯೋತ್ಪಾದಕರು ಸಕ್ರಿಯರಾಗುತ್ತಾರೆ. ಅದರ ವಿರುದ್ಧ ಹೋರಾಟಗಳು ನಡೆಯಲಾರಂಭಿಸಿದರೆ ಪೊಲೀಸರು ಪೌರುಷ ಪ್ರದರ್ಶಿಸುತ್ತಾರೆ. ಲಯರಿ ಪಟ್ಟಣಗಳಲ್ಲಿ ಗೂಂಡಾಗಿರಿ ಮಾಡುವ ಸಾಮಾನ್ಯ ಮನುಷ್ಯನೂ ಭಯೋತ್ಪಾದಕ ಹೇಳಿದಂತೆ ಕೇಳುತ್ತಾನೆ. ಇನ್ನು ಐಎಸ್‌ಐ ಅಂತೂ ಇದರಲ್ಲಿ ಎತ್ತಿದ ಕೈ. ಐಎಸ್‌ಐ ಕೆಲವೊಮ್ಮೆ ಪಾಕಿಸ್ತಾನ ಸರ್ಕಾರಕ್ಕಿಂತ ಹೆಚ್ಚಾಗಿ ಭಯೋತ್ಪಾದಕರಿಗಾಗಿ ಹೆಚ್ಚು ದುಡಿಯುತ್ತದೆ. ಹೀಗಾಗಿ ಪಾಕ್‌ನ ಸರ್ಕಾರವನ್ನು ಅಲ್ಲಿನ ಭಯೋತ್ಪಾದಕರು ನಡೆಸುತ್ತಾರೆಂದರೆ ತಪ್ಪಾಗಲ್ಲ. ಈ ನಿಟ್ಟಿನಲ್ಲಿ ಅಲ್ಲಿನ ಸರ್ಕಾರಕ್ಕೆ ಪಿಒಕೆ ಅಂಥ ಪ್ರದೇಶಗಳಲ್ಲಿ ಅಭಿವೃದ್ಧಿ ಮಾಡಲಾಗಲ್ಲ. ಭಯೋತ್ಪಾಕರೇ ದಂಗೆ ಮಾಡಿಸುತ್ತಾರೆ. ಇವೆಲ್ಲವನ್ನೂ ನೋಡಿದರೆ, ಪಾಕಿಸ್ತಾನದ ನಿರ್ವಹಣೆ ಮತ್ತು ಆಡಳಿತ ವೈಖರಿ ಅದೇ ದೇಶದ ಕ್ರಿಕೆಟ್ ತಂಡದ ಫೀಲ್ಡಿಂಗ್‌ನಂತೇ ದುರ್ಬಲವಾಗಿದೆ.

ಇತಿಹಾಸದಲ್ಲೂ ಇಂಥ ಘಟನೆಗಳು ನಡೆದಿವೆ. ಮೊದಲಿನಿಂದಲೂ ಪಾಕ್‌ನಲ್ಲಿ ರಾಜಕಾರಣಿಗಳೆಲ್ಲರೂ ಬಲೋಚಿಸ್ತಾನದ ಬಗ್ಗೆ ಮಾತನಾಡುತ್ತಾ, ಅಲ್ಲಿನ ಜನರಿಗೆ ಅನ್ಯಾಯವಾಗಿದೆ ಎಂದೂ, ಅಭಿವೃದ್ಧಿ ಮಾಡುತ್ತೇವೆ ಎಂದೂ ಹೇಳಿ ಮತ ಪಡೆಯುತ್ತಾರೆ. ಆದರೆ ಅಲ್ಲಿನ ಜನರನ್ನು ಕಂಡರೆ ಸರ್ಕಾರಕ್ಕೂ ಆಗಲ್ಲ, ಸೇನೆಗೂ ಆಗಲ್ಲ. ಅಲ್ಲಿನ ಜನರು ದಂಗೆದ್ದು ಪ್ರಶ್ನೆ ಕೇಳಿದಾಗ ಅವರ ಮೇಲೆ ಭಯೋತ್ಪಾದನಾ ದಾಳಿಗಳನ್ನು ಪಾಕಿಸ್ತಾನ ನಡೆಸಿತು. ಆದರೆ ಬಲೋಚಿಸ್ತಾನದಲ್ಲಿ ನಡೆಯುತ್ತಿರುವ ಹೋರಾಟಗಳು ಪಾಕ್‌ಗೆ ನುಂಗಲಾಗದ ತುತ್ತಾಗುತ್ತಿರುವಾಗಲೇ ಈಗ ಪಿಒಕೆಯನ್ನು ಎದುರಿಸಬೇಕಾದ ಪರಿಸ್ಥಿತಿ ಬಂದಿದೆ.

ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಕೇಳಿಬರುತ್ತಿರುವ ಆಜಾದಿ ಘೋಷಣೆ, ಹೋರಾಟ ಮತ್ತು ಅಲ್ಲಿನ ಜನರ ಪ್ರತಿರೋಧ ಪಾಕಿಸ್ತಾನಕ್ಕೆ ತೀವ್ರ ಆತಂಕ ತಂದಿದೆ. ಮಾಧ್ಯಮದ ಮುಂದೆ ಕಾಶ್ಮೀರಕ್ಕಾಗಿ ನಾವು ಜೀವವನ್ನೇ ಕೊಡುತ್ತೇವೆ ಎಂದೆಲ್ಲಾ ಹೇಳುವ ಪಾಕಿಸ್ತಾನ ಕಡೆ ಪಕ್ಷ ಪಿಒಕೆಯಲ್ಲಿ ಆಸ್ಪತ್ರೆಯನ್ನಾದರೂ ಮೊದಲು ಕಟ್ಟಲಿ. ಮುಜಫರಾಬಾದ್‌ನಲ್ಲಿ ಜನರ ಭೀಕರ ಪರಿಸ್ಥಿತಿ ಇಡೀ ವಿಶ್ವಕ್ಕೆ ಗೊತ್ತು. ಅದಲ್ಲದೆ ಮೀರ್ಪುರ್, ಬಾಲ್ಟಿಸ್ಥಾನದಲ್ಲೂ ಜನರ ಪಾಡು ಅತ್ಯಂತ ಹೀನಾಯವಾಗಿದೆ. ಮಕ್ಕಳಿಗೆ ಶಾಲೆಗಳಿಲ್ಲ. ಯುವಕರಿಗೆ ನೌಕರಿಯಿಲ್ಲ. ಗಿಲ್ಗಿಟ್–ಬಾಲ್ಟಿಸ್ತಾನದಲ್ಲೂ ಇದೇ ಪರಿಸ್ಥಿತಿ. ಹಾಗೆ ನೋಡಿದರೆ ಸಂಪೂರ್ಣ ಪಾಕಿಸ್ತಾನದ ಪರಿಸ್ಥಿತಿಯೇ ಹಾಗೇ ಇದೆ. ಆದರೆ ತೀರಾ ಇಸ್ಲಾಮಾಬಾದ್ ಹತ್ತಿರ ಇರುವ ಪಿಒಕೆ ಪ್ರದೇಶಗಳಲ್ಲಿ ಇಸ್ಲಾಮಾಬಾದ್‌ನಲ್ಲಿರುವ ಸೌಲಭ್ಯಗಳಿಲ್ಲ! ಕಡೆ ಪಕ್ಷ ಒಂದು ಬಸ್‌ಸ್ಟ್ಯಾಂಡ್ ಕೂಡ ಈ ಪ್ರದೇಶಗಳಲ್ಲಿ ನಿರ್ಮಿಸಲಾಗಿಲ್ಲ. ಈ ನಡುವೆ ದರ ಏರಿಕೆ ಜನರಿಗೆ ತೀರಾ ಬಿಸಿ ಮುಟ್ಟಿಸಿದೆ. ಇದೇ ಅವಸರದಲ್ಲಿ ದಂಗೆದ್ದ ಪಿಒಕೆ ಜನರು ಪಾಕಿಸ್ತಾನದಿಂದ ಬಿಡುಗಡೆಗೊಳ್ಳಲು ಕಾಯುತ್ತಿದ್ದಾರೆ. ಹತಾಶೆಗೊಳಗಾಗಿದ್ದಾರೆ. ಅಂಥ ಜನರನ್ನು ಪಾಕಿಸ್ತಾನ ಪೊಲೀಸರಿಂದ ಹೊಡೆಸುತ್ತಿದ್ದಾರೆ.

ಹಿಂದೆ ವೇದಿಕೆ ಮೇಲೆ ಹುಂಬನಂತೆ ಮಾತನಾಡುತ್ತಿದ್ದ ಆಸೀಂ ಮುನೀರ್ ದಂಗೆಕೋರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಬಗ್ಗೆ ಹೇಳಿದ್ದ. ಅದರರ್ಥ ಪಿಒಕೆಯ ಸಾಮಾನ್ಯ ಜನರ ಜೀವ ಪಡೆಯುವುದು! ಪಾಕಿಸ್ತಾನದ ಆಡಳಿತ ವಿರುದ್ಧ ಮಾತನಾಡಿದವರೆಲ್ಲಾ ಪಾಕ್ ಪಾಲಿಗೆ ರಾ ಏಜಂಟ್‌ಗಳಾಗಿ ಬಿಡುತ್ತಾರೆ. ಆಡಳಿತ ಮಾಡಲಾಗದೆ ಹತಾಶಗೊಳ್ಳುವ ಪಾಕಿಸ್ತಾನ ಮೊದಲಿನಿಂದಲೂ ಭಯೋತ್ಪಾದಕ ದಾಳಿಗಳನ್ನು ಮಾಡುತ್ತಲೇ ಬಂದಿದೆ. ಈಗ ಪೊಲೀಸ್ ದಾಳಿ, ಹೆಸರು ಬೇರೆಯಾದರೂ ಕೆಲಸ ಒಂದೇ. ಜನಸಾಮಾನ್ಯರನ್ನು ಹೆದರಿಸುವುದು. ಇದರ ವಿರುದ್ಧ ಹೋರಾಟಗಳನ್ನು ಮಾಡಿರುವ ಸರ್ದಾರ್ ಅಮನ್ ಖಾನ್, ಶೋಕತ್ ನವಾಜ್ ಮಿರ್, ಓಮರ್ ನಜೀರ್, ಇಮ್ತಿಯಾಜ್ ಅಸ್ಲಂ, ಖ್ವಾಜಾ ಅರ್ಷದ್ ಅಂಥವರು ಪಾಕಿಸ್ತಾನಕ್ಕೆ ಧಮ್ಕಿ ಹಾಕುತ್ತಿದ್ದಾರೆ.


ತೀವ್ರ ಆತಂಕಕ್ಕೆ ಒಳಗಾದ ಪಾಕಿಸ್ತಾನ ದಾಳಿಗಿಳಿದಂತಿದೆ. ಅಸಲಿಗೆ ಇವರೆಲ್ಲಾ ಕೇಳಿದ್ದಾದರೂ ಏನು? ಶಾಲೆ ಕಟ್ಟಿಸಿ ಎಂದು ಕೇಳುವುದು ತಪ್ಪೇ? ಆಸ್ಪತ್ರೆಗಳಾಗಲಿ ಎಂದು ಕೇಳಿದರೆ ತಪ್ಪೇ? ಅಥವಾ ನಮಗೆ ಸ್ವಾತಂತ್ರ್ಯ ಬೇಕು ಎಂದು ಕೇಳಿದರೆ ತಪ್ಪೇ? ಸ್ವತಃ ಭಿಕ್ಷೆ ಬೇಡುವ ಪಾಕಿಸ್ತಾನಕ್ಕೆ ಇದೆಲ್ಲಾ ಪೂರೈಸುವುದು ಕಷ್ಟವಾದರೂ ಜನರನ್ನು ಸಾಯಿಸುವಷ್ಟು ಘೋರ ತಪ್ಪೇನು ಅಲ್ಲಿನ ಜನರು ಮಾಡಿರಲೇ ಇಲ್ಲ. ಅಸಲಿಯತ್ತಾಗಿ ಪಾಕಿಸ್ತಾನಕ್ಕೆ ಆಡಳಿತ ವಿಚಾರದಲ್ಲಿ ಗೊಂದಲಗಳಿವೆ. ಪಿಒಕೆಯಲ್ಲಿ ದಂಗೆ ಮಾಡಿಬೇಕೆ ಅಥವಾ ಅಲ್ಲಿನ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕೆ ಎಂಬ ವಿಚಾರದಲ್ಲೇ ಅದಕ್ಕೆ ಗೊಂದಲಗಳಿವೆ. ಥೇಟ್ ಪಾಕ್ ತಂಡದ ಫೀಲ್ಡರ್‌ಗಳಂತೆ.

ಎಲ್ಲಾ ಪಕ್ಷಗಳು ರೆಸಾರ್ಟ್ ಸಂಸ್ಕೃತಿಗೆ ಕೊನೆ ಹಾಡಲಿ

ಸುರೇಶ್ ಕುಮಾರ್. ಎಸ್



ನಿನ್ನೆ ನಾನು ಕರ್ನಾಟಕ ರಾಜ್ಯ ವಿಧಾನ ಪರಿಷತ್ತಿಗೆ ಕರ್ನಾಟಕ ರಾಜ್ಯ ವಿಧಾನಸಭೆಯಿಂದ ಆಯ್ಕೆ ಮಾಡುವ ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಹೊರ ಬಂದೆ. ಒಟ್ಟು ಏಳು ಸ್ಥಾನಗಳಿಗೆ 8 ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. ಸಹಜವಾಗಿ ಎಲ್ಲಾ ಪಕ್ಷಗಳು ಈ ಚುನಾವಣೆಗಳಲ್ಲಿ ಮತ ಚಲಾಯಿಸುವ ಕ್ರಮ ಕುರಿತು ವ್ಹಿಪ್ (Whip) ನೀಡುವುದು ನಡೆದುಕೊಂಡು ಬಂದಿರುವ ಪದ್ಧತಿ. ಅದೇ ರೀತಿ ನಮ್ಮ ಪಕ್ಷದಲ್ಲೂ ನೀಡಿರುವ ವ್ಹಿಪ್ ಅನುಸಾರವಾಗಿ ನಾವೆಲ್ಲರೂ ಮತ ಚಲಾಯಿಸಿದ್ದೇವೆ.



ವಿಧಾನಸಭಾ ಸದಸ್ಯನಾಗಿ ನಾನು ಅದೆಷ್ಟೋ ಚುನಾವಣೆಗಳಲ್ಲಿ ವಿಧಾನ ಪರಿಷತ್ತಿಗೆ, ರಾಜ್ಯಸಭೆಗೆ ಮತ್ತು ರಾಷ್ಟ್ರಪತಿ ಸ್ಥಾನಕ್ಕೆ ಮತವನ್ನು ಚಲಾಯಿಸಿದ್ದೇನೆ. ಇದೊಂದು ನನಗೆ ದೊರಕಿರುವ ಅಪೂರ್ವ ಅವಕಾಶ ಎಂದುಕೊಂಡು ಪ್ರತಿ ಬಾರಿ ಸಂತಸದಿಂದ ಮತ ಚಲಾಯಿಸಿದ್ದೇನೆ. ಮತ ಚಲಾಯಿಸುವ ಮೊದಲ ಮತದಾರರಲ್ಲಿ ನಾನೂ ಒಬ್ಬನಾಗಿರುತ್ತೇನೆ. ಈ ರೀತಿ ವಿಧಾನ ಪರಿಷತ್ತಿನ ಚುನಾವಣೆ ನಡೆಯುತ್ತಿರುವಾಗ ನನ್ನ ಮನಸ್ಸಿಗೆ ಬಂದ ಒಂದು ವಿಚಾರವನ್ನು ಹಂಚಿಕೊಳ್ಳಬೇಕೆಂದು ಅನಿಸಿದೆ.

ಈ ಚುನಾವಣೆಗಳಲ್ಲಿ ಮತ ಚಲಾಯಿಸುವವರೆಲ್ಲರೂ ವಿಧಾನ ಸಭೆಯ ಸದಸ್ಯರು. ಬೇರೆ ಬೇರೆ ಪಕ್ಷದ ಚಿನ್ಹೆ ಅಡಿ ಆಯ್ಕೆಯಾಗಿ ಬಂದಿರುವ ಸದಸ್ಯರು. ಆಯಾ ಪಕ್ಷಗಳ ಕಾರ್ಯಕರ್ತರು ಬಹಳ ಪರಿಶ್ರಮಪಟ್ಟು ಇವರುಗಳನ್ನು ಗೆಲ್ಲಿಸಿರುತ್ತಾರೆ. ಈ ಚುನಾವಣಾ ಸಂದರ್ಭದಲ್ಲಿ ವಿಧಾನಸಭಾ ಸದಸ್ಯರನ್ನು ರಾಜಕೀಯ ಪಕ್ಷಗಳು ರೆಸಾರ್ಟ್‌ಗಳಿಗೆ ಕರೆದುಕೊಂಡು ಹೋಗಿ ಎರಡು ದಿನಗಳ ಕಾಲ ಅವರ ಮೇಲೆ ಕಣ್ಗಾವಲು ವ್ಯವಸ್ಥೆ ಮಾಡುವುದು ಎಷ್ಟರಮಟ್ಟಿಗೆ ಸರಿ? ನನಗೆ ನೆನಪಿರುವಂತೆ, ನಮ್ಮ ರಾಜ್ಯದಲ್ಲಿ ಈ ರೆಸಾರ್ಟ್ ಸಂಸ್ಕೃತಿ ಪ್ರಾರಂಭವಾಗಿದ್ದು ದಿವಂಗತ ಎನ್.ಟಿ ರಾಮರಾವ್ ಅವರ ತೆಲುಗು ದೇಶಂ ಪಕ್ಷದ ಮೇಲೆ ಅಂದಿನ ಕೇಂದ್ರದ ಆಳುವ ಪಕ್ಷದ ವಕ್ರಗಣ್ಣು ಬಿದ್ದು, ಆ ಸರ್ಕಾರವನ್ನು ವಜಾ ಮಾಡಿದ ಹಿನ್ನೆಲೆಯಲ್ಲಿ, ತೆಲುಗು ದೇಶಂ ಪಕ್ಷದ ಶಾಸಕರನ್ನು ನಮ್ಮ ರಾಜ್ಯದ ರೆಸಾರ್ಟ್‌ಗೆ ಕರೆದುಕೊಂಡ ಬಂದ 1983ರ ವಿದ್ಯಮಾನ ನನ್ನ ನೆನಪಿನಲ್ಲಿದೆ. ಅದಾದ ಮೇಲೆ ಹಲವಾರು ಸಂದರ್ಭದಲ್ಲಿ ಎಲ್ಲಾ ಪಕ್ಷಗಳು ತಮ್ಮ ತಮ್ಮ ಶಾಸಕರನ್ನು ರೆಸಾರ್ಟ್ ಸಂಸ್ಕೃತಿಗೆ ಒಳಪಡಿಸಿರುವುದು ಇತಿಹಾಸದ ಒಂದು ಭಾಗ.

ಪ್ರತಿಯೊಂದು ಪಕ್ಷಕ್ಕೂ ತನ್ನ ಶಾಸಕರ ಬಗ್ಗೆ ವಿಶ್ವಾಸವಿರಬೇಕು, ನಂಬಿಕೆ ಇರಬೇಕು. ಅದೇ ರೀತಿ ಶಾಸಕರಿಗೂ ತಮ್ಮ ತಮ್ಮ ಪಕ್ಷದ ಬಗ್ಗೆ ಹೆಮ್ಮೆ ಮತ್ತು ಗೌರವ ಹಾಗೂ ಶ್ರದ್ಧೆ ಇರಬೇಕು. ಹೀಗಿರುವಾಗ ಶಾಸಕರು ಖರೀದಿಗೆ ಒಳಪಡುತ್ತಾರೆ ಅಥವಾ ಅವರನ್ನು ಬೇರೆ ಪಕ್ಷದವರು ಅಪಹರಿಸಬಹುದು ಅಥವಾ ವಿವಿಧ ರೀತಿಯ ಆಮಿಷಗಳಿಗೆ ಅವರನ್ನು ಒಳ ಮಾಡಬಹುದು ಎಂಬ ಅಪನಂಬಿಕೆ ಪ್ರಜಾಪ್ರಭುತ್ವದ ಮೂಲ ಸಿದ್ಧಾಂತಕ್ಕೆ ಒಂದು ಕಳಂಕ.

Free & Fair Elections–ನ್ಯಾಯಯುತ ಮತ್ತು ಮುಕ್ತ ಚುನಾವಣೆಗಳು ಪ್ರಜಾತಂತ್ರದ ವ್ಯವಸ್ಥೆಯ ಮೂಲಸತ್ವ. ಹಾಗಿರುವಾಗ ಶಾಸಕರನ್ನು ಒಂದು ರೀತಿ ಒಟ್ಟು ಹಾಕಿ ಅವರ ಮೇಲೆ ನಿಗಾ ಇಡಬೇಕಾದ ಪರಿಸ್ಥಿತಿ ಬರುವುದು ರಾಜಕೀಯ ವ್ಯವಸ್ಥೆಗೆ ಭೂಷಣವಲ್ಲ. ಇದನ್ನು ರಾಜಕೀಯ ಪಕ್ಷಗಳು ಮತ್ತು ಶಾಸಕರು ಇಬ್ಬರು ಬಹಳ ಗಂಭೀರವಾಗಿ ಅವಲೋಕಿಸಬೇಕಿದೆ. ವಿಧಾನಸಭಾ ಸದಸ್ಯರನ್ನೇ ಈ ರೀತಿ ಚುನಾವಣಾ ಹಿನ್ನೆಲೆಯಲ್ಲಿ ಯಾವುದೋ ಆತಂಕದಿಂದ ಅಥವಾ ಭಯದಿಂದ, ಅವರ ಮೇಲೆ ಸಂಪೂರ್ಣ ನಂಬಿಕೆ ಇಡದೆ ಆಯಾ ಪಕ್ಷಗಳು ರೆಸಾರ್ಟ್‌ಗಳಿಗೆ ಅಥವಾ ಇನ್ಯಾವುದೋ ಸ್ಥಳಕ್ಕೆ ಕರೆದೊಯ್ಯುವುದು ದೇಶದ ಚುನಾವಣೆಗಳ ಸಾಮಾನ್ಯ ಮತದಾರನ ಮೇಲೆ ಯಾವ ಪರಿಣಾಮ ಬೀರಬಹುದು ಎಂಬುದನ್ನು ನಾವೆಲ್ಲರೂ ಪಕ್ಷಭೇದ ಮರೆತು ಗಂಭೀರವಾಗಿ ಚಿಂತನೆ ನಡೆಸಬೇಕಿದೆ. ರೆಸಾರ್ಟ್ ಸಂಸ್ಕೃತಿಗೆ ಕೊನೆಹಾಡಬೇಕೆಂಬ ಸಾಮಾನ್ಯ ಕನಿಷ್ಠ ಒಪ್ಪಂದಕ್ಕೆ ಎಲ್ಲಾ ರಾಜಕೀಯ ಪಕ್ಷಗಳು ಬರಬೇಕಿದೆ.

ಪ್ರಗತಿಗಾಗಿ ಭಾರತ-ಫ್ರಾನ್ಸ್ ಪಾಲುದಾರಿಕೆ ಅಗತ್ಯ

ಪ್ಯಾರಿಸ್‌ನಲ್ಲಿ ಪ್ರಧಾನಿ ಮೋದಿಗೆ ಭವ್ಯ ಸ್ವಾಗತ



ಪ್ಯಾರಿಸ್: ಪ್ಯಾರಿಸ್‌ಗೆ ಭೇಟಿ ನೀಡಿದ ಪ್ರಧಾನಿ ನರೇಂದ್ರ ಮೋದಿಯವರನ್ನು ಅನಿವಾಸಿ ಭಾರತೀಯರು ಆತ್ಮೀಯವಾಗಿ ಸ್ವಾಗತಿಸಿದ್ದಾರೆ. ಈ ವೇಳೆ, ಜಾಗತಿಕ ಪ್ರಗತಿಗೆ ಭಾರತ-ಫ್ರಾನ್ಸ್ ಪಾಲುದಾರಿಕೆ ಅತ್ಯಗತ್ಯ ಎಂದು ಮೋದಿ ಹೇಳಿದ್ದಾರೆ. ತಮ್ಮ ಪ್ಯಾರಿಸ್ ಭೇಟಿ ಬಗ್ಗೆ ಎಕ್ಸ್‌ನಲ್ಲಿ ಹಂಚಿಕೊಂಡ ಮೋದಿ, ನಾನು ಪ್ಯಾರಿಸ್‌ಗೆ ಆಗಮಿಸಿದ್ದೇನೆ. ಇಲ್ಲಿನ ಭಾರತೀಯ ಸಮುದಾಯದವರು ನನ್ನನ್ನು ಆತ್ಮೀಯವಾಗಿ ಸ್ವಾಗತಿಸಿದ್ದಾರೆ. ಭಾರತ ಮತ್ತು ಫ್ರಾನ್ಸ್ ನಡುವಿನ ಬಾಂಧವ್ಯವನ್ನು ಮತ್ತಷ್ಟು ಬಲಪಡಿಸಲು ಫ್ಯಾರಿಸ್‌ನ ಅನಿವಾಸಿ ಭಾರತೀಯರು ಮಾಡುತ್ತಿರುವ ಬಗ್ಗೆ ನನಗೆ ಹೆಮ್ಮೆಯಿದೆ ಎಂದು ಹೇಳಿದ್ದಾರೆ.

ಪಾಲುದಾರಿಕೆ ಮತ್ತು ವಲಸಿಗರು: ಭಾರತ ಮತ್ತು ಫ್ರಾನ್ಸ್ ಕಾರ್ಯತಂತ್ರದ ಪಾಲುದಾರಿಕೆ, ರಕ್ಷಣೆ, ಭದ್ರತೆ, ಬಾಹ್ಯಾಕಾಶ, ನಾಗರಿಕ ಪರಮಾಣು ಇಂಧನ, ಹವಾಮಾನ ವೈಪರೀತ್ಯ ತಡೆ, ಉದಯೋನ್ಮುಖ ತಂತ್ರಜ್ಞಾನಗಳು, ಇಂಡೋ-ಪೆಸಿಫಿಕ್, ಆವಿಷ್ಕಾರ ಮತ್ತು ಜಾಗತಿಕ ಆಡಳಿತವನ್ನು ಒಳಗೊಂಡಿದೆ. ಫ್ರಾನ್ಸ್‌ನ ಮುಖ್ಯ ಭೂಭಾಗದಲ್ಲಿರುವ ಭಾರತೀಯ ವಲಸಿಗರ ಸಂಖ್ಯೆ ಸುಮಾರು 1,19,000 ಎಂದು ಅಂದಾಜಿಸಲಾಗಿದ್ದು, 3,50,000 ಕ್ಕೂ ಹೆಚ್ಚು ಭಾರತೀಯ ಮೂಲದ ಜನರು ಫ್ರೆಂಚ್ ಸಾಗರೋತ್ತರ ಪ್ರಾಂತ್ಯಗಳಲ್ಲಿ ವಾಸಿಸುತ್ತಿದ್ದಾರೆ.

ಸಮುದ್ರ, ಮಾರ್ಗ ಮತ್ತು ರೈಲ್ವೆ ವಲಯ: ಮೋದಿ, ಸಿಎಂಎ ಸಿಜಿಎಂ ಕಂಪನಿಯ ಅಧ್ಯಕ್ಷ ಮತ್ತು ಸಿಇಒ ರೊಡಾಲ್ಫ್ ಸಾದೆ ಅವರನ್ನು ಭೇಟಿ ಮಾಡಿ ಕಡಲ ಹಡಗು ಸಾಗಣೆ, ಲಾಜಿಸ್ಟಿಕ್ಸ್, ಕಂಟೈನರ್ ಹಡಗು ನಿರ್ಮಾಣ ಮತ್ತು ಜಾಗತಿಕ ಪೂರೈಕೆ ಸರಪಳಿಗಳ ಕುರಿತು ಚರ್ಚಿಸಿದರು. ಆಲ್‌ಸ್ಟಾಮ್ ಸಿಇಒ ಮಾರ್ಟಿನ್ ಸಿಯೋನ್, ಭಾರತದಲ್ಲಿ ರೈಲ್ವೆ ಆಧುನೀಕರಣ ಮತ್ತು ಮುಂದಿನ ಹೂಡಿಕೆ ಯೋಜನೆಗಳ ಕುರಿತು ಚರ್ಚಿಸಿದರು.

ಪ್ರಮುಖ ಸಿಇಒಗಳನ್ನು ಭೇಟಿಯಾದ ಮೋದಿ

ಪ್ಯಾರಿಸ್: ಪ್ರಧಾನಮಂತ್ರಿ ನರೇಂದ್ರ ಮೋದಿ, ಗುರುವಾರ, ಇಲ್ಲಿನ ಪ್ರಮುಖ ಉದ್ಯಮಿಗಳನ್ನು ಭೇಟಿ ಮಾಡಿ, ಭಾರತದಲ್ಲಿನ ಹೂಡಿಕೆ ಅವಕಾಶಗಳು ಮತ್ತು ವಿಸ್ತರಣಾ ಯೋಜನೆಗಳ ಕುರಿತು ಚರ್ಚೆ ನಡೆಸಿದರು. ಹಡಗು ಸಾಗಣೆ, ಲಾಜಿಸ್ಟಿಕ್ಸ್, ರೈಲ್ವೆ ನಿರ್ಮಾಣ ಮತ್ತು ಕೃತಕ ಬುದ್ಧಿಮತ್ತೆ (ಎಐ) ಕ್ಷೇತ್ರಗಳಲ್ಲಿ ಸಹಕಾರವನ್ನು ಬಲಪಡಿಸುವ ಕುರಿತು ಈ ಮಾತುಕತೆಗಳು ನಡೆದವು ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಸೇಂಟ್-ಗೋಬೈನ್ ಅಧ್ಯಕ್ಷ ಮತ್ತು ಸಿಇಒ ಬೆನೈಟ್ ಬಾಜಿನ್ ಅವರೊಂದಿಗೆ ಸುಸ್ಥಿರತೆ ಹಾಗೂ ನಿರ್ಮಾಣ ವಲಯದ ಅವಕಾಶಗಳ ಕುರಿತು ಮಾತನಾಡಿದರು. ಹಾಗೆಯೇ, ಮಿಸ್ಟ್ರಲ್ ಎಐ ಸಹ-ಸಂಸ್ಥಾಪಕ ಮತ್ತು ಸಿಇಒ ಆರ್ಥರ್ ಮೆನ್ಶ್ ಅವರನ್ನೂ ಭೇಟಿಯಾದರು. ಮೋದಿ, ಫ್ರೆಂಚ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರಾನ್ ಅವರೊಂದಿಗೆ ವಿವಾಟೆಕ್ 2026 ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಅಧಿಕಾರಿ ವರ್ಗಕ್ಕೆ ಮೋದಿ, ಟ್ರಂಪ್ ನಿರ್ದೇಶನ

ಒಪ್ಪಂದ ತ್ವರಿತಗೊಳಿಸಲು ಕರೆ

ಎವಿಯನ್-ಲೆಸ್-ಬೈನ್ಸ್ (ಫ್ರಾನ್ಸ್): ಆದಷ್ಟು ಶೀಘ್ರ ಸಮತೋಲಿತ , ಪರಸ್ಪರ ಪ್ರಯೋಜನಕಾರಿ ಮತ್ತು ವಾಣಿಜ್ಯಿಕವಾಗಿ ಅರ್ಥಪೂರ್ಣವಾದ ವ್ಯಾಪಾರ ಒಪ್ಪಂದವನ್ನು ಸಿದ್ಧಪಡಿಸುವ ನಿಟ್ಟಿನಲ್ಲಿ ಕಾರ್ಯತತ್ಪರರಾಗುವಂತೆ, ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ಅಧಿಕಾರಿವರ್ಗಕ್ಕೆ ನಿರ್ದೇಶವಿತ್ತಿದ್ದಾರೆ.

16 ತಿಂಗಳ ನಂತರ ಪ್ರಪ್ರಥಮ ಬಾರಿ ಉಭಯ ನಾಯಕರು, ನಲುಗಿರುವ ತಮ್ಮ ದ್ವಿಪಕ್ಷೀಯ ಬಾಂಧವ್ಯಗಳನ್ನು ಮತ್ತೆ ಬಲಪಡಿಸುವ ನಿಟ್ಟಿನಲ್ಲಿ ಜಿ7ಶೃಂಗಸಭೆ ಸಂದರ್ಭ ವ್ಯಾಪಕ ಸುತ್ತಿನ ಮಾತುಕತೆ ನಡೆಸಿದ್ದರು. ಈ ವಿದ್ಯಮಾನದ ಮರುದಿನ ಗುರುವಾರ ಭಾರತದ ವಿದೇಶ ವ್ಯವಹಾರಗಳ ಖಾತೆ ಪ್ರಸ್ತುತ ಮಾಹಿತಿ ನೀಡಿದೆ. ಪ್ರಸ್ತಾವಿತ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿ ಮಾತುಕತೆ ಮುನ್ನಡೆಸಲು ಅಮೆರಿಕದ ವಾಣಿಜ್ಯ ಪ್ರತಿನಿಧಿ ಜಮೈಸನ್ ಗ್ರೀರ್ ಮುಂದಿನ ವಾರ ಭಾರತಕ್ಕೆ ಭೇಟಿ ನೀಡಲಿದ್ದಾರೆ.

ಮರುಸಂಕಲ್ಪ : ಭಾರತ-ಅಮೆರಿಕ ನಡುವಣ ಸಮಗ್ರ ಜಾಗತಿಕ ವ್ಯೂಹಾತ್ಮಕ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸುವ ಸಂಕಲ್ಪವನ್ನು ಪ್ರಧಾನಿ ಮೋದಿ ,ಅಧ್ಯಕ್ಷ ಟ್ರಂಪ್ ಮಾತುಕತೆ ಸಂದರ್ಭ ಮರುದೃಢೀಕರಿಸಿದ್ದಾರೆ ಮತ್ತು ಉಭಯ ರಾಷ್ಟ್ರಗಳು ಹಾಗೂ ತಮ್ಮ ಜನರಿಗೆ ಪರಸ್ಪರ ಪ್ರಯೋಜನಕಾರಿಯಾಗುವಂತೆ ಎಲ್ಲಾ ರಂಗಗಳಲ್ಲೂ ಸಹಕಾರ ವಿಸ್ತರಿಸಲು ಮರುಸಂಕಲ್ಪ ಮಾಡಿದ್ದಾರೆ.

ಮಾತುಕತೆಯಲ್ಲಿ ಪ್ರಗತಿ ಬಗ್ಗೆ ಸಂತೃಪ್ತಿ: ಮಧ್ಯಂತರ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ ನಿಟ್ಟಿನಲ್ಲಿ ನಡೆದ ಮಾತುಕತೆಯಲ್ಲಾಗಿರುವ ಮಹತ್ವದ ಪ್ರಗತಿಯನ್ನು ಉಭಯ ನಾಯಕರು ಸಂತೃಪ್ತಿಯೊಂದಿಗೆ ಗುರುತಿಸಿದ್ದಾರೆ ಮತ್ತು ಆದಷ್ಟು ಶೀಘ್ರ ಸಮತೋಲಿತ , ಪರಸ್ಪರ ಪ್ರಯೋಜನಕಾರಿ ಹಾಗೂ ವಾಣಿಜ್ಯಿಕವಾಗಿ ಅರ್ಥಪೂರ್ಣ ಒಪ್ಪಂದವನ್ನು ಹೊಂದುವ ನಿಟ್ಟಿನಲ್ಲಿ ಕಾರ್ಯತತ್ಪರರಾಗುವಂತೆ ತಮ್ಮ ಅಧಿಕಾರಿಗಳಿಗೆ ನಿರ್ದೇಶವಿತ್ತಿರುವುದಾಗಿ ವಿದೇಶ ವ್ಯವಹಾರಗಳ ಖಾತೆ ಹೇಳಿಕೆಯಲ್ಲಿ ತಿಳಿಸಿದೆ. ಪ್ರಸ್ತಾವಿತ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿ ಇತ್ತಂಡಗಳು ಈಗಾಗಲೆ ಸರಣಿ ಮಾತುಕತೆ ನಡೆಸಿವೆ.

ಭಾರತದ ಚೊಚ್ಚಲ 8 ಪಥದ ರಸ್ತೆ ಸುರಂಗ



ದಿಲ್ಲಿಮುಂಬೈ ಎಕ್ಸ್‌ಪ್ರೆಸ್‌ವೇ ಯೋಜನೆಯ ಕೊನೆಯ ಕೊಂಡಿ ರಾಜಸ್ಥಾನದ ಮುಕುಂದ್ರಾ ಹಿಲ್ಸ್ ಹುಲಿ ಸಂರಕ್ಷಿತ ಪ್ರದೇಶದಡಿ ನಿರ್ಮಿಸಲಾದ 4.9 ಕಿಮೀ ಉದ್ದದ ಸುರಂಗ ಮಾರ್ಗ ಜೂ.20ರಂದು ಉದ್ಘಾಟನೆಯಾಗಲಿದ್ದು, ಇದರೊಂದಿಗೆ ಸಂಪೂರ್ಣ ಎಕ್ಸ್‌ಪ್ರೆಸ್‌ವೇ ಕಾರ್ಯಾಚರಣೆಗೆ ಸಜ್ಜಾಗಲಿದೆ. ಆ ಕುರಿತ ವಿವರ ಇಲ್ಲಿದೆ.

12 ಗಂಟೆಗಳಲ್ಲಿ ದಿಲ್ಲಿಯಿಂದ ಮುಂಬೈ

ಎಕ್ಸ್‌ಪ್ರೆಸ್‌ವೇ ಸಂಪೂರ್ಣವಾಗಿ ಕಾರ್ಯಾರಂಭಿಸಿದ ಬಳಿಕ ದಿಲ್ಲಿ ಮತ್ತು ಮುಂಬೈ ನಡುವಿನ ರಸ್ತೆ ಪ್ರಯಾಣದ ಅವಧಿ ಗಣನೀಯವಾಗಿ ಕಡಿಮೆಯಾಗಲಿದೆ. ಪ್ರಸ್ತುತ ಈ ಎರಡು ಮಹಾನಗರಗಳ ನಡುವಿನ ರಸ್ತೆ ಪ್ರಯಾಣಕ್ಕೆ 24 ಗಂಟೆಗಳಿಗಿಂತ ಹೆಚ್ಚು ಸಮಯ ಬೇಕಾಗುತ್ತದೆ. ಆದರೆ ಹೊಸ ಎಕ್ಸ್‌ಪ್ರೆಸ್‌ವೇ ಮೂಲಕ ಈ ಪ್ರಯಾಣದ ಅವಧಿ ಸುಮಾರು 12 ಗಂಟೆಗಳಿಗೆ ಇಳಿಯಲಿದೆ. 120 ಕಿಮೀ ಪ್ರತಿ ಗಂಟೆ ವೇಗದವರೆಗೆ ಸಂಚಾರಕ್ಕೆ ಅನುಕೂಲವಾಗುವಂತೆ ಈ ನಿಯಂತ್ರಿತ ಪ್ರವೇಶದ ಹೆದ್ದಾರಿಯನ್ನು ನಿರ್ಮಿಸಲಾಗಿದೆ. ಸ್ಥಳೀಯ ರಸ್ತೆಗಳು, ಮಿಶ್ರ ವಾಹನ ಸಂಚಾರ ಮತ್ತು ಇತರ ಅಡಚಣೆಗಳನ್ನು ಕಡಿಮೆ ಮಾಡುವ ಮೂಲಕ ವೇಗದ ಹಾಗೂ ನಿರಂತರ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ. ಇದರಿಂದ ದೂರದ ಪ್ರಯಾಣ ಮಾಡುವ ಪ್ರಯಾಣಿಕರು ಹಾಗೂ ಸರಕು ಸಾಗಣೆ ವಲಯಕ್ಕೆ ಮಹತ್ತರ ಲಾಭವಾಗುವ ನಿರೀಕ್ಷೆಯಿದೆ.



ಭವಿಷ್ಯದ ಅಗತ್ಯಗಳಿಗೆ ಸಿದ್ಧತೆ

ಈ ಎಕ್ಸ್‌ಪ್ರೆಸ್‌ವೇಯನ್ನು ಭವಿಷ್ಯದ ವಾಹನ ಸಂಚಾರದ ಪ್ರಮಾಣವನ್ನು ಗಮನದಲ್ಲಿಟ್ಟುಕೊಂಡು ವಿನ್ಯಾಸಗೊಳಿಸಲಾಗಿದೆ. ಪ್ರಸ್ತುತ ಎಂಟು ಪಥಗಳಿರುವ ರಸ್ತೆ ಅಗತ್ಯವಿದ್ದಲ್ಲಿ 12 ಪಥಗಳಿಗೆ ವಿಸ್ತರಿಸಲು ಸಾಧ್ಯವಾಗುವಂತೆ ಮಧ್ಯಭಾಗವನ್ನು ವಿನ್ಯಾಸಗೊಳಿಸಲಾಗಿದೆ. ಇದರಿಂದ ಭವಿಷ್ಯದಲ್ಲಿ ಹೆಚ್ಚುವ ವಾಹನ ಸಂಚಾರವನ್ನು ನಿರ್ವಹಿಸಲು ಅನುಕೂಲವಾಗಲಿದೆ.

ಪರಿಸರ ಸ್ನೇಹಿ ವಿನ್ಯಾಸ

ಎಕ್ಸ್‌ಪ್ರೆಸ್‌ವೇ ಯೋಜನೆಯಲ್ಲಿ ಪರಿಸರ ಸಂರಕ್ಷಣೆಗೆ ವಿಶೇಷ ಆದ್ಯತೆ ನೀಡಲಾಗಿದೆ. ಯೋಜನೆಯ ಭಾಗವಾಗಿ 20 ಲಕ್ಷ ಮರಗಳನ್ನು ನೆಡುವ ಗುರಿ ಹೊಂದಲಾಗಿದೆ. ವನ್ಯಜೀವಿಗಳ ಸುರಕ್ಷಿತ ಸಂಚಾರಕ್ಕಾಗಿ ಒಟ್ಟು 2.5 ಕಿಮೀ ಉದ್ದದ ವಿಶೇಷ ಕ್ರಾಸಿಂಗ್ ವ್ಯವಸ್ಥೆಗಳನ್ನು ರೂಪಿಸಲಾಗಿದೆ. ಪ್ರತಿ 500 ಮೀಟರ್‌ಗಳಿಗೆ ಮಳೆನೀರು ಸಂಗ್ರಹ ವ್ಯವಸ್ಥೆ ಹಾಗೂ ಮರಗಳ ನಿರ್ವಹಣೆಗೆ ಡ್ರಿಪ್ ನೀರಾವರಿ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಮುಕುಂದ್ರಾ ಹಿಲ್ಸ್ ಹುಲಿ ಸಂರಕ್ಷಿತ ಪ್ರದೇಶದಡಿ ಸುರಂಗ ನಿರ್ಮಾಣವೂ ಪರಿಸರ ಸಂರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು ಕೈಗೊಳ್ಳಲಾದ ಪ್ರಮುಖ ಕ್ರಮವಾಗಿದೆ.

ಸಂಕೀರ್ಣ ಎಂಜಿನಿಯರಿಂಗ್ ಸಾಧನೆ

ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಪ್ರಕಾರ, ಮುಕುಂದ್ರಾ ಹಿಲ್ಸ್ ಪ್ರದೇಶ, ತಾಂತ್ರಿಕವಾಗಿ ಎಕ್ಸ್‌ಪ್ರೆಸ್‌ವೇ ಯೋಜನೆಯಲ್ಲೇ ಅತ್ಯಂತ ಸಂಕೀರ್ಣ ಹಾಗೂ ಪರಿಸರದ ದೃಷ್ಟಿಯಿಂದ ಸವಾಲಿನ ಭಾಗವೆಂದು ಪರಿಗಣಿಸಲಾಗಿತ್ತು. ಹುಲಿ ಸಂರಕ್ಷಿತ ಪ್ರದೇಶದೊಳಗೆ ಸಾಮಾನ್ಯ ಮೇಲ್ಮೈ ರಸ್ತೆ ನಿರ್ಮಿಸಲು ಸಾಧ್ಯವಾಗದ ಕಾರಣ, ಎಂಜಿನಿಯರ್‌ಗಳು ಭೂಗರ್ಭ ಸುರಂಗ ಮಾರ್ಗವನ್ನು ಆಯ್ಕೆ ಮಾಡಿದ್ದರು. ಈ ವಿನ್ಯಾಸದಿಂದ ಮೇಲ್ಭಾಗದಲ್ಲಿರುವ ವನ್ಯಜೀವಿಗಳಿಗೆ ಯಾವುದೇ ತೊಂದರೆಯಾಗುವುದಿಲ್ಲ, ಅಧಿಕಾರಿಗಳ ಹೇಳಿಕೆಯಂತೆ, ವಾಹನಗಳು ಹೆಚ್ಚಿನ ವೇಗದಲ್ಲಿ ಸಂಚರಿಸಿದರೂ ಮೇಲಿನ ಪರಿಸರ ವ್ಯವಸ್ಥೆಗೆ ಅಡ್ಡಿಯಾಗದಂತೆ ಈ ಸುರಂಗವನ್ನು ವಿನ್ಯಾಸಗೊಳಿಸಲಾಗಿದೆ.

ಆರ್ಥಿಕ ಚಟುವಟಿಕೆಗೆ ಉತ್ತೇಜನ

ಭಾರತದ ಅತ್ಯಂತ ಬ್ಯುಸಿ ಸರಕು ಸಾಗಣೆ ಮಾರ್ಗಗಳಲ್ಲಿ ಒಂದಾದ ಈ ಕಾರಿಡಾರ್‌ನಲ್ಲಿ ಲಾಜಿಸ್ಟಿಕ್ಸ್ ವೆಚ್ಚ ಕಡಿಮೆಯಾಗುವ ನಿರೀಕ್ಷೆಯಿದೆ. ರಾಜಸ್ಥಾನ, ಗುಜರಾತ್ ಮತ್ತು ಮಹಾರಾಷ್ಟ್ರ ಸೇರಿದಂತೆ ಹಲವು ರಾಜ್ಯಗಳ ಕೈಗಾರಿಕೆಗಳು, ವ್ಯಾಪಾರ ಹಾಗೂ ಪ್ರವಾಸೋದ್ಯಮ ಕ್ಷೇತ್ರಗಳಿಗೆ ಇದರ ಪ್ರಯೋಜನ ದೊರೆಯಲಿದೆ. ರಸ್ತೆಯ ಸಮೀಪದ ಕೋಟಾ, ರತ್ಲಾಮ್ ಮತ್ತು ಭರುಚ್ ನಗರಗಳಲ್ಲಿ ಆರ್ಥಿಕ ಚಟುವಟಿಕೆಗಳು ಹೆಚ್ಚಾಗುವ ಸಾಧ್ಯತೆಯಿದೆ. ಉತ್ತಮ ಸಂಪರ್ಕ ವ್ಯವಸ್ಥೆಯಿಂದ ಹೊಸ ಹೂಡಿಕೆಗಳಿಗೆ ಅವಕಾಶ ಸೃಷ್ಟಿಯಾಗಲಿದ್ದು, ಪ್ರಾದೇಶಿಕ ಅಭಿವೃದ್ಧಿಗೂ ವೇಗ ಸಿಗುವ ನಿರೀಕ್ಷೆ ವ್ಯಕ್ತವಾಗಿದೆ.

ವಿಮಾನ ನಿಲ್ದಾಣ ಮತ್ತು ಬಂದರುಗಳಿಗೆ ನೇರ ಸಂಪರ್ಕ



ಈ ಎಕ್ಸ್‌ಪ್ರೆಸ್‌ವೇ ಉತ್ತರ ಪ್ರದೇಶದ ಜೇವರ್ ವಿಮಾನ ನಿಲ್ದಾಣ ಹಾಗೂ ಮಹಾರಾಷ್ಟ್ರದ ನವಿ ಮುಂಬೈ ವಿಮಾನ ನಿಲ್ದಾಣಗಳಿಗೆ ನೇರ ಸಂಪರ್ಕ ಕಲ್ಪಿಸಲಿದೆ. ಇದೇ ವೇಳೆ ಇದು ಜವಾಹರಲಾಲ್ ನೆಹರೂ ಪೋರ್ಟ್ ಟ್ರಸ್ಟ್‌ನಲ್ಲಿ ಅಂತ್ಯಗೊಳ್ಳಲಿದೆ. ಇದರಿಂದ ರಸ್ತೆ, ವಾಯು ಮತ್ತು ಸಮುದ್ರ ಸಾರಿಗೆ ವ್ಯವಸ್ಥೆಗಳ ನಡುವೆ ನೇರ ಸಂಪರ್ಕ ಸಾಧ್ಯವಾಗಲಿದೆ. ಪ್ರಯಾಣಿಕರ ಸಂಚಾರ ಹಾಗೂ ಸರಕು ಸಾಗಣೆಯನ್ನು ಹೆಚ್ಚು ವೇಗವಾಗಿ ಮತ್ತು ಪರಿಣಾಮಕಾರಿಯಾಗಿ ನಡೆಸಲು ಈ ಸಂಪರ್ಕಗಳು ನೆರವಾಗಲಿವೆ. ವ್ಯಾಪಾರ ಮತ್ತು ಪ್ರವಾಸೋದ್ಯಮ ಕ್ಷೇತ್ರಗಳಿಗೂ ಇದು ಉತ್ತೇಜನ ನೀಡುವ ನಿರೀಕ್ಷೆಯಿದೆ.

ಹುಲಿ ಸಂರಕ್ಷಿತ ಪ್ರದೇಶದಡಿ ನಿರ್ಮಾಣ

ರಾಜಸ್ಥಾನದ ಮುಕುಂದ್ರಾ ಹಿಲ್ಸ್ ಟೈಗರ್ ರಿಸರ್ವ್ ಅಡಿಯಲ್ಲಿ ನಿರ್ಮಿಸಲಾದ 4.9 ಕಿಮೀ ಉದ್ದದ ಜೋಡಿ ಸುರಂಗ ಮಾರ್ಗ ದಿಲ್ಲಿಮುಂಬೈ ಎಕ್ಸ್‌ಪ್ರೆಸ್‌ವೇಯ ಕೊನೆಯ ಬಾಕಿ ಉಳಿದ ಭಾಗವಾಗಿತ್ತು. ಜೂ.20ರಂದು ಇದು ಸಾರ್ವಜನಿಕ ಸಂಚಾರಕ್ಕೆ ತೆರೆಯಲಿದ್ದು, ಇದರೊಂದಿಗೆ 1,386 ಕಿಮೀ ಉದ್ದದ ದಿಲ್ಲಿಮುಂಬೈ ಎಕ್ಸ್‌ಪ್ರೆಸ್‌ವೇ ಸಂಪೂರ್ಣವಾಗಿ ಕಾರ್ಯಾರಂಭ ಮಾಡಲಿದೆ. ಈ ಸುರಂಗ ಭಾರತದ ಮೊದಲ ಎಂಟು ಪಥಗಳ ರಸ್ತೆ ಸುರಂಗ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಹುಲಿ ಸಂರಕ್ಷಿತ ಪ್ರದೇಶದ ಮೇಲ್ಭಾಗದಲ್ಲಿರುವ ವನ್ಯಜೀವಿಗಳ ಸಂಚಾರಕ್ಕೆ ಯಾವುದೇ ಅಡ್ಡಿಯಾಗದಂತೆ ಇದನ್ನು ಭೂಗರ್ಭದಲ್ಲಿ ನಿರ್ಮಿಸಲಾಗಿದೆ. ಇದರಿಂದ ವಾಹನಗಳು ತಿರುವು-ಮುರುವುಗಳಿರುವ ಬೆಟ್ಟದ ರಸ್ತೆಯನ್ನು ತಪ್ಪಿಸಿ ವೇಗವಾಗಿ ಸಂಚರಿಸಲು ಸಾಧ್ಯವಾಗುತ್ತದೆ.

ಕಿರುಸುದ್ದಿ

ಶಿರಡಿ ಸಾಯಿ ದೇಗುಲಕ್ಕೆ ₹660 ಕೋಟಿ ದೇಣಿಗೆ



ಮುಂಬೈ: ಮಹಾರಾಷ್ಟ್ರದ ಸಾಯಿಬಾಬಾ ದೇವಾಲಯಕ್ಕೆ 2025-26ರಲ್ಲಿ ನಗದು, ಡಿಜಿಟಲ್ ಮತ್ತು ವಸ್ತು ರೂಪದಲ್ಲಿ ಭಕ್ತರು ಸುಮಾರು 660 ಕೋಟಿ ರೂ. ದೇಣಿಗೆ ನೀಡಿದ್ದಾರೆ ಎಂದು ಶಿರಡಿ ಸಾಯಿಬಾಬಾ ಸಂಸ್ಥಾನವು ಹೇಳಿದೆ. ಇದರ ಜತೆಗೆ ಸಂಸ್ಥಾನದ ಸ್ಥಿರ ಠೇವಣಿಗಳು 3,618 ಕೋಟಿ ರೂ.ಗಳಷ್ಟಿದ್ದು, ಇದರ ಬಡ್ಡಿಯಿಂದ 256 ಕೋಟಿ ರೂ.ಗಳ ಆದಾಯವನ್ನು ಗಳಿಸಿದೆ ಎಂದು ಸಂಸ್ಥಾನದ ಸಿಇಒ ಗೋರಕ್ಷ ಗಾಡಿಲ್ಕರ್ ಹೇಳಿದ್ದಾರೆ. ಸಾಯಿ ಸಂಸ್ಥಾನದ ಆಸ್ಪತ್ರೆಗಳಿಗೆ ಭಕ್ತರು 15-20 ಕೋಟಿ ರೂ.ಗಳವರೆಗೆ ಆಧುನಿಕ ವೈದ್ಯಕೀಯ ಉಪಕರಣಗಳನ್ನು ದಾನ ಮಾಡಿದ್ದಾರೆ. ಒಟ್ಟು ಸುಮಾರು 660 ಕೋಟಿ ರೂ.ಗಳಷ್ಟು ಕೊಡುಗೆ ನೀಡಿದ್ದಾರೆ ಎಂದು ಗಾಡಿಲ್ಕರ್ ಮಾಹಿತಿ ನೀಡಿದ್ದಾರೆ. ವಿದೇಶಗಳಲ್ಲಿರುವ ಸಾಯಿ ಭಕ್ತರು ಸುಮಾರು 4.89 ಕೋಟಿ ರೂ. ಮೌಲ್ಯದ ವಿದೇಶಿ ಕರೆನ್ಸಿಯನ್ನು ನೀಡಿದ್ದು, 39.55 ಕೋಟಿ ರೂ. ಆದಾಯವು ದರ್ಶನ ಮತ್ತು ಆರತಿ ಶುಲ್ಕದಿಂದ ಬಂದಿದೆ.

ಸ್ವದೇಶಿ ಏರ್ ಕುಷನ್ ವೆಹಿಕಲ್ ಸೇರ್ಪಡೆ

ಹೊಸದಿಲ್ಲಿ: ದೇಶದ ಮೊದಲ ಸ್ಥಳೀಯವಾಗಿ ನಿರ್ಮಿಸಲಾದ ಏರ್ ಕುಷನ್ ವೆಹಿಕಲ್ (ಎಸಿವಿ), ಎಚ್-561 ಅನ್ನು ಗೋವಾದ ಚೌಗುಲೆ ಕಂಪನಿ ಪ್ರೈವೇಟ್ ಲಿಮಿಟೆಡ್‌ನ ಶಿಪ್‌ಯಾರ್ಡ್ ಸೌಲಭ್ಯದಲ್ಲಿ ಗುರುವಾರ ಔಪಚಾರಿಕವಾಗಿ ಸೇವೆಗೆ ಸೇರ್ಪಡೆ ಮಾಡಲಾಗಿದೆ. ಇದು ಭಾರತದ ಸ್ಥಳೀಯ ಕಡಲ ಸಾಮರ್ಥ್ಯಗಳಿಗೆ ಗಮನಾರ್ಹ ಉತ್ತೇಜನ ನೀಡುತ್ತದೆ. ಎಚ್-561 ಭಾರತದ ರಕ್ಷಣಾ ಉತ್ಪಾದನಾ ವಲಯಕ್ಕೆ ಒಂದು ಮೈಲಿಗಲ್ಲಾಗಿದೆ. ಆತ್ಮನಿರ್ಭರ ಭಾರತ ಯೋಜನೆಯಲ್ಲಿ ರಕ್ಷಣಾ ಉತ್ಪಾದನೆಯಲ್ಲಿ ಸ್ವಾವಲಂಬನೆಗಾಗಿ ಸರ್ಕಾರದ ಪ್ರಯತ್ನದೊಂದಿಗೆ ಇದು ಬಲ ನೀಡುತ್ತದೆ.

ರಷ್ಯಾ ಮೇಲೆ ಡ್ರೋನ್ ದಾಳಿ ನಡೆಸಿದ ಉಕ್ರೇನ್



ಮಾಸ್ಕೋ: ರಷ್ಯಾ ರಾಜಧಾನಿಯಾದ ಮಾಸ್ಕೋ ನಗರದಲ್ಲಿರುವ ಪ್ರಮುಖ ತೈಲ ಸಂಸ್ಕರಣಾ ಘಟಕದ ಮೇಲೆ ಉಕ್ರೇನ್ ಭೀಕರ ಡ್ರೋನ್ ದಾಳಿಯನ್ನು ಗುರುವಾರ ನಡೆಸಿದೆ. ದಾಳಿಯಲ್ಲಿ 17 ಮಂದಿಗೆ ಗಾಯಗಳಾಗಿವೆ ಎಂದು ರಷ್ಯಾ ಮಹಿತಿ ನೀಡಿದೆ. ಇದನ್ನು ಕಳೆದ ಎರಡು ವರ್ಷಗಳಲ್ಲಿ ನಡೆದ ಅತಿದೊಡ್ಡ ಡ್ರೋನ್ ದಾಳಿ ಎಂದು ರಷ್ಯಾ ಹೇಳಿದೆ.

ಇಪಿಎಫ್ ಬಡ್ಡಿ ದರ ಶೇ. 8.25ಕ್ಕೆ ಅನುಮೋದನೆ

ಹೊಸದಿಲ್ಲಿ: ನೌಕರರ ಭವಿಷ್ಯ ನಿಧಿ (ಇಪಿಎಫ್) ಠೇವಣಿಗಳ ಮೇಲಿನ ಬಡ್ಡಿ ದರವನ್ನು 2025-26ನೇ ಸಾಲಿಗೆ ಶೇ 8.25 ರಷ್ಟು ಕಾಯ್ದುಕೊಳ್ಳಲು ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ಈ ಬಡ್ಡಿಯನ್ನು ಪ್ರಸಕ್ತ ತಿಂಗಳಿನಲ್ಲೇ ಏಳು ಕೋಟಿಗೂ ಹೆಚ್ಚು ಸದಸ್ಯರ ಖಾತೆಗಳಿಗೆ ಜಮೆ ಮಾಡುವ ಸಾಧ್ಯತೆಯಿದೆ ಎಂದು ಗುರುವಾರ ಮೂಲಗಳು ತಿಳಿಸಿವೆ. ಭಾರತ ಸರ್ಕಾರ ಇಪಿಎಫ್‌ನ ಗ್ಯಾರಂಟರ್ ಆಗಿರುವುದರಿಂದ ಈ ಪ್ರಸ್ತಾವನೆಯನ್ನು ಹಣಕಾಸು



ಸಚಿವಾಲಯದ ಒಪ್ಪಿಗೆಗೆ ಕಳುಹಿಸಲಾಗಿತ್ತು. ಉದ್ಯೋಗಿಗಳ ಭವಿಷ್ಯ ನಿಧಿ ಸಂಸ್ಥೆಯ (ಇಪಿಎಫ್‌ಒ) ಕೇಂದ್ರ ವಿಶ್ವಸ್ತ ಮಂಡಳಿ (ಸಿಬಿಟಿ) ನಿಗದಿಪಡಿಸಿದ್ದ ಈ ದರಕ್ಕೆ ಹಣಕಾಸು ಸಚಿವಾಲಯ ಸಮ್ಮತಿ ಸೂಚಿಸಿದೆ. ಕೇಂದ್ರ ಕಾರ್ಮಿಕ ಸಚಿವ ಮನ್ಸೂಖ್ ಮಾಂಡವಿಯಾ ನೇತೃತ್ವದಲ್ಲಿ 2026ರ ಮಾ.2 ರಂದು ನಡೆದ ಸಿಬಿಟಿ ಸಭೆಯಲ್ಲಿ, 2025-26ರ ಹಣಕಾಸು ವರ್ಷಕ್ಕೆ ಶೇ 8.25 ರಷ್ಟು ಬಡ್ಡಿ ದರವನ್ನು ನಿಗದಿಪಡಿಸಲು ನಿರ್ಧರಿಸಲಾಗಿತ್ತು. ಈ ದರವನ್ನು ಸತತ ಮೂರನೇ ವರ್ಷವೂ ಮುಂದುವರಿಸಲಾಗಿದೆ. ಇಪಿಎಫ್‌ಒ ಅಭಿವೃದ್ಧಿಪಡಿಸಿರುವ ಹೊಸ ವ್ಯವಸ್ಥೆಯಲ್ಲಿ, ಈ ತಿಂಗಳಲ್ಲೇ ಚಂದಾದಾರರ ಖಾತೆಗಳಿಗೆ ಬಡ್ಡಿ ತಕ್ಷಣವೇ ಜಮೆಯಾಗಲಿದೆ.

ಹಿಂದಿನ ದರಗಳು: ಸಂಸ್ಥೆ, 2024-25ರ ಹಣಕಾಸು ವರ್ಷದಲ್ಲೂ ಶೇ 8.25 ರಷ್ಟು ಬಡ್ಡಿ ದರವನ್ನು ಕಾಯ್ದುಕೊಂಡಿತ್ತು. 2022-23ರಲ್ಲಿ ಶೇ 8.15ರಷ್ಟಿದ್ದ ಬಡ್ಡಿ ದರವನ್ನು 2023-24ರಲ್ಲಿ ಶೇ 8.25 ಕ್ಕೆ ಏರಿಸಲಾಗಿತ್ತು.

ವದಂತಿಗೆ ಕಿವಿಗೊಡದಿರಿ: ಅಭ್ಯರ್ಥಿಗಳಿಗೆ ಮನವಿ

ಹೊಸದಿಲ್ಲಿ: ಮರು ಪರೀಕ್ಷೆಗೂ ಮುನ್ನ ವದಂತಿಗಳಿಗೆ ಕಿವಿಗೊಡದೆ ಶಾಂತವಾಗಿರಲು ನೀಟ್-ಯುಜಿ ಅಭ್ಯರ್ಥಿಗಳಿಗೆ ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ (ಎನ್‌ಟಿಎ) ಮನವಿ ಮಾಡಿದೆ. ಸುರಕ್ಷಿತ, ಸುರಕ್ಷಿತ ಮತ್ತು ನ್ಯಾಯಯುತ ಪರೀಕ್ಷೆಯನ್ನು ಖಚಿತಪಡಿಸಿಕೊಳ್ಳಲು ವ್ಯಾಪಕ ವ್ಯವಸ್ಥೆಗಳನ್ನು ಮಾಡಲಾಗಿದೆ ಎಂದು ಎನ್‌ಟಿಎ ಭರವಸೆ ನೀಡಿದೆ. ಎಕ್ಸ್‌ನಲ್ಲಿ ಸಂದೇಶವೊಂದರಲ್ಲಿ, ಎನ್‌ಟಿಎ



ಭಾನುವಾರ ನಿಗದಿಯಂತೆ ಮರುಪರೀಕ್ಷೆಯನ್ನು ನಡೆಸಲಾಗುವುದು ಎಂದು ಹೇಳಿದೆ. ಮುಂದೂಡುವ ವದಂತಿಗಳು ಮತ್ತು ಸಾಮಾಜಿಕ ಮಾಧ್ಯಮದಲ್ಲಿನ ವರದಿಗಳಿಗೆ ಕಿವಿಗೊಡದಂತೆ ಅಭ್ಯರ್ಥಿಗಳನ್ನು ಕೇಳಿಕೊಂಡಿದೆ. ಎನ್‌ಟಿಎಯ ಅಧಿಕೃತ ಸಂವಹನವನ್ನು ಮಾತ್ರ ಅವಲಂಬಿಸಿ ಎಂದು ಹೇಳಿದೆ. ಸಂಬಂಧಿತ ಸಚಿವಾಲಯಗಳು, ರಾಜ್ಯ ಸರ್ಕಾರಗಳು ಮತ್ತು ಭದ್ರತಾ ಸಂಸ್ಥೆಗಳೊಂದಿಗೆ ನಿಕಟ ಸಮನ್ವಯದಲ್ಲಿ ಸುರಕ್ಷಿತ ಮತ್ತು ನ್ಯಾಯಯುತ ಪರೀಕ್ಷೆಗೆ ವ್ಯಾಪಕ ವ್ಯವಸ್ಥೆಗಳು ಜಾರಿಯಲ್ಲಿವೆ ಎಂದು ನಾವು ನಿಮಗೆ ಭರವಸೆ ನೀಡಲು ಬಯಸುತ್ತೇವೆ. ಈ ಪ್ರಕ್ರಿಯೆಯ ಸಮಗ್ರತೆಯು ನಮ್ಮ ಅತ್ಯುನ್ನತ ಆದ್ಯತೆಯಾಗಿದೆ ಮತ್ತು ದೃಢವಾದ, ಬಹು ಹಂತದ ಸುರಕ್ಷತಾ ಕ್ರಮಗಳನ್ನು ಜಾರಿಗೆ ತರಲಾಗಿದೆ ಎಂದು ಅದು ಹೇಳಿದೆ.

ಪ್ರಧಾನ್ ನೇತೃತ್ವದಲ್ಲಿ ಸಭೆ : ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ಅಧ್ಯಕ್ಷತೆಯಲ್ಲಿ ಗುರುವಾರ ಶಿಕ್ಷಣ ಸಚಿವಾಲಯ, ರಾಜ್ಯ ಸರ್ಕಾರಗಳು, ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳ ಹಿರಿಯ ಅಧಿಕಾರಿಗಳೊಂದಿಗೆ ಉನ್ನತ ಮಟ್ಟದ ಪರಿಶೀಲನಾ ಸಭೆ ನಡೆಯಿತು.

ಜಾರ್ಖಂಡ್, ಮಿಜೋರಾಂ: ಎನ್‌ಡಿಎಗೆ ಭರ್ಜರಿ ಗೆಲುವು

ರಾಂಚಿ: ಎನ್‌ಡಿಎ ಬೆಂಬಲಿತ ಜಾರ್ಖಂಡ್‌ನ ಸ್ವತಂತ್ರ ಅಭ್ಯರ್ಥಿ ಪರಿಮಲ್ ನಥವಾನಿ ಹಾಗೂ ಮಿಜೋರಾಂನ ಜೆಪಿಎಂ ಅಭ್ಯರ್ಥಿ ಕೆ.ಲಾಲ್ಟ್ಲುವಾಂಗ್‌ಕಿಮಾ ಗುರುವಾರ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ. ಇದರೊಂದಿಗೆ ಎನ್‌ಡಿಎ ರಾಜ್ಯಸಭಾ ಸೀಟುಗಳ ಸಂಖ್ಯೆ 154ಕ್ಕೇರಿದೆ. ಜಾರ್ಖಂಡ್ ರಾಜ್ಯಸಭಾ ಚುನಾವಣೆಯಲ್ಲಿ 28 ಮತಗಳನ್ನು ಪಡೆದ ಎನ್‌ಡಿಎ ಬೆಂಬಲಿತ ಸ್ವತಂತ್ರ ಅಭ್ಯರ್ಥಿ ಪರಿಮಲ್ ನಥವಾನಿ ಗೆಲುವು ಸಾಧಿಸಿದ್ದಾರೆ. ನಥವಾನಿ ಅವರು ಗೆಲ್ಲುತ್ತಿದ್ದಂತೆ ವಿಧಾನಸಭೆಯಲ್ಲಿ ಜೈ ಶ್ರೀರಾಮ್ ಘೋಷಣೆ ಕೂಗಲಾಯಿತು. ಇಂಡಿ ಕೂಟದ ಶಾಸಕರು ಪರಿಮಲ್ ಪರವಾಗಿ ಅಡ್ಡಮತದಾನ ಮಾಡಿದ್ದಾರೆಂದು ಹೇಳಲಾಗುತ್ತಿದೆ.

ಸ್ವತಂತ್ರ ಅಭ್ಯರ್ಥಿ ನಥವಾನಿ, 20 ಮತಗಳನ್ನು ಪಡೆದ ಕಾಂಗ್ರೆಸ್ ಅಭ್ಯರ್ಥಿ ಪ್ರಣವ್ ಝಾರನ್ನು ಸೋಲಿಸಿದ್ದಾರೆ. 30 ಮತಗಳನ್ನು ಪಡೆದ ಜೆಎಂಎಂ ಅಭ್ಯರ್ಥಿ ಬೈದ್ಯನಾಥ ರಾಮ್ ಇನ್ನೊಂದು ಸ್ಥಾನದಿಂದ ಆಯ್ಕೆಯಾಗಿದ್ದಾರೆ. ಬೈದ್ಯನಾಥ ಗೆಲುವು ನಿರೀಕ್ಷಿತ ಗೆಲುವಾಗಿತ್ತು. ಒಟ್ಟು 81 ಶಾಸಕರು ಮತ ಚಲಾಯಿಸಿದ್ದು, ಮೂರು ಮತಗಳು ಅಮಾನ್ಯವಾಗಿದ್ದವು. ನಥವಾನಿ 30 ಮತಗಳನ್ನು ಪಡೆದಿದ್ದರೂ, ಎರಡು ಮತಗಳು ಅಮಾನ್ಯಗೊಂಡಿದ್ದರಿಂದ ಅವರ ಮತಗಳ ಸಂಖ್ಯೆ 28ಕ್ಕೆ ಇಳಿದಿದ್ದವು. ಮಿಜೋರಾಂನಲ್ಲಿ ಝೋರಮ್ ಪೀಪಲ್ಸ್ ಮೂವ್ಮೆಂಟ್ (ಜೆಪಿಎಂ) ಅಭ್ಯರ್ಥಿ ಕೆ.ಲಾಲ್ಟ್ಲುವಾಂಗ್‌ಕಿಮಾ 36 ಚಲಾಯಿತ ಮತಗಳಲ್ಲಿ 26 ಮತಗಳನ್ನು ಪಡೆದು ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ. ಜೆಪಿಎಂ ಎನ್‌ಡಿಎ ಬೆಂಬಲಿತ ಪ್ರಾದೇಶಿಕ ಪಕ್ಷವಾಗಿದೆ. ರಾಜ್ಯಸಭೆಯಲ್ಲಿ 2/3 ಬಹುಮತ (164 ಸ್ಥಾನ) ಪಡೆಯುವ ಗುರಿಯನ್ನು ಎನ್‌ಡಿಎ ಸಮೀಪಿಸುತ್ತಿದೆ.

ವಿಪಕ್ಷ ನಾಯಕನ ಆಯ್ಕೆ ಪ್ರಕ್ರಿಯೆ ತಡೆಗೆ ಹೈ ನಕಾರ

ಕೋಲ್ಕತ್ತಾ: ಪಶ್ಚಿಮ ಬಂಗಾಳ ವಿಧಾನಸಭೆಯ ಸ್ಪೀಕರ್ ರತೀಂದ್ರ ಬೋಸ್, ತೃಣಮೂಲ ಕಾಂಗ್ರೆಸ್ (ಟಿಎಂಸಿ) ಭಿನ್ನಮತೀಯ ಬಣದ ಶಾಸಕ ರಿತಬ್ರತ ಬ್ಯಾನರ್ಜಿ ಅವರನ್ನು ವಿರೋಧ ಪಕ್ಷದ ನಾಯಕರನ್ನಾಗಿ (ಎಲ್‌ಒಪಿ) ನೇಮಕ ಮಾಡಿದ ನಿರ್ಧಾರಕ್ಕೆ ಮಧ್ಯಂತರ ತಡೆಯಾಜ್ಞೆ ನೀಡಲು ಕಲ್ಕತ್ತಾ ಹೈಕೋರ್ಟ್ ಗುರುವಾರ ನಿರಾಕರಿಸಿದೆ. ತಮ್ಮ ನಾಮನಿರ್ದೇಶನ ತಿರಸ್ಕಾರ ಮತ್ತು ಬ್ಯಾನರ್ಜಿ ನೇಮಕವನ್ನು ಪ್ರಶ್ನಿಸಿ ಟಿಎಂಸಿ ಶಾಸಕ ಶೋಭಂದೇಬ್ ಚಟ್ಟೋಪಾಧ್ಯಾಯ ಸಲ್ಲಿಸಿದ್ದ ಅರ್ಜಿಯ ಮಧ್ಯಂತರ ಪರಿಹಾರವನ್ನು ನ್ಯಾಯಮೂರ್ತಿ ಕೃಷ್ಣ ರಾವ್ ತಿರಸ್ಕರಿಸಿದ್ದಾರೆ. ಅಲ್ಲದೆ, ಈ ಪ್ರಕರಣದ ಮುಂದಿನ ವಿಚಾರಣೆಯನ್ನು ಜು.28 ಕ್ಕೆ ನಿಗದಿಪಡಿಸಿದ್ದಾರೆ. ರಾಜ್ಯ ವಿಧಾನಸಭೆಯ ಬಜೆಟ್ ಅಧಿವೇಶನ ಗುರುವಾರದಿಂದ ಆರಂಭವಾಗಿದ್ದು, ಜೂ.25ರಂದು ಮುಕ್ತಾಯಗೊಳ್ಳಲಿದೆ. ಸ್ಪೀಕರ್ ಬ್ಯಾನರ್ಜಿ ಅವರನ್ನು ಎಲ್‌ಒಪಿ ಆಗಿ, ಜಾವೇದ್ ಖಾನ್, ಸಂದೀಪನ್ ಸಹಾ, ಸಬೀನಾ ಯಾಸ್ಮಿನ್ ಮತ್ತು ಸಿಯುಲಿ ಸಹಾರನ್ನು ಉಪನಾಯಕರನ್ನಾಗಿ ಹಾಗೂ ಅಖ್ರುಜ್ಜಮಾನ್‌ರನ್ನು ಮುಖ್ಯ ಸಚೇತಕರನ್ನಾಗಿ ಅನುಮೋದಿಸಿದ್ದಾರೆ.

ಕೆಲವು ಅನುಮೋದನೆ ಸಿಗುವುದು ಬಾಕಿ: ಬ್ರಹ್ಮೋಸ್ ಸಿಇಒ ಜೈತೀರ್ಥ

ವಿಯೆಟ್ನಾಂ ಜತೆ ಬ್ರಹ್ಮೋಸ್ ರಫ್ತು ಒಪ್ಪಂದ

ನಾಗ್ಪುರ: ವಿಯೆಟ್ನಾಂನೊಂದಿಗಿನ ಬಹುನಿರೀಕ್ಷಿತ ಬ್ರಹ್ಮೋಸ್ ರಫ್ತು ಒಪ್ಪಂದ ಅಂತಿಮ ಹಂತವನ್ನು ತಲುಪಿದ್ದು, ಅನುಮೋದನೆ ಸಿಗುವುದಷ್ಟೇ ಬಾಕಿ. ಬ್ರಹ್ಮೋಸ್ ಹೊಸ ಆವೃತ್ತಿಗಳ ಕೆಲಸ ಪ್ರಗತಿಯಲ್ಲಿವೆ ಎಂದು ಬ್ರಹ್ಮೋಸ್ ಏರೋಸ್ಪೇಸ್ ಸಿಇಒ ಜೈತೀರ್ಥ ಜೋಷಿ ಗುರುವಾರ ಹೇಳಿದ್ದಾರೆ. ನಾಗ್ಪುರದಲ್ಲಿ ಸೋಲಾರ್ ಇಂಡಸ್ಟ್ರೀಸ್ ಇಂಡಿಯಾ ಲಿ. ಬ್ರಹ್ಮೋಸ್ ಕ್ಷಿಪಣಿ ಯೋಜನೆಗೆ ಅಗತ್ಯದ 100ನೇ ದೇಸಿ ಬೂಸ್ಟರ್‌ಗೆ ಚಾಲನೆ ನೀಡಿ ಜೋಷಿ ಮಾತನಾಡಿದ್ದಾರೆ. ಬೂಸ್ಟರ್, ಬ್ರಹ್ಮೋಸ್ ಕ್ಷಿಪಣಿಯಲ್ಲಿ ಬಳಸುವ ಪ್ರಮುಖ ಉಪಕರಣವಾಗಿದೆ. ರಕ್ಷಣಾ ಉತ್ಪಾದನೆಯಲ್ಲಿ ಆತ್ಮನಿರ್ಭರತೆ (ಸ್ವಾವಲಂಬನೆ) ಸಾಧಿಸುವಲ್ಲಿ ಬ್ರಹ್ಮೋಸ್ ಮೈಲಿಗಲ್ಲು ಯೋಜನೆಯಾಗಿದೆ.

ಈ ಹಿಂದೆ ಬೂಸ್ಟರ್‌ಗಳನ್ನು ರಷ್ಯಾದಿಂದ ಆಮದು ಮಾಡಿಕೊಳ್ಳುತ್ತಿದ್ದೆವು. ಈಗ ಅದನ್ನು ಭಾರತದಲ್ಲೇ ನಿರ್ಮಾಣ ಮಾಡುತ್ತಿದ್ದೇವೆ ಎಂದು ಜೋಷಿ ತಿಳಿಸಿದ್ದಾರೆ.



ಅಂತಿಮ ಹಂತದಲ್ಲಿ ವಿಯೆಟ್ನಾಂ ಒಪ್ಪಂದ: ವಿಯೆಟ್ನಾಂನೊಂದಿಗಿನ ಬ್ರಹ್ಮೋಸ್ ರಫ್ತು ಮಾತುಕತೆ ಬಹುತೇಕ ಅಂತಿಮ ಹಂತದಲ್ಲಿದೆ. ಒಪ್ಪಂದ ಅಂತಿಮಗೊಳ್ಳುವ ಮುನ್ನ ಕೆಲವು ಸಣ್ಣಪುಟ್ಟ ಅನುಮೋದನೆಗಳು ಸಿಗುವುದು ಬಾಕಿ ಇದೆ. ಹಲವು ಪೂರ್ವ ಮತ್ತು ಪಾಶ್ಚಿಮಾತ್ಯ ರಾಷ್ಟ್ರಗಳೊಂದಿಗೆ ಮಾತುಕತೆಯನ್ನು ನಡೆಸುತ್ತಿದ್ದೇವೆ. ಬ್ರಹ್ಮೋಸ್ ಸೂಪರ್ ಸೋನಿಕ್ ಕ್ಷಿಪಣಿಯನ್ನು ಖರೀದಿಸಲು ಹಲವು ರಾಷ್ಟ್ರಗಳು ಆಸಕ್ತಿ ತೋರಿಸಿವೆ. ಒಮ್ಮೆ ಸರ್ಕಾರಗಳ ಅನುಮೋದನೆ ಸಿಕ್ಕ ನಂತರ ನಾವು ಮುಕ್ತವಾಗಿ ಘೋಷಿಸಲಿದ್ದೇವೆ ಎಂದು ಸಿಇಒ ಜೈತೀರ್ಥ ಹೇಳಿದ್ದಾರೆ.

ಪ್ರಗತಿಯಲ್ಲಿ ಹೊಸ ಆವೃತ್ತಿಗಳ ಆವಿಷ್ಕಾರ

ಬ್ರಹ್ಮೋಸ್, ಬ್ರಹ್ಮೋಸ್ ಎನ್‌ಜಿ ರೀತಿಯಲ್ಲಿ ಬ್ರಹ್ಮೋಸ್‌ನ ಅತ್ಯಾಧುನಿಕ ಹೊಸ ಆವೃತ್ತಿಗಳ ಆವಿಷ್ಕಾರ ಪ್ರಗತಿಯಲ್ಲಿದ್ದು, ವಿನ್ಯಾಸ ಮತ್ತು ಸಿಮ್ಯುಲೇಷನ್ ಪರೀಕ್ಷೆಗಳು ನಡೆಸಿದ ಬಳಿಕ ಅಂತಿಮ ವಿಶೇಷತೆಗಳನ್ನು ನಿರ್ಧರಿಸಲು ಸಾಧ್ಯ ಎಂದು ಬ್ರಹ್ಮೋಸ್ ಮುಖ್ಯಸ್ಥ ಜೋಷಿ ತಿಳಿಸಿದ್ದಾರೆ. ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಮತ್ತು ಎನ್‌ಪಿಒ ಮಶಿನೋಸ್ಟ್ರೋಯೆನಿಯಾ ಜಂಟಿಯಾಗಿ ಬ್ರಹ್ಮೋಸ್ ಏರೋಸ್ಪೇಸ್ ಲಿಮಿಟೆಡ್‌ನಲ್ಲಿ ಬ್ರಹ್ಮೋಸ್ ಕ್ಷಿಪಣಿಗಳ ಉತ್ಪಾದನೆ ಮಾಡುತ್ತಿವೆ.

9.44ಕೋಟಿ ರೈತರ ಖಾತೆಗಳಿಗೆ 18,880 ಕೋಟಿ ರೂ.

ಪಿಎಂ ಕಿಸಾನ್ ಕಂತು ನಾಳೆ ಜಮೆ

ಹೊಸದಿಲ್ಲಿ : ಪಿಎಂ-ಕಿಸಾನ್ ಯೋಜನೆಯಲ್ಲಿ 23ನೇ ಕಂತಿನ ರೂಪದಲ್ಲಿ ಸುಮಾರು 18,880 ಕೋಟಿ ರೂ. ಮೊತ್ತವನ್ನು, ದೇಶಾದ್ಯಂತದ 9.44ಕೋಟಿ ರೈತರ ಖಾತೆಗಳಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಜೂ.20ರಂದು ನೇರ ವರ್ಗಾವಣೆ ಮಾಡಲಿದ್ದಾರೆ. ಪ.ಬಂಗಾಳದ ಹೂಗ್ಲಿ ಜಿಲ್ಲೆಗೆ ಭೇಟಿ ಸಂದರ್ಭ ಪ್ರಸ್ತುತ ಪರಿಹಾರ ನಿಧಿ ವರ್ಗಾವಣೆ ಪ್ರಕ್ರಿಯೆಯನ್ನು ಪ್ರಧಾನಿ ಮೋದಿ ನಿರ್ವಹಿಸಲಿದ್ದಾರೆ.

ಪ.ಬಂಗಾಳದಲ್ಲೇ ಸುಮಾರು 45.35ಲಕ್ಷ ರೈತರು ಪರಿಹಾರ ಕಂತುಗಳ ರೂಪದಲ್ಲಿ ಅತ್ಯಧಿಕ ಅಂದರೆ ಒಟ್ಟು 907ಕೋಟಿ ರೂ.ಪಡೆಯಲಿದ್ದಾರೆ. ತನ್ಮೂಲಕ ಪಿಎಂ-ಕಿಸಾನ್ ಯೋಜನೆಯಡಿ ರಾಜ್ಯದಲ್ಲಿ ಸಂಚಿತ ಪರಿಹಾರ ವಿತರಣೆ ರೂ.15,055 ಕೋಟಿ ರೂ.ಮೀರಲಿದೆ ಮತ್ತು 2019ರಲ್ಲಿ ಯೋಜನೆ ಅಸ್ತಿತ್ವಕ್ಕೆ ಬಂದ ನಂತರ ರಾಷ್ಟ್ರಾದ್ಯಂತ ರೈತರಿಗೆ ವಿತರಣೆಯಾಗಿರುವ ನೆರವಿನ ಮೊತ್ತ 4.46ಲಕ್ಷ ಕೋಟಿ ರೂ.ಮೀರಲಿದೆ. ನೇರವಾಗಿ ಪರಿಹಾರ ವರ್ಗಾವಣೆ (ಡಿಬಿಟಿ) ಮೂಲಕ ರೈತರ ಖಾತೆಗಳಿಗೆ ನಿಧಿಯನ್ನು ವರ್ಗಾಯಿಸಲಾಗುವುದು ,ತನ್ಮೂಲಕ ಸಣ್ಣ ಹಾಗೂ ಮಧ್ಯಮ ರೈತರ ಆದಾಯ ಭದ್ರತೆಯ ಬಲವರ್ಧನೆಗೆ ಸರಕಾರ ನೆರವಾಗಲಿದೆ ಎಂದು ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಫಸಲ್ ಬಿಮಾ ಯೋಜನೆಗೆ ಚಾಲನೆ: ಒಟ್ಟು 12,200ಕೋಟಿ ರೂ.ಅಂದಾಜು ವೆಚ್ಚದ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಮತ್ತು ಪುನಾರಚಿತ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಗಳಿಗೂ ಪ್ರಧಾನಿ ಮೋದಿ ಬಂಗಾಳದಲ್ಲಿ ಚಾಲನೆ ನೀಡಲಿದ್ದಾರೆ.2026-27ರಲ್ಲಿ ಸುಮಾರು 30ಲಕ್ಷ ಹೆಕ್ಟೇರ್ ವ್ಯಾಪ್ತಿಯ 1.10ಕೋಟಿ ರೈತರಿಗೆ ಬೆಳೆ ವಿಮಾ ಯೋಜನೆಯ ಪ್ರಯೋಜನ ವಿಸ್ತರಿಸುವುದು ಸರಕಾರದ ಗುರಿ. ತನ್ಮೂಲಕ ಸುಮಾರು 28,140 ಕೋಟಿ ಮೌಲ್ಯದ ಬೆಳೆಗಳು ಫಸಲ್ ಬಿಮಾ ಯೋಜನೆ ವ್ಯಾಪ್ತಿಗೆ ಒಳಪಡಲಿವೆ.

ರಾಷ್ಟ್ರೀಯ ನೈಸರ್ಗಿಕ ಕೃಷಿ ಮಿಷನ್: ಡಿಜಿಟಲ್ ಅಗ್ರಿಕಲ್ಚರ್ ಮಿಷನ್‌ನಲ್ಲಿ ರಸಗೊಬ್ಬರ ವಿತರಣೆ, ಕಿಸಾನ್ ಕ್ರೆಡಿಟ್ ಕಾರ್ಡ್‌ಗಳು, ಡಿಬಿಟಿ ಸೇವೆಗಳು ಮತ್ತು ಎಂಎಸ್‌ಪಿ ಆಧಾರಿತ ಸರ್ಕಾರಿ ಖರೀದಿಗಳಿಗೆ ಪೂರಕ ಸಮಗ್ರ ಕೃಷಿ-ತಂತ್ರಜ್ಞಾನ ವೇದಿಕೆಗೆ ಪ್ರಧಾನಿ ಮೋದಿ ಚಾಲನೆ ನೀಡಲಿದ್ದಾರೆ. ರಾಷ್ಟ್ರೀಯ ನೈಸರ್ಗಿಕ ಕೃಷಿ ಮಿಷನ್‌ಗೆ ಪ್ರಧಾನಿ ಮೋದಿ ಚಾಲನೆ ನೀಡುವರು.ಇದರಲ್ಲಿ 2026-27ರಲ್ಲಿ ಪ.ಬಂಗಾಳದ ಸುಮಾರು 17,300ಹೆಕ್ಟೇರ್ ಪ್ರದೇಶದಲ್ಲಿ ಸುಮಾರು 346 ನೈಸರ್ಗಿಕ ಕೃಷಿ ಕ್ಲಸ್ಟರ್‌ಗಳನ್ನು ತೆರೆಯಲಾಗುವುದು.

ಕಿರುಸುದ್ದಿ

ಶಾಲೆ ಕಟ್ಟಡದ ಮೇಲಿಂದ ಬಿದ್ದು ಬಾಲಕ ಸಾವು



• ನವಲಗುಂದ: ಶಾಲೆಯ ಕಟ್ಟಡದ ಮೇಲಿಂದ ಬಿದ್ದು ಬಾಲಕ ಮೃತಪಟ್ಟಿರುವ ಘಟನೆ ನವಲಗುಂದ ಪಟ್ಟಣದ ಖಾಸಗಿ ಶಾಲೆಯಲ್ಲಿ ಗುರುವಾರ ನಡೆದಿರುವುದು ಬೆಳಕಿಗೆ ಬಂದಿದೆ. ಆಕಾಶ್ ನೀಲಣ್ಣವರ (10) ಮೃತಪಟ್ಟ ವಿದ್ಯಾರ್ಥಿ ಎಂದು ಗುರುತಿಸಲಾಗಿದೆ. ಶಾಲೆಯ ಹಾಸ್ಟೆಲ್‌ನಲ್ಲಿಯೇ ಇದ್ದ ವಿದ್ಯಾರ್ಥಿಯು ಯಾವ ಕಾರಣಕ್ಕೆ ಬಿದ್ದಿದ್ದಾನೆ ಎನ್ನುವುದು ಇನ್ನೂ ಸ್ಪಷ್ಟವಾಗಿ ತಿಳಿದು ಬಂದಿಲ್ಲ, ಈ ಬಗ್ಗೆ ಪೊಲೀಸ್ ತನಿಖೆಯಿಂದ ಬೆಳಕಿಗೆ ಬರಬೇಕಾಗಿದೆ. ನಾಲ್ಕನೇ ತರಗತಿಯಲ್ಲಿ ಓದುತ್ತಿದ್ದ ಆಕಾಶ ಮಗನನ್ನು ಕಳೆದುಕೊಂಡ ಪೋಷಕರ ಆಕ್ರಂದನ ಮುಗಿಲು ಮುಟ್ಟಿತ್ತು. ಈ ಕುರಿತಂತೆ ನವಲಗುಂದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಅಧಿಕಾರಿ ಬೆದರಿಕೆಗೆ ಪ್ರಜ್ಞೆತಪ್ಪಿದ ಅಂಗನವಾಡಿ ಕಾರ್ಯಕರ್ತೆ

• ಅಂಕೋಲಾ: ತಾಲೂಕಿನಲ್ಲಿ ನಡೆದ ಎಸ್.ಐ.ಆರ್ ಸಂಬಂಧಿತ ಬಿಎಲ್‌ಓಗಳ ಸಭೆಯಲ್ಲಿ ಪುರಸಭೆಯ ಅಧಿಕಾರಿಯೊಬ್ಬರು ಬಿಎಲ್‌ಓ ಸೇವೆಯಲ್ಲಿದ್ದ ಅಂಗನವಾಡಿ ಕಾರ್ಯಕರ್ತೆಗೆ ಬೆದರಿಸಿದ್ದರಿಂದ ಮಾನಸಿಕ ಆಘಾತದಿಂದ ಅಂಗನವಾಡಿ ಕಾರ್ಯಕರ್ತೆ ಪ್ರಜ್ಞೆತಪ್ಪಿದ ಘಟನೆ ನಡೆದಿದ್ದು,ಆಸ್ಪತ್ರೆಯಲ್ಲಿ ಚೇತರಿಸಿಕೊಂಡ ಅಂಗನವಾಡಿ ಕಾರ್ಯಕರ್ತೆ ಈ ಕುರಿತಂತೆ ತಾಲೂಕು ದಂಡಾಧಿಕಾರಿಗೆ ಮನವಿ ಸಲ್ಲಿಸಿ ರಕ್ಷಣೆ ಕೋರಿದ್ದಾರೆ. ಪಟ್ಟಣದ ಹೊನ್ನಿಕೇರಿಯ ಅಂಗನವಾಡಿ ಕಾರ್ಯಕರ್ತೆ ಬಿ.ಎಲ್.ಓ ಆಗಿ ಕೆಲಸ ಮಾಡುತ್ತಿರುವ ವೀಣಾ ನಾಯ್ಕ ಅವರು ಕಳೆದ 13 ವರ್ಷಗಳಿಂದ ಕೆಲಸ ಮಾಡುತ್ತಿದ್ದು ಮ್ಯಾಪಿಂಗ್ ವಿಷಯದ ವಿಚಾರಣೆಯೊಂದಕ್ಕೆ ಸಂಬಂಧಿಸಿದಂತೆ ಪುರಸಭೆಯ ಸಮುದಾಯ ಸಂಘಟನಾಧಿಕಾರಿ ಡಿ.ಎಲ್. ರಾಥೋಡ ಎನ್ನುವವರು ಸಭೆಯಲ್ಲಿ ಎಲ್ಲರ ನಡುವೆ ಕರೆದು ನೌಕರಿಯಿಂದ ತೆಗೆಯುತ್ತೇನೆ, ನೀರಿಲ್ಲದ ಜಾಗಕ್ಕೆ ವರ್ಗಾಯಿಸುತ್ತೇನೆ, ಪುರಸಭೆಯಲ್ಲಿ ನಿನಗೆ ತೋರಿಸುತ್ತೇನೆ ಎಂದು ಬೆದರಿಕೆ ಹಾಕಿದ್ದು ತಾವು ಮಾನಸಿಕ ಆಘಾತದಿಂದ ಪ್ರಜ್ಞೆ ತಪ್ಪಿ ಬಿದ್ದಿರುವುದಾಗಿ ಸರ್ಕಾರಿ ನೌಕರರು ಎಂಬುದನ್ನು ಮರೆತು ಮಹಿಳಾ ನೌಕರರಾಗಿರುವ ತಮಗೆ ಬೆದರಿಸಿದ ಪುರಸಭೆಯ ಅಧಿಕಾರಿ ರಾಥೋಡ ಅವರ ವಿಚಾರಣೆ ನಡೆಸಿ ಕಾನೂನು ಕ್ರಮ ಕೈಗೊಳ್ಳಬೇಕು. ಎಸ್.ಐ ಆರ್ ಕರ್ತವ್ಯದ ನಿಮಿತ್ತ ಕೆಲಸ ಮಾಡುವ ಸಿಬ್ಬಂದಿಗಳಿಗೆ ರಕ್ಷಣೆ ನೀಡಬೇಕು ಎಂದು ತಾಲೂಕು ದಂಡಾಧಿಕಾರಿಗೆ ನೀಡಿರುವ ಮನವಿ ಪತ್ರದಲ್ಲಿ ಅಂಗನವಾಡಿ ಕಾರ್ಯಕರ್ತೆ ಕೋರಿದ್ದಾಳೆ.

ಕುಡುತಿನಿ ಭೂ ಸಂತ್ರಸ್ತರ ಹೋರಾಟ

ಬಳ್ಳಾರಿ ಬಂದ್ ಬಹುತೇಕ ಯಶಸ್ವಿ

• ಬಳ್ಳಾರಿ: ಕೈಗಾರಿಕೆ ಘಟಕಗಳ ನಿರ್ಮಾಣಕ್ಕಾಗಿ ಕೆಐಎಡಿಬಿ ವಶಪಡಿಸಿಕೊಂಡ ಕುಡುತಿನಿ ಭಾಗದ ರೈತರ ಜಮೀನಿಗೆ ಸೂಕ್ತ ಪರಿಹಾರ ನೀಡಬೇಕು, ನ್ಯಾಯಯುತ ಭೂ ಬೆಲೆ ನಿಗದಿಪಡಿಸಬೇಕು ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿ ಭೂ ಸಂತ್ರಸ್ತರ ಹೋರಾಟ ಸಮಿತಿ ಹಾಗೂ ವಿವಿಧ ರೈತಪರ ಸಂಘಟನೆಗಳು ಕರೆ ನೀಡಿದ ಬಳ್ಳಾರಿ ಬಂದ್ ಗುರುವಾರ ಬಹುತೇಕ ಯಶಸ್ವಿಯಾಯಿತು.

ಬೆಳಂಬೆಳಗ್ಗೆ ರಸ್ತೆಗಿಳಿದ ರೈತ ಮುಖಂಡರು, ವಿವಿಧ ರೈತಪರ ಸಂಘಟನೆಗಳ ಪದಾಧಿಕಾರಿಗಳು ಬೈಕ್ ರ‍್ಯಾಲಿ ಮೂಲಕ ನಗರದಲ್ಲಿ ಸಂಚರಿಸಿ ಬಳ್ಳಾರಿ ಬಂದ್‌ಗೆ ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ವರ್ತಕರು, ವ್ಯಾಪಾರಸ್ಥರು, ಉದ್ಯಮಿದಾರರು, ಬೀದಿ ಬದಿ ವ್ಯಾಪಾರಿಗಳು ಸ್ವಯಂ ಪ್ರೇರಿತವಾಗಿ ಅಂಗಡಿ ಮುಗ್ಗಟ್ಟುಗಳನ್ನು ಬಂದ್ ಮಾಡಿ ಬಂದ್‌ಗೆ ಬೆಂಬಲಿಸಿದರು. ನಂತರ ನಗರದ ಹೃದಯಭಾಗ ರಾಯಲ್ ವೃತ್ತದಲ್ಲಿ ಜಮಾಯಿಸಿದ ಅನ್ನದಾತರು, ರೈತ ಮುಖಂಡರು, ವಿವಿಧ ಸಂಘಟನೆಯ ಮುಖಂಡರು, ನಾಯಕರು ಮಾನವ ಸರಪಳಿ ನಿರ್ಮಿಸಿ ನಾನಾ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕುಡುತಿನಿ ಭೂ ಸಂತ್ರಸ್ತರು ಕಳೆದ 3 ವರ್ಷಗಳಿಂದ ನ್ಯಾಯಕ್ಕಾಗಿ ಅಹೋರಾತ್ರಿ ಧರಣಿ ನಡೆಸುತ್ತಿದ್ದರೂ ಸರ್ಕಾರ ಅನ್ನದಾತರ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ಸಂಪೂರ್ಣ ನಿರ್ಲಕ್ಷ್ಯ ವಹಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿ, ಪ್ರತಿಕೃತಿ ದಹಿಸಿದರು.



ನಂತರ ರೈತರ ಬೃಹತ್ ಪ್ರತಿಭಟನಾ ಮೆರವಣಿಗೆ ನಗರದ ಬೆಂಗಳೂರು ರಸ್ತೆ, ಕಾಳಮ್ಮ ರಸ್ತೆ, ತೇರು ಬೀದಿ ಸೇರಿದಂತೆ ನಗರದ ನಾನಾ ಪ್ರಮುಖ ರಸ್ತೆಗಳಲ್ಲಿ ಪ್ರತಿಭಟನಾ ಮೆರವಣಿಗೆ ನಡೆಯಿತು. ಈ ವೇಳೆ ಪ್ರತಿಭಟನಾಕಾರರು ಸರ್ಕಾರ ಹಾಗೂ ಜಿಲ್ಲಾಡಳಿತ ವಿರುದ್ಧ ನಾನಾ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಚಿತ್ರಮಂದಿರ, ಎಪಿಎಂಸಿ ಮಾರುಕಟ್ಟೆಯಲ್ಲಿ ವ್ಯಾಪಾರವಹಿವಾಟು ಸಾಮಾನ್ಯವಾಗಿತ್ತು. ಸಾರಿಗೆ ಬಸ್ ಸಂಚಾರ ಎಂದಿನಂತೆ ಇತ್ತು. ಜಿಲ್ಲಾ ಪೊಲೀಸ್ ಇಲಾಖೆ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿತ್ತು.

ಈ ಸಂದರ್ಭದಲ್ಲಿ ಹೋರಾಟ ಸಮಿತಿ ಮುಖಂಡರಾದ ಯು.ಬಸವರಾಜ್, ಜೆ.ಸತ್ಯಬಾಬು, ಕರೂರು ಮಾಧವರೆಡ್ಡಿ, ಎಸ್.ವೈ.ಗುರುಶಾಂತ್ ಇದ್ದರು.

ವಿದ್ಯಾರ್ಥಿಗಳ ದಿಢೀರ್ ಪ್ರತಿಭಟನೆ

ವಸತಿ ನಿಲಯದ ಊಟದಲ್ಲಿ ಹುಳು

• ಬೆಳಗಾವಿ: ಊಟ ಮಾಡಲು ಹೋದರೆ ಅದುಗೆಯಲ್ಲಿ ಹುಳು ಬರುತ್ತದೆ. ಜಳಕಕ್ಕೆ ಹೋದರೆ ನೀರೇ ಬರುವುದಿಲ್ಲ, ಕುಡಿಯಲು ಶುದ್ಧ ನೀರಿನ ವ್ಯವಸ್ಥೆಯೂ ಇಲ್ಲ, ನಲ್ಲಿ ನೀರು ಕುಡಿದು ಆಸ್ಪತ್ರೆಗೆ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆರೋಪಿಸಿ ಬೆಳಗಾವಿಯ ಸಂಗಮೇಶ್ವರ ನಗರದ ಬಾಲಕರ ಮೆಟ್ರಿಕ್ ನಂತರದ ವಸತಿ ನಿಲಯದ ವಿದ್ಯಾರ್ಥಿಗಳು ಗುರುವಾರ ವಿದ್ಯಾರ್ಥಿಗಳು ದಿಢೀರ್ ಪ್ರತಿಭಟನೆ ನಡೆಸಿದರು.

ಕಳೆದ ಹಲವು ದಿನಗಳಿಂದ ವಸತಿ ನಿಲಯದಲ್ಲಿ ತೀವ್ರ ನೀರಿನ ಅಭಾವ ಎದುರಾಗಿದ್ದು, ಶುದ್ಧ ಕುಡಿಯುವ ನೀರು ಹಾಗೂ ಮೂಲಭೂತ ಸೌಲಭ್ಯಗಳ ಕೊರತೆಯಿಂದ ವಿದ್ಯಾರ್ಥಿಗಳು ಸಂಕಷ್ಟ ಅನುಭವಿಸುತ್ತಿದ್ದಾರೆ. ಶೌಚಾಲಯ ಬಳಕೆಗೆ ಸಹ ನೀರು ಲಭ್ಯವಾಗುತ್ತಿಲ್ಲ ಎಂದು ವಿದ್ಯಾರ್ಥಿಗಳು ದೂರಿದರು.

ಇದರ ಜೊತೆಗೆ, ವಸತಿ ನಿಲಯದ ಊಟದಲ್ಲಿ ಪದೇ ಪದೇ ಹುಳುಗಳು ಪತ್ತೆಯಾಗುತ್ತಿದ್ದು, ವಿದ್ಯಾರ್ಥಿಗಳ ಆರೋಗ್ಯದ ಬಗ್ಗೆ ಆತಂಕ ಹೆಚ್ಚಾಗಿದೆ. ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಸ್ಪಂದಿಸಬೇಕಿದ್ದ ವಾರ್ಡನ್ ವಾರಕ್ಕೊಮ್ಮೆ ಬಂದು ಹೋಗುವುದನ್ನು ಬಿಟ್ಟರೆ ವಸತಿ ನಿಲಯದತ್ತ ಗಮನ ಹರಿಸುತ್ತಿಲ್ಲ ಎಂದು ವಿದ್ಯಾರ್ಥಿಗಳು ಆಕ್ರೋಶ ವ್ಯಕ್ತಪಡಿಸಿದರು.

ವಾರ್ಡನ್ ವಸತಿ ನಿಲಯಕ್ಕೆ ಭೇಟಿ ನೀಡಿದ ವೇಳೆ ವಿದ್ಯಾರ್ಥಿಗಳು ತಟ್ಟೆಯಲ್ಲಿ ಹುಳುಗಳು ಕಂಡುಬಂದಿದ್ದು, ಇದರಿಂದ ರೊಚ್ಚಿಗೆದ್ದ ವಿದ್ಯಾರ್ಥಿಗಳು ಊಟ ಬಹಿಷ್ಕರಿಸಿ ಖಾಲಿ ತಟ್ಟೆಗಳನ್ನು ಹಿಡಿದು ಪ್ರತಿಭಟನೆ ನಡೆಸಿದ್ದಾರೆ. ಸಮಾಜ ಕಲ್ಯಾಣ ಇಲಾಖೆ/ತಾಲೂಕು ಅಧಿಕಾರಿ ಹಾಗೂ ಜಂಟಿ ನಿರ್ದೇಶಕರು ಸ್ಥಳಕ್ಕೆ ಆಗಮಿಸಿ ಸಮಸ್ಯೆ ಆಲಿಸಬೇಕು. ಇಲ್ಲಿರುವ ಪರಿಸ್ಥಿತಿಯನ್ನು ಸುಧಾರಿಸಬೇಕೆಂದು ವಿದ್ಯಾರ್ಥಿಗಳು ಆಗ್ರಹಿಸಿದರು.

ಮಾಹಿತಿ ತಿಳಿಯುತ್ತಿದ್ದಂತೆ ಎಪಿಎಂಸಿ ಪೊಲೀಸ್ ಠಾಣೆಯ ಸಿಪಿಐ ಹಾಗೂ ಪಿಎಸ್ಐ ಸ್ಥಳಕ್ಕೆ ಭೇಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಮಾತುಕತೆ ನಡೆಸಿದರು. ಸಮಸ್ಯೆ ಕುರಿತು ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತ ಕ್ರಮ, ಪರಿಹಾರ ಕಲ್ಪಿಸಲಾಗುವುದು ಎಂದು ಭರವಸೆ ನೀಡಿ ವಿದ್ಯಾರ್ಥಿಗಳ ಪ್ರತಿಭಟನೆ ಕೈಬಿಟ್ಟರು.

ಮಠಾಧೀಶರ ನಿಯೋಗದಿಂದ ಒತ್ತಾಯ

ಶಿವಾನಂದ ಪಾಟೀಲಗೆ ಸಚಿವ ಸ್ಥಾನ ನೀಡಿ

• ಬಸವನಬಾಗೇವಾಡಿ: ಬಸವನಬಾಗೇವಾಡಿ ಕ್ಷೇತ್ರದ ಶಾಸಕ ಶಿವಾನಂದ ಪಾಟೀಲ ಅವರು ಎರಡು ಬಾರಿ ಸಚಿವರಾಗಿ ತಮಗೆ ವಹಿಸಿಕೊಟ್ಟ ಉಸ್ತುವಾರಿ ಜಿಲ್ಲೆಯಲ್ಲಿ ಸಾಕಷ್ಟು ಅಭಿವೃದ್ಧಿ ಮಾಡಿದ್ದಾರೆ. ಇವರೊಬ್ಬ ಹಿರಿಯ ಮುತ್ಸದ್ದಿ ರಾಜಕಾರಣಿಯದ್ದರೆ ತಪ್ಪಾಗಲಾರದು ಆದ್ದರಿಂದ ಇಂತಹ ಹಿರಿಯ ರಾಜಕಾರಣಿಗೆ ಸಚಿವ ಸ್ಥಾನ ನೀಡಿದಲ್ಲಿ ಬಸವನಬಾಗೇವಾಡಿ ಕ್ಷೇತ್ರ ಇನ್ನೂ ಹೆಚ್ಚು ಅಭಿವೃದ್ಧಿ ಕಾರ್ಯಗಳು ಹೊಂದಲಿದೆ. ಆದ್ದರಿಂದ ಸಚಿವ ಸ್ಥಾನ ನೀಡುವಂತೆ ಜಿಲ್ಲೆಯ ವಿವಿಧ ಮಠಾಧೀಶರ ನಿಯೋಗ ಬುಧವಾರ ಬೆಂಗಳೂರಿಗೆ ತೆರಳಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರನ್ನು ಭೇಟಿ ಮಾಡಿ ಒಕ್ಕೊರಲಿನಿಂದ ಮನವಿ ಮಾಡಿದ್ದೇವೆ ಎಂದು ಮನಗೂಳಿ ಹಿರೇಮಠದ ಅಭಿನವ ಸಂಗನಬಸವ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಮಠಾಧೀಶರ ನಿಯೋಗದಲ್ಲಿ ಕೊಲ್ಹಾರ ಹಿರೇಮಠದ ಪಟ್ಟದ ದೇವರು ಪ್ರಭುಕುಮಾರ ಸ್ವಾಮೀಜಿ, ಚಟನೂರಿನ ಜ್ಯೋತಿಷ್ಯ ರತ್ನ ರಾಮಲಿಂಗಯ್ಯ ಸ್ವಾಮೀಜಿ, ಮಸಬಿನಾಳದ ಸಿದ್ಧರಾಮ ಸ್ವಾಮೀಜಿ, ಮಸೂತಿಯ ಪ್ರಭುಕುಮಾರ ಶಿವಾಚಾರ್ಯಸ್ವಾಮೀಜಿ, ನಿಡಗುಂದಿಯ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ, ಬಸವನಬಾಗೇವಾಡಿಯ ಸಿದ್ದಲಿಂಗ ಸ್ವಾಮೀಜಿ, ಕಲಕೇರಿಯ ಸಿದ್ಧರಾಮ ಸ್ವಾಮೀಜಿ, ನಾವದಗಿಯ ರಾಜಗುರು ರಾಜೇಂದ್ರ ಒಡೆಯರಸ್ವಾಮೀಜಿ, ದೇವರಹಿಪ್ಪರಗಿಯ ಶಿವಯೋಗಿ ಸ್ವಾಮೀಜಿ, ಪಡೇಕನೂರಿನ ಚನ್ನಮಲ್ಲ ಸ್ವಾಮೀಜಿ, ವಡವಡಗಿಯ ವೀರಸಿದ್ಧ ಸ್ವಾಮೀಜಿ, ಕಲಕೇರಿಯ ಮಡಿವಾಳೇಶ್ವರ ಸ್ವಾಮೀಜಿ, ಕೋರವಾರದ ಕಾಶಿಲಿಂಗ ಸ್ವಾಮೀಜಿ ಇದ್ದರು.



ಕಾಚಿಗುಡ-ಮುರುಡೇಶ್ವರ ರೈಲು ಕುಮಟಾದವರೆಗೆ ವಿಸ್ತರಣೆ

• ಶಿರಸಿ: ಉತ್ತರ ಕನ್ನಡ ಜಿಲ್ಲೆಯ ಕೊಂಕಣ ರೈಲ್ವೆ ಮಾರ್ಗದ ಪ್ರಯಾಣಿಕರ ದೀರ್ಘಕಾಲದ ಬೇಡಿಕೆಗಳು ಈಡೇರುತ್ತಿದ್ದು, ಅದರಂತೆ ಜೂನ್ 20ರಂದು ಮಧ್ಯಾಹ್ನ 2:00ಕ್ಕೆ ಕುಮಟಾ ರೈಲ್ವೆ ನಿಲ್ದಾಣದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಲೋಕಾರ್ಪಣೆ ಹಾಗೂ ರೈಲು ವಿಸ್ತರಣಾ ಸೇವೆಗೆ ಚಾಲನೆ ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಜೂ.20ಕ್ಕೆ ವಿವಿಧ ಕಾಮಗಾರಿಗಳ ಲೋಕಾರ್ಪಣೆ

ಉತ್ತರ ಕನ್ನಡ ಲೋಕಸಭಾ ಕ್ಷೇತ್ರದ ಸಂಸದರಾದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರ ಪ್ರಯತ್ನದ ಫಲವಾಗಿ ಮಂಜೂರಾಗಿರುವ ವಿವಿಧ ರೈಲ್ವೆ ಅಭಿವೃದ್ಧಿ ಕಾಮಗಾರಿಗಳು ಹಾಗೂ ಪ್ರಯಾಣಿಕರ ಸೌಲಭ್ಯಗಳ ಉದ್ಘಾಟನೆಯನ್ನು ಸಂಸದರು ನೆರವೇರಿಸಲಿದ್ದಾರೆ. ಜಿಲ್ಲೆಯ ಸಾರ್ವಜನಿಕರು, ಪ್ರವಾಸಿಗರು ಹಾಗೂ ಪ್ರಮುಖವಾಗಿ ತಿರುಪತಿಗೆ ಪ್ರಯಾಣಿಸುವ ಭಕ್ತಾದಿಗಳಿಗೆ ಅತ್ಯಂತ ಅನುಕೂಲಕರವಾಗುವಂತೆ, ಈ ಹಿಂದೆ ಕಾಚಿಗುಡ–ಮುರುಡೇಶ್ವರ ನಡುವೆ ಸಂಚರಿಸುತ್ತಿದ್ದ ರೈಲು ಸಂಖ್ಯೆ 12790 ಮತ್ತು 12789 ಅನ್ನು ಇದೀಗ ಮುರುಡೇಶ್ವರದಿಂದ ಕುಮಟಾದವರೆಗೆ ಅಧಿಕೃತವಾಗಿ ವಿಸ್ತರಿಸಲಾಗುತ್ತಿದೆ. ಸಂಸದರ ಪ್ರಯತ್ನದಿಂದಾಗಿ ಸಾಕಾರಗೊಂಡಿರುವ ಈ ವಿಸ್ತರಿತ ರೈಲು ಸೇವೆಗೆ ಸಂಸದರಾದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಲಿದ್ದಾರೆ.

ಕುಮಟಾ ಮಾತ್ರವಲ್ಲದೇ ಮುರುಡೇಶ್ವರ, ಗೋಕರ್ಣ ಮತ್ತು ಭಟ್ಕಳ ರೈಲ್ವೆ ನಿಲ್ದಾಣಗಳಲ್ಲಿಯೂ ಸಹ ವಿವಿಧ ಅಭಿವೃದ್ಧಿ ಕಾಮಗಾರಿಗಳು ಹಾಗೂ ಪ್ರಯಾಣಿಕರ ಸೌಲಭ್ಯಗಳನ್ನು ಮೇಲ್ದರ್ಜೆಗೇರಿಸಲಾಗಿದ್ದು, ಈ ಎಲ್ಲ ಕಾಮಗಾರಿಗಳನ್ನು ಅಂದು ಕುಮಟಾ ನಿಲ್ದಾಣದಿಂದಲೇ ಜಂಟಿಯಾಗಿ ಲೋಕಾರ್ಪಣೆಗೊಳಿಸಲಾಗುವುದು. ಈ ಮಹತ್ವದ ಅಭಿವೃದ್ಧಿ ಕಾರ್ಯಕ್ರಮ ಹಾಗೂ ರೈಲು ವಿಸ್ತರಣೆಯ ಸಮಾರಂಭದಲ್ಲಿ ಕುಮಟಾ ಕ್ಷೇತ್ರದ ಶಾಸಕ ದಿನಕರ್ ಶೆಟ್ಟಿ, ಕೊಂಕಣ ರೈಲ್ವೆ ನಿಗಮದ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕ ಸಂತೋಷ್ ಕುಮಾರ್ ಝಾ, ಕೊಂಕಣ ರೈಲ್ವೆಯ ವಿಭಾಗೀಯ ವ್ಯವಸ್ಥಾಪಕರು, ಉನ್ನತ ಅಧಿಕಾರಿಗಳು ಹಾಗೂ ಜಿಲ್ಲಾ ಮತ್ತು ಸ್ಥಳೀಯ ಆಡಳಿತದ ಪ್ರಮುಖ ಅಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ಸಂಸದರ ಕಾರ್ಯಾಲಯದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕಾಗಿನೆಲೆ ಕಂದಾಯ ನಿರೀಕ್ಷಕ ರಾಮನಗೌಡ ಲೋಕಾ ಬಲೆಗೆ

• ಬ್ಯಾಡಗಿ: ಹಳೇ ಶರ್ತು ಹಾಗೂ ಉತಾರ ದುರುಸ್ತಿ ಮಾಡಿಕೊಡುವ ಸಲುವಾಗಿ ಲಂಚಕ್ಕೆ ಬೇಡಿಕೆ ಇಟ್ಟಿದ್ದ ಕಾಗಿನೆಲೆ ಕಂದಾಯ ನಿರೀಕ್ಷಕನನ್ನು ಲೋಕಾಯುಕ್ತ ಪೊಲೀಸರು ಗುರುವಾರ ಟ್ರ್ಯಾಪ್ ಮಾಡಿ ಬಂಧಿಸಿದ್ದಾರೆ.

ಘಟನೆಯ ವಿವರ: ಬ್ಯಾಡಗಿ ತಾಲೂಕಿನ ಕಾಸಂಬಿ ಗ್ರಾಮದ ನಿವಾಸಿ ನಾಗರಾಜ ಓಲೇಕಾರ ಅವರು ತಮ್ಮ ಜಮೀನಿನ (ಸರ್ವೆ ನಂ. 13/2, ಕಾಲಂ 11) ಹಳೇ ಶರ್ತು ಮಾಡಿಸಲು ಮತ್ತು ಉತ್ತಾರ ದುರುಸ್ತಿ ಮಾಡಿಸಲು ಕಂದಾಯ ನಿರೀಕ್ಷಕರಾದ ರಾಮನಗೌಡ ಚನ್ನಬಸನಗೌಡ ದ್ಯಾಮನಗೌಡ ಅವರ ಬಳಿ ಮನವಿ ಮಾಡಿದ್ದರು. ಈ ಕೆಲಸವನ್ನು ಮಾಡಿಕೊಡುವುದಕ್ಕೆ ಆರೋಪಿತ ಅಧಿಕಾರಿ ರಾಮನಗೌಡ ಅವರು ಒಟ್ಟು 12,000 ರೂಪಾಯಿ ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದರು. ಈ ಕುರಿತು ನಾಗರಾಜ ಅವರು ಹಾವೇರಿ ಲೋಕಾಯುಕ್ತ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಜೂನ್ 18ರಂದು ಬ್ಯಾಡಗಿ ತಾಲೂಕಿನ ಕುಮೂರು ಕ್ರಾಸ್ ಬಳಿ ಆರೋಪಿತ ರಾಮನಗೌಡ ಅವರು ಲಂಚದ ಹಣದ ಪೈಕಿ 5,000 ರೂಪಾಯಿ ಮುಂಗಡ ಹಣವನ್ನು ಪಡೆಯುತ್ತಿದ್ದಾಗ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ಅವರನ್ನು ಬಂಧಿಸಿದ್ದಾರೆ. ಈ ಕಾರ್ಯಾಚರಣೆಯನ್ನು ದಾವಣಗೆರೆ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಎಂ.ಎಸ್.ಕೌಲಾಪುರೆ ಮತ್ತು ಹಾವೇರಿ ಲೋಕಾಯುಕ್ತ ಡಿವೈಎಸ್‌ಪಿ. ಮಧುಸೂದನ ಅವರ ಮಾರ್ಗದರ್ಶನದಲ್ಲಿ ಪೊಲೀಸ್ ನಿರೀಕ್ಷಕ ವಿಶ್ವನಾಥ ಕಬ್ಬೂರಿ ಹಾಗೂ ಸಿಬ್ಬಂದಿ ವರ್ಗದವರು ನಡೆಸಿದ್ದಾರೆ. ಆರೋಪಿಯನ್ನು ಬ್ಯಾಡಗಿ ತಹಶೀಲ್ದಾರ್ ಕಚೇರಿಯಲ್ಲಿ ವಶಕ್ಕೆ ಪಡೆಯಲಾಗಿದ್ದು, ಮುಂದಿನ ತನಿಖೆ ಮುಂದುವರಿದಿದೆ.



ಲಂಚ ಸ್ವೀಕರಿಸುತ್ತಿದ್ದ ಪಿಎಸ್‌ಐ, ಎಸ್‌ಬಿ ಸಿಬ್ಬಂದಿ ಲೋಕಾಯುಕ್ತ ಬಲೆಗೆ

ಸಿಎಂ ಪದಕ ವಿಜೇತ ಅಧಿಕಾರಿಯೇ ಆರೋಪಿ!

• ಕಲಬುರಗಿ: ಅಕ್ಕಿ ವ್ಯಾಪಾರಕ್ಕೆ ಸಂಬಂಧಿಸಿದ ಪ್ರಕರಣವೊಂದರಲ್ಲಿ ಸಹಕಾರ ನೀಡಲು ಉದ್ಯಮಿಯೊಬ್ಬರಿಂದ ಲಂಚ ಸ್ವೀಕರಿಸುತ್ತಿದ್ದ ಯಡ್ರಾಮಿ ಪೊಲೀಸ್ ಠಾಣೆಯ ಪಿಎಸ್ಐ ಹಾಗೂ ವಿಶೇಷ ಶಾಖೆ (ಎಸ್‌ಬಿ) ಸಿಬ್ಬಂದಿ ಗುರುವಾರ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ಜಿಲ್ಲೆಯ ಯಡ್ರಾಮಿ ಪೊಲೀಸ್ ಠಾಣೆಯ ಪಿಎಸ್ಐ ವಿಶ್ವನಾಥ ಮುದರೆಡ್ಡಿ ಹಾಗೂ ಎಸ್‌ಬಿ ಸಿಬ್ಬಂದಿ ಸಿದ್ದಣ್ಣ ಬಿರಾದಾರ ಲೋಕಾಯುಕ್ತ ದಾಳಿಗೆ ಒಳಗಾದ ಅಧಿಕಾರಿಗಳಾಗಿದ್ದಾರೆ.



ರೂ.50 ಸಾವಿರಕ್ಕೆ ಬೇಡಿಕೆ ಇಟ್ಟಿದ್ದ ಆರೋಪಿಗಳು



ಆನಂದ ಕುಸ್ತಿ ಎಂಬುವವರ ಅಕ್ಕಿ ವ್ಯಾಪಾರಕ್ಕೆ ಸಂಬಂಧಿಸಿದ ಪ್ರಕರಣವೊಂದರಲ್ಲಿ ಬಿಡಿಕೆ ನೀಡಲು ಹಾಗೂ ಸಹಕಾರ ನೀಡಲು ಆರೋಪಿಗಳು ಒಟ್ಟು 50 ಸಾವಿರ ರೂಪಾಯಿ ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎನ್ನಲಾಗಿದೆ. ಈ ಪೈಕಿ ಜೂನ್ 12ರಂದು ಮುಂಗಡವಾಗಿ 20,000 ರೂಪಾಯಿಗಳನ್ನು ಫೋನ್ ಪೇ ಮೂಲಕ ಸ್ವೀಕರಿಸಿದ್ದರು. ಬಾಕಿ ಉಳಿದ ಹಣದಲ್ಲಿ ಗುರುವಾರ ಯಡ್ರಾಮಿ ಪೊಲೀಸ್ ಠಾಣೆಯ ಆವರಣದಲ್ಲೇ ದೂರುದಾರರಿಂದ ಮತ್ತೊಮ್ಮೆ 20,000 ರೂಪಾಯಿ ಹಣವನ್ನು ಸ್ವೀಕರಿಸುತ್ತಿದ್ದಾಗ ಲೋಕಾಯುಕ್ತ ಅಧಿಕಾರಿಗಳು ಜಂಟಿ ದಾಳಿ ನಡೆಸಿ, ಇಬ್ಬರನ್ನೂ ರಂಗೇಹಾತಾಗಿ (ಕೈಗೆಂಪು) ವಶಕ್ಕೆ ಪಡೆದಿದ್ದಾರೆ. ಆರೋಪಿಗಳ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗಿದೆ.

ಲೋಕಾಯುಕ್ತ ಬಲೆಗೆ ಬಿದ್ದಿರುವ ಪಿಎಸ್ಐ ವಿಶ್ವನಾಥ ಮುದರೆಡ್ಡಿ ಅವರು ಈ ಹಿಂದೆ ಗಂಭೀರ ಪ್ರಕರಣಗಳ ತನಿಖೆ ಹಾಗೂ ಆರೋಪಿಗಳ ಬಂಧನದಲ್ಲಿ ಅತ್ಯುತ್ತಮ ಕಾರ್ಯಕ್ಷಮತೆ ತೋರ್ಪಡಿಸಿದ್ದರು. ಈ ಹಿನ್ನೆಲೆಯಲ್ಲಿ ಅವರಿಗೆ 2024–25ನೇ ಸಾಲಿನ ಪ್ರತಿಷ್ಠಿತ 'ಮುಖ್ಯಮಂತ್ರಿ ಚಿನ್ನದ ಪದಕ'ನೀಡಿ ಅಂದಿನ ಸಿಎಂ ಸಿದ್ದರಾಮಯ್ಯ ಅವರು ಗೌರವಿಸಿದ್ದರು. ಮುಖ್ಯಮಂತ್ರಿಗಳಿಂದ ಪದಕ ಪಡೆದ ದಕ್ಷ ಅಧಿಕಾರಿಯೇ ಈಗ ಲಂಚದ ಹಣದೊಂದಿಗೆ ಸಿಕ್ಕಿಬಿದ್ದಿರುವುದು ಇಲಾಖೆಯಲ್ಲಿ ತೀವ್ರ ಮುಖಭಂಗ ಉಂಟುಮಾಡಿದೆ. ಲೋಕಾಯುಕ್ತ ಎಸ್‌ಪಿ ಸಿದ್ದರಾಜು ಅವರ ಮಾರ್ಗದರ್ಶನದಲ್ಲಿ, ಇನ್‌ಸ್ಪೆಕ್ಟರ್ ಅರುಣ್ ಮರಗುಂಡಿ ನೇತೃತ್ವದಲ್ಲಿ ಈ ಯಶಸ್ವಿ ದಾಳಿ ಜರುಗಿದೆ. ಕಾರ್ಯಾಚರಣೆಯಲ್ಲಿ ಲೋಕಾಯುಕ್ತ ಸಿಬ್ಬಂದಿಗಳಾದ ಮಲ್ಲಿನಾಥ, ರಾನೋಜಿ, ಬಸವರಾಜ ಸೇರಿದಂತೆ ಪ್ರಮುಖ ಅಧಿಕಾರಿಗಳು ಭಾಗವಹಿಸಿದ್ದರು. ಠಾಣೆಯ ಆವರಣದಲ್ಲೇ ನಡೆದ ಈ ಲೋಕಾಯುಕ್ತ ಬೇಟೆ ಪೊಲೀಸ್ ಇಲಾಖೆಯಲ್ಲಿ ತೀವ್ರ ಸಂಚಲನ ಮೂಡಿಸಿದ್ದು, ಸಾರ್ವಜನಿಕ ವಲಯದಲ್ಲಿ ವ್ಯಾಪಕ ಆಕ್ರೋಶ ಹಾಗೂ ಚರ್ಚೆಗೆ ಗ್ರಾಸವಾಗಿದೆ.

ಇಂದಿನ ಉತ್ಪನ್ನವಾರು ದರ — ಹುಬ್ಬಳ್ಳಿ

ಉತ್ಪನ್ನಗಳು	₹ಕನಿಷ್ಠ(ಕ್ವಿಂ)	₹ಗರಿಷ್ಠ(ಕ್ವಿಂ)
ಕಡಲೆಕಾಳು	3811	5908
ಉದ್ದಿನಕಾಳು	1736	7052
ಹೆಸರುಕಾಳು	1759	8019
ನೆಲಗಡಲೆ (ಶೇಂಗಾ)	3900	6300
ಜೋಳ	1386	4506
ಮಡಿಕೆ (ಮಟಕಿ)	2225	6429
ಈರುಳ್ಳಿ	500	2300
ಆಲೂಗಡ್ಡೆ	1300	1700
ಕುಸುಬೆ	5119	5169
ಸೋಯಾಬಿನ್	5710	7020

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಕೃಭಾಜನಿನಿ, ಆಣೆಕಟ್ಟು ಸುರಕ್ಷತಾ ಘಟಕ–2, ಆಲಮಟ್ಟಿ. ದೂರವಾಣಿ: 08426–281027.

ಇ–ಮೇಲ್: dam_division@rediffmail.com

ಸಂ:ಕೃಭಾಜನಿನಿ/ಆಸುಘ–2ಆ/ಪಿಬಿ–1/2026–27/580

ದಿನಾಂಕ:17.06.2026

ಅಲ್ಪಾವಧಿ ಸಂಕ್ಷಿಪ್ತ ಟೆಂಡರ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ. ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಆಣೆಕಟ್ಟು ಸುರಕ್ಷತಾ ಘಟಕ–2, ಆಲಮಟ್ಟಿ, ತಾ: ನಿಡಗುಂದಿ ಇವರು ಅರ್ಹ ಗುತ್ತಿಗೆದಾರರಿಗೆ ಇಂಡೆಂಟ್ ಸಂಖ್ಯೆಗಳು Percentage basis from the eligible contractors for the work indents of **Two Cover** – (1) I .No. 2796– 125.99 Lakhs (2) I. No. 2795—195.00 Lakhs ಕೆ.ಟಿ.ಪಿ.ಟಿ. ನಿಯಮಗಳನ್ವಯ, ಅರ್ಹ ಬಿಡ್ಡುದಾರರುಗಳಿಂದ ಟೆಂಡರ್ ಆಹ್ವಾನಿಸಿದ್ದು, ಗುತ್ತಿಗೆದಾರರುಗಳು ಭದ್ರತಾ ಠೇವಣಿಯನ್ನು ಇ–cash ನಲ್ಲಿ ತುಂಬಿ ತಮ್ಮ ಬಿಡ್ಡುಗಳನ್ನು ಭರ್ತಿಗೊಳಿಸಿದ ಟೆಂಡರನ್ನು ಸಲ್ಲಿಸುವದು.

1. ಟೆಂಡರ ಡಾಕುಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ / ಡೌನಲೋಡ್ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವಿಕರಿಸುವ ಕೊನೆಯ ದಿನಾಂಕ: **18.06.2026** ರಿಂದ **06.07.2026** ಸಾಯಂಕಾಲ 5.00 ಘಂಟೆಯವರೆಗೆ.
2. ಪೂರ್ವಭಾವಿ ಸಭೆ :**24.06.2026 ಮುಂಜಾನೆ 11.00 ಘಂಟೆಗೆ.**
3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ (Two Cover): **08.07.2026 ಮುಂಜಾನೆ 11.00 ಘಂಟೆಗೆ.**
4. ಆರ್ಥಿಕ ಬಿಡ್ ತೆರೆಯುವ ದಿನಾಂಕ (Two Cover): **13.07.2026 ಮುಂಜಾನೆ 11.00 ಘಂಟೆಗೆ.**

ಟೆಂಡರಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ ಉಳಿದಂತೆ ಟೆಂಡರನಲ್ಲಿ ಯಾವುದೇ ಬದಲಾವಣೆಗಳನ್ನು ಈ ವೆಬ್‌ಸೈಟನ್ನು ಸಂಪರ್ಕಿಸಿ ಪಡೆಯಬಹುದು. kppp.karnataka.gov.in ಸಂಪರ್ಕಿಸಬೇಕಾದ ಕಛೇರಿ ದೂರವಾಣಿ ಸಂಖ್ಯೆ: 08426–281027.

**ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಆಣೆಕಟ್ಟು ಸುರಕ್ಷತಾ ಘಟಕ–2,
ಆಲಮಟ್ಟಿ.**

ವಾಸಾಸಂಇ/ವಿಜಯಪುರ/160/ಕೆಎಸ್ಎಂಸಿಎ/2026–27

IN THE COURT OF THE HON'BLE III ADDITIONAL CIVIL AND JMFC AT BALLARI
Crl. M.C. NO.7 OF 2026

BETWEEN:
Swamy Naik and others .....Petitioners
AND
The Tahsildar cum Registrar of Births and Deaths Taluk Office, Ballari .....Respondent

NOTICE

To,
The Tahsildar cum Registrar of Births and Deaths, Kampli.

Whereas the above named petitioners have filed application against the respondent seeking death certificate of petitioners GRANDMOTHER / WIFE/ MOTHER SUMLI BHAI W/O. IRANI NAIK, WHO DIED ON 24.06.2023 AT B. BELAGAL VILLAGE, BALLARI TALUK AND DISTRICT.

You are hereby summoned to appear in this court in person or by an Advocate duly instructed and able to answer all material questions relating to the claim or who shall be accompanied by some person able to answer all such questions, on the day 21/07/2026 at 11-00 'O' Clock in the forenoon, to answer the claim And further you are hereby directed to file on that day a Counter of your defense and to Produce on the said day all documents in your possession or power or not, as evidence in support of your defense you shall enter such documents in a list to be annexed to the counter).

Take notice that, in default of your appearance on the day before mentioned, the suit will be heard and determined in your absence.

Given under my hand and seal of this court on this day of 18/06/2026 at Ballari

By Order of the Court
Chief Administrative Officer
Hon'ble III Addl Civil Judge & JMFC Ballari
SHIVARAJ.H
Advocates for the Petitioners

ಬೆಂಗಳೂರು ದಕ್ಷಿಣ ನಗರ ಪಾಲಿಕೆ

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರವರ ಕಛೇರಿ,
ಬೊಮ್ಮನಹಳ್ಳಿ ವಲಯ–2, ಬೆಂಗಳೂರು–560 068.

ಸಂಖ್ಯೆ: ಬೆಂದನಪಾ(ಬೊಮ್ಮ)/ಟೆಂಡರ್/ಪ್ರೋ/02/2026-27 ದಿನಾಂಕ: 18-06-2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಐಎಫ್‌ಟಿ) (ದ್ವಿ ಲಕೋಟೆ ಪದ್ಧತಿ)
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ವೆಬ್‌ಸೈಟ್ https://kppp.karnataka.gov.in

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಬೊಮ್ಮನಹಳ್ಳಿ ವಲಯ, (ಈ ದಾಖಲಾತಿಗಳಲ್ಲಿ ಉದ್ಯೋಗದಾತರು ಎಂದು ಓದಲಾಗಿದೆ) ರವರು ಕೆಟಿಪಿಪಿ ನಿಯಮಗಳು 2000ರ ಅನುಸಾರವಾಗಿ ಕಾರ್ಮಿಕ ಇಲಾಖೆಯಡಿಯಲ್ಲಿ ನೋಂದಾಯಿತರಾಗಿರುವ ಅರ್ಹ ಮತ್ತು ಅನುಭವಿ ವ್ಯಕ್ತಿಗಳು / ಏಜೆನ್ಸಿಗಳು / ಸಂಸ್ಥೆಗಳಿಂದ (ಈ ದಾಖಲಾತಿಗಳಲ್ಲಿ ಗುತ್ತಿಗೆದಾರರೆಂದು ಓದಲಾಗಿದೆ) ಉದ್ಯಾನವನಗಳ ಭೂದೃಶ್ಯ ಅಭಿವೃದ್ಧಿಗಾಗಿ ಟೆಂಡರ್‌ನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು / ವರ್ಗ
1.	ಬೊಮ್ಮನಹಳ್ಳಿ ವಲಯ ಉದ್ಯಾನವನಗಳಲ್ಲಿ ಭೂದೃಶ್ಯ ಅಭಿವೃದ್ಧಿ ಮತ್ತು ಬೋರ್‌ವೆಲ್ ಸೌಲಭ್ಯ ಸೇರಿದಂತೆ ಇತರ ಸಿವಿಲ್ ಕಾಮಗಾರಿಗಳು (ಇತರೆ) ಅಂದಾಜು ವೆಚ್ಚ (ಲಕ್ಷ ರೂಗಳಲ್ಲಿ): 200.00, ಇಎಂಡಿ (ರೂಗಳಲ್ಲಿ): 3,00,000/–

ಟೆಂಡರ್‌ನ ಕಾರ್ಯಸೂಚಿ: 1. ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕೆಪಿಪಿ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡುವ ದಿನಾಂಕ: **19–06–2026** ರಿಂದ. **2.** ಪೂರ್ವ ಬಿಡ್ ಸಭೆಯ ದಿನಾಂಕ: **20–06–2026** ರ ಬೆಳಗ್ಗೆ **11:30** ಗಂಟೆಗೆ ನಡೆಸಲಾಗುವುದು. **3.** ಟೆಂಡರ್ ಕೊನೆಯ ದಿನಾಂಕ: **25–06–2026ರ ಸಂಜೆ 4:00 ಗಂಟೆಗೆ. 4.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **29–06–2026 ರ ಸಂಜೆ 4.30 ಗಂಟೆಗೆ. 5.** ಆರ್ಥಿಕ ಬಿಡ್ ತೆರೆಯುವ ದಿನಾಂಕ ತಾಂತ್ರಿಕ ಬಿಡ್ ಅನುಮೋದನೆಯ ನಂತರ.

ಸಹಿ/– ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು,
ಬೊಮ್ಮನಹಳ್ಳಿ ವಲಯ, ಬೆಂದನಪಾ.

PAPER PUBLICATION
IN THE COURT OF HON'BLE 1 ADDL CIVIL JUDGE AND JMFC AT GANGAVATHI
CRIMINAL MISC. No: 723/2026

BETWEEN:-Smt. Dodda Basamma and others ....Petitioner's
V/S
The Birth & Death Rigistrar, Tahasildar Office Kanakagiri ....Respondent

TO WHOMESOEVER IT MAY CONCERN
NOTICE

WHEREAS above named petitioner herein have instituted above petition under section 13(2) of Birth and Deaths Act 1969 against the respondents for the purpose of seeking Death certificate of Death of the Petitioner No: 01 Husband by the name Sri.Rajappa S/o Shyamanna he was died on 23/02/2020 at residential house Uddihal Village, Tq:Kanakagiri Di: Koppal

Any person interested are hereby summoned to appear before this court in person or by pleader duly instructed aired able to answer all material questions ralatind to the petition on Dated 17-07-2026 at 11-00 a.m. before this court In default of your appearance on the date/day of above petition will be heard and determined as Ex-Parte

Place; Gangavathi
Date; 15/06/2026

By order of the court
Sirasthedhar
HON'BLE 1 ADDL CIVIL JUDGE AND JMFC AT GANGAVATHI
Advocate for the Petitioner
K.R.S Advocate Gangavathi

ಕ್ರಿ.ಮಿ. ನಂ. 49/2026

ಮಾನ್ಯ 2ನೇ ಜೆ.ಎಮ್.ಎಫ್.ಸಿ. ನ್ಯಾಯಾಧೀಶರ ನ್ಯಾಯಾಲಯ, ಹುಬ್ಬಳ್ಳಿ

ಅರ್ಜಿದಾರ : ಶ್ರೀ ಅಬ್ದುಲ್ ರಜಾಕಸಾಬ ತಂದೆ ಅಬ್ದುಲ್ ಮುನಾಫ ಮುಲ್ಲಾ

ವಿರುದ್ಧ

ಎದುರುಗಾರ : ಮಾನ್ಯ ತಹಶೀಲ್ದಾರರು, ಮಿನಿ ವಿಧಾನಸೌಧ, ಹುಬ್ಬಳ್ಳಿ, ತಾ: ಹುಬ್ಬಳ್ಳಿ

ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 20 ರ ಹಾ ಕಲಂ 151ರ ಕೆಳಗೆ ಅರ್ಜಿ

ಮೇಲೆ ನಮೂದಿಸಿದ ಪ್ರಕರಣದಲ್ಲಿ ಅರ್ಜಿದಾರನ ಅಜ್ಜಿಯಾದ **ಶ್ರೀಮತಿ ಶರೀಫಾಬಿ ಕೋಂ. ಮೋದಿನ ಸಾಬ ಮುಲ್ಲಾ"** ಇವರು ಮರಣ ಹೊಂದಿದ ದಿನಾಂಕ: **09–08–1996** ರಂದು ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲ್ಲೂಕಿನ ಕೋಳಿವಾಡ ಗ್ರಾಮದ ಮನೆಯಲ್ಲಿ ಮರಣ ಹೊಂದಿದ್ದು ಇರುತ್ತದೆ. ಅಂತಾ ಕೋರಿ ಅರ್ಜಿ ಸಲ್ಲಿಸಿದ್ದು ಆ ಪ್ರಕಾರ ಮರಣ ಪ್ರಮಾಣ ಪತ್ರ ಪಡೆಯಲು ಮಾನ್ಯ ನ್ಯಾಯಾಲಯಕ್ಕೆ ಕೋರಿದ್ದು, ಸದರೀ ಮರಣ ದಾಖಲಾತಿಯ ಬಗ್ಗೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು ಹಿತಸಂಬಂಧ ತಂಟೆ ವ ತಕರಾರು ವಗೈರೆ ಇದ್ದಲ್ಲಿ ಅಂತವರ ಹಾಜರಾತಿಗಾಗಿ ದಿ: **18–07–2026** ರಂದು ಬೆಳಗ್ಗೆ **11–00** ಗಂಟೆಗೆ ಈ ನ್ಯಾಯಾಲಯದಲ್ಲಿ ಮುದ್ದತ್ತು ನೇಮಿಸಿದ್ದು ಇರುತ್ತದೆ.

ಕಾರಣ ಸದರೀ ಹಿತಾಸಕ್ತಿ ಹಾಗೂ ತಕರಾರು ಇರುವವರು ತಾವಾಗಲೀ ಅಥವಾ ತಮ್ಮಿಂದ ಮಾಹಿತಿ ವ ಹಕ್ಕು ಪಡೆದ ವಕೀಲರ ಮೂಲಕವಾಗಲೀ ಈ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು, ಇದಕ್ಕೆ ತಪ್ಪಿದಲ್ಲಿ ಪ್ರಕರಣವನ್ನು ತಮ್ಮ ಗೈರು ಹಾಜರಿಯಲ್ಲಿ ನಿರ್ಣಯಿಸಲಾಗುವುದು.

ನನ್ನ ಸಹಿಯೊಂದಿಗೆ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ 2026ರ ಜೂನ ತಿಂಗಳಿನ 18 ನೇ ದಿನದಂದು ಇದನ್ನು ಕೊಡಲಾಗಿದೆ.

ಕೋರ್ಟಿನ ಆಜ್ಞೆಯ ಮೇರೆಗೆ
ಹುಬ್ಬಳ್ಳಿ (ಕೋರ್ಟ ಮೊಹರು) ಸಹಿ/–ಶಿರಸ್ತೇದಾರರು
ದಿ:18–06–2026 ಮಾನ್ಯ 2ನೇ ಜೆ.ಎಮ್.ಎಫ್.ಸಿ.
(ಜಿ.ಹಿ.ಜಂಬ್ಗಿ) ನ್ಯಾಯಾಧೀಶರ ನ್ಯಾಯಾಲಯ,
ಅರ್ಜಿದಾರರ ಪರ ವಕೀಲರು, ಹುಬ್ಬಳ್ಳಿ ಹುಬ್ಬಳ್ಳಿ

ಕ್ರಿಮಿನಲ್ ಮಿಸಲೆನಿಯಸ್ ನಂ :438/2026

ಮಾ॥ ಜೆ.ಎಮ್.ಎಫ್.ಸಿ. ಸವಣೂರ ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು :ಶ್ರೀಮತಿ ಮಲ್ಲಮ್ಮ ಕೋಂ ಕಲ್ಲಪ್ಪ ಮಾದರ ವಯಸ್ಸು:31 ವರ್ಷ ಉದ್ಯೋಗ:ಕೂಲಿ ಸಾ:ಸವಣೂರ ತಾ:ಸವಣೂರ

ವಿರುದ್ಧ

ಎದುರುಗಾರರು: ಜನನ–ಮರಣಗಳ ನೋಂದಣಿ ಅಧಿಕಾರಿಗಳು ಸವಣೂರ. ಇವರ ಪರವಾಗಿ ಮುಖ್ಯಾಧಿಕಾರಿಗಳು ಪುರಸಭೆ.ಸವಣೂರ.

ಸಾರ್ವಜನಿಕ ನೋಟೀಸು

ಇದರಲ್ಲಿ ಅರ್ಜಿದಾರರಾದ ಶ್ರೀಮತಿ ಮಲ್ಲಮ್ಮ ಕೋಂ ಕಲ್ಲಪ್ಪ ಮಾದರ ಇವರು ತಮ್ಮ ತಾಯಿಯಾದ ಶ್ರೀಮತಿ ರೇಣುಕಾ ಕೋಂ ಮೋಹನ ಸಾತಪತಿ ಇವರು ಸವಣೂರ ತಾಲ್ಲೂಕಾ ಪೈಕಿ ಸವಣೂರ ನಗರದ ಸಮಗಾರ ಓಣಿಯಲ್ಲಿನ ಅರ್ಜಿದಾರರ ಮನೆಯಲ್ಲಿ ದಿನಾಂಕ: 01–03–2013 ರಂದು ಮರಣ ಹೊಂದಿರುತ್ತಾರೆಂದು ಎದುರುಗಾರರ ಮರಣಗಳ ನೋಂದಣಿ ಪುಸ್ತಕದಲ್ಲಿ ನೊಂದಾಯಿಸಿಕೊಳ್ಳಲು ಮೇಲ್ಕಾಣಿಸಿದ ಮಾನ್ಯ ಕೋರ್ಟಿನಲ್ಲಿ ಅರ್ಜಿ ಸಲ್ಲಿಸಿದ್ದು ಇರುತ್ತದೆ. ಕಾರಣ ಸದರ ಅರ್ಜಿಗೆ ಯಾರಾದರು ತಕರಾರು ವಗೈರೆ ಮಾಡುವವರಿದ್ದಲ್ಲಿ ಅಂತವರು ದಿನಾಂಕ:22–07–2026ರಂದು ಮುಂಜಾನೆ 10=30 ಗಂಟೆಗೆ ಮೇಲ್ಕಾಣಿಸಿದ ಮಾನ್ಯ ಕೋರ್ಟಿನ ಪ್ರಕರಣದಲ್ಲಿ ತಾವಾಗಲಿ ಅಥವಾ ತಮ್ಮ ಪರ ವಕೀಲರ ಮೂಲಕವಾಗಲಿ,ಹಾಜರಾಗಿ ತಮ್ಮ ತಕರಾರು ಸಲ್ಲಿಸಬೇಕು.ಇಲ್ಲದೆ ಇದ್ದಲ್ಲಿ ಕಾನೂನ ಪ್ರಕಾರ ಮುಂದಿನ ಆದೇಶ ಮಾಡ ಲಾಗುತ್ತದೆ.ಈ ದಿನ 15–06–2026 ರಂದು ಮೊಹರನೊಂದಿಗೆ ಕೊಡಲ್ಪಟ್ಟಿರುತ್ತದೆ.

ಸಹಿ/–ಶಿರಸ್ತೇದಾರರು
ದಿವಾಣಿ ನ್ಯಾಯಾಧೀಶರು ವ 1ನೇ ವರ್ಗದ ನ್ಯಾಯಿಕ ದಂಡಾಧಿಕಾರಿಗಳು ಸವಣೂರ ಇವರ ನ್ಯಾಯಾಲಯ.
ಸಹಿ/– ಶ್ರೀ ಎಸ್ ಬಿ ಪಾಟೀಲ
ಅರ್ಜಿದಾರರ ಪರ ವಕೀಲರು,ಸವಣೂರ

CHANGE OF NAME

I, **SHIVALEELA BAGI** (Old Name) Resident of H No #15/A/2 Ward No 5, Koulapet, Bagalkol, Karnataka 587101 have changed my name as **SHIVALEELA ASHOK CHATTER** (New Name) henceforth I will be called and recognized by new name for all future purposes, dated: 18/06/2026.

CHANGE OF NAME

I, **NAVYASHRI BHAT** (Old Name) Resident of H No: 09 At Post Gunda Tq: Joida 581325 (address) have changed my name as **NAVYASHRI RAMACHANDRA BHAT** (New Name) henceforth I will be called and recognized by new name for all future purposes, dated: 18/06/2026.

CHANGE OF NAME

I, **PAVANKUMAR BELAWADIMATH** (Old Name) Resident of No 178 Ghantikeri Oni Hubli 580020 Dharwad (address) have changed my name as **PAVANKUMAR JAMBHAYYA BELAWADIMATH** (New Name) henceforth I will be called and recognized by new name for all future purposes, dated: 18/06/2026.

CHANGE OF NAME

I, **ABDUL HAMID MOHAMMED SADIQUE QAZI** (Old Name) Resident of Dhalayat Galli Haliyal, have changed my name as **ABDULHAMID MAHAMADSADIK KHAJI** (New Name) for all purposes, vide affidavit dated: 16/06/2026 before notary **Angadi Akkamahadevi B.**

ಕ್ರಿಮಿನಲ್ ಮಿಸ್ಲೇನಿಯಸ್ ನಂ.33/2026

ಮಾನ್ಯ 1ನೇ ಜೆ.ಎಮ್.ಎಫ್.ಸಿ. ನ್ಯಾಯಾಧೀಶರ ನ್ಯಾಯಾಲಯ, ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ

ಅರ್ಜಿದಾರಳು : ಶ್ರೀನಿಧಿ ಕೋಂ. ಸುನೀಲ ಬಂದಿಷ್ಠಿ

–ವಿರುದ್ಧ–

ಎದುರುಗಾರರು : ಮಾನ್ಯ ಸಹಾಯಕ ಆಯುಕ್ತರು,
ಜನನ ವ ಮರಣ ನೋಂದಣಾಧಿಕಾರಿಗಳು, ಹು.ಧಾ.ಮ. ಪಾಲಿಕೆ, ಹುಬ್ಬಳ್ಳಿ,

ನೋಟೀಸು

ಈ ಮೇಲೆ ನಮೂದಿಸಿದ ಪ್ರಕರಣದಲ್ಲಿ ಅರ್ಜಿದಾರಳು ತನ್ನ ಮಗನಾದ **"ವರುಣ ಸುನೀಲ ಬಂದಿಷ್ಠಿ"** ಇವನು ದಿನಾಂಕ: **27–03–2021** ರಂದು ಅರ್ಜಿದಾರಳ ಮನೆಯಾದ **2ನೇ ಕ್ರಾಸ್, ಸಿ.ಬಿ.ಟಿ. ಹತ್ತಿರ, ಬಿ.ಎಸ್.ಎನ್.ಎಲ್ ಟವರ ಎದುರು, ಹೊಸ ಕಿಲ್ಲಾ, ಹುಬ್ಬಳ್ಳಿಯಲ್ಲಿ ಮೃತ ಪಟ್ಟಿರುತ್ತಾನೆ** ಅಂತಾ ಕೋರಿ ಅರ್ಜಿಸಲ್ಲಿಸಿದ್ದು, ಆ ಪ್ರಕಾರ ಮರಣ ಪ್ರಮಾಣ ಪತ್ರ ಪಡೆಯಲು ಮಾನ್ಯ ನ್ಯಾಯಾಲಯಕ್ಕೆ ಮೇಲ್ಕಾಣಿಸಿದ ಅರ್ಜಿಯನ್ನು ಸಲ್ಲಿಸಿದ್ದು, ಸದರ ಅರ್ಜಿಯ ಚೌಕಶಿಯು ತಾ: **10–07–2026** ರಂದು ಬೆಳಿಗ್ಗೆ **11:00 ಗಂಟೆಗೆ ಈ ನ್ಯಾಯಾಲಯದಲ್ಲಿ ಮುದ್ದತ್ತು ನೇಮಿಸಿದ್ದು ಇರುತ್ತದೆ.**

ಈ ಕುರಿತು ಯಾರಿಗಾದರೂ ಯಾವುದೇ ರೀತಿಯ ಹಕ್ಕು ಹಿತಸಂಬಂಧ ತಂಟೆ ವ ತಕರಾರು ವಗೈರೆ ಇದ್ದಲ್ಲಿ ಅಂತವರು ಮೇಲ್ಕಂಡ ದಿನಾಂಕದಂದು ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗಿ ತಮ್ಮ ಆಕ್ಷೇಪಣೆಯನ್ನು ಸಲ್ಲಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಪ್ರಕರಣವನ್ನು ತಮ್ಮ ಗೈರು ಹಾಜರಿಯಲ್ಲಿ ನಿರ್ಣಯಿಸಲಾಗುವುದು.

ನನ್ನ ಸಹಿಯೊಂದಿಗೆ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ **2026** ರ ಜೂನ ತಿಂಗಳಿನ **17** ನೇ ದಿನದಂದು ಇದನ್ನು ಕೊಡಲಾಗಿದೆ.

ಸ್ಥಳ: ಹುಬ್ಬಳ್ಳಿ, (Court Seal) ಸಹಿ/– ಶಿರಸ್ತೇದಾರರು
ದಿನಾಂಕ : **17.06.2026** ಮಾನ್ಯ 1ನೇ ಜೆ.ಎಮ್.ಎಫ್.ಸಿ. ನ್ಯಾಯಾಧೀಶರ ನ್ಯಾಯಾಲಯ, ಹುಬ್ಬಳ್ಳಿ
ಸಹಿ/– ಶ್ರೀ. ಮಹೇಶ. ಎಸ್. ಹಿರೇಮಠ,
ಅರ್ಜಿದಾರಳ ಪರ ವಕೀಲರು, ಹುಬ್ಬಳ್ಳಿ,

ಕ್ರಿ.ಮಿ.ನಂ : 71/2026

ಮಾನ್ಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ ಕಲಘಟಗಿ ಅವರಲ್ಲಿ

ಅರ್ಜಿದಾರ: ಷಣ್ಮುಖಪ್ಪ ತಂದೆ ಯಲ್ಲಪ್ಪ ಕಿಚಡಿ

ವಿರುದ್ಧ

ಎದುರುಗಾರರು :ಮೇ॥ ತಹಶೀಲ್ದಾರರು ಹಾಗೂ ಜನನ ವ ಮರಣ ನೋಂದಣಿ ಅಧಿಕಾರಿಗಳು, ಕಲಘಟಗಿ. ಹಾಗೂ ಇನ್ನೊಬ್ಬರು.

ಸೈಟೇಶನ

ಮೇಲ್ಕಾಣಿಸಿದ ಪ್ರಕರಣವನ್ನು ಅರ್ಜಿದಾರನ ಸಹೋದರಿಯಾದ, ಶ್ರೀಮತಿ ಪಾರ್ವತೆವ್ವ ಕೋಂ ಮಹಾದೇವ ಕಳ್ಳಿಮನಿ ಇವರು ದಿನಾಂಕ: 10/12 /2003 ರಂದು ಕಲಘಟಗಿ ತಾಲೂಕಿನ ಹಿರೇ ಹೊನ್ನಿಹಳ್ಳಿ ಗ್ರಾಮದಲ್ಲಿ ಮರಣ ಹೊಂದಿದ್ದು ಇರುತ್ತದೆ. ಸದರಿ ಮೃತಳ ಮರಣ ಪ್ರಮಾಣ ಪತ್ರ ಪಡೆಯುವ ಸಲುವಾಗಿ ಸದರಿ ಪ್ರಕರಣವನ್ನು ಮಾನ್ಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ ಕಲಘಟಗಿ ಇವರಲ್ಲಿ ದಾಖಲ ಮಾಡಿದ್ದು ಇರುತ್ತದೆ. ಸದರ ಮೋಶಿಗೆ ಯಾರಾದರೂ ಸರಳ ವ ಸಮೀಪದ ವಾರಸುದಾರರು ಇದ್ದರೆಮತ್ತು ಅದಕ್ಕೆ ಯಾವುದೇ ರೀತಿಯ ತಕರಾರು ಇದ್ದಲ್ಲಿ ದಿನಾಂಕ :07/07/ 2026 ರಂದು ಬೆಳಿಗ್ಗೆ 11–00 ಘಂಟೆಗೆ ತಮ್ಮ ತಮ್ಮ ತಕರಾರನ್ನು ಮಾನ್ಯ ನ್ಯಾಯಾಲಯದ ಮುಂದೆ ಹಾಜರಪಡಿಸಬಹುದು ಇಲ್ಲದೇ ಇದ್ದ ಪಕ್ಷದಲ್ಲಿ,ಯಾರದು ತಕರಾರು ಇಲ್ಲವೆಂದು ಸದರಿ ಪ್ರಕರಣವನ್ನು ಇತ್ಯರ್ಥ ಪಡಿಸಲಾಗುವುದು.

ಸ್ಥಳ : ಕಲಘಟಗಿ
ದಿನಾಂಕ: 18/06/2026

ನ್ಯಾಯಾಲಯ ಆದೇಶದ ಮೇರೆಗೆ
ಸಹಿ/–ಶಿರಸ್ತೆದಾರರು (ದಿವಾಣಿ ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ, ಕಲಘಟಗಿ)
ಸಹಿ/–(ಶ್ರೀ ವ್ಹಿ.ಬಿ.ಶಿವನಗೌಡ್ರ)
ಅರ್ಜಿದಾರನ ಪರ ವಕೀಲರು.

ಜಿಲ್ಲಾ ಪಂಚಾಯತ ಗದಗ

ಉಪ ನಿರ್ದೇಶಕರ ಕಾರ್ಯಾಲಯ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಗದಗ

ದೂರವಾಣಿ ಸಂಖ್ಯೆ: 08372–295153 Email-gdgddahvs@gmail.com

ಸಂಖ್ಯೆ: ಉನಿಗ/ಪಪಾಇ/ಹೊ.ಗು.ಗ.ನಿ/2026–2027 ದಿನಾಂಕ: 18–06–2026

ಟೆಂಡರ್ ಅಧಿಸೂಚನೆ

ಉಪನಿರ್ದೇಶಕರು (ಆಡಳಿತ) ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಗದಗ ಕಚೇರಿಯಲ್ಲಿ ಒಬ್ಬ ಗಣಕಯಂತ್ರ ನಿರ್ವಾಹಕರನ್ನು ಹೊರ ಸಂಪನ್ಮೂಲ ಸಂಸ್ಥೆಗಳಿಂದ ಸೇವೆ ಪಡೆಯಲು ಒಂದು ವರ್ಷದ ಅವಧಿಗೆ ಅಂದರೆ **01–04–2026** ರಿಂದ **28–02–2027**ರ ವರೆಗೆ ನಿಯಮಾನುಸಾರ ವಿಧಿಸಿರುವ ಷರತ್ತುಗೊಳಪಟ್ಟು ಎರಡು ಲಕೋಟೆಗಳ ಪದ್ಧತಿಯಲ್ಲಿ ಟೆಂಡರನ್ನು ಕರೆಯಲಾಗಿದ್ದು

ಆಸಕ್ತಿಯುಳ್ಳ ಹೊರ ಸಂಪನ್ಮೂಲ ಸಂಸ್ಥೆಯವರು ರೂ.1000 (ಜಿಎಸ್ ಟಿ) ರೂ ಗಳನ್ನು ಸಂದಾಯ ಮಾಡಿ ದಿನಾಂಕ: 18–06–2026 ರಿಂದ 29–06–2026 ರ ವರೆಗೆ ಸಂಜೆ 4:00 ಗಂಟೆಯವರೆಗೆ ಟೆಂಡರ್ ಫಾರಂಗಳನ್ನು ಪಡೆಯಬಹುದಾಗಿದೆ. ಭರ್ತಿಮಾಡಿದ ಫಾರಂಗಳನ್ನು ದಿನಾಂಕ: 29–06–2026 ರಂದು ಸಂಜೆ 4:00 ಗಂಟೆಯೊಳಗೆ ಟೆಂಡರ್ ಅರ್ಜಿಗಳನ್ನು ಸಲ್ಲಿಸುವುದು, ದಿನಾಂಕ: 30–06–2026ರ ಸಂಜೆ 4:30 ಗಂಟೆಗೆ ಟೆಂಡರ್ ತೆರೆದು ಅಂತಿಮಗೊಳಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಈ ಕಚೇರಿಗೆ ಸಂಪರ್ಕಿಸಬಹುದಾಗಿದೆ. ದೂರವಾಣಿ ಸಂಖ್ಯೆ: **08372–295153**

ಸಹಿ/– ಉಪ ನಿರ್ದೇಶಕರು (ಆಡಳಿತ)
ಪಶುಪಾಲನ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ,
ಗದಗ.

ಡಿಐಪಿಆರ್/ಗದಗ/127/
ಮಣಿಪಾಲ್/2026–27

ಕ್ರಿ.ಮಿ.ನಂ: 627/2026

2ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು :1.ಹಾಲವ್ವ ಕೋಂ ಜಮಾಲಪ್ಪ ಚಲವಾದಿ & ಇನ್ನೊಬ್ಬರು

ವಿರುದ್ಧ

ಎದುರುಗಾರರು: ಸಿ.ಎಂ.ಸಿ.ರಾಣೇಬೆನ್ನೂರು

:–ಇಸ್ತಿಯಾರ ನಾಮಾ–:

ಇದರಲ್ಲಿ 1ನೇ ಅರ್ಜಿದಾರಳ ಗಂಡ & 2 ನೇ ಅರ್ಜಿದಾರನ ತಂದೆಯಾದ ಜಮಾಲಪ್ಪ ತಂದೆ ಭರಮಪ್ಪ ಚಲವಾದಿ, ಇವರು ದಿ:07–05–1982 ರಂದು ರಾಣೇಬೆನ್ನೂರು ತಾಲೂಕ ಅಸುಂಡಿ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ.1 ನೇ ಅರ್ಜಿದಾರಳ ಗಂಡ & 2ನೇ ಅರ್ಜಿದಾರನ ತಂದೆಯ ಮರಣ ದಿನಾಂಕವನ್ನು ಎದುರುಗಾರರ ಕಛೇರಿಯ ಜನನ–ಮರಣ ನೋಂದಣಿ ದಾಖಲಾತಿಯಲ್ಲಿ ನೋಂದಣಿ ಮಾಡಿಸಿಕೊಳ್ಳುವುದು ಅತೀ ಅವಶ್ಯ ಇದ್ದು ಇದರ ಬಗ್ಗೆ ಸಾರ್ವಜನಿಕರ ಯಾವುದೇ ತಂಟೆ ವ ತಕರಾರು ಇದ್ದಲ್ಲಿ ದಿ: 03/08/2026 ರಂದು ಬೆಳಿಗ್ಗೆ 11.00 ಗಂಟೆಗೆ ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಮಾನ್ಯ ನ್ಯಾಯಾಲಯದವರು ಮುಂದಿನ ಆದೇಶವನ್ನು ಮಾಡುತ್ತಾರೆ ಅಂತಾ ಕೊಟ್ಟ ಸಾರ್ವಜನಿಕ ತಿಳುವಳಿಕೆ ನೋಟೀಸು.

ಮಾನ್ಯ ನ್ಯಾಯಾಲಯದ ಮೊಹರಿನೊಂದಿಗೆ ಇಂದು ದಿ:18/06/2026 ರಂದು ನೀಡಿದೆ.

ಸ್ಥಳ: ರಾಣೇಬೆನ್ನೂರು
ದಿನಾಂಕ: 18/06/2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/–ಶಿರಸ್ತೇದಾರರು 2ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ.ಎಂ.ಎಫ್.ಸಿ, ರಾಣೇಬೆನ್ನೂರ ಇವರ ನ್ಯಾಯಾಲಯ
ಸಹಿ/–ಶ್ರೀ ಪಿ.ಬಿ.ಗೌರಕ್ಕಳವರ,
ಅರ್ಜಿದಾರ ಪರ ವಕೀಲರು

ಕ್ರಿಮಿ. ನಂ.: 606/2026

ರಾಣೇಬೆನ್ನೂರ 1ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಇವರ ನ್ಯಾಯಾಲಯದಲ್ಲಿ.

ಅರ್ಜಿದಾರರು :1.ಚಿಕ್ಕಪ್ಪ ತಂದೆ ದ್ಯಾಮಪ್ಪ ಮ್ಯಾಗೇರಿ ವಯ:55 ವರ್ಷ. ಉದ್ಯೋಗ: ಶೇತ್ಕಿ ಸಾ॥ ಜೋಯಿಸರಹರಳಹಳ್ಳಿ ತಾ॥ ರಾಣೇಬೆನ್ನೂರು ಜಿ॥ ಹಾವೇರಿ ಮತ್ತು ಇತರರು

ವಿರುದ್ಧ

ಎದುರುಗಾರರು :1.ತಹಶೀಲ್ದಾರ ರಾಣೇಬೆನ್ನೂರು ತಾ॥ ರಾಣೇಬೆನ್ನೂರು, ಜಿ॥ ಹಾವೇರಿ.

'ಇಸ್ತಿಯಾರ ನಾಮೆ'

ಇದರಲ್ಲಿ ಅರ್ಜಿದಾರರ ತಾಯಿಯಾದ ಗಂಗಮ್ಮ ಕೋಂ ದ್ಯಾಮಪ್ಪ ಮ್ಯಾಗೇರಿ ಇವರು ದಿನಾಂಕ :05–09–2007ರಂದು ರಾಣೇಬೆನ್ನೂರ ತಾಲೂಕ ಜೋಯಿಸರಹರಳಹಳ್ಳಿ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ.ಇವರ ಮರಣದ ದಿನಾಂಕವನ್ನು ಎದುರುಗಾರರ ಕಛೇರಿಯ ಜನನ–ಮರಣ ನೋಂದಣಿ ವಹಿಯಲ್ಲಿ ನೋಂದಣಿ ಮಾಡಿಕೊಳ್ಳುವುದು ಅತೀ ಅವಶ್ಯ ಇದ್ದು ಇದರ ಬಗ್ಗೆ ಸಾರ್ವಜನಿಕರ ತಂಟೆ ವ ತಕರಾರು ಇದ್ದಲ್ಲಿ ದಿನಾಂಕ:6/7/2026ರಂದು ಬೆಳಿಗೆ 10–30 ಗಂಟೆಗೆ ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಮಾನ್ಯ ನ್ಯಾಯಾಲಯದವರು ಮುಂದಿನ ಆದೇಶ ಮಾಡುತ್ತಾರೆ ಅಂತಾ ಕೊಟ್ಟ ಸಾರ್ವಜನಿಕ ತಿಳುವಳಿಕೆ ನೋಟೀಸು.

ಈ ಹೊತ್ತು ನ್ಯಾಯಾಲಯದ ಶೀಲು ವ ಮೋಹರು ಹಾಕಿ 6–6–2026 ಕೊಡಲ್ಪಟ್ಟಿದೆ

ಸ್ಥಳ:ರಾಣೇಬೆನ್ನೂರು
ದಿನಾಂಕ 06–06–2026
ಸದರಿಯವರ ಪರಿಚಯವಿದೆ

ನ್ಯಾಯಾಲಯದ ಆದೇಶ ಮೇರೆಗೆ
ಸಹಿ/–ಶಿರಸ್ತೇದಾರರು,ಮಾನ್ಯ 1ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ.ಎಮ್.ಎಫ್.ಸಿ.ರಾಣೇಬೆನ್ನೂರು
ಸಹಿ/–ಶ್ರೀ ಎಸ್.ಬಿ. ಶಿಗ್ಗಾವಿ ವಕೀಲರು ರಾಣೇಬೆನ್ನೂರು

ಅಸಲು ದಾವಾ ಸಂಖ್ಯೆ: 221/2024

ಮೆ॥ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಬಾದಾಮಿ

1)ಶ್ರೀಮತಿ ರೇಣವ್ವ ಗಂ: ಯಲ್ಲಪ್ಪ ಜಗ್ಗಲ ಹಾಗೂ ಇನ್ನೊಬ್ಬರು ....ವಾದಿಯರು

ವಿರುದ್ಧ

1) ಶ್ರೀಮತಿ ಯಲ್ಲವ್ವ ಗಂ: ಯಮನಪ್ಪ ಜಗ್ಗಲ ಹಾಗೂ ಇತರರು ....ಪ್ರತಿವಾದಿಯರು

ಗೆ

1) ಶ್ರೀ ಸಂತೋಷ ತಂ: ಯಮನಪ್ಪ ಜಗ್ಗಲ ವಯಸ್ಸು: 33 ವರ್ಷ, ಉದ್ಯೋಗ: ಒಕ್ಕಲುತನ ಸಾ: ಹಾನಾಪೂರ ಎಸ್.ಪಿ ತಾ॥ ಗುಳೆದಗುಡ್ಡ ಜಿ॥ ಬಾಗಲಕೋಟೆ

........ಎದುರುದಾರರು/ಪ್ರತಿವಾದಿ ನಂ:3

ಸಾರ್ವಜನಿಕ ಜಾಹೀರು ನೋಟಿಸು

ಸದರಿ ಮೇಲ್ಕಾಣಿಸಿದ ದಾವಾದಲ್ಲಿನ ಪ್ರತಿವಾದಿ ನಂ:3 ರವರಾದ ಶ್ರೀ ಸಂತೋಷ ತಂ:ಯಮನಪ್ಪ ಜಗ್ಗಲ ರವರಿಗೆ ಸಾಕಷ್ಟು ಭಾರಿ ಮಾನ್ಯ ನ್ಯಾಯಾಲಯದ ಮುಖಾಂತರ ಸಮನ್ಸನ್ನು ಕಳುಹಿಸಿದರೂ ಸಹ ಮೇಲಿನವರು ಉದ್ದೇಶ ಪೂರ್ವಕವಾಗಿ ಪಡೆದುಕೊಂಡಿರುವುದಿಲ್ಲಾ ಆದ ಕಾರಣ ಸದರಿ ದಾವಾದ ಮೇಲಿನ ಪ್ರತಿವಾದಿ ನಂ:3 ನ್ಯಾಯಾಲಯಕ್ಕೆ ಬಂದು ಹಾಜರಾಗುವುದು ಅತೀ ಅವಶ್ಯವಾಗಿರುತ್ತದೆ, ಆದ್ದರಿಂದ ಮೆ॥ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಬಾದಾಮಿ ಇವರ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 221/2024 ಅಂತಾ ದಾಖಲಿಸಿದ್ದು ಸದರಿ ಮೇಲ್ಕಾಣಿಸಿದ ದಾವಾಕ್ಕೆ ಸಂಬಂಧಿಸಿದಂತೆ ಮೇಲಿನವರದ್ದು ಏನಾದರೂ ಹಿತಾಸಕ್ತಿ ಮತ್ತು ತಕರಾರು ಇದ್ದಲ್ಲಿ ಸಂಬಂಧಪಟ್ಟವರು ದಿನಾಂಕ: 22/07/2026 ರಂದು ಬೆಳಿಗ್ಗೆ 10:30 ಘಂಟೆಗೆ ತಾವಾಗಲಿ ಅಥವಾ ತಮ್ಮ ಪರ ವಕೀಲರ ಮುಖಾಂತರವಾಗಲಿ ಹಾಜರಾಗಿ ತಕರಾರು ವೈಗೆರೆ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾವುದೇ ತಕರಾರು ಇರುವುದಿಲ್ಲಾ ಅಂತಾ ಪರಿಗಣಿಸಿ ಮುಂದಿನ ಆದೇಶವನ್ನು ಮಾಡಲಾಗುವುದು ಅಂತಾ ಕೊಟ್ಟ ಸಾರ್ವಜನಿಕ ನೋಟಿಸು

ಈ ದಿವಸ ಮೆ॥ ನ್ಯಾಯಾಲಯದ ಆದೇಶದ ಮೇರೆಗೆ ಸಹಿ ಮತ್ತು ಮೊಹರಿನೊಂದಿಗೆ ಹೊರಡಿಸಲಾಗಿದೆ ದಿನಾಂಕ: 16/06/2026

ನ್ಯಾಯಾಲಯದ ಆದೇಶದ ಮೇರೆಗೆ
ಸ್ಥಳ: ಬಾದಾಮಿ
ದಿನಾಂಕ: 11–06–2026

ಸಹಿ/–ಶಿರಸ್ತೆದಾರರು
ಮೆ॥ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಬಾದಾಮಿ
ಸಹಿ/–ಶ್ರೀ ಎಮ್.ಎಮ್.ಗೌಡರ ವಕೀಲರು
ವಾದಿಯರ ಪರ ವಕೀಲರು

ಪತ್ರಿಕಾ ಪ್ರಕಟಣೆಗಾಗಿ

ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗಂಗಾವತಿ ಇವರ ಸಮಕ್ಷಮದಲ್ಲಿ

ಕ್ರಿಮಿನಲ್ ಮಿಸಲೇನಿಯಸ್ ಸಂಖ್ಯೆ: 32 /2025

ಅರ್ಜಿದಾರರು :1) ಶ್ರೀ ಜುಮರು ದೊಡ್ಡ ಹನುಮಂತಯ್ಯ ತಂದೆ ಜುಮರು ಭೀಮಯ್ಯ, ವಯಸ್ಸು: 72 ವರ್ಷ, ಉದ್ಯೋಗ: ಒಕ್ಕಲುತನ,
2) ಶ್ರೀ ಹನುಮಂತಯ್ಯ ತಂದೆ ಭೀಮಯ್ಯ ವಯಸ್ಸು: 70 ವರ್ಷ, ಉದ್ಯೋಗ: ಒಕ್ಕಲುತನ, ಇಬ್ಬರೂ ಸಾ: ವಾ.ನಂ.02, ಜಂಗಮರಕಲ್ಗುಡಿ ತಾ: ಗಂಗಾವತಿ,
3)ಶ್ರೀಮತಿ ಟಿ. ಮರಿಯಮ್ಮ ಗಂಡ ಟಿ. ದೊಡ್ಡಬಸಪ್ಪ (ತಂದೆ: ಭೀಮಯ್ಯ ಶೆಟ್ಟಿ) ವಯಸ್ಸು: 59 ವರ್ಷ, ಸಾ: ವಾ.ನಂ.24, ಲಕ್ಷ್ಮಿಕ್ಯಾಂಪ್, ಗಂಗಾವತಿ ತಾ: ಗಂಗಾವತಿ, ಜಿ: ಕೊಪ್ಪಳ.

–ವಿರುದ್ಧ–

ಎದುರುದಾರರು:– ಜನನ ಮರಣ ನೋಂದಣಾಧಿಕಾರಿಗಳು, ಪೌರಾಯುಕ್ತರು, ನಗರಸಭೆ ಕಾರ್ಯಾಲಯ, ಗಂಗಾವತಿ.

ಈ ಮೇಲೆ ತಿಳಿಸಿದ ಅರ್ಜಿದಾರರು ಕರ್ನಾಟಕ ಜನನ ಮರಣ ನೋಂದಣಿ ಕಾಯ್ದೆ 1969 ರ ಕಲಂ 13(3) ನಿಯಮ 9 (3) ಮತ್ತು ಕೆ.ಆರ್.ಬಿ & ಡಿ ನಿಯಮಗಳು 1999 ರ ಅಡಿಯಲ್ಲಿ ಅರ್ಜಿದಾರರು ಮೃತರಾದ ದಿ॥ ಶ್ರೀ ಭೀಮಯ್ಯ ಶೆಟ್ಟಿ ತಂದೆ ರಾಮಯ್ಯ ಇವರ ಮರಣ ನೋಂದಣಿಗಾಗಿ ಕೋರಿ ಅರ್ಜಿ ಸಲ್ಲಿಸಿದ್ದು, ಅರ್ಜಿದಾರರು ನಂ.01 ರಿಂದ 03 ರವರ ತಂದೆಯವರಾದ ದಿ॥ ಭೀಮಯ್ಯ ಶೆಟ್ಟಿ ತಂದೆ ರಾಮಯ್ಯ ಇವರ ಮರಣ ದಿನಾಂಕ: 24/03/1984 ರಂದು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಜಂಗಮರಕಲ್ಗುಡಿ ಗ್ರಾಮದ ತಮ್ಮ ಸ್ವಗೃಹದಲ್ಲಿ ಮರಣ ಹೊಂದಿದ್ದು, ಸದರಿ ಅವರ ಮರಣ ನೋಂದಣಿ ಮಾಡಲು ಹಾಗೂ ಮರಣ ಪ್ರಮಾಣ ಪತ್ರ ವಿತರಿಸುವ ಸಂಬಂಧ ಎದುರುದಾರರ ಕಾರ್ಯಾಲಯಕ್ಕೆ ಆದೇಶವನ್ನು ಜಾರಿ ಮಾಡಬೇಕೆಂದು ಕೋರಿ ಅರ್ಜಿದಾರರು ನಂ.01 ರಿಂದ 03 ಇವರು ಮೃತರಿಗೆ ವಾರಸ ಮಕ್ಕಳಾಗಿದ್ದು, ಈ ಅರ್ಜಿಯನ್ನು ದಾಖಲು ಮಾಡಿದ್ದಾರೆ. ಈ ಪ್ರಕರಣವು ದಿನಾಂಕ: 02/07/2026ರಂದು ಮಾನ್ಯ ಗೌರವಾನ್ವಿತ ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗಂಗಾವತಿಯಲ್ಲಿ ಬೆಳಿಗ್ಗೆ 11–00 ಗಂಟೆಗೆ ವಿಚಾರಣೆ ಇದ್ದ ಪ್ರಯುಕ್ತ ಯಾರದಾದರ ತಕರಾರು ಸಲ್ಲಿಸುವುದಿದ್ದರೆ ಈ ಮೇಲೆ ತಿಳಿಸಿದ ಮುದ್ದತ್ತಿನ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರಾಗಿ ತಕರಾರನ್ನು ಸಲ್ಲಿಸತಕ್ಕದ್ದು, ಒಂದು ವೇಳೆ ಯಾರಿಂದಲೂ ತಕರಾರು ಬಾರದಿದ್ದ ಪಕ್ಷದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣದ ವಿಚಾರಣೆ ಅಂತಿಮ ಎಂದು ಪರಿಗಣಿಸಿ, ಅರ್ಜಿದಾರರ ಪರ ಏಕ ಪಕ್ಷೀಯ ಆದೇಶ ಹೊರಡಿಸಲಿದೆ ಎಂದು ತಿಳಿಯತಕ್ಕದ್ದು.

ಸ್ಥಳ: ಗಂಗಾವತಿ
ದಿ:6/2026

ನ್ಯಾಯಾಲಯದ ಆದೇಶದ ಮೇರೆಗೆ
ಮುಖ್ಯ ಲಿಪಿಕಾಧಿಕಾರಿ
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥ.ನ್ಯಾ.ದಂ. ನ್ಯಾಯಾಲಯ, ಗಂಗಾವತಿ
ಮುಖಾಂತರ:ಆರ್.ಹೆಚ್. ನರೇಬಂಡ,
ಅರ್ಜಿದಾರರ ಪರ ವಕೀಲರು, ಗಂಗಾವತಿ

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ವಿಜಯಪುರ.

ಐ.ಎಫ್.ಟಿ.ಸಂ: ಕಾ.ನಿ.ಇಂ./ಲೋ.ಇ/ವಿ.ಜೆ.ಪಿ/ಪಿ.ಬಿ/8443–ಠೇವಣಿ ವಂತಿಕೆ/2026–27/962 ದಿನಾಂಕ:17.06.2026

ಅಲ್ಪಾವಧಿ ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)

ಕಾರ್ಯನಿರ್ವಾಹಕ ಇಂಜಿನೀಯರರು ಲೋಕೋಪಯೋಗಿ ಇಲಾಖೆ ವಿಜಯಪುರ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೋಕ್ಯೂರಮೆಂಟನಲ್ಲಿ ನೋಂದಾಯಿತ ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿ ಮತ್ತು ನವೀಕರಣ ಪ್ರಮಾಣ ಪತ್ರದ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಯಿಂದ ಪ್ರಮಾಣೀಕರಿಸಿ ಟೆಂಡರ್‌ನೊಂದಿಗೆ ಸಲ್ಲಿಸುವುದು ಮತ್ತು ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲೂ–2 ರಲ್ಲಿ ಲೆಕ್ಕ ಶೀರ್ಷಿಕೆ 8443–ಠೇವಣಿ ವಂತಿಕೆ ಅಡಿಯಲ್ಲಿ 1 ಕಾಮಗಾರಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು, ಅಂದಾಜು ಮೊತ್ತ ರೂ. 32.50 ಲಕ್ಷಗಳು & ಮುಂಗಡ ಠೇವಣಿ ಮೊತ್ತ 65,000.00 ರೂಗಳು. ಸದರ ಕಾಮಾಗಾರಿ ಗುತ್ತಿಗೆ ಮೊತ್ತಕ್ಕೆ ಅನುಗುಣವಾಗಿ ಜಿ.ಎಸ್.ಟಿ ಪ್ರತ್ಯೇಕವಾಗಿ ನೀಡಲಾಗುವದು. ಹಾಗೂ ವಿಸ್ತøತ ಗುತ್ತಿಗೆ ಅವಧಿಯಲ್ಲಿ, ಗುತ್ತಿಗೆ ಅವಧಿಯು ಗುತ್ತಿಗೆದಾರರ ವಿಳಂಭದಿಂದ ಉಂಟಾದಲ್ಲಿ ಆ ಅವಧಿಯಲ್ಲಿ ಜಿ.ಎಸ್.ಟಿ ದರಗಳಲ್ಲಿ ಹೆಚ್ಚಾಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವದು. ಟೆಂಡರಗಳನ್ನು ಸ್ವೀಕರಿಸುವ ದಿನಾಂಕ:– 29.06.2026 ರ ಸಂಜೆ 4:30 ಗಂಟೆಯವರೆಗೆ, ಟೆಂಡರಗಳನ್ನು ತೆರೆಯುವ ದಿನಾಂಕ: 30.06.2026 ರ ಸಂಜೆ 4.31 ಗಂಟೆಯ ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/159/ಕೆಎಸ್ಎಂಸಿಎ/2026–27

ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ

ನವನಗರ, ಹುಬ್ಬಳ್ಳಿ – 580025.
ದೂರವಾಣಿ ಸಂಖ್ಯೆ. 0836–2956097/ 2224195/ 2224274/ 2222161

ಸಂಖ್ಯೆ: ಹು.ಧಾ.ನ.ಪ್ರಾ/ಯೋವಿ/ಭೂ.ಬ/40/2026–27/1800 ದಿನಾಂಕ: 18–06–2026

ಪ್ರಕಟಣೆ

ಹುಬ್ಬಳ್ಳಿ–ಧಾರವಾಡ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಮಹಾಯೋಜನೆ ಪರಿಷ್ಕೃತ–II ರಲ್ಲಿ ಬರುವ ಹುಬ್ಬಳ್ಳಿ ತಾಲ್ಲೂಕು ಗಬ್ಬೂರ ಗ್ರಾಮದ ರಿಸನಂ/ಬ್ಲಾಕ್ ನಂ.62/1 ರಿಂದ5/ಫ/1 ಒಟ್ಟು ಕ್ಷೇತ್ರ 02ಎ–19ಗುಂ ಪ್ರದೇಶವು ಮಹಾಯೋಜನೆಯಲ್ಲಿ ಉದ್ಯಾನವನ (ಬಯಲು ಜಾಗೆ) ಉದ್ದೇಶಕ್ಕಾಗಿ ಕಾಯ್ದಿರಿಸಿರುತ್ತದೆ. ಸದರಿ ಜಮೀನಿಗೆ ದಕ್ಷಿಣ ದಿಕ್ಕಿನಿಂದ ರಸ್ತೆ ಸಂಪರ್ಕ ಹೊಂದಿರುತ್ತದೆ. ಪ್ರಸ್ತಾಪಿತ ಜಾಗೆಯನ್ನು ಅರ್ಜಿದಾರರು ವಾಣಿಜ್ಯ ಉದ್ದೇಶಕ್ಕಾಗಿ ಭೂ ಉಪಯೋಗ ನಿಗದಿಪಡಿಸುವಂತೆ ಕೋರಿರುತ್ತಾರೆ. ಆದ್ದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆ 1961 ರ ತಿದ್ದುಪಡಿ ಸಂಖ್ಯೆ: ಸಂವ್ಯಶಾಇ: 24:ಶಾಸನ:2015, ಬೆಂಗಳೂರು ದಿ: 10–09–2015 ರನ್ವಯ ಉದ್ಯಾನವನ (ಬಯಲು ಜಾಗೆ) ವಲಯದಿಂದ ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ನಿಗದಿಪಡಿಸಲು ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆ 1961 ರ ಕಲಂ 69(2) ತಿದ್ದುಪಡಿ ಪ್ರಕಾರ ಪತ್ರಿಕಾ ಪ್ರಕಟಣೆ ಮಾಡಿ ಸಾರ್ವಜನಿಕ ಆಕ್ಷೇಪಣೆಗಳು / ಸಲಹೆಗಳು ಏನಾದರೂ ಇದ್ದಲ್ಲಿ ಈ ಪ್ರಕಟಣೆ ಆದ ದಿನಾಂಕದಿಂದ 16 ದಿನದೊಳಗೆ **ಆಯುಕ್ತರು, ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ನವನಗರ, ಹುಬ್ಬಳ್ಳಿ – 580025** ಇವರಿಗೆ ಲಿಖಿತವಾಗಿ ಸಲ್ಲಿಸಲು ಕೋರಲಾಗಿದೆ. ಅವಧಿ ಮುಗಿದ ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಹೆಸರು	ಗ್ರಾಮ	ರಿ.ಸ.ನಂ/ ಬ್ಲಾಕ್ ನಂ.	ಕ್ಷೇತ್ರ	ಹಾಲಿ ಉಪಯೋಗ	ಭೂ ಉಪಯೋಗ ನಿಗದಿಪಡಿಸಲು ಕೋರಿರುವ ಉದ್ದೇಶ
1	ಶ್ರೀ ಮಲ್ಲಿಕಾರ್ಜುನ ತಂದೆ ಶಿವಾನಂದ ಬಡ್ನಿ	ಗಬ್ಬೂರ	62/1 ರಿಂದ 5/ಫ/1	2ಎ–19ಗು	ಉದ್ಯಾನವನ (ಬಯಲು ಜಾಗೆ)	ವಾಣಿಜ್ಯ

ಸಹಿ/– ಆಯುಕ್ತರು
ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ

ವಾ.ಸಾ.ಇ/ಧಾರವಾಡ/329/ಅಡ್ವಟೋರ್/2026–27

ಕರ್ನಾಟಕ ಸರಕಾರ

ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ

(ಕರ್ನಾಟಕ ಸರಕಾರ ಸ್ವಾಯತ್ತ ಸಂಸ್ಥೆ)

ಇ–ಮೇಲ್: directorgimsgulbarga@gmail.com ದೂ.08472–260252

ಸಂಖ್ಯೆ: GIMS/KLB/TENDER/PHY&ENT/PG/EQP/CR/42/2026-27/702 ದಿನಾಂಕ: 17/06/2026

:: ಟೆಂಡರ ಪ್ರಕಟಣೆ ::

ಜಿಮ್ಸ್ ಸಂಸ್ಥೆ, ಕಲಬುರಗಿಯ ಶರೀರಶಾಸ್ತ್ರ ವಿಭಾಗದಲ್ಲಿ ಹಾಗೂ ಜಿಮ್ಸ್ ಆಸ್ಪತ್ರೆ ಕಲಬುರಗಿಯ ಇ.ಎನ್.ಟಿ. ವಿಭಾಗದಲ್ಲಿ ಸ್ನಾತಕೋತ್ತರ (PG) ವಿಧ್ಯಾರ್ಥಿಗಳ ಅಧ್ಯಯನಕ್ಕಾಗಿ ಅವಶ್ಯಕವಿರುವ ಉಪಕರಣಗಳ/ ಸಲಕರಣೆಗಳನ್ನು ಖರೀದಿಸಲು ಅಧೀಕೃತ ಏಜೇನ್ಸಿ (ಸಂಸ್ಥೆ) ಯವರಿಂದ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ (KTPP Act) ಅಧಿನಿಯಮ 1999 ಮತ್ತು ನಿಯಮಗಳು 2000 ರ ಪ್ರಕಾರ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೋಕ್ಯೂರ್‌ಮೆಂಟ ಮೂಲಕ ಟೆಂಡರ ಕರೆಯಲಾಗಿದೆ. ಎಲ್ಲ ವಿವರಗಳು https:// kppp.karnataka.gov.in ಜಾಲತಾಣದಲ್ಲಿ ನೋಡಬಹುದಾಗಿದೆ.

1) ಟೆಂಡರ್ ಪ್ರಕಟಣೆ ದಿನಾಂಕ: No.GIMS/KLB/TENDER/PHY&ENT/PG/EQP/CR/42/ 2026-27,Date: 17/06/2026. INDENT NO: DME/2026-27/IND2405. 2) ಅನ್‌ಲೈನ್‌ನಲ್ಲಿ ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಂಡು, ಟೆಂಡರ್ ಅನ್ನು E-Procurement Portal ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ: **01–07–2026 ಸಾಯಂಕಾಲ 4:30ಕ್ಕೆ**, 3) ಆನ್ಲೈನ್ ಮುಖಾಂತರ ಪ್ರಶ್ನೆಗಳನ್ನು ಸಲ್ಲಿಸುವ ಕೋನೆಯ ದಿನಾಂಕ: **23–06–2026 ಸಾಯಂಕಾಲ 5.00 ಗಂಟೆಯವರೆಗೆ**, 4) ಟೆಂಡರ ಪೂರ್ವಭಾವಿ ಸಭೆ: **ದಿನಾಂಕ:25–06–2026 ಮಧ್ಯಾಹ್ನ 12:30ಕ್ಕೆ**, 5) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: **02–07–2026 ಸಾಯಂಕಾಲ 5:00ಕ್ಕೆ**, 6) ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ: **03–07–2026 ಬೆಳಿಗ್ಗೆ 11:30ಕ್ಕೆ**, 7) ಟೆಂಡರನ ಮೊತ್ತ: **ರೂ. 49,25,019/–**, 8) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ: ಐಟಂವಾರು ವೇರಿಯಬಲ್ ಇ.ಎಂ.ಡಿ. **ಕನಿಷ್ಠ ರೂ. 95.72/–** ರಿಂದ **ಗರಿಷ್ಠ ರೂ. 40,000/–**, 9) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ (ರಜಾ ದಿನಗಳನ್ನು ಹೊರತುಪಡಿಸಿ): ನಿರ್ದೇಶಕರು, ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ. ದೂರವಾಣಿ ಸಂಖ್ಯೆ: 08472–260252 Office Email: directorgimsgulbarga@gmail.com Cell:+91 9482093568 Tender Section Email: gimstenderklb22@gmail.com Cell:+91 9972688602

ಸಹಿ/– ನಿರ್ದೇಶಕರು,
ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/226/ಕೆ.ಎಸ್.ಎಂ.ಸಿ.&ಎ/2026–27

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ಯಾದಗಿರ.

ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ ರಾಜ್ ಇಂಜನೀಯರಿಂಗ್, ವಿಭಾಗ,

ಎನ್.ವಿ.ಎಮ್. ಹೋಟೆಲ್ ಎದುರುಗಡೆ, ಸ್ಟೇಷನ್ ರಸ್ತೆ, ಯಾದಗಿರಿ–585202.

ಸಂಖ್ಯೆ:ಕಾಪಾಅ/ಪಂರಾಇಂ/ವಿಯಾ/ಕೆಕೆಆರ್‌ಡಿಬಿ&ರಾಗ್ರಾಸ್ವಅಯೋ/2026–27/ 517 ದಿನಾಂಕ: 18.06.2026

ಸಂಕ್ಷಿಪ್ತ ಟೆಂಡರ ಪ್ರಕಟಣೆ (ಅಲ್ಪಾವಧಿ) KW-1, 2 & 3

(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

1) ಕಾಮಗಾರಿಗಳ ವಿವರ.:(1) ಸುರಪುರ ತಾಲೂಕಿನ ಮಾಲಗತ್ತಿ ಗ್ರಾಮದಲ್ಲಿ ಗ್ರಾಮ ಪಂಚಾಯತ್ ಕಟ್ಟಡ ನಿರ್ಮಾಣ. RDPR/2026-27/BD/WORK_INDENT26371/CALL-2 Other (2) ಶಹಾಪೂರ ತಾಲ್ಲೂಕಿನ ಶಿರವಾಳ ಗ್ರಾಮದ ಗ್ರಾಮ ಪಂಚಾಯತ ಕಟ್ಟಡ ನಿರ್ಮಾಣ. RDPR/2026-27/BD/ WORK_INDENT26515/CALL-2 SC Bidders Only (3)ಹುಣಸಗಿ ತಾಲ್ಲೂಕಿನ ಜಂಗಿನಗಡ್ಡಿ ಗ್ರಾಮದ ಅಂಗನವಾಡಿ–02 ಕಟ್ಟಡ ನಿರ್ಮಾಣ. RDPR/2025-26/BD/WORK _INDENT 25129CALL-2 Other (4) ಸುರುಪೂರ ತಾಲೂಕಿನ ಗೌಡಗೇರಾ ಗ್ರಾಮದ ಪ್ರೌಢ ಶಾಲೆಗೆ ಕಂಪೌಂಡ್ ಗೋಡೆ ನಿರ್ಮಾಣ. (UDISE Code: 29330806702) RDPR/2026-27/BD/WORK_INDENT27410Other **2) ಲೆಕ್ಕ ಶೀರ್ಷಿಕೆ:** 2025–26ನೇ ಕೆ.ಕೆ.ಆರ್.ಡಿ.ಬಿ. ಯೋಜನೆ ಮತ್ತು ರಾಷ್ಟ್ರೀಯ ಗ್ರಾಮ ಸ್ವರಾಜ್ ಅಭಿಯಾನ ಯೋಜನೆ **3) ಟೆಂಡರಿಗಿಟ್ಟ ಅಂದಾಜು ಮೊತ್ತ:** ಕನಿಷ್ಠ 9.00 ಮತ್ತು ಗರಿಷ್ಠ ರೂ. 65.00 ಲಕ್ಷ **4) ಗುತ್ತಿಗೆದಾರರ ದರ್ಜೆ:** 4ನೇ ಮತ್ತು 3ನೇ ದರ್ಜೆ ಮೇಲ್ಪಟ್ಟು **5) ಟೆಂಡರ ಫಾರಂ ಪಡೆಯಲು ಕೊನೆಯ ದಿನಾಂಕ:**20.06.2026 ರಿಂದ 01.07.2026 ಸಾಯಂಕಾಲ 4:00 ಗಂಟೆವರೆಗೆ **6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ:** ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ (ಅರ್ಜಿ ಶುಲ್ಕ ಹಿಂದಿರುಗಿಸಲಾಗುವುದಿಲ್ಲಾ) **7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ:** 01.07.2026 ಸಾಯಂಕಾಲ 4:00 ಗಂಟೆವರೆಗೆ **8) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್ಡ್ (ಕೆ.ಡಬ್ಲ್ಯೂ– 3):** 03.07.2026 ಬೆಳ್ಳಿಗೆ 9:00 ನಂತರ **9) ಟೆಂಡರ ತೆರೆಯುವ ದಿನಾಂಕ ಆರ್ಥಿಕ ಬಿಡ್ಡ್ (ಕೆ.ಡಬ್ಲ್ಯೂ– 1 & 2):** 03.07.2026 ಬೆಳ್ಳಿಗೆ 9.00 ನಂತರ **10) ಟೆಂಡರ ತೆರೆಯುವ ದಿನಾಂಕ ಆರ್ಥಿಕ ಬಿಡ್ಡ್ (ಕೆ.ಡಬ್ಲ್ಯೂ– 3):**10.07.2026 ಬೆಳ್ಳಿಗೆ 11:00 ನಂತರ **11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ (ಕಛೇರಿ ಅವಧಿಯಲ್ಲಿ):** ಕಾರ್ಯಪಾಲಕ ಅಭಿಯಂತರವರ ಕಛೇರಿ ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ, ಎನ್.ವಿ.ಎಮ್. ಹೋಟೆಲ್ ಎದುರುಗಡೆ, ಸ್ಟೇಷನ್ ರಸ್ತೆ, ಯಾದಗಿರಿ–585202 **12) ಅಂತರಜಾಲ ತಾಣದ ವಿಳಾಸ:** https://kppp.karnataka.gov.in

ಸೂಚನೆ :– ಟೆಂಡರರಿಗೆ ಸಂಬಂದಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ https://kppp.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದು (ರಜಾದಿನಗಳು ಹೊರತುಪಡಿಸಿ).

ಸಹಿ/– ಕಾರ್ಯಪಾಲಕ ಇಂಜನೀಯರರು,
ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ, ಯಾದಗಿರ.

ವಾ.ಸಾ.ಸಂ.ಇ/ಯಾದಗಿರಿ/117/ಕೆ.ಎಸ್.ಎಂ.ಸಿ&ಎ/2026–27

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ವಿದ್ಯುತ್ ಭವನ, ನಿಗಮ ಕಛೇರಿ, ಗೋಪನಕೊಪ್ಪ, ಹುಬ್ಬಳ್ಳಿ
Tel / Fax No : (0836) 2322771 / 2324307
Website : https://hescom.karnataka.gov.in
e-mail : seeit@hescom.co.in CIN : U31401KA2002SGC030437
No. HESCOM/SEE(IT&MT)/IT1/CCTV/760/2026-27/cys-2783
Dated : 18-06-2026

ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಅಧೀಕ್ಷಕ ಇಂಜಿನಿಯರ್ (ವಿ), ಐಟಿ&ಎಂಟಿ, ನಿಗಮ ಕಛೇರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ ರವರಿಂದ ಈ ಕೆಳಕಂಡ ಅಲ್ಪಾವಧಿ ಟೆಂಡರ್ ಅನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.

ಕ್ರ. ಸಂ.	ಬಿಡ್ ಇಂಡೆಂಟ್ ಸಂಖ್ಯೆ	ಟೆಂಡರ್ ವಿವರಗಳು
1	HESCOM/ 2026-27/ SE0754	ಹೆಸ್ಕಾಂನ ವಿದ್ಯುತ್ ಭವನ ನಿಗಮ ಕಚೇರಿ, ಗೋಪನಕೊಪ್ಪ, ಹುಬ್ಬಳ್ಳಿ ಇಲ್ಲಿಗೆ ಸಿಸಿಟಿವಿ ಕ್ಯಾಮರಾಗಳ ಪೂರೈಕೆ, ಸ್ಥಾಪನೆ, ಸಂರಚನೆ ಮತ್ತು ನಿರ್ವಹಣೆ.
2	HESCOM/ 2026-27/ SE0755	ಹೆಸ್ಕಾಂನ ಎಲ್ಲಾ ವಿಭಾಗೀಯ ಉಗ್ರಾಣ ಗಳಲ್ಲಿ ಸಿಸಿಟಿವಿ ಕ್ಯಾಮರಾಗಳ ಪೂರೈಕೆ, ಸ್ಥಾಪನೆ, ಸಂರಚನೆ ಮತ್ತು ನಿರ್ವಹಣೆ.

ಸದರಿ ಟೆಂಡರ‌ದ ಪೂರ್ಣ ವಿವರಗಳನ್ನು ವೆಬ್‌ಸೈಟ್ www.kppp.karnataka.gov.in ರಲ್ಲಿ on or after **18.06.2026** ಪಡೆಯಬಹುದು.

ಸಹಿ/– ಅಧೀಕ್ಷಕ ಅಭಿಯಂತರರು(ವಿ)
ವಾಸಾಸಂಇ/ಧಾ/325/ಕೆಎಸ್ಎಂಸಿಎ/2026–27 (ಐಟಿ&ಎಂಟಿ) ಹೆಸ್ಕಾಂ, ಹುಬ್ಬಳ್ಳಿ

ಶುಕ್ರವಾರದ ಪಂದ್ಯಗಳು

- ಮೆಕ್ಸಿಕೋ-ದ. ಕೊರಿಯಾ (ಬೆಳಗ್ಗೆ 6:30)
- ಆಸ್ಟ್ರೇಲಿಯಾ-ಅಮೆರಿಕ,(ಮಧ್ಯರಾತ್ರಿ 12:30)
- ಸ್ಕಾಟ್ಲೆಂಡ್-ಮೊರೊಕ್ಕೊ (ಮಧ್ಯರಾತ್ರಿ 3:30)

ಕಿರುಸುದ್ದಿ

ಹಾಕಿ: ಜರ್ಮನ್ನರ ಮಣಿಸಿದ ಭಾರತ

ರೋತೆರ್‌ಡ್ಯಾಮ್(ನೆದರ್ಲೆಂಡ್ಸ್): ಮಿಡಲ್ ಫೀಲ್ಡರ್ ಮನ್‌ಪ್ರೀತ್ ಸಿಂಗ್ ಅವರ ಕರಾರುವಾಕ್ ಪ್ರದರ್ಶನದ ನೆರವಿನಿಂದಾಗಿ ವಿಶ್ವ ಚಾಂಪಿಯನ್ ಜರ್ಮನಿ ತಂಡವನ್ನು ಮಣಿಸಿರುವ ಭಾರತ ಪುರುಷರ ಹಾಕಿ ತಂಡವು ಪ್ರೋ ಲೀಗ್ ಪಂದ್ಯಾವಳಿಯನ್ನು ಬಲವಾಗಿ ಶುರು ಮಾಡಿದೆ. ಕಳೆದ ಕೂಟದಲ್ಲಿ ಭಾರೀ ಹಿನ್ನಡೆ ಅನುಭವಿಸಿರುವ ಭಾರತ ಈ ಬಾರಿ ಮೊದಲ ಪಂದ್ಯದಲ್ಲೇ ಜರ್ಮನಿ ತಂಡವನ್ನು ಎದುರಿಸಿತ್ತು. ಮನ್‌ಪ್ರೀತ್ ಅವರ ದ್ವಿಗೋಲು ಪ್ರದರ್ಶನದ ಬಲದೊಂದಿಗೆ 3-1ರಿಂದ ಸೋಲಿಸಿ ಗಮನ ಸೆಳೆದಿದೆ. ಮೈದಾನಕ್ಕಿಳಿದ ತಕ್ಷಣವೇ ಭಾರತ ಪರ ಅತಿ ಹೆಚ್ಚು ಪಂದ್ಯವಾಡಿದ ದಾಖಲೆಯನ್ನು ಮಾಡಿದ ಮನ್‌ಪ್ರೀತ್ ಸಿಂಗ್, ಮೊದಲನೇ ಗೋಲು ಗಳಿಸಿ ಮುನ್ನಡೆ ತಂದರು. 412 ಪಂದ್ಯಗಳ ದಿಲೀಪ್ ಟರ್ಕಿ ಅವರ ದಾಖಲೆ ಅಳಿಸಿದ ಅವರು, ಏಳನೇ ನಿಮಿಷಲ್ಲೇ ಗೋಲು ಗಳಿಸಿದರು. ಭಾರತದ ಮುನ್ನಡೆಯನ್ನು ಶಿಲಾನಂದ ಅವರು 13ನೇ ನಿಮಿಷದ ವೇಳೆ 2ಕ್ಕೆ ವಿಸ್ತರಿಸಿದರು. ಇಷ್ಟಕ್ಕೇ ಭಾರತದ ಪ್ರಾಬಲ್ಯ ನಿಲ್ಲಲಿಲ್ಲ. 35ನೇ ನಿಮಿಷದಲ್ಲಿ ನೀಲಕಂಠ ಶರ್ಮಾ ಮತ್ತೊಂದು ಗೋಲು ಗಳಿಸಿದರು. ಜರ್ಮನ್ ಪರ ರಾಫೆಲ್ 45ನೇ ನಿಮಷಕ್ಕೆ ಗೋಲು ಗಳಿಸಿ ಅಂತರ ಕುಗ್ಗಿಸಿದರು.

ಏಷ್ಯನ್ ಗೇಮ್ಸ್‌ಗಿಲ್ಲ ಮನಿಕಾ ಬಾತ್ರಾ!

ಹೊಸದಿಲ್ಲಿ: ಜಪಾನ್‌ನ ಐಚಿ ಮತ್ತು ನಗೋಯಾದಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್‌ಗೆ ಭಾರತದ ಅನುಭವಿ ಟೇಬಲ್ ಟೆನಿಸ್ ಆಟಗಾರ್ತಿ ಮನಿಕಾ ಬಾತ್ರಾ ಅವರನ್ನು ಕೈಬಿಡಲಾಗಿದೆ. ಸೆಪ್ಟೆಂಬರ್‌ನಲ್ಲಿ ಶುರುವಾಗಲಿರುವ ಮಹಾಕೂಟಕ್ಕೆ ಟೇಬಲ್ ಟೆನಿಸ್ ತಂಡವನ್ನು ಪ್ರಕಟಿಸಲಾಯಿತು. ತಮ್ಮ ಅನುಭವದ ಮೂಲಕವೇ ಖ್ಯಾತಿ ಪಡೆದಿದ್ದ ಮನಿಕಾ ಬಾತ್ರಾ ಮಾನದಂಡ ಕ್ರಮಗಳಗ ಕಾರಣದಿಂದಾಗಿ ತಂಡದಲ್ಲಿ ಸೇರಿಸಲಾಗಿಲ್ಲ ಎಂಬ ಮಾಹಿತಿ ಹೊರಬಂದಿದೆ. ವಿಶ್ವ ಮತ್ತು ರಾಷ್ಟ್ರೀಯ ಶ್ರೇಯಾಂಕಗಳ ಆಧಾರದ ಮೇಲೆ ವಸ್ತುನಿಷ್ಠ ಮಾನದಂಡಗಳನ್ನು ಅನುಸರಿಸುವ ಮೂಲಕ, ಫೆಡರೇಶನ್ ವಿಸ್ತೃತ ಅವಧಿಯಲ್ಲಿ ಸ್ಥಿರತೆ ಮತ್ತು ಕಾರ್ಯಕ್ಷಮತೆಗೆ ಪ್ರತಿಫಲ ನೀಡಿದೆ. ಪುರುಷರು ಮತ್ತು ಮಹಿಳೆಯರಿಬ್ಬರಿಗೂ ಮೀಸಲು ಆಟಗಾರರನ್ನು ಸೇರಿಸುವುದರಿಂದ ಕ್ರೀಡಾಕೂಟದ ಮೊದಲು ಯಾವುದೇ ಅನಿರೀಕ್ಷಿತ ಸಂದರ್ಭಗಳಿಗೆ ತಂಡವು ಸಿದ್ಧವಾಗಿದೆ ಎಂದು ಖಚಿತಪಡಿಸುತ್ತದೆ ಎಂದು ಟಿಟಿ ಸಂಸ್ಥೆ ಹೇಳಿಕೆ ತಿಳಿಸಿದೆ. ಫೆಡರೇಶನ್‌ನ ಆಯ್ಕೆ ನೀತಿಯಡಿಯಲ್ಲಿ, ಏಳು ಪ್ರಮುಖ ದೇಶೀಯ ಕಾರ್ಯಕ್ರಮಗಳಲ್ಲಿನ ಪ್ರದರ್ಶನಗಳಿಂದ ಸಂಗ್ರಹಿಸಲಾದ ರಾಷ್ಟ್ರೀಯ ಶ್ರೇಯಾಂಕಗಳು ಮಾರ್ಕ್ಯೂ ಅಂತಾರಾಷ್ಟ್ರೀಯ ಸ್ಪರ್ಧೆಗಳಿಗೆ ಆಯ್ಕೆಯ ಕಡ್ಡಾಯ ಅಂಶವಾಗಿದೆ. ಪ್ರಸ್ತುತ ವಿಶ್ವದಲ್ಲಿ 51 ನೇ ಸ್ಥಾನದಲ್ಲಿರುವ ಮಣಿಕಾ, ಹಿಂದಿನ ಋತುವಿನಲ್ಲಿ ಯಾವುದೇ ದೇಶೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸದ ಕಾರಣ, ಭಾರತದ ಎರಡನೇ ಅತ್ಯುನ್ನತ ಶ್ರೇಯಾಂಕಿತ ಮಹಿಳೆಯಾಗಿದ್ದರೂ ಅವರು ಮಾನದಂಡಗಳ ಅಡಿಯಲ್ಲಿ ಅನರ್ಹರಾದರು.

ಬಾಕ್ಸಿಂಗ್: ಮೀನಾಕ್ಷಿ ಕ್ವಾರ್ಟರ್‌ಗೆ

ಹೊಸದಿಲ್ಲಿ: ಚೀನಾದಲ್ಲಿ ನಡೆಯುತ್ತಿರುವ ಬಾಕ್ಸಿಂಗ್ ವಿಶ್ವಕಪ್ ಹಂತ 2ರಲ್ಲಿ ಭಾರತದ ಬಾಕ್ಸರ್ ಮೀನಾಕ್ಷಿ ವಿಜಯಶಾಲಿಯಾಗಿ ಹೊರಹೊಮ್ಮಿದರು, ತಮ್ಮ ತೂಕ ವಿಭಾಗದಲ್ಲಿ ಕ್ವಾರ್ಟರ್ ಫೈನಲ್‌ಗೆ ಮುನ್ನಡೆದರು. ಮಹಿಳಾ 51 ಕೆಜಿ ವಿಭಾಗದಲ್ಲಿ ಸ್ಪರ್ಧಿಸುತ್ತಿರುವ 48 ಕೆಜಿ ವಿಶ್ವ ಚಾಂಪಿಯನ್ ಮತ್ತು ಆ ವಿಭಾಗದಲ್ಲಿ ಪ್ರಸ್ತುತ ವಿಶ್ವದ ನಂ. 1 ಆಗಿರುವ ಮೀನಾಕ್ಷಿ, ಈಗ ಒಲಿಂಪಿಕ್ 51 ಕೆಜಿ ತೂಕ ವರ್ಗಕ್ಕೆ ಪರಿವರ್ತನೆಗೊಂಡಿದ್ದು, ಪೋಲೆಂಡ್‌ನ ನಟಾಲಿಯಾ ಕುಕ್ಜೆವ್‌ಸ್ಕಾ ವಿರುದ್ಧ 5-0 ಸರ್ವಾನುಮತದ ನಿರ್ಣಯದ ಗೆಲುವು ಸಾಧಿಸಿ ಸ್ಪರ್ಧೆಯಲ್ಲಿ ಮುನ್ನಡೆದರು. ನಾಲ್ಕನೇ ದಿನದಂದು ನಡೆದ ಇನ್ನೊಂದು ಸ್ಪರ್ಧೆಯಲ್ಲಿ, ಅಭಿನಾಶ್ ಜಮ್ವಾಲ್ (65 ಕೆಜಿ) ಕಿರ್ಗಿಸ್ತಾನ್‌ನ ಮಿರ್ಜೋಖಿದ್ ಇಮಾಮ್ನಜರೋವ್ ವಿರುದ್ಧ 0-5 ಅಂತರದಿಂದ ಸೋತ ನಂತರ ಹೊರನಡೆದರು. ಪಂದ್ಯಾವಳಿಯಲ್ಲಿ ಇಲ್ಲಿಯವರೆಗೆ, ಐದು ಭಾರತೀಯ ಬಾಕ್ಸರ್‌ಗಳು ಕ್ವಾರ್ಟರ್ ಫೈನಲ್‌ಗೆ ಮುನ್ನಡೆದಿದ್ದಾರೆ. ನಿಖಿಲ್ (55 ಕೆಜಿ), ದೀಪಕ್ (70 ಕೆಜಿ), ಮೀನಾಕ್ಷಿ (51 ಕೆಜಿ), ಪ್ರಾಚಿ (57 ಕೆಜಿ), ಮತ್ತು ಸನೇಹ್ (65 ಕೆಜಿ). ಜ್ಯೋತಿ (48 ಕೆಜಿ) ಮತ್ತು ಜುಗ್ನೂ (85 ಕೆಜಿ) ಈಗಾಗಲೇ ಸೆಮಿಫೈನಲ್‌ಗೆ ಮುನ್ನಡೆಯುವ ಮೂಲಕ ದೇಶಕ್ಕೆ ಪದಕ ಖಚಿತಪಡಿಸಿದ್ದಾರೆ.



ಪೋರ್ಚುಗಲ್‌ಗೆ ಕಾಂಗೋ ಟಕ್ಕರ್ !

ಪಂದ್ಯದ ಮುಖ್ಯಾಂಶಗಳು

- ಪೋರ್ಚುಗಲ್ 1-1 ಡಿಆರ್ ಕಾಂಗೋ
- ವಿಶ್ವಕಪ್‌ನಲ್ಲಿ ಅಚ್ಚರಿಯ ಫಲಿತಾಂಶ

ಈಸ್ಟ್ ರದರ್‌ಫೋರ್ಡ್ (ಅಮೆರಿಕ): ಫಿಫಾ ವಿಶ್ವಕಪ್ 2026ರ ಗುಂಪು ಕೆ ಪಂದ್ಯದಲ್ಲಿ ಬಲಿಷ್ಠ ಪೋರ್ಚುಗಲ್ ತಂಡವನ್ನು ಡಿಆರ್ ಕಾಂಗೋ ಫುಟ್ಬಾಲ್ ಜಗತ್ತೆ ನಿಬ್ಬೆರಗಾಗುವಂತೆ ಮಾಡಿತು. ವಿಶ್ವಕಪ್‌ನ ಲೀಗ್ ಪಂದ್ಯದಲ್ಲಿ ರೋನಾಲ್ಡೋ ಇರುವ ಪೋರ್ಚುಗಲ್ ತಂಡದ ವಿರುದ್ಧ ಅಚ್ಚರಿಯ ಡ್ರಾ ಸಾಧಿಸಿದೆ. ಪಂದ್ಯದ ಆರಂಭದಿಂದಲೇ ಪೋರ್ಚುಗಲ್ ಬಾಲ್ ಮೇಲೆ ಹೆಚ್ಚಿನ ನಿಯಂತ್ರಣ ಸಾಧಿಸಿದರೂ, ಕಾಂಗೋ ಸಂಘಟಿತ ರಕ್ಷಣೆಯ ಮೂಲಕ ಎದುರಾಳಿಗಳ ದಾಳಿಯನ್ನು ನಿಯಂತ್ರಿಸಿತು. ಪೋರ್ಚುಗಲ್ ಹಲವು ಬಾರಿ ಗೋಲು ಗಳಿಸುವ ಅವಕಾಶಗಳನ್ನು ಸೃಷ್ಟಿಸಿದರೂ, ಕಾಂಗೋ ಗೋಲ್‌ಕೀಪರ್ ಮತ್ತು ರಕ್ಷಣಾ ವಿಭಾಗದ ದಿಟ್ಟ ಪ್ರದರ್ಶನದಿಂದ ಮುನ್ನಡೆ ಸಾಧಿಸಲು ವಿಫಲವಾಯಿತು. ಮತ್ತೊಂದೆಡೆ, ಕಾಂಗೋ ಕೂಡ ಪ್ರತಿದಾಳಿಗಳ ಮೂಲಕ ಪೋರ್ಚುಗಲ್‌ಗೆ ಸವಾಲು ಒಡ್ಡಿತು. ದ್ವಿತೀಯಾರ್ಧದಲ್ಲಿ ಪಂದ್ಯದ ವೇಗ ಮತ್ತಷ್ಟು ಹೆಚ್ಚಾಯಿತು. ಎರಡೂ ತಂಡಗಳು ತಲಾ ಒಂದು ಗೋಲು ದಾಖಲಿಸಿ ಅಂಕ ಹಂಚಿಕೊಂಡವು. ಪೋರ್ಚುಗಲ್ ಗೆಲುವಿಗಾಗಿ ಕೊನೆಯ ಕ್ಷಣಗಳವರೆಗೂ ಒತ್ತಡ ಹೇರಿದರೂ, ಕಾಂಗೋ ರಕ್ಷಣಾ ವಿಭಾಗ ದಿಟ್ಟವಾಗಿ ನಿಂತಿತು. ಈ ಡ್ರಾದೊಂದಿಗೆ ಎರಡೂ ತಂಡಗಳು ತಲಾ ಒಂದು ಅಂಕ ಗಳಿಸಿದ್ದು, ಗುಂಪು ಕೆಯಲ್ಲಿ ಮುಂದಿನ ಪಂದ್ಯಗಳ ಮಹತ್ವ ಹೆಚ್ಚಾಗಿದೆ. ಇದೇ ಗುಂಪಿನ ಇನ್ನೊಂದು ಪಂದ್ಯದಲ್ಲಿ ಕೊಲಂಬಿಯಾ ಉಜ್ಬೇಕಿಸ್ತಾನ ವಿರುದ್ಧ ಜಯ ಸಾಧಿಸಿದ್ದರಿಂದ, ಅಂಕಪಟ್ಟಿಯಲ್ಲಿ ಮುನ್ನಡೆ ಪಡೆದಿದೆ.

ಘಾನಾಗೆ ಜಯ



ಟೊರೊಂಟೊ: ಘಾನಾ ತಂಡವು ಕೊನೆಯ ಕ್ಷಣದ ಗೋಲಿನ ನೆರವಿನಿಂದ ಪನಾಮಾವನ್ನು 1-0 ಅಂತರದಿಂದ ಮಣಿಸಿ ಅಮೂಲ್ಯ ಮೂರು ಅಂಕಗಳನ್ನು ತನ್ನದಾಗಿಸಿಕೊಂಡಿತು. ಟೊರೊಂಟೊ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಎರಡೂ ತಂಡಗಳು ಆರಂಭದಿಂದಲೇ ಎಚ್ಚರಿಕೆಯ ಆಟ ಪ್ರದರ್ಶಿಸಿದವು. ಘಾನಾ ಹೆಚ್ಚು ದಾಳಿ ನಡೆಸಿದರೂ ಪನಾಮಾ ರಕ್ಷಣಾ ವಿಭಾಗ ದೃಢವಾಗಿ ನಿಂತು ಗೋಲು ಒಪ್ಪಿಸದೇ ಹೋರಾಡಿತು. ಪರಿಣಾಮ ಮೊದಲಾರ್ಧ ಗೋಲುರಹಿತ ಸಮಬಲದಲ್ಲಿ ಅಂತ್ಯಗೊಂಡಿತು. ದ್ವಿತೀಯಾರ್ಧದಲ್ಲೂ ಘಾನಾ ನಿರಂತರ ಒತ್ತಡ ಹೇರಿತು. ಆದರೆ ಪನಾಮಾ ಗೋಲ್‌ಕೀಪರ್ ಮತ್ತು ರಕ್ಷಣಾ ಆಟಗಾರರ ಉತ್ತಮ ಪ್ರದರ್ಶನದಿಂದ ಪಂದ್ಯ ಹೆಚ್ಚುವರಿ ಸಮಯದತ್ತ ಸಾಗಿತು.

ತಿರುವು ಪಡೆದ ಪಂದ್ಯ: ಪಂದ್ಯ ಡ್ರಾದತ್ತ ಸಾಗುತ್ತಿದೆ ಎನ್ನುವಾಗ, 90+5ನೇ ನಿಮಿಷದಲ್ಲಿ ಸಿ. ಯಿರೆಂಕ್ಯಿ ನಿರ್ಣಾಯಕ ಗೋಲು ದಾಖಲಿಸಿ ಘಾನಾ ಅಭಿಮಾನಿಗಳ ಸಂಭ್ರಮಕ್ಕೆ ಕಾರಣರಾದರು. ಆ ಗೋಲಿನೊಂದಿಗೆ ಘಾನಾ 1-0 ಮುನ್ನಡೆ ಪಡೆದು ಅಂತಿಮವಾಗಿ ಜಯ ಸಾಧಿಸಿತು. ಈ ಗೆಲುವಿನೊಂದಿಗೆ ಘಾನಾ ಗ್ರೂಪ್‌ನಲ್ಲಿ ಪ್ರಮುಖ ಮೂರು ಅಂಕಗಳನ್ನು ಗಳಿಸಿ ನಾಕೌಟ್ ಹಂತದ ಆಸೆಯನ್ನು ಜೀವಂತವಾಗಿರಿಸಿಕೊಂಡಿದೆ.

ಪಂದ್ಯದ ಫಲಿತಾಂಶ

- ಘಾನಾ 1-0 ಪನಾಮಾ
- ಘಾನಾ: ಸಿ. ಯಿರೆಂಕಿ: 90+5ನೇ ನಿ.
- ಘಾನಾದ ವಿಶ್ವಕಪ್ ಅಭಿಯಾನಕ್ಕೆ ಮಹತ್ವದ ಜಯ.
- ಪನಾಮಾ ಕೊನೆಯ ಕ್ಷಣದವರೆಗೂ ಘಾನಾವನ್ನು ತಡೆಹಿಡಿದಿತ್ತು.

ಕೇನ್ ಮಿಂಚಿನಾಟ ಇಂಗ್ಲೆಂಡ್‌ಗೆ ಜಯ

ದಿನದ ಮತ್ತೊಂದು ಪಂದ್ಯದಲ್ಲಿ ಇಂಗ್ಲೆಂಡ್ ತಂಡ ಕ್ರೊಯೇಷಿಯಾ ತಂಡವನ್ನು 4-2 ಗೋಲುಗಳಿಂದ ಮಣಿಸಿತು.

ಪಂದ್ಯದ 12ನೇ ನಿಮಿಷದಲ್ಲಿ ದೊರೆತ ಪೆನಾಲ್ಟಿಯನ್ನು ಹ್ಯಾರಿ ಕೇನ್ ಯಶಸ್ವಿಯಾಗಿ ಗೋಲಾಗಿ ಪರಿವರ್ತಿಸಿ ಇಂಗ್ಲೆಂಡ್‌ಗೆ ಮುನ್ನಡೆ ತಂದುಕೊಟ್ಟರು. ಬಳಿಕ 36ನೇ ನಿಮಿಷದಲ್ಲಿ ಮಾರ್ಟಿನ್ ಬಟುರಿನಾ ಗೋಲು ಬಾರಿಸಿ ಕ್ರೊಯೇಷಿಯಾವನ್ನು ಸಮಬಲಕ್ಕೆ ತಂದರು. ಆದರೆ 42ನೇ ನಿಮಿಷದಲ್ಲಿ ಮತ್ತೊಮ್ಮೆ ಕೇನ್ ಗೋಲು ದಾಖಲಿಸಿ ಇಂಗ್ಲೆಂಡ್‌ಗೆ 2-1 ಮುನ್ನಡೆ ಒದಗಿಸಿದರು. ಮೊದಲಾರ್ಧದ ಹೆಚ್ಚುವರಿ ಸಮಯದಲ್ಲಿ ಪೆಟಾರ್ ಮೂಸಾ ಗೋಲು ಬಾರಿಸಿ ಕ್ರೊಯೇಷಿಯಾವನ್ನು ಮತ್ತೆ ಪಂದ್ಯಕ್ಕೆ ಮರಳಿಸಿದರು. ಹೀಗಾಗಿ ಮೊದಲಾರ್ಧ 2-2 ಸಮಬಲದಲ್ಲಿ ಅಂತ್ಯಗೊಂಡಿತು.

ಪಂದ್ಯದ ಪ್ರಮುಖ ಕ್ಷಣಗಳು

- ಹ್ಯಾರಿ ಕೇನ್: 12ನೇ ನಿ. (ಪೆನಾಲ್ಟಿ), 42ನೇ ನಿ.
- ಮಾರ್ಟಿನ್ ಬಟುರಿನಾ: 36ನೇ ನಿ. (ಕ್ರೋ)
- ಪೆಟಾರ್ ಮೂಸಾ: 45+5ನೇ ನಿ. (ಕ್ರೋ)
- ಜೂಡ್ ಬೆಲ್ಲಿಂಗ್ಹ್ಯಾಮ್: 47ನೇ ನಿ.
- ಮಾರ್ಕಸ್ ರಾಶ್‌ಫೋರ್ಡ್: 85ನೇ ನಿ.

ದ್ವಿತೀಯಾರ್ಧ ಆರಂಭವಾದ ಕೂಡಲೇ ಜೂಡ್ ಬೆಲ್ಲಿಂಗ್ಹ್ಯಾಮ್ (47) ಗೋಲು ಬಾರಿಸಿ ಇಂಗ್ಲೆಂಡ್‌ಗೆ ಮಹತ್ವದ ಮುನ್ನಡೆ ನೀಡಿದರು. ಬಳಿಕ 85ನೇ ನಿಮಿಷದಲ್ಲಿ ಮಾರ್ಕಸ್ ರಾಶ್‌ಫೋರ್ಡ್ ಗೋಲು ದಾಖಲಿಸಿ ಜಯ ಖಚಿತಪಡಿಸಿದರು.



ಕೊಲಂಬಿಯಾ ಆಕ್ರಮಣಕ್ಕೆ ಉಜ್ಬೇಕಿಸ್ತಾನ್ ಶರಣು

ಮೆಕ್ಸಿಕೊ ಸಿಟಿ: ದಕ್ಷಿಣ ಅಮೆರಿಕದ ಬಲಿಷ್ಠ ತಂಡ ಕೊಲಂಬಿಯಾ 3-1 ಅಂತರದಲ್ಲಿ ಉಜ್ಬೇಕಿಸ್ತಾನ್ ತಂಡವನ್ನು ಮಣಿಸಿ ತನ್ನ ಅಭಿಯಾನವನ್ನು ಗೆಲುವಿನೊಂದಿಗೆ ಆರಂಭಿಸಿತು.

ಮೆಕ್ಸಿಕೊಸಿಟಿಸ್ಟೇಡಿಯಂನಲ್ಲಿನಡೆದ ಪಂದ್ಯದಲ್ಲಿ ಕೊಲಂಬಿಯಾ ಆರಂಭದಿಂದಲೇ ಉಜ್ಬೇಕಿಸ್ತಾನ್ ರಕ್ಷಣಾ ವಿಭಾಗದ ಮೇಲೆ ನಿರಂತರ ಒತ್ತಡ ಹೇರಿತು. ಅದರ ಫಲವಾಗಿ 40ನೇ ನಿಮಿಷದಲ್ಲಿ ಡೇನಿಯಲ್ ಮುನೋಜ್ ಗೋಲು ಬಾರಿಸಿ ಕೊಲಂಬಿಯಾಗೆ ಮುನ್ನಡೆ ತಂದುಕೊಟ್ಟರು. ಮೊದಲಾರ್ಧದ ಅಂತ್ಯಕ್ಕೆ ಕೊಲಂಬಿಯಾ 1-0 ಮುನ್ನಡೆಯಲ್ಲಿತ್ತು.

ದ್ವಿತೀಯಾರ್ಧ ಆರಂಭವಾದ ಬಳಿಕ ಉಜ್ಬೇಕಿಸ್ತಾನ್ ಹೆಚ್ಚು ಆಕ್ರಮಣಕಾರಿ ಆಟ ಪ್ರದರ್ಶಿಸಿತು. ಅದರ ಫಲವಾಗಿ 60ನೇ ನಿಮಿಷದಲ್ಲಿ ಅಬ್ಬೋಸ್ಬೆಕ್ ಫೈಜುಲ್ಲಾಯೆವ್ ಗೋಲು ದಾಖಲಿಸಿ ಪಂದ್ಯವನ್ನು 1-1 ಸಮಬಲಕ್ಕೆ ತಂದರು. ಆದರೆ ಸಮಬಲ ಹೆಚ್ಚು ಹೊತ್ತು ಉಳಿಯಲಿಲ್ಲ. ಕೇವಲ ಐದು ನಿಮಿಷಗಳ ಬಳಿಕ 65ನೇ ನಿಮಿಷದಲ್ಲಿ ಲೂಯಿಸ್ ಡಿಯಾಸ್ ಅದ್ಭುತ ಗೋಲು ಬಾರಿಸಿ ಕೊಲಂಬಿಯಾಗೆ ಮತ್ತೊಮ್ಮೆ ಮುನ್ನಡೆ ಒದಗಿಸಿದರು.

ಪಂದ್ಯದ ಕೊನೆಯ ಕ್ಷಣಗಳಲ್ಲಿ ಉಜ್ಬೇಕಿಸ್ತಾನ್ ಸಮಬಲ ಸಾಧಿಸಲು ಪ್ರಯತ್ನಿಸಿದರೂ, ಹೆಚ್ಚುವರಿ ಸಮಯದಲ್ಲಿ 90+9ನೇ ನಿಮಿಷದಲ್ಲಿ ಜುವಾನ್ ಕ್ಯಾಂಪಾಜ್ ಗೋಲು ದಾಖಲಿಸಿ ಕೊಲಂಬಿಯಾದ ಗೆಲುವಿಗೆ ಮುದ್ರೆ ಒತ್ತಿದರು.



ಉಜ್ಬೇಕಿಸ್ತಾನ್

- ಅಬ್ಬೋಸ್ಬೆಕ್ ಫೈಜುಲ್ಲಾಯೆವ್: 60ನೇ ನಿ.

ಕೊಲಂಬಿಯಾ

- ಡೇನಿಯಲ್ ಮುನೋಜ್: 40ನೇ ನಿ.
- ಲೂಯಿಸ್ ಡಿಯಾಸ್ 65ನೇ ನಿ.
- ಜುವಾನ್ ಕ್ಯಾಂಪಾಜ್ 90+9ನೇ ನಿ.

ಮೈಸೂರಿಗೆ ವೈಶಾಖ್ ವಿಜಯ ನಾಯಕ



ಮೈಸೂರು ತಂಡವನ್ನು ಪ್ರತಿನಿಧಿಸುವುದು ಹೆಮ್ಮೆಯ ವಿಷಯ. ನನ್ನ ಕ್ರಿಕೆಟ್ ಕೆರಿಯರ್ ಶುರುವಾಗಿದ್ದೆ ಮೈಸೂರು ತಂಡದಿಂದ. ನಮ್ಮ ಹುಡಗರು ಪಂದ್ಯಾವಳಿಯಲ್ಲಿ ಮಿಂಚಲು ಸಿದ್ಧರಾಗಿದ್ದಾರೆ.
■ ವೈಶಾಖ್ ವಿಜಯ್, ಕ್ರಿಕೆಟರ್

ಮೈಸೂರು: ಮಹಾರಾಜ ಟ್ರೋಫಿಯಲ್ಲಿ ಮೈಸೂರುವಾರಿಯರ್ಸ್‌ತಂಡವನ್ನುವೈಶಾಖ್ ವಿಜಯಕುಮಾರ್ ಮುನ್ನಡೆಸಲಿದ್ದಾರೆ.

ಶನಿವಾರದಿಂದ ಜುಲೈ 12 ರವರೆಗೆ ನಡೆಯಲಿರುವ ಬಹುನಿರೀಕ್ಷಿತ ಮಹಾರಾಜ ಟ್ರೋಫಿ ಟಿ20 ಪಂದ್ಯಾವಳಿಗೆ ಔಪಚಾರಿಕ ಚಾಲನೆ ಸಿಕ್ಕಿದೆ. ಟೂರ್ನಿಗೆ ಒಂದೇ ದಿನ ಬಾಕಿ ಇರುವಾಗ ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಫ್ರಾಂಚೈಸಿ ಮೈಸೂರು ವಾರಿಯರ್ಸ್ ಹಾಗೂ ಆಯೋಜಕ ಕೆಎಸ್‌ಸಿಎ ಜಂಟಿ ಮಾಧ್ಯಮ ಗೋಷ್ಠಿ ನಡೆಸಿ ಲೀಗ್ ಅಧಿಕೃತ ಹಾಡನ್ನು ಬಿಡುಗಡೆ ಮಾಡಿದವು. ಇದೇ ವೇಳೆ ಮೈಸೂರು ವಾರಿಯರ್ಸ್ ತನ್ನ ತಂಡವನ್ನು ಪರಿಚಯಿಸಿತು.

ಇದೇ ವೇಳೆ ಮಾಜಿ ಕ್ರಿಕೆಟಿಗ ಜಾವಗಲ್ ಶ್ರೀನಾಥ್ ಮಾತನಾಡಿ, ಮಹಾರಾಜ ಟ್ರೋಫಿಯು ಪ್ರಾದೇಶಿಕ ಪ್ರತಿಭೆಗಳಿಗೆ ಸದಾ ಅತ್ಯುತ್ತಮ ವೇದಿಕೆಯನ್ನು ಒದಗಿಸುತ್ತಾ ಬಂದಿದೆ. ಈ ಹೊಸ ಅಧಿಕೃತ ಗೀತೆಯ ಹಿಂದಿರುವ ಉತ್ಸಾಹವನ್ನು ನೋಡಿದರೆ, 2026 ರ ಸೀಸನ್ ಕರ್ನಾಟಕದಾದ್ಯಂತ ಸ್ಪರ್ಧಾತ್ಮಕ ಕ್ರಿಕೆಟ್ ಮತ್ತು ಅಭಿಮಾನಿಗಳ ಮನರಂಜನೆಯಲ್ಲಿ ಒಂದು ಹೊಸ ಮೈಲಿಗಲ್ಲನ್ನು ಸೃಷ್ಟಿಸಲಿದೆ ಎಂಬ ಸಂಪೂರ್ಣ ವಿಶ್ವಾಸ ನನಗಿದೆ, ಎಂದರು. ಯುವಕರು ಆಧುನಿಕ ಕ್ರಿಕೆಟ್ ಅರ್ಥ ಮಾಡಿಕೊಳ್ಳಬೇಕು, ಹಾಗೆ ಟಿ20 ಮಾದರಿಯ ಭರದಲ್ಲಿ ಇನ್ನೆರಡು ಮಾದರಿಗಳನ್ನು ಮರೆಯದಿರಿ ಎಂಬ ಸಲಹೆ ಕೊಟ್ಟರು.

ಹುಬ್ಬಳ್ಳಿಗೆ ಅನೀಶ್ವರ್ ಸಾರಥ್ಯ

ಇತ್ತ ಬೆಂಗಳೂರಿನಲ್ಲಿ ಹುಬ್ಬಳ್ಳಿ ತಂಡವೂ ತನ್ನ ಅಧಿಕೃತ ಜೆರ್ಸಿ ಬಿಡುಗಡೆ ಮಾಡುವ ವೇಳೆ ತಂಡವನ್ನು ಪರಿಚಯಿಸಿತು. ದೇಶಿ ಕ್ರಿಕೆಟ್‌ನಲ್ಲಿ ಉತ್ತಮ ಪ್ರದರ್ಶನ ನೀಡುತ್ತಾ ಬಂದಿರುವ ಅನೀಶ್ವರ್ ಗೌತಂ ಅವರನ್ನು ನಾಯಕರನ್ನಾಗಿ ನೇಮಿಸಿದೆ. ಕೆಎಸ್‌ಸಿಎ ಉಪಾಧ್ಯಕ್ಷ ಸುಜಿತ್ ಸೋಮಸುಂದರ್, ಮಹಾರಾಜ ಟ್ರೋಫಿ ಚೇರ್ಮನ್ ಕೇಶವ, ಕೆಎಸ್‌ಸಿಎ ಖಜಾಂಚಿ ಬಿ. ಎನ್. ಮಧುಕರ್, ಹುಬ್ಬಳ್ಳಿ ಫ್ರಾಂಚೈಸಿ ಮಾಲೀಕ ಶಿವೇಕ್ ಜಿಂದಾಲ್ ಮತ್ತು ಸುಶಿಲ್ ಕುಮಾರ್ ಜೆರ್ಸಿ ಅನಾವರಣಗೊಳಿಸಿದರು.

ನಾಯಕತ್ವ ಘೋಷಣೆ: ಸೈಕಲ್ ಪ್ಯೂರ್ ಅಗರಬತ್ತಿ ಪ್ರಾಯೋಜಕತ್ವದ ಹಾಗೂ ಎನ್. ಆರ್. ಗ್ರೂಪ್ ಒಡೆತನದ ಮೈಸೂರು ವಾರಿಯರ್ಸ್ ತಂಡವನ್ನು ಪರಿಚಯಿಸಿತು. ಕರ್ನಾಟಕ ಮತ್ತು ಐಪಿಎಲ್ ನ ಪ್ರಸಿದ್ಧ ವೇಗದ ಬೌಲರ್ ವೈಶಾಖ್ ವಿಜಯ್ ಕುಮಾರ್ ಅವರಿಗೆ ತಂಡವನ್ನು ಮುನ್ನಡೆಸುವ ಜವಾಬ್ದಾರಿ ನೀಡಲಾಗಿದೆ ಎಂದು ಫ್ರಾಂಚೈಸಿ ಘೋಷಿಸಿತು.

ಪ್ರಮುಖ ಆಟಗಾರರು: ಅಂತಾರಾಷ್ಟ್ರೀಯ ತಾರೆ ದೇವದತ್ ಪಡಿಕ್ಕಲ್, ಆಲ್ ರೌಂಡರ್ ಮನೋಜ್ ಭಾಂಡಗೆ, ಚೇತನ್ ಎಲ್.ಆರ್. ಮತ್ತು ರಿತೇಶ್ ಭಟ್ಕಳ್ ತಂಡದ ಪ್ರಮುಖ ಆಟಗಾರರಾಗಿದ್ದಾರೆ.

ಯುವಕರಲ್ಲಿ ಹಸಿವಿದೆ: ಅರ್ಜುನ್: ಸೈಕಲ್ ಪ್ಯೂರ್ ಅಗರಬತ್ತಿಯ ವ್ಯವಸ್ಥಾಪಕ ನಿರ್ದೇಶಕರು, ಮೈಸೂರು ವಾರಿಯರ್ಸ್ ತಂಡದ ಮಾಲೀಕರಾದ ಅರ್ಜುನ್ ರಂಗ, ಯುವ ಆಟಗಾರರಲ್ಲಿ ಗೆಲ್ಲುವ ಹಸಿವಿದೆ. ಗ್ರಾಮೀಣ ಮಟ್ಟದಲ್ಲಿ ನಿರಂತರವಾಗಿ ಉತ್ತಮ ಪ್ರದರ್ಶನ ನೀಡುತ್ತಿರುವ ಪ್ರತಿಭೆಗಳಿಗೆ ಇಂತಹ ಪ್ರಮುಖ ವೇದಿಕೆ ಕಲ್ಪಿಸಿಕೊಡಲು ನಾವು ಹೆಮ್ಮೆಪಡುತ್ತೇವೆ, ಎಂದು ಹೇಳಿದರು.

ಮಾರ್ಚ್ 10ರಿಂದಲೇ ಐಪಿಎಲ್


- 2027ರ ಪಂದ್ಯಾವಳಿ ಬೇಗನೇ ಶುರು!
- ವಾತಾವರಣಕ್ಕೆ ಸಂಬಂಧ ತೀರ್ಮಾನ

ಮುಂಬೈ: ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ವೇಳೆ ಬಿರುಬಿಸಲಿರುವ ನಿಟ್ಟನಲ್ಲಿ ಮತ್ತು ಪೂರ್ವ ಮಾನ್ಸೂನ್ ಬಗ್ಗೆ ಚಿಂತನೆ ನಡೆಸಿರುವ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಪಂದ್ಯಾವಳಿಯನ್ನು ವಾಡಿಕೆಗಿಂತಲೂ ಬೇಗನೇ ಶುರು ಮಾಡಿ, ಮುಗಿಸಲು ಚಿಂತನೆ ನಡೆಸಿದೆ.

ಸಾಮಾನ್ಯವಾಗಿ ಮಾರ್ಚ್ ಅಂತ್ಯದಿಂದ ಮೇ ಅಂತ್ಯ ಅಥವಾ ಜೂನ್ ಆರಂಭದವರೆಗೆ ನಡೆಯುವ ಈ ಕೂಟವು ಈ ಬಾರಿ ಮಾರ್ಚ್ ಆರಂಭದಲ್ಲೇ ಶುರುವಾಗಿ ಮೇ ಮಧ್ಯದಲ್ಲಿ ಮುಕ್ತಾಯಗೊಳ್ಳಲಿದೆ. ಐಪಿಎಲ್ ಮುಕ್ತಾಯಗೊಂಡು ಇನ್ನೂ ತಿಂಗಳು ಮುಗಿದಿಲ್ಲ, ಈ ನಡುವೆ ಬಿಸಿಸಿಐ ಕಾರ್ಯದರ್ಶಿ ದೇವಜೀತ್ ಸೈಕಿಯಾ ಈ ಬಗ್ಗೆ ಸುಳಿವು ನೀಡಿದ್ದು, ಹೆಚ್ಚಿನ ಬಿಸಿಲಿನಿಂದಾಗಿ ಪಂದ್ಯಾವಳಿ ಬೇಗನೇ ಶುರು ಮಾಡಲು ನಿರ್ಧರಿಸಲಾಗಿದೆ. ಮಾರ್ಚ್ 10ಕ್ಕೆ ಪಂದ್ಯಾವಳಿ ಶುರುವಾಗಲಿದೆ. ಮೇ 15ಕ್ಕೆ ಫೈನಲ್ ನಡೆಯಲಿದೆ. ಪಂದ್ಯಗಳ ಸಂಖ್ಯೆಯಲ್ಲೂ ಬದಲಾವಣೆಯಾಗುವ ಸಾಧ್ಯತೆಗಳಿವೆ ಎನ್ನಲಾಗಿದೆ.

2024ರಲ್ಲಿ ಫ್ರಾಂಚೈಸಿಯೊಂದು ಮಾಹಿತಿ ಕೊಟ್ಟು 2027ರಿಂದ ಮಾರ್ಚ್ 14ರಿಂದ ಮೇ 30ರವರೆಗೆ ನಡೆಸಲು ತೀರ್ಮಾನಿಸಲಾಗಿದೆ. ನಾವು ಅದಕ್ಕೆ ಸಜ್ಜಾಗಬೇಕಿದೆ ಎಂದು ತಿಳಿಸಿತ್ತು. ಈ ವರ್ಷ, ಐಪಿಎಲ್ ಮಾರ್ಚ್ 29 ರ ಸುಮಾರಿಗೆ ಪಂದ್ಯಾವಳಿ ಶುರುವಾಗಿತ್ತು.ಮೇ 31 ರೊಳಗೆ ಕೊನೆಗೊಂಡಿತು. ನಾವು ಚರ್ಚಿಸುತ್ತಿರುವ ಏಕೈಕ ವಿಷಯವೆಂದರೆ ಮೇ 15 ರ ನಂತರ ಪಂದ್ಯಾವಳಿಯ ಕೊನೆಯ ಹಂತದಲ್ಲಿ ಮಳೆ ಬೀಳುವ ಅಥವಾ ಪೂರ್ವ-ಮಾನ್ಸೂನ್ ಆರಂಭದ ಬಗ್ಗೆ, ಮತ್ತೊಂದೆಡೆ, ಆಟಗಾರರಿಗೆ ಅಥವಾ ಜನಸಮೂಹಕ್ಕೆ ಅನುಕೂಲಕರವಲ್ಲದ ಬಿಸಿ ವಾತಾವರಣವಿದೆ. ಆದ್ದರಿಂದ, ಮಾರ್ಚ್ ತಿಂಗಳ ಕೊನೆಯ ಭಾಗಕ್ಕಿಂತ ಸ್ವಲ್ಪ ಮುಂಚಿತವಾಗಿ ಪಂದ್ಯಾವಳಿಯನ್ನು ಪ್ರಾರಂಭಿಸಬಹುದೇ ಎಂಬುದರ ಕುರಿತು ಬಿಸಿಸಿಐ ಮತ್ತು ನಮ್ಮ ಐಪಿಎಲ್ ಆಡಳಿತ ಮಂಡಳಿಯಲ್ಲಿ ಚರ್ಚೆ ನಡೆಯುತ್ತಿದೆ. ಮುಂದಿನ ವರ್ಷದಿಂದ, ನಾವು ಪ್ರಯತ್ನ ಮಾಡುತ್ತೇವೆ ಮತ್ತು ಮಾರ್ಚ್ 10 ರೊಳಗೆ ಅದನ್ನು ಪ್ರಾರಂಭಿಸಬಹುದೇ ಮತ್ತು ಮೇ 15 ರೊಳಗೆ ಅದನ್ನು ಮುಗಿಸಬಹುದೇ ಎಂಬುದರ ಕುರಿತು ವಿಂಡೋಗಳನ್ನು ನೋಡಲು ನಾನು ಈಗಾಗಲೇ ನಮ್ಮ ಜನರಲ್ ಮ್ಯಾನೇಜರ್) ಭಾರತದ ಮಾಜಿ ವೇಗಿ ಅಬೇ ಕುರುವಿಲ್ಲಾ ಅವರಿಗೆ ಸೂಚಿಸಿದ್ದೇನೆ ಎಂದಿದ್ದಾರೆ.

ರಗ್ಬಿ: ಬೆಂಗಳೂರಿಗೆ ಜಯ



ಹೈದರಾಬಾದ್: ಇಲ್ಲಿನ ಗಚಿಬೌಲ್ಲಿ ಗಂತಿ ಮೋಹನ ಚಂದ್ರ ಬಾಲಯೋಗಿ ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ನಡೆದ ರಗ್ಬಿ ಪ್ರೀಮಿಯರ್ ಲೀಗ್‌ನ ಪಂದ್ಯಗಳಲ್ಲಿ ಬೆಂಗಳೂರು ಬ್ರೇವ್‌ಹಾರ್ಟ್ಸ್ ತಂಡವು ದೆಹಲಿ ರೆಡ್ಜ್ ತಂಡವನ್ನು 38-28 ಅಂತರದಿಂದ ಮಣಿಸಿತು. ಮಹಿಳಾ ವಿಭಾಗದಲ್ಲಿ ಚೆನ್ನೈ ಬುಲ್ಸ್ ಮತ್ತು ಮುಂಬೈ ಡ್ರೀಮರ್ಸ್ ತಂಡಗಳ ನಡುವಿನ ಪಂದ್ಯ 26-26 ಅಂಕಗಳ ಸಮಬಲದಲ್ಲಿ ಅಂತ್ಯಗೊಂಡಿತು.

ಪಾಕ್ ವಿರುದ್ಧ ದಕ್ಷಿಣ ಆಫ್ರಿಕಾಗೆ ಭರ್ಜರಿ ಗೆಲುವು

ಬಿರ್ಮಿಂಗ್ಹ್ಯಾಮ್: ಮಹಿಳೆಯರ ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲಿ ಪಾಕಿಸ್ತಾನ ಸತತ ಎರಡನೇ ಸೋಲು ಕಂಡಿದ್ದು ದ.ಆಫ್ರಿಕಾ ಗೆಲುವು ಸಾಧಿಸಿದೆ.

ಫಾತಿಮಾ ಸನಾ ಅವರ ಉತ್ತಮ ಬ್ಯಾಟಿಂಗ್ ಹೊರತಾಗ್ಯೂ ಮಿಂಚಿರುವ ದ.ಆಫ್ರಿಕಾ ಮಹಿಳೆಯರ ತಂಡವು ಗೆಲುವಿನ ನಗೆ ಬೀರಿತು. ಬುಧವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ 20 ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 126 ರನ್ ಗಳಿಸಿತು. ತಂಡದ ಪರ ಫಾತಿಮಾ ಸನಾ 55 ರನ್ ಗಳಿಸಿದರು. ಆಫ್ರಿಕಾ ಪರ ಅನುಭವಿ ಮಾರಿಝುನ್ ಕಾಪ್ 3 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ದ.ಆಫ್ರಿಕಾ 16.5 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 127 ರನ್ ಗಳಿಸಿತು. ಅನ್ನೇರಿ ಡೆರ್ಕ್ಸೆನ್ 52, ನಾದಿನ್ ಡಿ ಕ್ಲೆರ್ಕ್ 37 ರನ್ ಗಳಿಸಿದರು. ಪಾಕಿಸ್ತಾನ ಪರ ನಾಯಕಿ ಫಾತಿಮಾ ಸನಾ 16 ರನ್‌ಗೆ 3 ವಿಕೆಟ್ ಕಿತ್ತರು. ಪವರ್ ಪ್ಲೇನಲ್ಲೇ ಪಾಕಿಸ್ತಾನ 5 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿಕೊಂಡಿತು. ಫಾತಿಮಾ ಉತ್ತಮ ಬ್ಯಾಟಿಂಗ್ ಮಾಡಿ ತಂಡದ ಮೊತ್ತವನ್ನು ಹಿಗ್ಗಿಸಿದರು. ಮಧ್ಯಮ ಓವರ್‌ಗಳಲ್ಲಿ 51 ರನ್ ಗಳಿಸಿದ ಪಾಕ್, ಡೆತ್ ಓವರ್‌ನಲ್ಲಿ 46 ರನ್ ಗಳಿಸಿತು. ಅತ್ತ ದ.ಆಫ್ರಿಕಾ ಪವರ್‌ಪ್ಲೇನಲ್ಲಿ 48 ರನ್ ಗಳಿಸಿ ಸರಳ ಗೆಲುವಿನತ್ತ ಸಾಗಿತ್ತು. ಆದರೆ ಮಧ್ಯಮ ಓವರ್‌ಗಳಲ್ಲಿ ಫಾತಿಮಾ ಬೌಲಿಂಗ್‌ನಲ್ಲಿ ಮಿಂಚಿದರು. ಅಲ್ಲಿ ಆಫ್ರಿಕಾ 5 ವಿಕೆಟ್ ಕಳೆದುಕೊಂಡು 76 ರನ್ ಗಳಿಸಿತ್ತು. ಡೆತ್ ಓವರ್‌ನಲ್ಲಿ ಬೇಕಿದ್ದ 3 ರನ್ ಗಳಿಸಲು ಮತ್ತೆ 2 ವಿಕೆಟ್ ಕಳೆದುಕೊಂಡಿತು. ಪಂದ್ಯದಲ್ಲಿ 17 ವಿಕೆಟ್ ಬಿದ್ದವು. ಫಾತಿಮಾ ಸನಾ 3 ವಿಕೆಟ್ ಪಡೆದಿದ್ದಲ್ಲದೆ 55★ ರನ್ ಗಳಿಸಿದರು.



ICC WOMEN'S T20 WORLD CUP ENGLAND & WALES 2026

ಸಂಕ್ಷಿಪ್ತ ಸ್ಕೋರ್

ಪಾಕಿಸ್ತಾನ 20 ಓವರ್‌ಗಳಲ್ಲಿ 126/9: ಫಾತಿಮಾ 55★, ಹಸ್ಸನ್ 23; ಕಾಪ್ 23/3
ದ.ಆಫ್ರಿಕಾ 16.5 ಓವರ್‌ಗಳಲ್ಲಿ 127/8: ಡೆರ್ಕ್ಸೆನ್ 52, ಕ್ಲೆರ್ಕ್ 37; ಫಾತಿಮಾ 16/3

ಇಂದು ಐರ್ಲೆಂಡ್-ನ್ಯೂಜಿಲೆಂಡ್ ಪಂದ್ಯ: ಸೋಲಿನೊಂದಿಗೆ ಆರಂಭ ಮಾಡಿರುವ ಹಾಲಿ ಚಾಂಪಿಯನ್ ನ್ಯೂಜಿಲೆಂಡ್ ತಂಡವು ಶುಕ್ರವಾರ ತಡರಾತ್ರಿ ನಡೆಯಲಿರುವ ಪಂದ್ಯದಲ್ಲಿ ಐರ್ಲೆಂಡ್ ತಂಡವನ್ನು ಎದುರಿಸಲಿದೆ. ಕೇರ್, ಸೂಜಿ ಸೇರಿದಂತೆ ಪ್ರಮುಖ ಆಟಗಾರ್ತಿಯರ ಪಾಳಯ ಹೊಂದಿರುವ ನ್ಯೂಜಿಲೆಂಡ್ ಇನ್ನೂ ಪಂದ್ಯಾವಳಿಯಲ್ಲಿ ಮೊದಲ ಗೆಲುವು ದಾಖಲಿಸಬೇಕಿದೆ. ಸೌತೆಂಪ್ಟನ್‌ನಲ್ಲಿ ನಡೆಯಲಿರುವ ಈ ಪಂದ್ಯವು ರಾತ್ರಿ 11ಕ್ಕೆ ಶುರುವಾಗಲಿದೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



6019

ಎಡದಿಂದ ಬಲಕ್ಕೆ

1.ಓದಲು ಬರೆಯಲು ಬಾರದವನು (4)
3.ಕಾನೂನುಬದ್ಧವಾಗಿ ಮಾನ್ಯತೆ ಪಡೆದದ್ದು (4)
5.ಪರಿಶೀಲನೆ-ವಿಮರ್ಶೆಯ ಸಮಾನಪದ (4)
6.ಸೂರ್ಯನ ಮಗನಾಗಿ ಕರ್ಣ (3)
8.ಸಸಿ ನೆಡುವ ಮಣ್ಣಿನ ಪಾತ್ರೆಯಿದು (2)
9.ಬೆಳ್ಳನೆಯ ಹಲ್ಲು (2)
11.ಪಾಟಿಯ ಮೇಲೆ ಬರೆವ ಮೃದುಕಲ್ಲು (3)
13.ಬಂಗಾಳ ವಿಭಜನೆಯ ವಿರುದ್ಧವಾದ ಹೋರಾಟ (4)
15.ಅರಸನಿಗೆ ಕಡೆಯಲ್ಲಿ ಸಿಕ್ಕ ಬಿಳಿಸಕ್ಕರೆ (4)
16.ಅಕ್ಷರದ ಮೇಲ್ಭಾಗದ ಸಣ್ಣಗೆರೆ (4)

ಮೇಲಿನಿಂದ ಕೆಳಕ್ಕೆ

1.ಹಕ್ಕು-ಆಡಳಿತ ಶಕ್ತಿಯಿದು (4)
2.ಹೂವಿನ ಧೂಳು ತಲೆಕೆಳಗಾಗಿ ಬಿದ್ದಿದೆ (3)
3.ಕವಿ ರನ್ನನಿಗೆ ಆಶ್ರಯ ನೀಡಿದ ಮಹಿಳೆ (4)
4.ಗಿರೀಶ್ ಕಾರ್ನಾಡರು ಬರೆದ ನಾಟಕ (4)
7.ಜೇನು ವಿತರಣೆ ಮಾಡಿ ಗೆಲುವು ಸಾಧಿಸಿದವನು (3)
8.ಔಷಧಿಯಾಗಿಯೂ ಬಳಸುವ ತರಕಾರಿ (3)
9.ಕಡೆಗೋಲಿನಿಂದ ಕಡೆದ ಮಜ್ಜಿಗೆ (4)
10.ಕಾಡುಪ್ರಾಣಿಗಳ ಅರಸನಾಗಿ ಸಿಂಹ (4)
12.ಪಟ್ಟ ಹಿಡಿದು ರಾಜ್ಯಾಭಿಷೇಕ ಮಾಡುವಿಕೆ (4)
14.ಕೂಡು-ಕಳೆವ ಲೆಕ್ಕಗಳಿರುವ ಶಾಸ್ತ್ರ (3)

6018 ಉತ್ತರ

ಎಡದಿಂದ ಬಲಕ್ಕೆ:
1.ಸುದ್ದಿಗಾರ 3.ಗಿರಿಧರ
5.ಕಡಗ 6.ಮನ
8.ತಂತಿ 9.ರಥ 12.ಕುಜ
14.ದಟ್ಟಣೆ 15.ಶಿಲಾನ್ಯಾಸ
16.ಚುಡಾಯಿಸು

ಮೇಲಿನಿಂದ ಕೆಳಕ್ಕೆ :
1.ಸುದರ್ಶನ 2.ರಸಿಕತೆ
3.ಗಿರಗಿಟ್ಲೆ 4.ರಯಪತಿ
7.ಮನ್ಮಥ 8.ತಂಬಾಕು
9.ರವಿಶಶಿ 10.ಮಂದಹಾಸ
11.ಹಣೆಬಾಚು
13.ಜಮಾಯಿಸು

ಕಿರುಸುದ್ದಿ

ಪ್ರತಿಭಾ ಪುರಸ್ಕಾರ

•**ಗದಗ:** ನಗರದ ಭಾರತೀಯ ವೈದ್ಯಕೀಯ ಸಂಘ, ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ ಇವರ ಸಹಯೋಗದಲ್ಲಿ ಶತಮಾನೋತ್ಸವ ಸಂಭ್ರಮ ಅಂಗವಾಗಿ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್ ನಲ್ಲಿ ನಡೆದ 2025-26ನೇ ಸಾಲಿನ ಪ್ರತಿಭಾವಂತ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಉದ್ಘಾಟಿಸಿದರು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಹಂಗಾಮಿ ಕುಲಪತಿ ಹಾಗೂ ಕುಲಸಚಿವ ಪ್ರೊ. ಡಾ.ಸುರೇಶ ನಾಡಗೌಡರ, ಐಎಂಎ ಶತಮಾನೋತ್ಸವದ ಅಧ್ಯಕ್ಷ ಎಸ್.ಆರ್.ನಾಗನೂರು, ಶತಮಾನೋತ್ಸವ ಸಮಿತಿ ಕಾರ್ಯದರ್ಶಿ ಡಾ. ಪವನ್ ಪಾಟೀಲ ಹಾಗೂ ಐಎಂಎ ಕಾರ್ಯದರ್ಶಿ ಡಾ. ರಾಹುಲ್ ಶಿರೋಳ ಇತರರಿದ್ದರು. ಐಎಂಎ ಅಧ್ಯಕ್ಷ ಡಾ. ಶ್ರೀಧರ ಕುರಡಗಿ ಸ್ವಾಗತಿಸಿದರು. ಅಶ್ವಿತಾ ಕಟ್ಟಿಮನಿ ಹಾಗೂ ಶಿವಕುಮಾರ ಹೊಸಳ್ಳಿ ನಿರೂಪಿಸಿದರು.

ವಿದ್ಯುತ್ ವ್ಯತ್ಯಯ ನಾಳೆ

•**ಗದಗ:** 110 ಕೆವ್ಹಿ ಗದಗ ಉಪ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕೆಲಸ ಕೈಗೊಳ್ಳುವುದರಿಂದ ಜೂ.20 ರಂದು ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ 110 ಕೆವ್ಹಿ ಗದಗ ಉಪಕೇಂದ್ರದಿಂದ ವಿದ್ಯುತ್ ಪೂರೈಕೆಯಾಗುತ್ತಿರುವ ಎಲ್ಲ 33ಕೆ.ವ್ಹಿ. ಹಾಗೂ 11ಕೆ.ವ್ಹಿ. ಮಾರ್ಗಗಳಾದ ಹುಲಕೋಟಿ, ಲಕ್ಕುಂಡಿ, ಮಲ್ಲಸಮುದ್ರ, ನಾಗಾವಿ, ಟಿ.ಡಿ.ಪಿ.ಎಲ್ 1 ಮತ್ತು 2, ಪಯೋನಿಯರ್, ಹುಲಕೋಟಿ ಕೆ.ಹೆಚ್.ಬಿ, ಕಪ್ಪತಗುಡ್ಡ ಗಾಳಿಯಂತ್ರ ಹಾಗೂ ಜಿಲ್ಲಾ ಆಸ್ಪತ್ರೆ ನಗರ ಮಾರ್ಗ, ಎಫ್-1 ಆದರ್ಶನಗರ, ಎಫ್-3 ಮುಳಗುಂದ, ಎಫ್-5 ತ್ರಿಕುಟೇಶ್ವರ, ಎಫ್-6 ಗ್ರೇನ್ ಮಾರ್ಕೆಟ್, ಎಫ್-7 ಇಂಡಸ್ಟ್ರಿಯಲ್, ಎಫ್-10 ಡಿ.ಸಿ.ಆಫೀಸ್, ಎಫ್-4 ಕೆ.ಎಸ್.ಆರ್.ಟಿ.ಸಿ, ಎಫ್-2 ಹತೀ ಎನ್.ಜಿ.ವಾಯ್, ಎಫ್-9 ವೀರನಾರಾಯಣ, ಎಫ್-11 ಬೆಟಗೇರಿ, ಎಫ್-8 ಕಣವಿ ಎನ್.ಜೆ.ವೈ ಎಲ್ಲ ಶಹರ/ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಕಾಲುವೆಗೆ ನೀರು ಬಿಡಲು ಆಗ್ರಹ



•**ಮುಂಡರಗಿ:** ಈ ಬಾರಿ ಐದು ವರ್ಷಗಳು ಮುಗಿಯುತ್ತಾ ಬಂದರೂ ಮುಂಗಾರು ಸಮರ್ಪಕವಾಗಿ ಬರಲಿಲ್ಲ, ಮುಂಗಾರು ಮಳೆಯೇ ರೈತರ ಕೃಷಿ ಚಟುವಟಿಕೆಗಳಿಗೆ ಜೀವಾಳ. ಮಳೆ ಇಲ್ಲದೆ ಬಿತ್ತಿದ ಬೆಳೆಗಳು ಒಣಗುತ್ತಿವೆ. ಹೀಗಾಗಿ ಸಿಂಗಟಾಲೂರು ಏತ ನೀರಾವರಿ ಯೋಜನೆಯ ನೀರನ್ನು ಕಾಲುವೆಗಳಿಗೆ, ಕೆರೆಗಳಿಗೆ ಬಿಡಬೇಕು ಎಂದು ತಾಲೂಕು ಅಭಿವೃದ್ಧಿ ಹೋರಾಟ ವೇದಿಕೆ ಅಧ್ಯಕ್ಷ ವೈ.ಎನ್.ಗೌಡರ ಆಗ್ರಹಿಸಿದ್ದಾರೆ. ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತರು ಬೀಜ, ಗೊಬ್ಬರ ಖರೀದಿ ಮಾಡಿ ಬಿತ್ತನೆ ಮಾಡಿದ್ದಾರೆ. ಕೆಲವು ರೈತರು ಜಮೀನು ಸಿದ್ಧ ಮಾಡಿಕೊಂಡಿದ್ದಾರೆ. ಈ ವರೆಗೆ ಸರಿಯಾದ ಮಳೆಯಾಗಿಲ್ಲ. ಜೂನ್ ತಿಂಗಳಿಂದ ನವೆಂಬರ್ ತಿಂಗಳವರೆಗೆ ಸಿಂಗಟಾಲೂರು ಏತ ನೀರಾವರಿಯಿಂದ ಕಾಲುವೆ ಮೂಲಕ ನೀರು ಕೊಡುವ ಉದ್ದೇಶ ಹೊಂದಿದೆ. ಆದರೆ ಈ ವರೆಗೆ ಅಧಿಕಾರಿಗಳು, ಜನಪ್ರತಿನಿಧಿಗಳು ಈ ಬಗ್ಗೆ ಗಮನ ಕೊಡುತ್ತಿಲ್ಲ, ಬೆಳೆಗಳು ಒಣಗುತ್ತಿವೆ, ಕೂಡಲೇ ಹಮ್ಮಿಗಿ ಬ್ಯಾರೇಜ್ ಮೂಲಕ ನದಿಗೆ ನೀರು ಬಿಟ್ಟು ಕಾಲುವೆಗಳಲ್ಲಿ ನೀರು ಹರಿಬಿಡಬೇಕು ಎಂದು ಒತ್ತಾಯಿಸಿದರು. ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ವಿದ್ಯುತ್ ಪ್ರಸರಣವನ್ನು ಖಾಸಗಿ ಕಂಪನಿಗೆ ಕೊಡಬೇಕು ಎಂದು ಕೇಳಿಕೊಳ್ಳಲಾಗಿದೆ. ಯಾವುದೇ ಕಾರಣಕ್ಕೂ ವಿದ್ಯುತ್ ಶಕ್ತಿ ಪ್ರಸರಣ ಖಾಸಗಿಯವರಿಗೆ ಕೊಡಬಾರದು. ಇದರಿಂದ ಮುಂದೆ ಸಾರ್ವಜನಿಕ ಮತ್ತು ರೈತ ವಲಯಕ್ಕೆ ತೊಂದರೆಯಾಗುತ್ತದೆ ಎಂದಿದ್ದಾರೆ.

ರೈತರ ಸಂಕಷ್ಟಕ್ಕೆ ಧಾವಿಸಿ



•**ಮುಂಡರಗಿ:** ರಾಜ್ಯದಲ್ಲಿ ಮುಂಗಾರು ಮಳೆ ತೀವ್ರ ಕೊರತೆಯಾಗಿದ್ದು, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಈ ಪರಿಸ್ಥಿತಿಯಲ್ಲಿ ಆಡಳಿತಾರೂಢ ಪಕ್ಷದ ನಾಯಕರು ಸುವರ್ಣ ಸ್ವಾತಂತ್ರ್ಯ ಪೈಪೋಟಿ ನಡೆಸುತ್ತಿರುವುದು ಖಂಡನೀಯ ಎಂದು ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಆನಂದಗೌಡ ಪಾಟೀಲ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿರುವ ಅವರು, ರಾಜ್ಯದಲ್ಲಿ ಈ ವರೆಗೆ ಸಾಮಾನ್ಯ ಮಳೆಯ ಪ್ರಮಾಣಕ್ಕಿಂತ ಶೇ.21 ರಷ್ಟು ಮುಂಗಾರು ಮಳೆ ಕೊರತೆಯಾಗಿದೆ. ಹಲವು ಜಿಲ್ಲೆಗಳಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗದೆ ಬಿತ್ತನೆ ಕಾರ್ಯ ಕುಂಠಿತಗೊಂಡಿದ್ದು, ಈಗಾಗಲೇ ಬಿತ್ತನೆ ಮಾಡಿದ ಬೆಳೆಗಳು ಒಣಗುವ ಆತಂಕ ಎದುರಾಗಿದೆ. ಗದಗ ಸೇರಿದಂತೆ ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ರೈತರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರೇ ಅಧಿಕಾರಿಗಳ ಸಭೆ ನಡೆಸಿ ರಾಜ್ಯದಲ್ಲಿ ಶೇ.30 ರಷ್ಟು ಮಳೆಯ ಕೊರತೆ ಉಂಟಾಗಿರುವ ಜಿಲ್ಲೆಯಲ್ಲಿ ಬರಗಾಲ ಎದುರಿಸಲು ಅಧಿಕಾರಿಗಳಿಗೆ ಸೂಚನೆ ನೀಡಿರುವುದು ಪರಿಸ್ಥಿತಿಯ ಗಂಭೀರತೆಯನ್ನು ತೋರಿಸುತ್ತದೆ. ರಾಜ್ಯದ ಪ್ರಮುಖ ಜಲಾಶಯಗಳಲ್ಲಿ ನೀರಿನ ಮಟ್ಟ ಕುಸಿದಿದ್ದು, ಹಲವೆಡೆ ಅಂತರ್ಜಲ ಮಟ್ಟ ಕುಸಿಯುವ ಆತಂಕ ಎದುರಾಗಿದೆ. ಕುಡಿಯುವ ನೀರು, ಕೃಷಿ ಮತ್ತು ಜಾನುವಾರುಗಳಿಗೆ ಮೇವು ಒದಗಿಸುವ ವಿಚಾರದಲ್ಲಿ ಸರ್ಕಾರ ಈಗಿನಿಂದಲೇ ಸಮಗ್ರ ಕಾರ್ಯಯೋಜನೆ ರೂಪಿಸಬೇಕಿದೆ. ಕರ್ನಾಟಕ ಸರ್ಕಾರ ಕೂಡಲೇ ವಿಶೇಷ ಸಚಿವ ಸಂಪುಟ ಸಭೆ ನಡೆಸಿ ಬರಪೀಡಿತ ಪ್ರದೇಶಗಳನ್ನು ಗುರುತಿಸಬೇಕು. ರೈತರಿಗೆ ಬೆಳೆ ನಷ್ಟ ಪರಿಹಾರ, ಬೆಳೆ ವಿಮೆ ಪರಿಹಾರವನ್ನು ತ್ವರಿತವಾಗಿ ಬಿಡುಗಡೆ ಮಾಡಬೇಕು. ಸಹಕಾರಿ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಪಡೆದಿರುವ ಕೃಷಿ ಸಾಲಮನ್ನಾ ಕುರಿತು ತಕ್ಷಣ ನಿರ್ಧಾರ ಕೈಗೊಳ್ಳಬೇಕು ಎಂದರು.



ಗದಗ: ನಗರದ ಭಾರತೀಯ ವೈದ್ಯಕೀಯ ಸಂಘ, ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ ಇವರ ಸಹಯೋಗದಲ್ಲಿ ಶತಮಾನೋತ್ಸವ ಸಂಭ್ರಮ ಅಂಗವಾಗಿ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್ ನಲ್ಲಿ ನಡೆದ 2025-26ನೇ ಸಾಲಿನ ಪ್ರತಿಭಾವಂತ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಉದ್ಘಾಟಿಸಿದರು.

ಆಧುನಿಕ ತಂತ್ರಜ್ಞಾನ ಯುಗಕ್ಕೆ ಸಜ್ಜು

•**ಲಕ್ಷ್ಮೇಶ್ವರ:** ತಾಲೂಕಿನ ಶಿಗ್ಲಿ ಗ್ರಾಮದಲ್ಲಿ ಇನ್ಫೋಸಿಸ್ ಸಂಸ್ಥೆ ಮೊಬೈಲ್ ಸೈನ್ಸ್ ಲ್ಯಾಬ್ ಗ್ರಾಮದ ಜಿಎಂಪಿಎಸ್ ಶಿಗ್ಲಿ ಪ್ರೌಢಶಾಲೆಗೆ ಬಂದು ಮಕ್ಕಳಿಗೆ ವಿಜ್ಞಾನದ ಆಸಕ್ತಿ ಹೆಚ್ಚಿಸುವ ಪ್ರಾಯೋಗಿಕಗಳನ್ನು ಮಾಡಿಸಿದರು. ಇನ್ಫೋಸಿಸ್ ಸಂಸ್ಥೆ ಉದ್ಯೋಗಿ ಪ್ರದೀಪ ಮಾತನಾಡಿ, 21ನೇ ಶತಮಾನದ ಕೈಗಾರಿಕಾ ಕ್ರಾಂತಿಯನ್ನು ನಾಲ್ಕನೇ ಕೈಗಾರಿಕಾ ಕ್ರಾಂತಿ (ಇಂಡಸ್ಟ್ರಿ 4.0) ಎಂದು ಕರೆಯಲಾಗುತ್ತದೆ. ಇದು ಸಂಪರ್ಕಿತ ತಂತ್ರಜ್ಞಾನ, ದತ್ತಾಂಶ ಆಧಾರಿತ ವಿಶ್ಲೇಷಣೆ, ಅತಿ ಹೆಚ್ಚು ಸ್ವಯಂಚಾಲಿತ ವ್ಯವಸ್ಥೆಗಳು ಮತ್ತು ಇತರೆ ಆಧುನಿಕ ತಂತ್ರಜ್ಞಾನಗಳ ಯುಗವಾಗಿದೆ. ಈ ಕ್ರಾಂತಿಗೆ ನಮ್ಮ ಯುವ ಕಲಿಕಾರ್ಥಿಗಳನ್ನು ಸಜ್ಜುಗೊಳಿಸಲು ಹಾಗೂ ಅವರಲ್ಲಿ ಕುತೂಹಲ, ಕಲ್ಪನಾಶಕ್ತಿ ಮತ್ತು ಸೃಜನಶೀಲತೆಯನ್ನು ಬೆಳೆಸಲು ಇನ್ಫೋಸಿಸ್ ಸ್ಪ್ರಿಂಗ್‌ಬೋರ್ಡ್ ಮೇಕರ್ ಲ್ಯಾಬ್ ಆನ್ ವೀಲ್ ಅನ್ನು ವಿನ್ಯಾಸಗೊಳಿಸಲಾಗಿದೆ. ಭಾರತವು ವಿಶಾಲವಾದ ದೇಶವಾಗಿದ್ದು, ಅದರ ನಾಗರಿಕರು ಅತ್ಯಂತ ದೂರದ ಪ್ರದೇಶಗಳಲ್ಲಿಯೂ ವಾಸಿಸುತ್ತಿದ್ದಾರೆ. ಅತ್ಯುತ್ತಮ ಕಲಿಕಾ ಅವಕಾಶಗಳು ಎಲ್ಲರಿಗೂ ತಲುಪಬೇಕು ಎಂಬ ಉದ್ದೇಶದಿಂದ ಇನ್ಫೋಸಿಸ್ ಸ್ಪ್ರಿಂಗ್‌ಬೋರ್ಡ್ ಮೇಕರ್ ಲ್ಯಾಬ್ ಆನ್ ವೀಲ್ ಯೋಜನೆಯನ್ನು ರೂಪಿಸಲಾಗಿದೆ. ಇದು ಕಲಿಕೆಯನ್ನು ವಿದ್ಯಾರ್ಥಿಗಳ ಮನೆಬಾಗಿಲಿಗೆ, ಯಾವುದೇ ಸಮಯದಲ್ಲಿ, ಯಾವುದೇ ಸ್ಥಳದಲ್ಲಿ ತಲುಪಿಸುವ ಉದ್ದೇಶವನ್ನು ಹೊಂದಿದೆ ಎಂದರು. ಮುಖ್ಯಶಿಕ್ಷಕ ಬಿ.ಕೆ. ಪತ್ತಿಹಾಳ, ಶಿಕ್ಷಕರಾದ ಎಸ್.ಬಿ. ಅಣ್ಣಿಗೇರಿ, ಎಲ್. ತಿಪ್ಪನಾಯಕ, ಆರ್.ಡಿ. ಕಲೆಯಾರ, ದೀಪಾ ಭಸ್ಮೆ ಇತರರಿದ್ದರು.



ಲಕ್ಷ್ಮೇಶ್ವರ: ತಾಲೂಕಿನ ಶಿಗ್ಲಿ ಗ್ರಾಮದಲ್ಲಿ ಇನ್ಫೋಸಿಸ್ ಸಂಸ್ಥೆ ಮೊಬೈಲ್ ಸೈನ್ಸ್ ಲ್ಯಾಬ್ ಗ್ರಾಮದ ಜಿಎಂಪಿಎಸ್ ಶಿಗ್ಲಿ ಪ್ರೌಢಶಾಲೆಗೆ ಬಂದು ಮಕ್ಕಳಿಗೆ ವಿಜ್ಞಾನದ ಆಸಕ್ತಿ ಹೆಚ್ಚಿಸುವ ಹಾಗೆ ಪ್ರಾಯೋಗಿಕಗಳನ್ನು ಮಾಡಿಸಿದರು.

ಕೃಷಿ ಅಂಕಿ ಅಂಶಗಳ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆ | ಡಿಸಿ ಸೂಚನೆ


ಇಲಾಖೆಗಳು ಸಮನ್ವಯತೆ ಸಾಧಿಸಲಿ

•**ಗದಗ:** ಜಿಲ್ಲೆಯಲ್ಲಿ ಕೃಷಿ, ತೋಟಗಾರಿಕೆ ಹಾಗೂ ರೇಷ್ಮೆ ಇಲಾಖೆಗಳಿಗೆ ಸಂಬಂಧಿಸಿದ ಕೃಷಿ ಅಂಕಿ-ಅಂಶಗಳು ಹಾಗೂ ಬೆಳೆ ವಿಸ್ತೀರ್ಣದ ಮಾಹಿತಿ ಅತ್ಯಂತ ನಿಖರವಾಗಿರಬೇಕು. ಇದಕ್ಕಾಗಿ ಕಂದಾಯ ಸೇರಿದಂತೆ ಎಲ್ಲಾ ಸಂಬಂಧಿತ ಇಲಾಖೆಗಳು ಪರಸ್ಪರ ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ಕೃಷಿ ಅಂಕಿ ಅಂಶಗಳ ಜಿಲ್ಲಾ ಮಟ್ಟದ ಸಮನ್ವಯ ಸಮಿತಿಯ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಹಂಗಾಮು ಆರಂಭದಿಂದ ಕೊನೆಯವರೆಗೆ ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳ ಅಂಕಿ-ಅಂಶಗಳಲ್ಲಿ ಡೇಟಾ ಹೊಂದಾಣಿಕೆಯಲ್ಲಿ ಯಾವುದೇ ಗೊಂದಲಗಳಿರಬಾರದು. ಇಲಾಖೆಗಳು ಪರಸ್ಪರ ಕುಳಿತು ಮಾಹಿತಿಗಳನ್ನು ತಾಳೆ ನೋಡಬೇಕು ಹಾಗೆ ಕ್ಷೇತ್ರ ಮಟ್ಟದ ಬೆಳೆ ಸಮೀಕ್ಷೆ ನಿಖರವಾಗಿರಬೇಕು. ಖಾಸಗಿ ಜಂಟಿ ಸಮೀಕ್ಷೆದಾರರು ಮತ್ತು ಗ್ರಾಮ ಆಡಳಿತ ಅಧಿಕಾರಿಗಳು ನೀಡುವ ಬೆಳೆ ಸಮೀಕ್ಷೆಯ ಮಾಹಿತಿಯನ್ನು ಮೇಲ್ವಿಚಾರಕರು ಕಡ್ಡಾಯವಾಗಿ ಕ್ಷೇತ್ರ ಮಟ್ಟದಲ್ಲಿ ಪರಿಶೀಲಿಸಬೇಕು. ಇದು ಮೇಲ್ವಿಚಾರಕರ ಜವಾಬ್ದಾರಿ ಎಂದರು.

ಬೆಳೆ ವಿಮೆ ಹಾಗೂ ಪರಿಹಾರ ವಿತರಣೆಯಲ್ಲಿ ಯಾವುದೇ ಲೋಪವಾಗದಂತೆ ತಡೆಯಲು ಜಿಪಿಎಸ್ ಆಧಾರಿತ ನಿಖರ ಅಂಕಿ-ಅಂಶಗಳ ಸಂಗ್ರಹಣೆ ಮತ್ತು ನಿಖರ ಬೆಳೆ ಸಮೀಕ್ಷೆ ನಡೆಸಬೇಕು. ಕೃಷಿ ಮತ್ತು ಸಾಂಖ್ಯಿಕ ಇಲಾಖೆಯ ಅಧಿಕಾರಿಗಳು ಜಂಟಿಯಾಗಿ ಸಮನ್ವಯತೆಯಿಂದ ಕಾರ್ಯನಿರ್ವಹಿಸಿ, ನಿಗದಿತ ಅವಧಿಯೊಳಗೆ ಬೆಳೆ ಕಟಾವು ಪ್ರಯೋಗಗಳನ್ನು ಯಶಸ್ವಿಗೊಳಿಸಬೇಕು ಎಂದರು. ಜಿಲ್ಲೆಯಲ್ಲಿ ರೈತರ ಸಂಖ್ಯೆ ಹಾಗೂ ಭೂಹಿಡುವಳಿ ವಿಸ್ತೀರ್ಣಕ್ಕೆ ಸಂಬಂಧಿಸಿದ ದತ್ತಾಂಶಗಳನ್ನು ನಿರಂತರವಾಗಿ ರೈತರ ಮಾಹಿತಿ ನವೀಕರಿಸಲು ಅಧಿಕಾರಿಗಳು ಕ್ಷೇತ್ರ ಮಟ್ಟದಲ್ಲಿ ಭೇಟಿ ನೀಡಿ ವಾಸ್ತವಿಕ ವರದಿಯನ್ನು ಸಿದ್ಧಪಡಿಸಬೇಕು. ತಪ್ಪು ಮಾಹಿತಿಯಿಂದ ಯಾವುದೇ ಅರ್ಹ ರೈತರು ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗಬಾರದು ಎಂದರು.

ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್. ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಸನಗೌಡ ಕೊಟೂರು, ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಎ.ಎ.ಕಂಬಾಳಿಮಠ, ಭೂ ದಾಖಲೆ ಇಲಾಖೆಯ ಉಪನಿರ್ದೇಶಕ ರುದ್ರಣ್ಣಗೌಡ ಜಿ.ಜೆ., ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.




> ಜಿಲ್ಲೆಯ ಕೃಷಿ, ತೋಟಗಾರಿಕೆ ಹಾಗೂ ರೇಷ್ಮೆ ಇಲಾಖೆಗಳ ಸಮನ್ವಯದೊಂದಿಗೆ ಕಳೆದ ಮೂರು ವರ್ಷಗಳ ಋತುಮಾನವಾರು ಒಟ್ಟು ಮತ್ತು ನೀರಾವರಿ ಬೆಳೆ ಕ್ಷೇತ್ರಗಳ ಹಾಗೂ ಪ್ರಮುಖ ಬೆಳೆಗಳ ವಿಸ್ತೀರ್ಣದ ಅಧಿಕೃತ ಅಂಕಿ-ಅಂಶಗಳ ವರದಿಯನ್ನು ಬಿಡುಗಡೆ ಮಾಡಲಾಗಿದೆ. ಹಿಂಗಾರು ಹಂಗಾಮಿನಲ್ಲಿ ಕಡಲೆ ಮತ್ತು ಗೋಧಿ ಪ್ರಮುಖ ಕೃಷಿ ಬೆಳೆಗಳಾಗಿ ಹೊರಹೊಮ್ಮಿವೆ.
>
> ■ ಬಿ.ಎಸ್. ಪಾಟೀಲ, ಜಿಲ್ಲಾ ಸಾಂಖ್ಯಿಕ ಸಂಗ್ರಹಣಾ ಅಧಿಕಾರಿ

- ಕೃಷಿ ಬೆಳೆಗಳಾದ ಕಡಲೆ ಬರೋಬ್ಬರಿ 1,57,903 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗುವ ಮೂಲಕ ಅತಿ ದೊಡ್ಡ ಬೆಳೆಯಾಗಿದೆ
- ಜೋಳ 22,172 ಹೆಕ್ಟೇರ್, ಗೋಧಿ 19,500 ಹೆಕ್ಟೇರ್, ಸೂರ್ಯಕಾಂತಿ 14,755 ಹೆಕ್ಟೇರ್ ಹಾಗೂ ಮೆಕ್ಕೆಜೋಳ 3,287 ಹೆಕ್ಟೇರ್ ಪ್ರದೇಶದಲ್ಲಿ ದಾಖಲು ಎಂದು ಮಾಹಿತಿ ನೀಡಿದ ಜಿಲ್ಲಾ ಸಾಂಖ್ಯಿಕ ಸಂಗ್ರಹಣಾ ಅಧಿಕಾರಿ ಬಿ.ಎಸ್. ಪಾಟೀಲ,

ಬೆಳೆ ವೈವಿಧ್ಯತೆ, ಪಾಳು ಭೂಮಿ ಬಳಕೆ ಮಾಹಿತಿ ನೀಡಿ

ಕ್ರಾಪ್ ಕಟಿಂಗ್ ಪ್ರಯೋಗಗಳು ಮತ್ತು ಬೆಳೆ ಸಮೀಕ್ಷೆಗಳಲ್ಲಿ ತಪ್ಪು ಮಾಹಿತಿಗಳು ದಾಖಲಾದರೆ ರೈತರಿಗೆ ಬೆಳೆ ವಿಮೆ ಪಡೆಯುವಾಗ ತೊಂದರೆಯಾಗುತ್ತದೆ. ರೈತರಿಗೆ ಅನ್ಯಾಯವಾಗದಂತೆ ಎಚ್ಚರಿಕೆಯಿಂದ ಕೆಲಸ ಮಾಡಬೇಕು. ತಪ್ಪು ಮಾಹಿತಿಯಿಂದಾಗಿ ವಿಮಾ ಕಂಪನಿಗಳು ಆಕ್ಷೇಪಣೆ ಎತ್ತಲು ಅಧಿಕಾರಿಗಳೇ ಕಾರಣರಾಗಬಾರದು. ಜಿಲ್ಲೆಯಲ್ಲಿ ಜೋಳದಂತಹ ಸಾಂಪ್ರದಾಯಿಕ ಬೆಳೆಗಳ ವಿಸ್ತೀರ್ಣ ಕಡಿಮೆಯಾಗುತ್ತಿರುವುದರ ಬಗ್ಗೆ ಕಳವಳ ವ್ಯಕ್ತಪಡಿಸಿದ ಜಿಲ್ಲಾಧಿಕಾರಿಗಳು, ರೈತರಿಗೆ ಆರ್ಥಿಕವಾಗಿ ಹೆಚ್ಚಿನ ಲಾಭ ತಂದುಕೊಡುವ ಬೆಳೆಗಳ ಬಗ್ಗೆ ಬೆಳೆ ವೈವಿಧ್ಯತೆ ಹಾಗೂ ಪಾಳು ಭೂಮಿ ಬಳಕೆಯ ಮಾಹಿತಿ ನೀಡಬೇಕು ಎಂದರು.

ಸಿಎಂ, ರಾಜ್ಯಾಧ್ಯಕ್ಷರಿಂದ ಶಾಸಕರಿಗೆ ಸಕಾರಾತ್ಮಕ ಸ್ಪಂದನೆ



•**ರೋಣ:** ರೋಣ ಮತಕ್ಷೇತ್ರಕ್ಕೆ ಸಾಮಾಜಿಕ ನ್ಯಾಯ ಒದಗಿಸಿ ಎಂದು ಮತ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ತುಮಕೂರ ಸಿದ್ದಗಂಗಾ ಮಠದಿಂದ ಬೆಂಗಳೂರವರೆಗೆ ಪಾದಯಾತ್ರೆಯನ್ನು ಕೈಗೊಂಡಿದ್ದರು. ಈ ಹಿನ್ನೆಲೆಯಲ್ಲಿ ಗುರುವಾರ ಸಿಎಂ ಡಿ.ಕೆ. ಶಿವಕುಮಾರ ಹಾಗೂ ಪಕ್ಷದ ರಾಜ್ಯಾಧ್ಯಕ್ಷ ಬಿ.ಕೆ. ಹರಿಪ್ರಸಾದ ಅವರಿಂದ ಸಕಾರಾತ್ಮಕ ಸ್ಪಂದನೆ ಸಿಕ್ಕಿದೆ ಎನ್ನಲಾಗಿದೆ.

2023ರ ಚುನಾವಣೆ ಮುಗಿಯುತ್ತಿದ್ದಂತೆ ಶಾಸಕ ಜಿ.ಎಸ್.ಪಾಟೀಲರಿಗೆ ಸಚಿವ ಸ್ಥಾನ ನೀಡಬೇಕು ಎಂಬ ಕೂಗು ಕೇಳಿ ಬಂದಿತ್ತು. ನಂತರ ದಿನಗಳಲ್ಲಿ ಕಾರ್ಯಕರ್ತರ ಹಕ್ಕೊತ್ತಾಯ ಮತ್ತಷ್ಟು ಜೋರಾಗತೊಡಗಿತು. ಇದರಿಂದ ಅಂದಿನ ಸಿಎಂ ಸಿದ್ದರಾಮಯ್ಯ ಮತ್ತು ಇಂದಿನ ಸಿಎಂ ಡಿ.ಕೆ.ಶಿವಕುಮಾರ ರೋಣಕ್ಕೆ ಆಗಮಿಸಿದ್ದ ಸಂದರ್ಭದಲ್ಲಿ ಜಿ.ಎಸ್.ಪಾಟೀಲ ಮಂತ್ರಿ ಸ್ಥಾನಕ್ಕೆ ಅರ್ಹ ವ್ಯಕ್ತಿಯಾಗಿದ್ದು ಅವಕಾಶ ಕಲ್ಪಿಸಲಾಗುವುದು ಎಂದಿದ್ದರು. ಈ ಹಿನ್ನೆಲೆಯಲ್ಲಿ ಪಕ್ಷದ ಕಾರ್ಯಕರ್ತರು 2ನೇ ಅವಧಿಯಲ್ಲಿ ಶಾಸಕ ಜಿ.ಎಸ್.ಪಾಟೀಲರಿಗೆ ಸಚಿವ ಸ್ಥಾನವನ್ನು ನೀಡಬೇಕು ಎಂದು ಆಗ್ರಹಿಸಿ ಉರುಳು ಸೇವೆ, ಧೀಡ ನಮಸ್ಕಾರ ಸೇರಿದಂತೆ ಪ್ರತಿಭಟನೆ ಜೊತೆಗೆ ದೇವಸ್ಥಾನ ಹಾಗೂ ಮಸಿದಿಗಳಲ್ಲಿ ವಿಶೇಷ ಪೂಜೆಯನ್ನು ಸಲ್ಲಿಸಿದ್ದರು. ಆದರೆ ಪಕ್ಷದ ಕಾರ್ಯಕರ್ತರು ಮತ್ತಷ್ಟು ಮುಂದಕ್ಕೆ ಸಾಗಿ ಸಿದ್ದಗಂಗಾ ಮಠದಿಂದ ಸಿಎಂ ನಿವಾಸದವರೆಗೆ ಪಾದಯಾತ್ರೆಯನ್ನು ಹಮ್ಮಿಕೊಂಡು ಸಿಎಂ ಮತ್ತು ರಾಜ್ಯಾಧ್ಯಕ್ಷರಿಗೆ ಮನವಿ ಸಲ್ಲಿಸಿದ್ದು, ಈಗ ಹೊಸ ಭರವಸೆ ಮೂಡಿಸಿದಂತಾಗಿದೆ. ಸ್ವತಃ ಸಿಎಂ ಡಿ.ಕೆ.ಶಿವಕುಮಾರ ಮತ್ತು ರಾಜ್ಯಾಧ್ಯಕ್ಷ ಬಿ.ಕೆ.ಹರಿಪ್ರಸಾದ ಕೆಪಿಸಿಸಿ ಕಚೇರಿಗೆ ಆಗಮಿಸಿ ಕಾರ್ಯಕರ್ತರ ಮನವಿಯನ್ನು ಆಲಿಸುವ ಮೂಲಕ ಶಾಸಕ ಜಿ.ಎಸ್.ಪಾಟೀಲ ಐದು ದಶಕಗಳಿಂದ ಪಕ್ಷಕ್ಕೆ ಪ್ರಾಮಾಣಿಕ ಸೇವೆಯನ್ನು ಸಲ್ಲಿಸಿದ್ದು, ಅವರಿಗೆ ಸೂಕ್ತ ಸ್ಥಾನಮಾನ ಕಲ್ಪಿಸುವುದು ನಮ್ಮ ಕರ್ತವ್ಯ ಕೂಡ. ಹೀಗಾಗಿ ತಮ್ಮ ಅಹವಾಲನ್ನು ಪಕ್ಷದ ಉನ್ನತ ನಾಯಕರ ಗಮನಕ್ಕೆ ತರುವ ಮೂಲಕ ಸಾಮಾಜಿಕ ನ್ಯಾಯ ಒದಗಿಸಲಾಗುವುದುಎಂದುಇಬ್ಬರುನಾಯಕರು ಭರವಸೆ ನೀಡಿದ್ದು ಕಾರ್ಯಕರ್ತರಿಗೆ ಬಲ ತುಂಬಿದಂತಾಗಿದೆ. ವಿವಿದ ಮಠಾಧೀಶರುಗಳು, ಪಕ್ಷದ ಮುಖಂಡರುಗಳು, ಕಾರ್ಯಕರ್ತರು ಉಪಸ್ಥಿತರಿದ್ದರು.

ಹೊಸ ಚೈತನ್ಯ

ಸಿಎಂ ಹಾಗೂ ರಾಜ್ಯಾಧ್ಯಕ್ಷರಿಂದ ಸಕಾರಾತ್ಮಕ ಸ್ಪಂದನೆ ಸಿಕ್ಕಿದ್ದು, ರೋಣ ಮತಕ್ಷೇತ್ರಕ್ಕೆ ನ್ಯಾಯ ಒದಗಿಸುವ ಭರವಸೆ ನೀಡಿದ್ದಾರೆ. ಶಾಸಕ ಜಿ.ಎಸ್.ಪಾಟೀಲ ಪ್ರಾಮಾಣಿಕತೆ ಬಗ್ಗೆ ಮೆಚ್ಚಿಕೊಂಡಿದ್ದಾರೆ. ಪಕ್ಷದ ಹಿರಿಯ ನಾಯಕರ ಗಮನಕ್ಕೆ ತರುವ ಮೂಲಕ ನ್ಯಾಯ ಒದಗಿಸುವ ಮಾತುಗಳನ್ನು ಆಡಿದ್ದು, ಹೊಸ ಚೈತನ್ಯ ಮೂಡುವಂತೆ ಮಾಡಿದೆ ಎಂದು ನಿಡಗುಂದಿ ತಾಪಂ ಮಾಜಿ ಸದಸ್ಯ ಅಂದಪ್ಪ ಬಿಚ್ಚೂರ ಹೇಳಿದ್ದಾರೆ.

ಸ್ಲಂ ಜನಾಂದೋಲನ ಕರ್ನಾಟಕ ರಾಜ್ಯ ಪ್ರತಿನಿಧಿಗಳ ಸಮ್ಮೇಳನ

•**ಗದಗ:** ಸ್ಲಂ ಜನಾಂದೋಲನ ಕರ್ನಾಟಕ ರಾಜ್ಯ ಪ್ರತಿನಿಧಿಗಳ ಸಮ್ಮೇಳನವು ಜೂ.20 ರಂದು ಬೆಳಗ್ಗೆ 10.30 ಕ್ಕೆ ನಗರದ ಲಯನ್ಸ್ ಭವನ ನಡೆಯಲಿದ್ದು, ಕಾರ್ಯಕ್ರಮದ ಉದ್ಘಾಟನೆ ಬೇಲೂರು ಗುರುಬಸವೇಶ್ವರ ಮಠದ ಡಾ.ಪ್ರಭು ಮಹಾಂತ ಸ್ವಾಮೀಜಿ ನಡೆಸಲಿದ್ದಾರೆ ಎಂದು ಸ್ಲಂ ಜನಾಂದೋಲನ ಸಮಿತಿಯ ಜಿಲ್ಲಾಧ್ಯಕ್ಷ ಇಮ್ತಿಯಾಜ್ ಮಾನ್ವಿ ಹೇಳಿದರು.

ಇಲ್ಲಿನ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕಾರ್ಯಕ್ರಮದ ಅಧ್ಯಕ್ಷತೆ ರಾಜ್ಯ ಸಂಚಾಲಕಿ ಚಂದ್ರಮ್ಮ ವಹಿಸಿಕೊಳ್ಳಲಿದ್ದು, ಕಾರ್ಯಕ್ರಮ ಉದ್ದೇಶಿಸಿ ಪ್ರಾಸ್ತಾವಿಕವಾಗಿ ರಾಜ್ಯ ಸಂಚಾಲಕ ಎ. ನರಸಿಂಹಮೂರ್ತಿ ಮಾತನಾಡಲಿದ್ದಾರೆ ಎಂದರು. ಹೋರಾಟದ ಕುರಿತು ಸಾಹಿತಿ ಬಸವರಾಜ ಸುಳಿಬಾವಿ ಮಾತನಾಡಲಿದ್ದು, ಸಮ್ಮೇಳನದ ರ‍್ಯಾಲಿ ಉದ್ಘಾಟನೆಯನ್ನು ಸಾಮಾಜಿಕ ಹೋರಾಟಗಾರ ಚೇತನ ಅಹಿಂಸಾ ನಡೆಸಲಿದ್ದಾರೆ. ಪೂರ್ಣ ರವಿಶಂಕರ, ಎಂ.ಎಸ್.ಹಡಪದ, ವೆಂಕಟೇಶಯ್ಯ. ಸತೀಶ ಪಾಸಿ ಭಾಗವಹಿಸಲಿದ್ದಾರೆ ಎಂದರು. ರಾಜ್ಯ ಸಂಚಾಲಕ ಎ.ನರಸಿಂಹಮೂರ್ತಿ ಮಾತನಾಡಿ, ರಾಜ್ಯ ಸರ್ಕಾರ ಮೂರು ವರ್ಷ ಪೂರೈಸಿದರೂ ಸ್ಲಂ ಜನರ ಬೇಡಿಕೆ ಈಡೇರಿಸಿಲ್ಲ, ಸ್ಲಂ ಜನರಿಗೆ ಉಚಿತ ಮನೆ ನೀಡುತ್ತೇವೆ ಎಂದು ಈಗಿರುವ ಕಾಂಗ್ರೆಸ್ ಸರ್ಕಾರ ಚುನಾವಣೆ ಪೂರ್ವದಲ್ಲಿ ಹೇಳಿಕೆ ನೀಡಿತ್ತು. ಆದರೆ ಮಾತು ತಪ್ಪಿ ಸ್ಲಂ ಜನರಿಗೆ ಅನ್ಯಾಯ ಮಾಡಲಾಗುತ್ತಿದೆ ಎಂದು ಆರೋಪಿಸಿದರು. ವಿಶಾಲಾಕ್ಷಿ ಹಿರೇಗೌಡ್ರ, ವೆಂಕಮ್ಮ ಹೊಸಪೇಟೆ, ವೆಂಗಮ್ಮ ದೊಡ್ಡಮನಿ, ಆರಾಧನಾ ಬಣಕಾರ, ಫರ್ಮಿನಬಾನು ಹವಾಲ್ದಾರ, ಮೆಹಬೂಬಸಾಬ್ ಬಳ್ಳಾರಿ, ಫಕ್ರುಸಾಬ್ ಮುಲ್ಲಾನವರ, ಶರಣಪ್ಪ ಸೂಡಿ, ಇಮ್ರಾಹಿಂ ಮುಲ್ಲಾ, ಅಕ್ಬರಬಾಷಾ ಡಂಬಳ, ಮೌಲಾಸಾಬ್ ಗಚ್ಚಿ, ಮಹಮ್ಮದ್ ಗಡಾದ ಇದ್ದರು.



ದೇವಿಯರಿಗೆ ಉಡಿ ತುಂಬುವ ಕಾರ್ಯಕ್ರಮ ಇಂದು

•**ನರಗುಂದ:** ತಾಲೂಕಿನ ಬೈರನಹಟ್ಟಿ ಗ್ರಾಮದ ಪವಾಡ ಪುರುಷ ಬ್ರಹ್ಮಾನಂದ ಸ್ವಾಮೀಜಿಯ ಜಾತ್ರಾ ಮಹೋತ್ಸವ ಅಂಗವಾಗಿ ಜೂ.19ರ ಸಂಜೆ ಗ್ರಾಮದ ದೇವತೆಗಳಾದ ದ್ಯಾಮಮ್ಮದೇವಿ ಮತ್ತು ದುರ್ಗಾದೇವಿ ಹಾಗೂ ಭಂಡೆಮ್ಮದೇವಿ ಅವರುಗಳಿಗೆ ಉಡಿ ತುಂಬುವ ಕಾರ್ಯಕ್ರಮ ಜರುಗಲಿದೆ.

ಜೂ.20ರ ಸಂಜೆ 5 ಗಂಟೆಗೆ ಗ್ರಾಮದ ಮಾರುತೇಶ್ವರ ದೇವಸ್ಥಾನದ ಮುಂದಿನ ಹೊಂಡ ತುಂಬುವ ಕಾರ್ಯಕ್ರಮ, ಜೂ.21ರ ಬೆಳಗ್ಗೆ 8 ಗಂಟೆಗೆ ಹೊಂಡಪೂಜೆ ಕಾರ್ಯಕ್ರಮ ಜರುಗವುದು. ಜೂ.22ರ ಬೆಳಗ್ಗೆ 6.30ಕ್ಕೆ ಬ್ರಹ್ಮಾನಂದ ದೇವಸ್ಥಾನದಲ್ಲಿ ಗುರು ಬ್ರಹ್ಮಾನಂದ ಶ್ರೀಗಳು ಹಾಗೂ ಬಸವಣ್ಣ ದೇವರ ಮೂರ್ತಿಗೆ ರುದ್ರಾಭೀಷಕ ಕಾರ್ಯಕ್ರಮ ನಡೆಯಲಿದೆ. ಸಂಜೆ 5.30ಕ್ಕೆ ಶಾಂತಲಿಂಗ ಶ್ರೀಗಳು ಬ್ರಹ್ಮಾನಂದ ರಥೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಸಂಜೆ 9 ಗಂಟೆಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಗುರು ಬ್ರಹ್ಮಾನಂದರ ಮೂರ್ತಿ ಮೆರವಣಿಗೆ ನಡೆಯುತ್ತದೆ. ರಾತ್ರಿ 10.30ಕ್ಕೆ ನಾಟಕ ಜರುಗಲಿದೆ ಎಂದು ಗ್ರಾಮಸ್ಥರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೊಟ್ಟೂರೇಶ್ವರ ಜಾತ್ರಾ ಮಹೋತ್ಸವಕ್ಕೆ ಚಾಲನೆ

•**ಗದಗ:** ದೇಶದ ಸಂಸ್ಕೃತಿ, ಸಂಪ್ರದಾಯ, ಪರಂಪರೆಯ ರಕ್ಷಣೆಗಾಗಿ ಶ್ರದ್ಧಾ ಕೇಂದ್ರಗಳು ಶ್ರಮಿಸುತ್ತಿವೆ. ಈ ದೆಸೆಯಲ್ಲಿ ಈ ಭಾಗದ ಕೊಟ್ಟೂರೇಶ್ವರ ಮಠವು ಜನರ ಕಲ್ಯಾಣಕ್ಕಾಗಿ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ನಮ್ಮ ದೇಶದ ಸಂಸ್ಕೃತಿಯ ಬಗ್ಗೆ ಜಾಗೃತಿ ಮೂಡಿಸುತ್ತಿದೆ ಎಂದು ಬಿಜೆಪಿ ರಾಜ್ಯ ಓಬಿಸಿ ಘಟಕದ ಕಾರ್ಯದರ್ಶಿ ರವಿ ದಂಡಿನ ಹೇಳಿದರು.

ತಾಲೂಕಿನ ಹರ್ಲಾಪೂರ ಕೊಟ್ಟೂರೇಶ್ವರ ಮಠದ 138ನೇ ಜಾತ್ರಾ ಮಹೋತ್ಸವ ಹಾಗೂ ಪುರಾಣ ಪ್ರಾರಂಭೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಅಡ್ನೂರ ಮತ್ತು ಗದಗ ಮಠದ ಪಂಚಾಕ್ಷರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಹಠಯೋಗಿ ಕೊಟ್ಟೂರೇಶ್ವರ ಪುರಾಣ ಗ್ರಂಥವು ಮೌಲ್ಯಯುತವಾಗಿದ್ದು ಇದರಲ್ಲಿ ಕೊಟ್ಟೂರೇಶ್ವರರ ಜೀವನ ಚರಿತ್ರೆಯ ಮಾರ್ಗಗಳು ನಮ್ಮ ಜೀವನಕ್ಕೆ ದಾರಿ ದೀಪವಾಗಿವೆ ಎಂದರು.

ಮಲ್ಲಸಮುದ್ರದ ಓಂಕಾರೇಶ್ವರ ಮಠದ ಫಕೀರೇಶ್ವರ ಮಠದ ಶ್ರೀಗಳು ಮಾತನಾಡಿ, ಇಂದಿನ ವೈಜ್ಞಾನಿಕ ಯುಗದಲ್ಲಿ ಧರ್ಮಾಚರಣೆಯ ಕಾರ್ಯಕ್ರಮದಲ್ಲಿ ಭಾಗವಹಿಸುವ ಜನರು ಕ್ಷೀಣಿಸುತ್ತಿರುವುದು ಕಂಡು ಬರುತ್ತಿದೆ ಎಂದರು.

ಸಾನ್ನಿಧ್ಯ ವಹಿಸಿದ್ದ ಕೊತಬಾಳದ ಗಂಗಾಧರ ಸ್ವಾಮೀಜಿ, ಮಹಾಲಿಂಗಪೂರದ ಚನ್ನವೀರ ಶ್ರೀಗಳು ಮಾತನಾಡಿದರು. ಪುರಾಣ ಪ್ರವಚನಕಾರ ಕೀರ್ತನ ಕೇಸರಿ ಗುರುನಾಥ ಶಾಸ್ತ್ರಿಗಳು ಹಠಯೋಗಿ ಕೊಟ್ಟೂರೇಶ್ವರರ ಪುರಾಣವನ್ನು ಆರಂಭಿಸಿ ಕೊಟ್ಟೂರೇಶ್ವರರ ಸಂಕ್ಷಿಪ್ತ ಚರಿತ್ರೆಯನ್ನು ಹೇಳಿದರು. ಮಲ್ಲಸಮುದ್ರದ ಓಂಕಾರೇಶ್ವರ ಮಠದ ಫಕೀರೇಶ್ವರ ಸ್ವಾಮೀಜಿಗಳಿಗೆ ಕೊಟ್ಟೂರೇಶ್ವರ ಗೆಳೆಯರ ಬಳಗದ ವತಿಯಿಂದ ಭಾವೈಕ್ಯತೆಯ ಸಿರಿ ಎಂಬ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಸಮಾಜ ಮುಖಿ ಕಾರ್ಯ ಮಾಡಿದ ಹಲವಾರು ಮಹನೀಯರನ್ನು ಸನ್ಮಾನಿಸಲಾಯಿತು. ಡಾ.ಕೊಟ್ಟೂರೇಶ್ವರ ಶ್ರೀಗಳು, ಗುರುಸಿದ್ದೇಶ್ವರ ಶ್ರೀ, ಫಕೀರಯ್ಯಸ್ವಾಮಿ ಹರ್ತಿಮಠ, ಉಮೇಶ ಮಲ್ಲಾಪೂರ, ಅಶೋಕ ಬ್ಯಾಹಟ್ಟಿ, ಮಲ್ಲಪ್ಪ ಕುರಿ, ಬಸವರಾಜ ಗೊರವರ, ಆನಂದ ಹಂಚಿನಾಳ, ಕೆ.ಬಿ.ವೀರಾಪೂರ, ಮಂಜುನಾಥ ಅರ್ಕಸಾಲಿ, ಕೆ.ಆರ್. ಕೋರಿ, ಡಾ.ಎಸ್.ಸಿ.ಸರ್ವಿ, ವೆಂಕಟೇಶ ಜುಂಜಣ್ಣಿ, ಕೆ.ಬಿ.ಕೊಣ್ಣೂರು ಇದ್ದರು.



ಮಹಿಳೆಯರಿಗೆ ಕಾನೂನು ಅರಿವು ಅವಶ್ಯ



•**ಗಜೇಂದ್ರಗಡ:** ಕಾನೂನಿನ ಜ್ಞಾನದಿಂದ ಅನ್ಯಾಯಗಳನ್ನು ಎದುರಿಸಲು ಸಾಧ್ಯವಾಗುತ್ತದೆ. ಕಾನೂನು ಅರಿವು ಪ್ರತಿಯೊಬ್ಬರ ಜೀವನದಲ್ಲಿ ಅತ್ಯಂತ ಅಗತ್ಯವಾಗಿದೆ. ಭಾರತದಲ್ಲಿ ಮಕ್ಕಳು ಮತ್ತು ಮಹಿಳೆಯರರಿಗೆ ವಿಶೇಷ ಕಾನುನೂಗಳಿವೆ. ಆದ್ದರಿಂದ ಮಹಿಳೆಯರು ಕಾನೂನನ್ನು ತಿಳಿದುಕೊಂಡು ಮಹಿಳೆಯರ ಮೇಲೆ ನಡೆಯುವ ಕಾನೂನುಬಾಹಿರ ಚಟುವಟಿಕೆಗಳಿಗೆ ಮತ್ತು ದೌರ್ಜನ್ಯಗಳಿಗೆ ಧ್ವನಿ ಎತ್ತಿ ನಿಲ್ಲಬೇಕು ಎಂದು ನ್ಯಾಯವಾದಿ ದಾವಲಸಾಬ ತಾಳಿಕೋಟಿ ಹೇಳಿದರು.

ಪಟ್ಟಣದ ಶಿವಾಜಿಪೇಟೆಯಲ್ಲಿ ಜ್ಞಾನವಿಕಾಸ ಕೇಂದ್ರದಿಂದ ಆಯೋಜಿಸಿದ್ದ ಮಹಿಳಾ ಕಾನೂನುಗಳ ಅರಿವು ನೆರವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿ, ಕಾನೂನು ಅರಿವು ಮಹಿಳೆಯರಿಗೆ ಆತ್ಮ ವಿಶ್ವಾಸ ನೀಡುವುದುರ ಜೊತೆಗೆ ತಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಶಕ್ತಿಯನ್ನು ಒದಗಿಸುತ್ತದೆ ಎಂದರು.

ಗೃಹಹಿಂಸೆ ತಡೆ ಕಾಯ್ದೆ 2005, ಲೈಂಗಿಕ ಕಿರುಕುಳ ತಡೆಕಾಯ್ದೆ 2013, ಸಮಾನ ವೇತನ ಕಾಯ್ದೆ, ವರದಕ್ಷಿಣೆ ನಿಷೇಧ ಕಾಯ್ದೆ ಇನ್ನು ಮುಂತಾದ ಕಾನುನೂಗಳು ಮಹಿಳೆಯರ ಮೇಲೆ ನಡೆಯುವ ಹಿಂಸೆ ಮತ್ತು ದೌರ್ಜನ್ಯವನ್ನು ತಡೆಯಲು ಸಹಾಯವಾಗಿದೆ ಎಂದು ಕಾಯಿದೆಗಳ ಬಗ್ಗೆ ತಿಳಿಸಿಕೊಟ್ಟರು. ಅನ್ಯಾಯ ಸಂಭವಿಸಿದಾಗ ಪೊಲೀಸ್ ಠಾಣೆ, ನ್ಯಾಯಾಲಯ, ಮಹಿಳಾ ಆಯೋಗ, ಕಾನೂನು ಸೇವಾ ಪ್ರಾಧಿಕಾರಿಗಳ ಮೂಲಕ ನ್ಯಾಯ ಪಡೆಯಲು ಕಾನೂನು ಮಹಿಳೆಯರಿಗೆ ಅವಕಾಶ ಕಲ್ಪಸುತ್ತದೆ ಎಂದರು.

ಜ್ಞಾನ ವಿಕಾಸ ಕೇಂದ್ರದ ಅಧ್ಯಕ್ಷೆ ರೇಣುಕಾ ಗೌಡರ, ಸೇವಾಪ್ರತಿನಿಧಿ ಕವಿತಾ ಕೋಟಗಿ, ರೋಣ ತಾಲೂಕಿನ ಜ್ಞಾನವಿಕಾಸ ಸಮನ್ವಯಾಧಿಕಾರಿ ಲಕ್ಷ್ಮೀ, ಸಂಘದ ಸದಸ್ಯರಾದ ರೇಖಾ ಎಲಿಗಾರ, ಅನ್ನಪೂರ್ಣ ಕಂಬಳಿ, ಗಂಗಮ್ಮ, ಲಾಲಬಿ ತಾಳಿಕೋಟಿ, ವಿಜಯಲಕ್ಷ್ಮಿ, ಜಯಶ್ರೀ, ಪಾರಮ್ಮ ಬೊಯಿಟೆ ಸೇರಿದಂತೆ ಇತರರಿದ್ದರು.

ಎಲ್‌ಕೆಜಿ, ಯುಕೆಜಿ ಪ್ರಾರಂಭೋತ್ಸವ



•**ನರಗುಂದ:** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಶಿಶು ಅಭಿವೃದ್ಧಿ ಯೋಜನೆ ವತಿಯಿಂದ ಪಟ್ಟಣದಲ್ಲಿನ ಬಸವೇಶ್ವರ ನಗರದ ಅಂಗನವಾಡಿ ಕೇಂದ್ರ-91ರಲ್ಲಿ ಎಲ್.ಕೆ.ಜಿ /ಯು.ಕೆ.ಜಿ ಪ್ರಾರಂಭೋತ್ಸವವನ್ನು ಉದ್ಘಾಟಿಸಲಾಯಿತು.

ಮಕ್ಕಳಿಗೆ ಅವಶ್ಯಕವಿರುವ ಸಮವಸ್ತ್ರ, ಸ್ಕೂಲ್ ಬ್ಯಾಗ್, ವಾಟರ್ ಬಾಟಲ್ ಮತ್ತು ಶೂ ಗಳನ್ನು ನಿವೃತ್ತ ನೌಕರರಾದ ದೇವಮ್ಮ ಹೂಗಾರ ಅಂಗನವಾಡಿ ಮಕ್ಕಳಿಗೆ ಕೊಡಿಸಿ ಮಕ್ಕಳ ಶಿಕ್ಷಣಕ್ಕೆ ನೆರವಾದರು. ಪೋಷನ್ ಅಭಿಯಾನದ ಸಂಯೋಜಕ ಮಂಜುನಾಥಗುಗ್ಗರಿ, ಮೇಲ್ವಿಚಾರಕಿ ಶಕುಂತಲಾ ಗಣಿ, ಪ್ರಾಥಮಿಕ ಶಾಲಾ ಪ್ರಧಾನ ಗುರುಗಳಾದ ಎಸ್. ಎನ್. ಪವಾರ, ನಿಂಗಪ್ಪ ಲಿಂಗದಾಳ, ಪಾರ್ವತಿ ಹಿರೇಮಠ, ಈರಮ್ಮ ಸಂಗನಹಾಳ, ಪೂಜಾ ಮೇಲಿನಮನಿ, ಅಲ್ತಾಪ ನವಲಗುಂದ ಇತರರಿದ್ದರು. ಬಿ.ಬಿ. ಗುಡಿಕಾರ ನಿರೂಪಿಸಿದರು. ಪಾರ್ವತಿ ಹೂಗಾರ ವಂದಿಸಿದರು.

ಮೊಹರಂ ಶಾಂತಿಯುತವಾಗಿ ಆಚರಿಸಿ

•**ಗಜೇಂದ್ರಗಡ:** ಮೊಹರಂ ಹಬ್ಬವನ್ನು ಶಾಂತಿ, ಸೌಹಾರ್ದ ಮತ್ತು ಸಹೋದರತ್ವದ ಸಂಕೇತವಾಗಿ ಆಚರಿಸಬೇಕು. ಯಾವುದೇ ರೀತಿಯ ಅಹಿತಕರ ಘಟನೆಗಳಿಗೆ ಅವಕಾಶ ನೀಡದೆ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಸಾರ್ವಜನಿಕರು ಹಾಗೂ ವಿವಿಧ ಸಮುದಾಯದ ಮುಖಂಡರು ಪೊಲೀಸ್ ಇಲಾಖೆಗೆ ಸಹಕರಿಸಬೇಕು ಎಂದು ಗಜೇಂದ್ರಗಡ ಪಿ.ಎಸ್.ಐ. ಪ್ರಕಾಶ ಡಿ. ತಿಳಿಸಿದರು.

ಸ್ಥಳೀಯ ರೋಣ ರಸ್ತೆಯಲ್ಲಿನ ಪೊಲೀಸ್ ಠಾಣೆಯಲ್ಲಿ ಆವರಣದಲ್ಲಿ ಹಾಗೂ ರಾಜೂರು ಗ್ರಾಮದಲ್ಲಿ ಮೊಹರಂ ಹಬ್ಬದ ಹಿನ್ನೆಲೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಹಿಂದೂ-ಮುಸ್ಲಿಂ ಬಾಂಧವರ ಹಾಗೂ ವಿವಿಧ ಸಂಘಟನೆಗಳ ಪ್ರಮುಖರ ಶಾಂತಿ ಸಭೆಯಲ್ಲಿ ಮಾತನಾಡಿ, ಮೆರವಣಿಗೆಗಳು ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು ನಿಗದಿತ ಮಾರ್ಗಸೂಚಿಗಳ ಪ್ರಕಾರ ನಡೆಸಬೇಕು ಎಂಬರು.

ರೋಣ ಸಿಪಿಐ ವಿಜಯಕುಮಾರ ಮಾತನಾಡಿ, ಸಾಮಾಜಿಕ ಜಾಲತಾಣಗಳಲ್ಲಿ ಹರಡುವ ಸುಳ್ಳು ಸುದ್ದಿಗಳು ಅಥವಾ ವದಂತಿಗಳನ್ನು ನಂಬಬಾರದು. ಸಮಾಜದಲ್ಲಿ ಶಾಂತಿ ಕದಡುವವರ ಬಗ್ಗೆ ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡಬೇಕು ಎಂದರು.

ಪಾಷಾ ಹವಾಲ್ದಾರ, ಎ.ಎಸ್.ಐ ಎಸ್.ಎಸ್.ಹುಲ್ಲೂರ, ಪೇದೆಗಳಾದ ಡಿ.ಎಚ. ಆಶಾಖಾನ, ಸಂದೀಪ ದೊಡ್ಡಮನಿ, ಐ.ಎಸ.ಮಿರ್ಜಾ, ಮಲ್ಲಿಕಾರ್ಜುನ ಮುನೇನಕೊಪ್ಪ ಅಶೋಕ ಮಾದರ ಸೇರಿದಂತೆ ವಿವಿಧ ಮಸೀದಿಗಳ ಮುಖಂಡರುಗಳು ಇದ್ದರು.



ಜಿಎಸ್‌ಪಾಗೆ ಸಚಿವ ಸ್ಥಾನ ನೀಡಲು ಆಗ್ರಹ



•**ಮುಂಡರಗಿ:** ರೋಣ ಮತಕ್ಷೇತ್ರದ ಶಾಸಕ ಜಿ.ಎಸ್. ಪಾಟೀಲ ಅವರು ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಲ್ಲದೆ ಕಾಂಗ್ರೆಸ್ ಪಕ್ಷದ ಗದಗ ಜಿಲ್ಲಾ ಅಧ್ಯಕ್ಷರಾಗಿ ಸಂಘಟನೆಯನ್ನು ಮಾಡಿ, ರೋಣ ಮತಕ್ಷೇತ್ರದ ಅಭಿವೃದ್ಧಿ ಕೆಲಸ ಮಾಡಿ, ನೂರಾರು ಕೆರೆಗಳ ಸರದಾರರಾಗಿ, ಶಿಂಗಟಾಲೂರ ಏತ ನೀರಾವರಿ ಮೂಲಕ ಕೆರೆಗಳನ್ನು ಭರ್ತಿಗೊಳಿಸಿ ರೈತರ ಹಿತಕ್ಕಾಗಿ ಶ್ರಮಿಸಿದ ಇವರಿಗೆ ಸಚಿವ ಸ್ಥಾನವನ್ನು ನೀಡಬೇಕು ಎಂದು ವಿಶ್ವ ಕನ್ನಡ ರಕ್ಷಣಾ ವೇದಿಕೆಯ ಮುಂಡರಗಿ ತಾಲೂಕು ಮಹಿಳಾ ಅಧ್ಯಕ್ಷೆ ಮಧುಮತಿ ಮಡಿವಾಳರ ಆಗ್ರಹಿಸಿದರು.

ಅವರು ಈ ಕುರಿತು ತಹಶೀಲ್ದಾರ್ ಮೂಲಕ ಮುಖ್ಯ ಮಂತ್ರಿಗಳಿಗೆ ಮನವಿ ಅರ್ಪಿಸಿ ಸುದ್ದಿಗಾರರೊಂದಿಗೆ ಮಾತನಾಡಿ, ಜಿ.ಎಸ್.ಪಾಟೀಲ ಅವರು ಮುಂಡರಗಿ ತಾಲೂಕು ಡಂಬಳ ಗ್ರಾಮದಲ್ಲಿ ತೋಟಗಾರಿಕೆ ಕಾಲೇಜ್ ನಿರ್ಮಾಣಕ್ಕೆ ಶ್ರಮಿಸುತ್ತಿದ್ದಾರೆ. ಅವರು ನೇರ, ಶುದ್ಧ ರಾಜಕಾರಣಿಗಳು. ಮುಖ್ಯಮಂತ್ರಿಗಳು ಇವರಿಗೆ ಸಂಪುಟದ ವಿಸ್ತರಣೆಯಲ್ಲಿ ಸಚಿವ ಸ್ಥಾನ ನೀಡಬೇಕೆಂದು ಒತ್ತಾಯಿಸಿದರು.

ಅಧ್ಯಕ್ಷರಾದ ರಿಯಾಜಅಹ್ಮದ ಬಾಗಲಿ, ಅಲ್ಲಾಬಕ್ಷಿ ಆಳವಂದಿಲ್ಲಶಾದ ಡಿ., ನಾಗರಾಜ ಹರಿಜನ, ಇಸ್ಮಾಯಿಲಸಾಬ ಮುಲ್ಲಾ, ನಾಗಪ್ಪ ಅಣ್ಣಿಗೇರಿ, ಬಾಷಾಸಾಬ ಡಂಬಳ, ಶಬನಾ ಲಕ್ಷ್ಮೇಶ್ವರ, ಪೂಜಾ ಇಟಗಿಮಠ, ರಾಜೇಶ್ವರಿ ಪಾಟೀಲ, ಮುಶಾಂಬಿ ಮುರ‍್ಡಿ, ಶಾಂತಾ ಬಂಡಿವರ, ಬಸಮ್ಮ ಗದಗ, ಪರೀದಾ ಅಬ್ಬಿಗೇರಿ ಮುಂತಾದವರಿದ್ದರು.

ಭಾವೈಕ್ಯತೆಯ ಮೊಹರಂ ಆಚರಣೆ ಅವಶ್ಯ

•**ಲಕ್ಷ್ಮೇಶ್ವರ:** ಶಾಂತಿ ಮತ್ತು ಸೌಹಾರ್ದದಿಂದ ತಾಲೂಕಿನಾದ್ಯಂತ ಮೊಹರಂ ಆಚರಿಸಿ ಎಂದು ಪಿಎಸ್‌ಐ ನಾಗರಾಜ ಗಡದ ಹೇಳಿದರು.

ಅವರು ಪಟ್ಟಣದ ಪೊಲೀಸ್ ಠಾಣೆಯಲ್ಲಿ ಮೊಹರಂ ಹಬ್ಬದ ಪ್ರಯುಕ್ತ ಶಾಂತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿ, ಇಲ್ಲಿ ಹಿಂದೂ-ಮುಸ್ಲಿಂ ಜನರು ಭಾವೈಕ್ಯದಿಂದ ಮೊಹರಂ ಆಚರಿಸುತ್ತಾ ಬಂದಿದ್ದಾರೆ. ಈ ವರ್ಷವು ಕೂಡ ಶಾಂತಿಯುತವಾಗಿ ಹಬ್ಬವನ್ನು ಆಚರಿಸಿ, ಪೊಲೀಸ್ ಇಲಾಖೆಯ ವತಿಯಿಂದ ಅಗತ್ಯವಿರುವ ಭದ್ರತೆ ಒದಗಿಸುತ್ತೇವೆ . ಶಾಂತಿಗೆ ಭಂಗ ತರುವಂತಹರ ಮೇಲೆ ಕ್ರಮ ಕೈಗೊಳ್ಳಲಾಗುವುದು. ಪೊಲೀಸ್ ಇಲಾಖೆಯ ಇ-ಚಲನ್ ಮೂಲಕ ದಾಖಲಾಗಿರುವ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ದಂಡ ಪಾವತಿಗೆ ರಾಜ್ಯ ಸರಕಾರ ಶೇ.50ರಷ್ಟು ರಿಯಾಯಿತಿ ಘೋಷಿಸಿದೆ. ಜೂ.21ರಿಂದ ಜು.10ರವರೆಗೆ ರಿಯಾಯಿತಿ ಲಭ್ಯವಿದ್ದು ಸಾರ್ವಜನಿಕ ರಿಯಾಯಿತಿ ಇದ್ದಾಗ ದಂಡ ಕಟ್ಟಬೇಕು ಎಂದರು.

ಸಾರ್ವಜನಿಕ ಪರವಾಗಿ ಪೂರ್ಣಾಜಿ ಕರಾಟೆ, ಗಂಗಾಧರ ಮೆಣಸಿನಕಾಯಿ, ಎಂ.ಐ. ಮುಳಗುಂದ, ಅಮರೀಶ ತೆಂಬದಮನಿ, ಬಸವರಾಜ ಕಲ್ಲೂರ ಮಾತನಾಡಿದರು. ಸುಲೇಮಾನಸಾಬ್ ಕಣಕೆ, ,ಅಬ್ದುಲಸಾಬ್ ಬೆಟಗೇರಿ, ಎಂ.ಎಚ್. ಶಮಲೆವಾಲೆ, ಭೀಮಣ್ಣ ಯಂಗಾಡಿ, ಮರಿಯಪ್ಪ ಭಜಂತ್ರಿ, ಅಕ್ಬರಸಾಬ್ ಸುಂಡಕೆ, ಮಲ್ಲಿಕಾರ್ಜುನ ವಾರದ, ಡಿ.ಬಿ. ಫಕೀರಪ್ಪ , ಮುತ್ತಣ್ಣ ಪೂಜಾರ, ಜಾಫರ ಲಕ್ಷ್ಮೇಶ್ವರ, ಖಾಜಾಪೀರ ಜಮಖಂಡಿ, ನೂರಅಹ್ಮದ ಶಿದ್ದಿ, ಮಂಜಪ್ಪ ವಡ್ಡರ, ದಾದಾಪೀರ ತಂಬಾಕ, ಇರ್ಫಾನ ಮಿರ್ಜಾ, ಮುತ್ತು ನೀರಲಗಿ ಇದ್ದರು. ಸಿಬ್ಬಂದಿ ಪ್ರಕಾಶ ಮ್ಯಾಗೇರಿ ನಿರ್ವಹಿಸಿದರು.



ಕೈಕೊಟ್ಟ ಮುಂಗಾರು ಮಳೆ | ಆಕಾಶದತ್ತ ಮುಖ ಮಾಡಿದ ಅನ್ನದಾತ

ಬೆಳೆ ಒಣಗುವ ಆತಂಕದಲ್ಲಿ ರೈತ

▸ ಬಾಳಗೌಡ ಪಾಟೀಲ



ಬೆಳಗಾವಿ: ಆರಂಭದಲ್ಲಿ ಉತ್ತಮ ಮುಂಗಾರು ಮಳೆಯಾಗಿದ್ದರಿಂದ ರೈತರು ಜಮೀನುಗಳನ್ನು ಹದಗೊಳಿಸಿ ಬಿತ್ತನೆ ಕಾರ್ಯ ಕೈಗೊಂಡಿದ್ದರು. ಆದರೆ, ಕಳೆದ ಕೆಲವು ದಿನಗಳಿಂದ ಮಳೆ ಕೈಕೊಟ್ಟಿರುವುದರಿಂದ ರೈತರಲ್ಲಿ ಆತಂಕ ಮನೆಮಾಡಿದೆ.

ಬಿತ್ತನೆ ಮಾಡಿ ಸುಮಾರು 8ರಿಂದ 10 ದಿನಗಳು ಕಳೆದರೂ ಮಳೆಯಾಗದ ಕಾರಣ ಬಿಸಿಲಿನ ತಾಪಮಾನ ಹೆಚ್ಚಿದ್ದು, ಸೋಯಾಬಿನ್ ಸೇರಿದಂತೆ ವಿವಿಧ ಮುಂಗಾರು ಬೆಳೆಗಳು ತೇವಾಂಶದ ಕೊರತೆಯಿಂದ ಒಣಗಲಾರಂಭಿಸಿವೆ. ಇದೇ ಪರಿಸ್ಥಿತಿ ಇನ್ನೂ ಒಂದು ವಾರ ಮುಂದುವರಿದರೆ ಬಿತ್ತನೆ ಮಾಡಿದ ಬೆಳೆಗಳು ಸಂಪೂರ್ಣ ನಾಶವಾಗುವ ಸಾಧ್ಯತೆ ಇದೆ ಎಂದು ರೈತರು ಕಳವಳ ವ್ಯಕ್ತಪಡಿಸುತ್ತಿದ್ದಾರೆ.

ಇನ್ನೊಂದೆಡೆ, ಬಿಸಿಲಿನ ತಾಪದಿಂದ ವನ್ಯಜೀವಿಗಳೂ ಸಂಕಷ್ಟ ಅನುಭವಿಸುತ್ತಿವೆ. ಕುಡಿಯುವ ನೀರು ಹಾಗೂ ಆಹಾರದ ಕೊರತೆಯಿಂದ ನವಿಲು, ಕೋತಿಗಳು ಸೇರಿದಂತೆ ಹಲವು ಪ್ರಾಣಿಗಳು ಕೃಷಿ ಜಮೀನುಗಳಿಗೆ ನುಗ್ಗಿ ಬಿತ್ತನೆ ಮಾಡಿದ ಹೊಲಗಳನ್ನು ಅಗೆದು ಹಾನಿಗೊಳಿಸುತ್ತಿವೆ. ಒಂದು ಕಡೆ ಮಳೆಯ ಕೊರತೆ, ಮತ್ತೊಂದು ಕಡೆ ವನ್ಯಜೀವಿಗಳ ಕಾಟದಿಂದ ರೈತರು ಸಂಕಷ್ಟ ಎದುರಿಸುತ್ತಿದ್ದಾರೆ.

ಮಳೆಯ ನಿರೀಕ್ಷೆಯಲ್ಲಿ ರೈತರು ಆಕಾಶದತ್ತ ಚಿತ್ತ ಹರಿಸಿದ್ದು, ಕೆಲವರು ಸ್ಪ್ರಿಂಕ್ಲರ್ ಹಾಗೂ ಹನಿ ನೀರಾವರಿ ವ್ಯವಸ್ಥೆಗಳ ಮೂಲಕ ಬೆಳೆ ಉಳಿಸಿಕೊಳ್ಳಲು ನೀರು ಸಿಂಪಡಿಸುತ್ತಿದ್ದಾರೆ. ಆದರೆ, ಇದು ತಾತ್ಕಾಲಿಕ ಪರಿಹಾರ ಮಾತ್ರವಾಗಿದ್ದು, ಉತ್ತಮ ಮಳೆಯು ಅಗತ್ಯವಿದೆ ಎಂದು ರೈತರು ತಿಳಿಸಿದ್ದಾರೆ.

ಬೆಳಗಾವಿ ಜಿಲ್ಲೆಯ ಕೆಲವು ತಾಲೂಕುಗಳಲ್ಲಿ ಶೇ.50ರಷ್ಟು ಬಿತ್ತನೆ ಕಾರ್ಯ ಪೂರ್ಣಗೊಂಡಿದ್ದರೆ, ಇನ್ನೂ ಹಲವೆಡೆ ಶೇ.50ರಷ್ಟು ರೈತರು ಮಳೆಯ ನಿರೀಕ್ಷೆಯಲ್ಲಿ ಬಿತ್ತನೆ ಮುಂದೂಡಿದ್ದಾರೆ. ಜಿಲ್ಲೆಯಲ್ಲಿ 7,52,312 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ ಹೊಂದಲಾಗಿದ್ದು, ಜೂನ್ 15ರ ವೇಳೆಗೆ 3,81,200 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಪೂರ್ಣಗೊಂಡಿದೆ.

ಜೂನ್ 16ರವರೆಗೆ ಮಳೆ ವಿವರ: ಜೂನ್ 1ರಿಂದ 16ರವರೆಗೆ ಜಿಲ್ಲೆಯ ಸರಾಸರಿ ವಾಡಿಕೆ ಮಳೆ 70 ಮಿ.ಮೀ.ಆಗಬೇಕಿತ್ತು. ಆದರೆ, 77 ಮಿ.ಮೀ. ಮಳೆ ದಾಖಲಾಗಿದೆ. ಸರಾಸರಿಗಿಂತ 7 ಮಿ.ಮೀ. ಹೆಚ್ಚು ಮಳೆಯಾದರೂ ಬಿತ್ತನೆಗೆ ಅಗತ್ಯವಾದ ನಿರಂತರ ಮಳೆ ಸಿಗದಿರುವುದು ಸಮಸ್ಯೆಯಾಗಿದೆ.

ಅತಿಹೆಚ್ಚು ಮಳೆ ಬೀಳುವ ಖಾನಾಪುರ ತಾಲೂಕಿನಲ್ಲಿ 128 ಮಿ.ಮೀ.ಮಳೆ ಆಗಬೇಕಿದ್ದರೆ ಕೇವಲ 47 ಮಿ.ಮೀ. ಮಾತ್ರ ದಾಖಲಾಗಿದೆ. ಬೆಳಗಾವಿ ತಾಲೂಕಿನಲ್ಲಿ 93 ಮಿ.ಮೀ. ಪೈಕಿ 63 ಮಿ.ಮೀ. ಮಳೆಯಾಗಿದೆ. ಗೋಕಾಕ್, ನಿಪ್ಪಾಣಿ, ಕಾಗವಾಡ ಸೇರಿದಂತೆ ಹಲವು ತಾಲೂಕುಗಳಲ್ಲಿ ವಾಡಿಕೆಯಷ್ಟು ಮಳೆಯಾಗಿಲ್ಲ. ಇದೇ ಪರಿಸ್ಥಿತಿ ಮುಂದುವರಿದರೆ ನದಿಗಳಿಗೆ ಒಳಹರಿವು ಕಡಿಮೆಯಾಗಿ ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯೂ ಎದುರಾಗುವ ಸಾಧ್ಯತೆ ಇದೆ.

> **ನಮ್ಮ 8 ಎಕರೆ ಜಮೀನಿನಲ್ಲಿ ಸೋಯಾಬಿನ್ ಬಿತ್ತನೆ ಮಾಡಿದ್ದೇವೆ. ಮಳೆಯಾಗದ ಕಾರಣ 3 ಎಕರೆ ಪ್ರದೇಶಕ್ಕೆ ಸ್ಪ್ರಿಂಕ್ಲರ್ ಮೂಲಕ ನೀರು ಸಿಂಪಡಿಸುತ್ತಿದ್ದೇವೆ. ಉಳಿದ 5 ಎಕರೆ ಭೂಮಿಗೆ ಮಳೆಯ ಅಗತ್ಯವಿದೆ. ಇನ್ನೂ ಒಂದು ವಾರ ಮಳೆಯಾಗದಿದ್ದರೆ ಬೆಳೆ ಸಂಪೂರ್ಣ ಹಾನಿಯಾಗುವ ಸಾಧ್ಯತೆ ಇದೆ.**
> ■ **ಬಸಯ್ಯಾ ಹಿರೇಮಠ, ಗಣ್ಣಿಕೊಪ್ಪ ಗ್ರಾಮದ ಪ್ರಗತಿಪರ ರೈತ**

> **ಜೂನ್ 22ರ ಬಳಿಕ ಮಳೆಯಾಗುವ ಸಾಧ್ಯತೆ ಇದೆ. ಈಗಾಗಲೇ ಬಿತ್ತನೆ ಮಾಡಿದ ಬೆಳೆಗಳಿಗೆ ಇನ್ನೂ ಒಂದು ವಾರ ಯಾವುದೇ ತೊಂದರೆಯಾಗುವುದಿಲ್ಲ. ಸೋಯಾಬಿನ್ ಬೆಳೆಯಲ್ಲಿ ಕೆಲವೆಡೆ ರೋಗ ಹಾಗೂ ಕೀಟಬಾಧೆ ಕಂಡುಬಂದಿದ್ದು, ಅಗತ್ಯ ಔಷಧ ಸಿಂಪಡಿಸಲು ರೈತರಿಗೆ ಸಲಹೆ ನೀಡಲಾಗಿದೆ. ಜುಲೈ 15ರ ವರೆಗೂ ಬಿತ್ತನೆ ಮಾಡಬಹುದು.**
> ■ **ಡಾ.ಎಚ್.ಡಿ.ಕೋಳೇಕರ್, ಕೃಷಿ ಇಲಾಖೆ ಜಂಟಿ ನಿರ್ದೇಶಕರು**

ಕಳಪೆ ಸೂರ್ಯಕಾಂತಿ ಬಿತ್ತನೆ ಬೀಜದಿಂದ ಕಂಗಾಲು

ಬೆಳೆ ನಾಶ ಮಾಡಿದ ರೈತ



▸ ಸಿದ್ದಯ್ಯ ಹೆಸರೂರು

ದಿಗಂತ ವಿಶೇಷ

ಮಸ್ಕಿ: ತಾಲೂಕಿನ ಮಟ್ಟೂರು ಗ್ರಾಮದ ವ್ಯಾಪ್ತಿಯಲ್ಲಿ ಬರುವ ಗುಡಿಹಾಳ ಗ್ರಾಮದ ರೈತ ಶರಣಪ್ಪ ಗುಡಿಹಾಳ ಅವರು ಮಾರುಕಟ್ಟೆಯಿಂದ ಸಾವಿರಾರು ರೂಪಾಯಿ ನೀಡಿ ತಂದಿದ್ದ ಸೂರ್ಯಕಾಂತಿ ಬಿತ್ತನೆ ಬೀಜಗಳು ಮೊಳಕೆ ಒಡೆಯದ ಕಾರಣ ಇಡೀ ಬೆಳೆಯನ್ನು ತಾವೇ ಕುಂಟಿ ಹೊಡಿಯುವ ನಾಶಪಡಿಸಿದ್ದಾರೆ.

ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ರಾಯಚೂರು ಜಿಲ್ಲೆಯಾದ್ಯಂತ ರೈತರು ಸೂರ್ಯಕಾಂತಿ ಬೆಳೆಯನ್ನು ನೆಚ್ಚಿ ದೊಡ್ಡ ಪ್ರಮಾಣದಲ್ಲಿ ಬಿತ್ತನೆ ಕಾರ್ಯ ಕೈಗೊಂಡಿದ್ದಾರೆ. ಅದೇ ರೀತಿ ಮಟ್ಟೂರು ಗ್ರಾಮದ ರೈತ ಶರಣಪ್ಪ ಅವರು ಕೂಡ ಉತ್ತಮ ಬೆಳೆಯ ಆಸೆಯಿಂದ ಬ್ಯಾಂಕ್ ಹಾಗೂ ಕೈಗಡ ಸಾಲ ಮಾಡಿ ಸಾವಿರಾರು ರೂಪಾಯಿ ವೆಚ್ಚದಲ್ಲಿ ಖಾಸಗಿ ಅಂಗಡಿಯಿಂದ ಸೂರ್ಯಕಾಂತಿ ಬಿತ್ತನೆ ಬೀಜಗಳನ್ನು ಖರೀದಿಸಿದ್ದರು.

ದಿನಗಟ್ಟಲೆ ಹೊಲದಲ್ಲಿ ಬೆವರು ಸುರಿಸಿ, ಜಮೀನು ಹದ ಮಾಡಿ ಬಿತ್ತನೆ ಮಾಡಲಾಗಿತ್ತು. ಆದರೆ, ಬಿತ್ತನೆ ಮಾಡಿ ವಾರಗಳೇ ಕಳೆದರೂ ಶೇ.80ಕ್ಕೂ ಹೆಚ್ಚು ಬೀಜಗಳು ಮಣ್ಣಿನಲ್ಲಿಯೇ ಕೊಳೆತು ಹೋಗಿದ್ದು, ಕನಿಷ್ಠ ಮಟ್ಟದಲ್ಲೂ ಮೊಳಕೆಯೂ ಒಡೆದಿಲ್ಲ.

ಭರವಸೆ ಕಳೆದುಕೊಂಡು ಬೆಳೆ ನಾಶಪಡಿಸಿದ ಅನ್ನದಾತ ಬಿತ್ತಿದ ಬೀಜಗಳು ಸರಿಯಾಗಿ ಮೊಳಕೆಯೊಡೆಯದೆ ಇಡೀ ಜಮೀನು ಖಾಲಿ ಉಳಿದಿದ್ದನ್ನು ಕಂಡು ರೈತ ಶರಣಪ್ಪ ತೀವ್ರ ಆಘಾತಕ್ಕೆ ಒಳಗಾಗಿದ್ದಾರೆ. ಈ ಕಳಪೆ ಬೆಳೆಯನ್ನು ಮುಂದುವರೆದು ಬೆಳೆಸಿದರೆ ಇನ್ನೂ ಹೆಚ್ಚಿನ ನಷ್ಟವಾಗುತ್ತದೆ ಎಂದು ಅರಿತ ಅವರು, ಭಾವುಕರಾಗಿ ತಮ್ಮ ಕೈಯಾರೆ ತಮ್ಮ ಹೊಲಕ್ಕೆ ಕುಂಟಿಯ ಮುಖಾಂತರ ಇಡೀ ಬೆಳೆಯನ್ನು ಉಳುಮೆ ಮಾಡಿ ನಾಶ ಪಡಿಸಿದ್ದಾರೆ.

ಸಾವಿರಾರು ರೂಪಾಯಿ ಖರ್ಚು ಮಾಡಿ ಬೀಜ, ರಸಗೊಬ್ಬರ ತಂದಿದ್ದೆವು. ಆದರೆ, ಕಂಪನಿಗಳ ವಂಚನೆಯಿಂದ ನಮಗೆ ಕಣ್ಣೀರು ಮಾತ್ರ ಉಳಿದಿದೆ ಎಂದು ಶರಣಪ್ಪ ತಮ್ಮ ಅಳಲು ತೋಡಿಕೊಂಡಿದ್ದಾರೆ.

ಇನ್ನೂ ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಬಿತ್ತನೆ ಬೀಜಗಳ ಬೆಲೆ ಮತ್ತು ನಕಲಿ ಬೀಜ ಜಾಲ ಇತ್ತೀಚಿನ ದಿನಗಳಲ್ಲಿ ರಾಯಚೂರು ಭಾಗದಲ್ಲಿ ಸೂರ್ಯಕಾಂತಿ, ತೊಗರಿ ಹಾಗೂ ಹತ್ತಿ ಬಿತ್ತನೆ ಬೀಜಗಳ ಬೆಲೆ ಗಗನಕ್ಕೇರಿದೆ. ಇಷ್ಟಾದರೂ ಕೃಷಿ ಇಲಾಖೆಯ ಅಧಿಕಾರಿಗಳ ಕಣ್ಣು ತಪ್ಪಿಸಿ ಅನೇಕ ಕಡೆಗಳಲ್ಲಿ ಕಳಪೆ ಮತ್ತು ನಕಲಿ ಬೀಜಗಳನ್ನು ಬ್ರಾಂಡೆಡ್ ಕಂಪನಿಗಳ ಹೆಸರಿನಲ್ಲಿ ರೈತರಿಗೆ ಮಾರಾಟ ಮಾಡಿ ವಂಚಿಸಲಾಗುತ್ತಿದೆ.

ಆದ್ದರಿಂದ ಕೃಷಿ ಇಲಾಖೆಯು ಇನ್ನೂ ಮುಂದಾದರೂ ಎಚ್ಚೆತ್ತುಕೊಂಡು ರೈತ ಶರಣಪ್ಪ ಅವರಂತಹ ಸಣ್ಣ ಕೃಷಿಕರ ನೆರವಿಗೆ ಧಾವಿಸಬೇಕಿದೆ ಎಂದು ಈರಣ್ಣ ಅಮರಣ್ಣ ಗುಡಿಹಾಳ ರೈತ ಮುಖಂಡರ ಮನವಿಯಾಗಿದೆ.

> **ನಕಲಿ ಬೀಜದ ಕುರಿತು ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸಿದ್ದು, ವಿಜ್ಞಾನಿಗಳು ರೈತರ ಹೊಲಗಳಿಗೆ ತೆರಳಿ ಪರಿಶೀಲನೆ ಮಾಡುತ್ತಿದ್ದು ವರದಿ ಬಂದ ನಂತರ ಕ್ರಮ ಕೈಗೊಳ್ಳಲಾಗುತ್ತದೆ.**
> ■ **ವೆಂಕಟೇಶ ಕ್ಷತ್ರಿ, ಕೃಷಿ ಇಲಾಖೆ ಅಧಿಕಾರಿ, ಮಸ್ಕಿ ರೈತ ಸಂಪರ್ಕ ಕೇಂದ್ರ**

ಕಿರುಸುದ್ದಿ

ಬೋನಿಗೆ ಬಿದ್ದ ಚಿರತೆ

ಮುನಿರಾಬಾದ್: ಸಮೀಪದ ನಿಂಗಾಪೂರ ಬಳಿ ಇರುವ ಐಆರ್‌ಬಿ ಹಾಗೂ ಕೆಎಸ್‌ಆರ್‌ಪಿ ತರಬೇತಿ ಕೇಂದ್ರ ಹತ್ತಿರ ಹಾಗೂ ಕಾಸನಕಂಡಿ ಅರಣ್ಯ ವಲಯದಲ್ಲಿ ಕಾಣಿಸಿಕೊಂಡಿದ್ದ ಚಿರತೆ ಅರಣ್ಯ ಇಲಾಖೆಯು ಇಟ್ಟಿದ್ದ ಬೋನಿಗೆ ಗುರುವಾರ ಬೆಳಗಿನ ಜಾವಾ ಬಿದ್ದಿದೆ. ತಿಂಗಳ ಹಿಂದೆ ಹಿಟ್ನಾಳ್ ಟೋಲ್ ಪ್ಲಾಜ ಹತ್ತಿರ ಸಹ ಕಾಣಿಸಿಕೊಂಡಿದೆ ಎನ್ನಲಾಗಿದ್ದ ವಿಡಿಯೋ ವೈರಲ್ ಆಗಿತ್ತು. ಇದರಿಂದ ಜನತೆ ರಾತ್ರಿ ಸಮಯದಲ್ಲಿ ಆ ಭಾಗದಲ್ಲಿ ಸಂಚಾರ ಮಾಡಲು ತುಂಬಾ ಭಯ ಬೀತರಾಗಿದ್ದರು. ಕೊನೆಗೂ ಅರಣ್ಯ ಇಲಾಖೆಯ ಪ್ರಯತ್ನದಿಂದ ಚಿರತೆ ಸೆರೆ ಆಗಿದೆ. ಸುಮಾರು 2 ವರ್ಷ ಪ್ರಾಯದ ಈ ಚಿರತೆಯನ್ನು ಕಮಲಾಪುರ ಝೂಗೆ ರವಾನಿಸಲಾಗಿದೆ. ಚಿರತೆಯ ಭಯದಲ್ಲಿದ್ದ ಸಿಬ್ಬಂದಿ ಹಾಗೂ ಆ ಭಾಗದ ಜನತೆ ನಿಟ್ಟುಸಿರು ಬಿಟ್ಟಿದ್ದಾರೆ.

40ಕ್ಕೂ ಹೆಚ್ಚು ಪ್ರಯಾಣಿಕರಿಗೆ ಗಾಯ

ಜೋಯಿಡಾ: ಗುರುವಾರ ಬೆಳಗ್ಗೆ 9 ಗಂಟೆ ಸುಮಾರಿಗೆ ಜೋಯಿಡಾದಿಂದ ಸುಮಾರು 6 ಕಿಮೀ ದೂರದಲ್ಲಿ ಸದಾಶಿವಗಡ ಔರಾದ ರಾಜ್ಯ ಹೆದ್ದಾರಿಯಲ್ಲಿ ಚಾಪೋಲಿ ಘಟ್ಟದಲ್ಲಿ ಬಾಪೇಲಿ ಕ್ರಾಸ್ ನಾಗೋಡಾ ಮಾರ್ಗ ಮಧ್ಯೆ ಬೆಳಗಾವಿ-ಅಂಕೋಲಾ ಮತ್ತು ಉಳವಿ-ಇಚಲಕರಂಜಿ ಸಾರಿಗೆ ಬಸ್‌ಗಳ ನಡುವೆ ಅಪಘಾತ ಸಂಭವಿಸಿದ್ದು, ಸುಮಾರು 40ಕ್ಕೂ ಹೆಚ್ಚು ಪ್ರಯಾಣಿಕರಿಗೆ ಗಾಯಗಳಾಗಿವೆ. ಇವುಗಳಲ್ಲಿ ಜೊಯಿಡಾ ಬಿಜಿವಿಎಸ್ ಪಿಯು ಕಾಲೇಜಿನ ವಿದ್ಯಾರ್ಥಿಗಳಿದ್ದಾರೆ. ಗಾಯಾಳುಗಳನ್ನು ಜೋಯಿಡಾ ತಾಲೂಕು ಆಸ್ಪತ್ರೆಯಲ್ಲಿ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದ್ದು, ತಹಶೀಲ್ದಾರ್ ಮಂಜುನಾಥ ಮುನ್ನೊಳ್ಳಿ, ಡಿವೈಎಸ್‌ಪಿ ಶಿವಾನಂದ ಮದರಕಂಡಿ, ಪಿಎಸ್‌ಐ ಜಗದೀಶ ಎನ್, ಪ್ರಾಚಾರ್ಯ ಮಂಜುನಾಥ ಶೆಟ್ಟಿ ಮುಂತಾದವರು ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ಆರೋಗ್ಯ ವಿಚಾರಿಸುತ್ತಿದ್ದಾರೆ. ಎರಡು ಬಸ್‌ಗಳಲ್ಲಿ ಸುಮಾರು 150ಕ್ಕೂ ಹೆಚ್ಚು ಪ್ರಯಾಣಿಕರು ಇದ್ದರು.



ಹಿಂದೂ ಯುವತಿ ಕರೆದೊಯ್ದ ಮುಸ್ಲಿಂ ಯುವಕನ ಬಂಧನ

ಭಟ್ಕಳ: ಇಲ್ಲಿಯ ಸೂಪರ್ ಮಾರ್ಕೆಟೊಂದರಲ್ಲಿ ಕೆಲಸಕ್ಕಿದ್ದ ಹಿಂದೂ ಯುವತಿಯೊಬ್ಬಳನ್ನು ಕಾರಿನಲ್ಲಿ ಕರೆದೊಯ್ದ ಮುಸ್ಲಿಂ ಯುವಕ ಶಾಹೀದ್ ಖಾನ್ ಎಂಬಾತನನ್ನು ಯುವತಿಯ ದೂರಿನ ಮೇರೆಗೆ ಪೊಲೀಸರು ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು, ನ್ಯಾಯಾಲಯ ನ್ಯಾಯಾಂಗ ಬಂಧನ ವಿಧಿಸಿದೆ.

ಬುಧವಾರ ಬೆಳಗ್ಗೆ ಪಟ್ಟಣದ ಸೂಪರ್ ಮಾರ್ಕೆಟೊಂದರಲ್ಲಿ ಕೆಲಸ ಮಾಡುತ್ತಿದ್ದ ಮಾರುಕೇರಿ ಭಾಗದ ಹಿಂದೂ ಯುವತಿಯೊಬ್ಬಳನ್ನು ಅದೇ ಸೂಪರ್ ಮಾರ್ಕೆಟ್‌ನಲ್ಲಿ ಸೇಲ್ಸ್‌ಮೆನ್ ಆಗಿರುವ ಕಾರಗದ್ದೆಯ ಶಾಹೀದ್ ಖಾನ್ ಎಂಬಾತ ಕಾರಿನಲ್ಲಿ ಕರೆದೊಯ್ಯುವಾಗ ಸಾಗರ ರಸ್ತೆಯ ಕಸ ಹಾಕುವ ಜಾಗದಲ್ಲಿ ಹಿಂದೂ ಸಂಘಟನೆಯ ಕಾರ್ಯಕರ್ತರು ತಡೆದು ಪೊಲೀಸರಿಗೆ ಒಪ್ಪಿಸಿದ್ದರು. ಆದರೆ, ಪೊಲೀಸರು ಆರೋಪಿ ಮೇಲೆ ಮೊದಲು ಪ್ರಕರಣ ದಾಖಲಿಸುವುದನ್ನು ಬಿಟ್ಟು ಯುವತಿಯನ್ನು ರಕ್ಷಿಸಿದ ಹಿಂದೂ ಕಾರ್ಯಕರ್ತರಿಬ್ಬರ ಮೇಲೆ ಪ್ರಕರಣ ದಾಖಲಿಸಿಕೊಂಡಿದ್ದರು.

ಇದರಿಂದ ತೀವ್ರ ಆಕ್ರೋಶಗೊಂಡ ಬಿಜೆಪಿ ಮತ್ತು ಹಿಂದೂ ಸಂಘಟನೆಯ ಕಾರ್ಯಕರ್ತರು ಬುಧವಾರ ರಾತ್ರಿ ನಗರ ಪೊಲೀಸ್ ಠಾಣೆ ಮುಂದೆ ಧರಣಿ ನಡೆಸಿ ಆರೋಪಿಯನ್ನು ಬಂಧಿಸಬೇಕು ಮತ್ತು ಹಿಂದೂ ಕಾರ್ಯಕರ್ತರ ಮೇಲಿನ ಪ್ರಕರಣ ವಾಪಾಸ್ ಪಡೆಯಬೇಕು ಎಂದು ಆಗ್ರಹಿಸಿದ್ದರು.

ಸ್ಥಳಕ್ಕೆ ಹೆಚ್ಚುವರಿ ಎಸ್ಪಿ ಕೃಷ್ಣಮೂರ್ತಿ ಆಗಮಿಸಿ ಪ್ರಕರಣ ಗುರುವಾರ ಇತ್ಯರ್ಥ ಪಡಿಸುವ ಭರವಸೆ ನೀಡಿದ್ದರಿಂದ ಪ್ರತಿಭಟನಾಕಾರರು ಧರಣಿ ಕೈಬಿಟ್ಟಿದ್ದರು. ಹಿಂದೂ ಯುವತಿ ಠಾಣೆಯಲ್ಲಿ ಶಾಹೀದ್ ಖಾನ್ ವಿರುದ್ಧ ದೂರು ನೀಡಿದ್ದು ದೂರಿನಲ್ಲಿ ಆತ ನನಗೆ ಇಚ್ಛೆ ಇಲ್ಲದಿದ್ದರೂ ಪ್ರೀತಿಸುವಂತೆ ಒತ್ತಾಯ ಮಾಡುತ್ತಿದ್ದವನು ಜೂನ್ 17ರಂದು ಬೆಳಗ್ಗೆ 7.30 ಗಂಟೆಗೆ ಕಾರಿನಲ್ಲಿ ಸೂಪರ್ ಮಾರ್ಕೆಟ್ ಹಿಂಭಾಗದ ಹಾಸ್ಟೆಲ್ ಹತ್ತಿರ ಬಂದು ನನ್ನ ಬಳಿ ಹೊರಗಡೆ ಬರುವಂತೆ ಹೇಳಿ ನಿನ್ನ ಬಳಿ ಮಾತನಾಡುವುದಿದೆ ಎಂದು ಒತ್ತಾಯ ಪೂರ್ವಕವಾಗಿ ಕಾರಿನಲ್ಲಿ ಹತ್ತಿಸಿಕೊಂಡು ಕಾರಿನ ಬಾಗಿಲುಗಳನ್ನು ಹಾಕಿಕೊಂಡು ಸೀಟ್ ಬೆಲ್ಟ್ ಹಾಕಿಸಿ ಕಾರನ್ನು ವೇಗವಾಗಿ ಚಲಾಯಿಸಿಕೊಂಡು ಲೈಂಗಿಕ ಕಿರುಕುಳ ನೀಡುವ ಉದ್ದೇಶದಿಂದ ಬಲವಂತವಾಗಿ ಕರೆದೊಯ್ಯುತ್ತಿದ್ದ ಎಂದು ತಿಳಿಸಿದ್ದಾಳೆ.

ಪ್ರಕರಣದ ದಾಖಲಿಸಿಕೊಂಡ ಗ್ರಾಮೀಣ ಪಿಎಸ್‌ಐ ಭರಮಪ್ಪ ಬೆಳಗಲಿ ಆತನನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದರು.

ಯುವಕನ ಬಂಧನದಿಂದ ಪ್ರಕರಣ ತಣ್ಣಗಾದರೂ ಸಹ ಆರೋಪಿಯನ್ನು ಪೊಲೀಸರಿಗೆ ಹಿಡಿದುಕೊಟ್ಟ ಹಿಂದೂ ಕಾರ್ಯಕರ್ತರ ಮೇಲೆಯೇ ಪ್ರಕರಣ ದಾಖಲಿಸಿರುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

ಎಸ್ಪಿ ದೀಪನ್ ಭಟ್ಕಳಕ್ಕೆ ಭೇಟಿ : ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಅವರು ಗುರುವಾರ ಸಂಜೆ ಭಟ್ಕಳಕ್ಕೆ ಆಗಮಿಸಿ ಘಟನೆಯ ಸಂಪೂರ್ಣ ವಿವರ ಪಡೆದಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಹಿಂದೂ ಮತ್ತು ಮುಸ್ಲಿಂ ಮುಖಂಡರನ್ನು ಡಿವೈಎಸ್ಪಿ ಕಚೇರಿಗೆ ಕರೆಯಿಸಿಕೊಂಡು ಚರ್ಚೆ ನಡೆಸಿದ್ದಾರೆ. ಎರಡು ಸಮುದಾಯದ ಪ್ರಮುಖರಲ್ಲಿ ಪಟ್ಟಣದ ಕಾನೂನು ಸುವ್ಯವಸ್ಥೆಗೆ ಪ್ರಮುಖ ಆದ್ಯತೆ ನೀಡುವಂತೆಯೂ ತಿಳಿಸಿದ್ದಾರೆ ಎನ್ನಲಾಗಿದೆ.



ವಿಧಾನಪರಿಷತ್ ಚುನಾವಣೆಯಲ್ಲಿ ಜಯಗಳಿಸಿದ ಬಿಜೆಪಿಯ ಅಭ್ಯರ್ಥಿಗಳಾದ ರಘು ಕೌಟಿಲ್ಯ, ಲಿಂಗರಾಜ ಪಾಟೀಲ್ ಅವರನ್ನು ಬಿಜೆಪಿ ಕಾರ್ಯಾಲಯದಲ್ಲಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಅಭಿನಂದಿಸಿದರು.

ಅತ್ಯುತ್ತಮ ವಾಗ್ಮಿ ವಿದ್ಯಾರ್ಥಿ ಪ್ರಶಸ್ತಿ



ಧಾರವಾಡ: ಹುಬ್ಬಳ್ಳಿಯಲ್ಲಿ ನಡೆದ ಅಧಿಕಾರ್-2026ರ ಕಾರ್ಯಕ್ರಮದಲ್ಲಿ ಇಲ್ಲಿನ ರಾಷ್ಟ್ರೋತ್ಥಾನ ಪದವಿ ಪೂರ್ವ ಕಾಲೇಜಿನ ಪಿಯುಸಿ ವಿಭಾಗದ ದ್ವಿತೀಯ ವರ್ಷದ ವಿದ್ಯಾರ್ಥಿ ಸೂರ್ಯಾಕ್ಷ ಅಳಕವಾಡಿ ಅತ್ಯುತ್ತಮ ವಾಗ್ಮಿ ವಿದ್ಯಾರ್ಥಿ ಪ್ರಶಸ್ತಿಗೆ ಭಾಜನರಾರದು. ವಿದ್ಯಾರ್ಥಿಗೆ ಸಂಸ್ಥೆ ಕಾರ್ಯದರ್ಶಿ ರಾಘವೇಂದ್ರ ಅಂಬೇಕರ್, ಪ್ರಾಚಾರ್ಯ ರವಿಪ್ರಕಾಶ ಎಸ್, ಶಿಕ್ಷಕರು ಹಾಗೂ ಸಿಬ್ಬಂದಿ ಅಭಿನಂದಿಸಿದ್ದಾರೆ.

ಕತ್ತಲಲ್ಲಿ ಬೆಳಗಾವಿ ತಹಶೀಲ್ದಾರ್ ಕಚೇರಿ!



» ವಿದ್ಯುತ್ ಬಿಲ್ ಬಾಕಿ
» ಸಾರ್ವಜನಿಕರ ಪರದಾಟ

ಬೆಳಗಾವಿ: ಸರ್ಕಾರದ ನಿಯಮಗಳನ್ನು ಜನರಿಗೆ ತಿಳಿಸಿ ಸರ್ಕಾರಿ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸುವ ತಹಶೀಲ್ದಾರ್ ಕಚೇರಿಯೇ ಇದೀಗ ತನ್ನ ನಿರ್ಲಕ್ಷ್ಯದಿಂದ ಸಂಕಷ್ಟಕ್ಕೆ ಸಿಲುಕಿರುವ ಘಟನೆ ಬೆಳಗಾವಿಯಲ್ಲಿ ನಡೆದಿದೆ.

ಕಳೆದಮೂರುತಿಂಗಳಿನಿಂದವಿದ್ಯುತ್ ಬಿಲ್ ಪಾವತಿಸದ ಹಿನ್ನೆಲೆಯಲ್ಲಿ ಬೆಳಗಾವಿ ತಹಶೀಲ್ದಾರ್ ಕಚೇರಿಯ ವಿದ್ಯುತ್ ಸಂಪರ್ಕವನ್ನು ವಿದ್ಯುತ್ ಸರಬರಾಜು ಕಂಪನಿ ಕಡಿತಗೊಳಿಸಿದ್ದು, ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುವಂತಾಗಿದೆ.

ತಹಶೀಲ್ದಾರ್ ಕಚೇರಿಯು ಸುಮಾರು ರೂ. 58,936 ವಿದ್ಯುತ್ ಬಿಲ್ ಮೂರು ತಿಂಗಳಿನಿಂದ ಬಾಕಿ ಉಳಿಸಿಕೊಂಡಿದೆ. ಬಾಕಿ ಪಾವತಿಸುವಂತೆ ಹಲವು ಬಾರಿ ಸೂಚನೆ ನೀಡಿದರೂ ಯಾವುದೇ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ ವಿದ್ಯುತ್ ಸರಬರಾಜು ಕಂಪನಿಯ ಅಧಿಕಾರಿಗಳು ಗುರುವಾರ ಬೆಳಗ್ಗೆ ಸುಮಾರು 10 ಗಂಟೆಗೆ ಕಚೇರಿಯ ವಿದ್ಯುತ್ ಸಂಪರ್ಕವನ್ನು ಸ್ಥಗಿತಗೊಳಿಸಿದ್ದಾರೆ.

ಇದರಿಂದ ಇಡೀ ಕಚೇರಿ ಕತ್ತಲಲ್ಲಿ ಮುಳುಗಿದ್ದು, ಆಡಳಿತಾತ್ಮಕ ಕಾರ್ಯಗಳು ಸಂಪೂರ್ಣವಾಗಿ ಅಸ್ತವ್ಯಸ್ತಗೊಂಡಿವೆ.

ವಿದ್ಯುತ್ ಸಂಪರ್ಕ ಕಡಿತಗೊಂಡ ಪರಿಣಾಮ ಕಚೇರಿಯಲ್ಲಿನ ಕಂಪ್ಯೂಟರ್‌ಗಳು ಮತ್ತು ಆನ್‌ಲೈನ್ ಸೇವೆಗಳು ಸ್ಥಗಿತಗೊಂಡಿವೆ. ವಿವಿಧ ಕೆಲಸಗಳಿಗಾಗಿ ಕಚೇರಿಗೆ ಆಗಮಿಸಿದ್ದ ಸಾರ್ವಜನಿಕರು ಬೆಳಗ್ಗೆಯಿಂದಲೇ ಪರದಾಡುವಂತಾಗಿದೆ.

ವಿಶೇಷವಾಗಿ ವೃದ್ಧಾಪ್ಯ ವೇತನ, ವಿಧವಾ ವೇತನ ಹಾಗೂ ಇತರೆ ಪಿಂಚಣಿ ಯೋಜನೆಗಳಿಗಾಗಿ ಅರ್ಜಿ ಸಲ್ಲಿಸಲು ದೂರದ ಗ್ರಾಮಗಳಿಂದ ಬಂದಿದ್ದ ಹಿರಿಯ ನಾಗರಿಕರು ನಿರಾಸೆಯಿಂದ ಕಚೇರಿ ಆವರಣದಲ್ಲಿ ಕಾಯುವ ಪರಿಸ್ಥಿತಿ ನಿರ್ಮಾಣವಾಗಿದೆ.

ಪಿಂಚಣಿಗಾಗಿ ಅರ್ಜಿ ಸಲ್ಲಿಸಲು ಬೆಳಗ್ಗೆಯಿಂದಲೇ ಕಾಯುತ್ತಿದ್ದೇವೆ. ಆದರೆ, ವಿದ್ಯುತ್ ಇಲ್ಲದ ಕಾರಣ ಕೆಲಸ ಆಗುತ್ತಿಲ್ಲ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಅಧಿಕಾರಿಗಳ ಬೇಜವಾಬ್ದಾರಿತನಕ್ಕೆ ಸಾರ್ವಜನಿಕರು ಶಿಕ್ಷೆ ಅನುಭವಿಸುವಂತಾಗಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರಿ ಕಚೇರಿಯೊಂದರಲ್ಲಿ ಇಷ್ಟು ದೊಡ್ಡ ಮೊತ್ತದ ವಿದ್ಯುತ್ ಬಿಲ್ ಬಾಕಿ ಉಳಿದಿರುವುದು ಅಧಿಕಾರಿಗಳ ನಿರ್ಲಕ್ಷ್ಯ ಬಹಿರಂಗಪಡಿಸುತ್ತಿದೆ. ಕೂಡಲೇ ಬಾಕಿ ಮೊತ್ತ ಪಾವತಿಸಿ ವಿದ್ಯುತ್ ಸಂಪರ್ಕ ಮರುಸ್ಥಾಪನೆ ಮಾಡಿ, ಸಾರ್ವಜನಿಕರ ಕೆಲಸಗಳಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಮಾವು ಬೆಳೆಗಾರರ ಸಮಸ್ಯೆಗಳಿಗೆ ಶೀಘ್ರ ಸ್ಪಂದಿಸಿ: ಜೋಶಿ

ನವದೆಹಲಿ: ಕರ್ನಾಟಕದ ಮಾವು ಬೆಳೆಗಾರರ ಹಿತರಕ್ಷಣೆಗಾಗಿ ಈ ವರ್ಷವೂ ಬೆಲೆ ಕೊರತೆ ಪಾವತಿ ಯೋಜನೆ (ಪಿಡಿಪಿಎಸ್) ಮೂಲಕ ನೆರವಾಗುವಂತೆ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಕೇಂದ್ರ ಕೃಷಿ ಸಚಿವರನ್ನು ಒತ್ತಾಯಿಸಿದ್ದಾರೆ.



ರಾಜ್ಯದ ಮಾವು ಬೆಳೆಗಾರರ ಬವಣೆ, ಸಂಕಷ್ಟ ಕುರಿತು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಗುರುವಾರ (ಜೂ.18) ಪತ್ರ ಬರೆದಿರುವ ಸಚಿವ ಜೋಶಿ ಅವರು, ರಾಜ್ಯದ ಮಾವು ಬೆಳೆಗಾರರ ಸಮಸ್ಯೆಗಳಿಗೆ ಶೀಘ್ರವೇ ಸ್ಪಂದಿಸುವಂತೆ ಮನವಿ ಮಾಡಿದ್ದಾರೆ.

ಕರ್ನಾಟಕದಲ್ಲಿ ಹವಾಮಾನ ವೈಪರೀತ್ಯ ಮತ್ತು ಮಾರುಕಟ್ಟೆಯಲ್ಲಿ ಬೆಲೆ ಕುಸಿತದಿಂದ ಮಾವು ಬೆಳೆಗಾರರು ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ಹಾಗಾಗಿ ಕೂಡಲೇ ಬೆಲೆ ಕೊರತೆ ಪಾವತಿ ಯೋಜನೆ (ಪಿಡಿಪಿಎಸ್) ಅಡಿ ನೆರವಾಗುವಂತೆ ಕೃಷಿ ಸಚಿವರನ್ನು ಒತ್ತಾಯಿಸಿದ್ದಾರೆ.

ಕರ್ನಾಟಕ ಮಾವು ಬೆಳೆಯುವ ಉತ್ತಮ ಪರಿಸರ ವ್ಯವಸ್ಥೆ ಹೊಂದಿದೆ. ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯ ರೈತರು ಆದಾಯ ಮತ್ತು ಜೀವನೋಪಾಯಕ್ಕಾಗಿ ಈ ಬೆಳೆಯನ್ನು ಅವಲಂಬಿಸಿದ್ದಾರೆ. ಆದರೆ, ಮಾರುಕಟ್ಟೆಯಲ್ಲಿ ಬೆಲೆ ಕುಸಿತದಿಂದಾಗಿ ವ್ಯತಿರಿಕ್ತ ಪರಿಣಾಮ ಎದುರಿಸುತ್ತಿದ್ದಾರೆ ಎಂದು ಸಚಿವರು ಮನವರಿಕೆ ಮಾಡಿಕೊಟ್ಟಿದ್ದಾರೆ.

ಕೋಲಾರ, ಚಿಕ್ಕಬಳ್ಳಾಪುರ ಮತ್ತು ರಾಮನಗರ, ಧಾರವಾಡ, ಬೆಳಗಾವಿ ಹೀಗೆ ರಾಜ್ಯದೆಲ್ಲೆಡೆ ಇರುವ ಪ್ರಮುಖ ಮಾರುಕಟ್ಟೆಗಳಲ್ಲಿ ತೋತಾಪುರಿ ಮಾವಿನ ಬೆಲೆ ಲಾಭದಾಯಕವಾಗಿಲ್ಲ. ಮಾದರಿ ದರಕ್ಕಿಂತ ಗಮನಾರ್ಹವಾಗಿ ಕನಿಷ್ಠ ಮಟ್ಟಕ್ಕೆ ಕುಸಿದಿದೆ. ಇದರಿಂದ ಬೆಳೆಗಾರರು ತೀವ್ರ ಸಂಕಷ್ಟಕ್ಕೀಡಾಗಿದ್ದಾರೆ.

ಇದಲ್ಲದೆ, ಪ್ರತಿಕೂಲ ಹವಾಮಾನ ಪರಿಸ್ಥಿತಿಗಳಿಂದಾಗಿ ಈ ಬಾರಿ ಮಾವಿನ ಉತ್ಪಾದನೆ ಸಹ ಕಡಿಮೆಯಾಗಿದೆ. ಇದೆಲ್ಲದರ ಪರಿಣಾಮ ರೈತರಿಗೆ ತೀವ್ರ ಆರ್ಥಿಕ ನಷ್ಟ ಉಂಟಾಗುತ್ತಿದೆ ಎಂದು ಸಚಿವ ಜೋಶಿ ಅವರು ಕೃಷಿ ಸಚಿವರ ಗಮನ ಸೆಳೆದಿದ್ದಾರೆ.

ತೋತಾಪುರಿ ಮಾವು ಬೆಳೆಗಾರರ ಹಿತಾಸಕ್ತಿ ಕಾಪಾಡುವ ದೃಷ್ಟಿಯಿಂದ ಕಳೆದ ವರ್ಷದಂತೆ ಪ್ರಸಕ್ತ ವರ್ಷವೂ ಬೆಲೆ ಕೊರತೆ ಪಾವತಿ ಯೋಜನೆ (ಪಿಡಿಪಿಎಸ್) ಅಡಿಯಲ್ಲಿ ನೆರವು ಕಲ್ಪಿಸಿ ಬೆಂಬಲಕ್ಕೆ ನಿಲ್ಲುವ ಅವಶ್ಯಕತೆಯಿದೆ. ಶೀಘ್ರವೇ ಸಕಾರಾತ್ಮಕ ಕ್ರಮ ಕೈಗೊಳ್ಳುವಂತೆ ಜೋಶಿ ಒತ್ತಾಯಿಸಿದ್ದಾರೆ.

ದಲಿತ ಸಂಘರ್ಷ ಸಮಿತಿ (ಭೀಮವಾದ) ಪ್ರತಿಭಟನೆ | ಲೋಕಾಯುಕ್ತ ಕಚೇರಿ ಮುತ್ತಿಗೆಗೆ ಯತ್ನ

ಬಿಟಿಡಿಎ ಭ್ರಷ್ಟ ಅಧಿಕಾರಿಗಳ ವಿರುದ್ಧ ಕೇಸ್ ದಾಖಲಿಸಿ

ಬಾಗಲಕೋಟೆ: ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ (ಬಿಟಿಡಿಎ)ದಲ್ಲಿ ಸೇವೆ ಸಲ್ಲಿಸುತ್ತಿರುವ ಭ್ರಷ್ಟ ಅಧಿಕಾರಿಗಳ ವಿರುದ್ಧ ತಕ್ಷಣವೇ ಪ್ರಕರಣ ದಾಖಲಿಸಬೇಕು ಎಂದು ಒತ್ತಾಯಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಭೀಮವಾದ) ಕಾರ್ಯಕರ್ತರು ಲೋಕಾಯುಕ್ತ ಕಚೇರಿಗೆ ಮುತ್ತಿಗೆ ಹಾಕುವ ಮೂಲಕ ಪ್ರತಿಭಟನೆ ನಡೆಸಿದರು.

ನವನಗರದಲ್ಲಿರುವ ಲೋಕಾಯುಕ್ತ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ ದಲಿತ ಸಂಘರ್ಷ ಸಮಿತಿ(ಭೀಮವಾದ) ಕಾರ್ಯಕರ್ತರು ಬಿಟಿಡಿಎ ಕಚೇರಿಯಲ್ಲಿ ಇರುವಂತಹ ಭ್ರಷ್ಟ ಅಧಿಕಾರಿಗಳ ಮೇಲೆ ಕೇಸ್ ದಾಖಲಿಸಿ ಎಂದು ಆಗ್ರಹಿಸಿದರು.

ಪ್ರತಿಭಟನೆ ನಡೆಸುವ ಹಾಗೂ ಮುತ್ತಿಗೆ ಹಾಕುವ ಸುದ್ದಿ ತಿಳಿಯುತ್ತಿದ್ದಂತೆ ಪೊಲೀಸ್ ಇಲಾಖೆಯವರು ಬೆಳಗ್ಗೆಯಿಂದಲೇ ಲೋಕಾಯುಕ್ತ ಕಚೇರಿಯ ಸುತ್ತಮುತ್ತ ಬ್ಯಾರಿಕೇಡ್ ಹಾಕಿದ್ದರು. 11 ಗಂಟೆ ಸುಮಾರಿಗೆ ಪ್ರತಿಭಟನೆ ನಡೆಸಲು ಆಗಮಿಸಿದ್ದ ದಲಿತ ಸಂಘರ್ಷ ಸಮಿತಿಯವರು ಮುತ್ತಿಗೆ ಹಾಕಲು ಹರಸಾಹಸಪಟ್ಟರೂ ಪೊಲೀಸರು ಅವರನ್ನು ತಡೆದರು.

ಪ್ರತಿಭಟನಾಕಾರರು ಮುತ್ತಿಗೆ ಹಾಕುವ ಯತ್ನ ನಡೆಸಿದಾಗ ಕೆಲಕಾಲ ಪ್ರತಿಭಟನಾಕಾರರು ಪೊಲೀಸರ ಮಧ್ಯೆ ಮಾತಿನ ಚಕಮಕಿ ನಡೆಯಿತು. ಸ್ಥಳದಲ್ಲಿಯೇ ಧರಣಿ ನಡೆಸಿದರು.



ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದಲ್ಲಿ ಅವ್ಯವಹಾರ, ಭ್ರಷ್ಟಾಚಾರ ನಡೆದಿದ್ದು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆಯಡಿ ಲೋಕಾಯುಕ್ತರು ಪ್ರಕರಣ ದಾಖಲು ಮಾಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಪ್ರತಿಭಟನೆ ಉದ್ದೇಶಿಸಿ ಮಾತನಾಡಿದ ಪರಶುರಾಮ ನೀಲನಾಯಕ, ಮುಳುಗಡೆ ಸಂತ್ರಸ್ತರಿಗೆ ಸರಿಯಾಗಿ ಪರಿಹಾರ, ನಿವೇಶನ ಹಂಚಿಕೆ ಆಗಿಲ್ಲ, ಬಿಟಿಡಿಎ ಕಚೇರಿಯಲ್ಲಿ ಅಧಿಕಾರಿಗಳು ಸಂತ್ರಸ್ತರ ಪ್ರತಿ ಕೆಲಸಕ್ಕೆ ಹಣದ ವ್ಯವಹಾರ ನಡೆಸುತ್ತಿದ್ದಾರೆ ಎಂದು ದೂರಿದರು. ಬಿಟಿಡಿಎಯಲ್ಲಿ ಕೆಲವರು ಶಾಸಕರ ಏಜೆಂಟ್ ರಾಗಿ ಕೆಲಸ ಮಾಡುತ್ತಿದ್ದು, ಸಂತ್ರಸ್ತರಿಗೆ ನ್ಯಾಯ ಕೊಡಿಸುವಲ್ಲಿ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ವಿಫಲರಾಗಿದ್ದಾರೆಂದು ಆಪಾದಿಸಿದರು.

ಈಗಾಗಲೇ ಬಿಟಿಡಿಎ ಪ್ರಕರಣಗಳ ಬಗ್ಗೆ ತನಿಖೆ ಮಾಡಲು ಪ್ರಕರಣ ದಾಖಲಿಸುವಂತೆ ಲೋಕಾಯುಕ್ತರಿಗೆ ಮನವಿ ಕೊಟ್ಟರು ಯಾವುದೇ ಪ್ರಕರಣಗಳು ದಾಖಲು ಆಗಿರುವುದಿಲ್ಲ, ತಕ್ಷಣವೇ ಲೋಕಾಯುಕ್ತ ಅಧಿಕಾರಿಗಳು ಪ್ರಕರಣವನ್ನು ದಾಖಲಿಸಿಕೊಂಡು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ.

> **ನಿಷೇಧಾಜ್ಞೆ**
> **ಬಿಟಿಡಿಎ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಲೋಕಾಯುಕ್ತ ಕಚೇರಿಗೆ ಮುತ್ತಿಗೆ ಹಾಕಲು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಭೀಮವಾದ) ನಿರ್ಧಾರ ಮಾಡಿದ ಹಿನ್ನೆಲೆಯಲ್ಲಿ ಜೂ.18ರಿಂದ ಮುಂಜಾನೆ 6 ಗಂಟೆಯಿಂದ ಜೂ.19 ಮುಂಜಾನೆ 6 ಗಂಟೆವರೆಗೆ ಲೋಕಾಯುಕ್ತ ಕಚೇರಿ ಸುತ್ತಮುತ್ತ 100 ಮೀಟರ್ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ ಎಂದು ಸಹಾಯಕ ಆಯುಕ್ತರು ಹಾಗೂ ಉಪ ವಿಭಾಗೀಯ ದಂಡಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ. ಲೋಕಾಯುಕ್ತ ಕಚೇರಿ ಎದುರು ಸೂಕ್ತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ.**

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ವಿದ್ಯಾರ್ಥಿಗಳಿಗೆ ಶಾಲಾ ಬ್ಯಾಗ್ ವಿತರಣೆ

ಹಳಿಯಾಳ : ತಾಲೂಕಿನ ಮುರ್ಕವಾಡ ಗ್ರಾಮದ ಚೈತನ್ಯ ಪ್ರೌಢ ಶಾಲಾ ವಿದ್ಯಾರ್ಥಿನಿಯರಿಗೆ ಶಾಲಾ ಬ್ಯಾಗ್‌ಗಳನ್ನು ವಿತರಿಸಲಾಯಿತು. ಬೆಳಗಾವಿಯ ಉದ್ಯಮಿ ಅಮಿತ್ ನಾಯ್ಕ್, ಉತ್ತಮ ಗುಣಮಟ್ಟದ 75 ಶಾಲಾ ಬ್ಯಾಗ್‌ಗಳನ್ನು ದೇಣಿಗೆಯಾಗಿ ನೀಡಿದ್ದಾರೆ. ಗುರುವಾರ ಜರುಗಿದ ಸರಳ ಸಮಾರಂಭದಲ್ಲಿ, ಅಮಿತ್ ನಾಯ್ಕ್ ಅವರ ಪರವಾಗಿ ಡಾ.ವಿ ಎ ಕುಲಕರ್ಣಿ ಬ್ಯಾಗ್‌ಗಳನ್ನು ವಿತರಿಸಿ ವಿದ್ಯಾರ್ಥಿನಿಯರಿಗೆ ಶುಭ ಹಾರೈಸಿದರು. ಉದ್ಯಮಿ ಅಮಿತ್ ನಾಯ್ಕ್, ಈ ಹಿಂದೆ ದಾಂಡೇಲಿ ಮತ್ತು ಯಲ್ಲಾಪುರದ ವನವಾಸಿ ಆಶ್ರಮ ಸೇರಿದಂತೆ ಅನೇಕ ವಿದ್ಯಾ ಸಂಸ್ಥೆಗಳಿಗೆ ಬ್ಯಾಗ್, ನೋಟ್ ಬುಕ್, ಪೆನ್, ಪೆನ್ಸಿಲ್, ಕೊಡೆ ಸೇರಿದಂತೆ ಅನೇಕ ವಸ್ತುಗಳನ್ನು ಕೊಡುಗೆಯಾಗಿ ನೀಡಿದ್ದಾರೆ.ಚೈತನ್ಯ ವಿದ್ಯಾಲಯದ ಆಡಳಿತಾಧಿಕಾರಿ ಗುರುನಾಥ ಇನಾಮದಾರ, ಅಮಿತ್ ನಾಯ್ಕ್ ಅವರ ಸಾಮಾಜಿಕ ಕಳಕಳಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಶಾಲಾ ಬ್ಯಾಗ್ ನೀಡಿರುವುದಕ್ಕೆ ಧನ್ಯವಾದ ವ್ಯಕ್ತಪಡಿಸಿದ್ದಾರೆ.ಈ ಸಂದರ್ಭದಲ್ಲಿ ಚೈತನ್ಯ ವಿದ್ಯಾಲಯದ ಕಾರ್ಯದರ್ಶಿ ಭರತ್ ಇನಾಮದಾರ್, ಲಕ್ಷ್ಮೀ ಕುಲಕರ್ಣಿ, ಡಾ.ನಾಗರಾಜ್ ಭಟ್ ಸೇರಿದಂತೆ ಚೈತನ್ಯ ವಿದ್ಯಾಲಯದ ಸಿಬ್ಬಂದಿ ಉಪಸ್ಥಿತರಿದ್ದರು.

ನಾಳೆ ಗ್ರಾಹಕರ ಸಂವಾದ ಸಭೆ

ಕಾರವಾರ: ಹೊನ್ನಾವರ ಉಪ-ವಿಭಾಗ ವ್ಯಾಪ್ತಿಯಲ್ಲಿ ಜೂ.20ರಂದು ಬೆಳಗ್ಗೆ 11 ಗಂಟೆಗೆ ವಿದ್ಯುತ್ ಅದಾಲತ್ ಹಾಗೂ ಮಧ್ಯಾಹ್ನ 3.30 ಗಂಟೆಗೆ ಗ್ರಾಹಕರ ಸಂವಾದ ಸಭೆಯನ್ನು ಹೊನ್ನಾವರ ಉಪ- ವಿಭಾಗ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದೆ.ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ತಮ್ಮ ವಿದ್ಯುತ್ ಸಂಬಂಧಿತ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದು ಹೊನ್ನಾವರ ಉಪ-ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್‌ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯುತ್ ತಂತಿ ಸ್ಪರ್ಶಿಸಿ ವ್ಯಕ್ತಿ ಸಾವು

ಕಾರವಾರ: ಸಮಾರಂಭವೊಂದಕ್ಕೆ ಹಾಕಲಾಗಿದ್ದ ಟೆಂಟ್ ಕಳಚುತ್ತಿದ್ದ ಸಂದರ್ಭದಲ್ಲಿ ತಗಡಿನ ಶೀಟಿಗೆ ವಿದ್ಯುತ್ ತಂತಿ ತಗಲಿದ ಪರಿಣಾಮ ಕೂಲಿಕಾರ್ಮಿಕ ಮೃತ ಪಟ್ಟ ಘಟನೆ ನಗರದ ಕೆ.ಎಚ್.ಬಿ ಕಾಲನಿಯಲ್ಲಿ ಸಂಭವಿಸಿದೆ.ಪದ್ಮನಾಭನಗರದ ನಿವಾಸಿ ಭರತ ಗೌಡ(30) ಎಂಬಾತನೇ ಮೃತ ದುರ್ದೈವಿಯಾಗಿದ್ದು ಈತ ಹಬ್ಬುವಾಡ ಕೆ.ಎಚ್.ಬಿ ಕಾಲನಿಯ ಜ್ಞಾನೇಶ್ವರಿ ಶಾಲೆಯ ಬಳಿ ಗೃಹಪ್ರವೇಶ ಸಮಾರಂಭವೊಂದರ ಟೆಂಟಿಗೆ ಹಾಕಲಾಗಿದ್ದ ಟಗಡಿನ ಶೀಟನ್ನು ಇಳಿಸುತ್ತಿರುವಾಗ ಪಕ್ಕದ ಮನೆಯ ವಿದ್ಯುತ್ ತಂತಿ ತಗಡಿಗೆ ತಗುಲಿ ವಿದ್ಯುತ್ ಹರಿದು ಏಣಿಯ ಮೇಲಿಂದ ಕೆಳಗೆ ಬಿದ್ದು ಮೃತ ಪಟ್ಟಿರುವುದಾಗಿ ತಿಳಿದು ಬಂದಿದೆ.ಕಾರವಾರ ಶಹರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪ್ರಕರಣ ದಾಖಲಿಸಿದ್ದಾರೆ.

ಗಾಂಜಾ ಸೇವನೆ: ಪ್ರಕರಣ ದಾಖಲು

ಬನವಾಸಿ: ಗಾಂಜಾ ಸೇವನೆ ಮಾಡಿರುವುದು ವೈದ್ಯಕೀಯ ಪರೀಕ್ಷೆಯಲ್ಲಿ ಸಾಬೀತಾದ ಹಿನ್ನೆಲೆಯಲ್ಲಿ ಬನವಾಸಿ ಠಾಣೆ ಪೊಲೀಸರು ಇಬ್ಬರ ಮೇಲೆ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಸಮೀಪದ ಬದನಗೋಡಿನ ಅಭಿಷೇಕ ಮುಡಚಪ್ಪ ಭೋವಿ, ಹಾಗೂ ಸಂತೋಷ್ ಫಕೀರಪ್ಪ ಭೋವಿ ವಡ್ಡರ ಇವರುಗಳನ್ನು ದಾಸನ ಕೊಪ್ಪ ಗ್ರಾಪಂ ಹತ್ತಿರ ಗಾಂಜಾ ಸೇವನೆ ಮಾಡಿರುವ ಸಂಶಯದ ಮೇಲೆ ವಶಕ್ಕೆ ಪಡೆದು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿತ್ತು. ವೈದ್ಯಕೀಯ ವರದಿಯಲ್ಲಿ ಇಬ್ಬರೂ ಗಾಂಜಾ ಸೇವನೆ ಮಾಡಿರುವುದು ದೃಢಪಟ್ಟಿರುವುದರಿಂದ ಬನವಾಸಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	62699	66999
ಬಿಳಿಗೋಟು	26011	34449
ಕೆಂಪುಗೋಟು	30611	34699
ಬೆಟ್ಟೆ	35099	45199
ರಾಶಿ	49299	52200
ಚಾಲಿ	44000	48699

ಯಲ್ಲಾಪುರ	ಕನಿಷ್ಠ	ಗರಿಷ್ಠ
ಆಪಿ	54479	58919
ರಾಶಿ	49619	53299
ಬೆಟ್ಟೆ	36709	46869
ಕೆಂಪುಗೋಟು	22699	34899
ಬಿಳಿಗೋಟು	17699	34395
ಚಾಲಿ	35689	47399
ಕೋಕಾ	17109	26899
ಕಾಳುಮೆಣಸು	58699	66599



ಹಳಿಯಾಳ: ತಾಲೂಕಿನ ಮುರ್ಕವಾಡ ಗ್ರಾಮದ ಚೈತನ್ಯ ಪ್ರೌಢ ಶಾಲಾ ವಿದ್ಯಾರ್ಥಿನಿಯರಿಗೆ ಗುರುವಾರ ಶಾಲಾ ಬ್ಯಾಗ್‌ಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಚೈತನ್ಯ ವಿದ್ಯಾಲಯದ ಕಾರ್ಯದರ್ಶಿ ಭರತ್ ಇನಾಮದಾರ್, ಲಕ್ಷ್ಮೀ ಕುಲಕರ್ಣಿ, ಡಾ.ನಾಗರಾಜ್ ಭಟ್ ಸೇರಿದಂತೆ ಚೈತನ್ಯ ವಿದ್ಯಾಲಯದ ಸಿಬ್ಬಂದಿ ಉಪಸ್ಥಿತರಿದ್ದರು.

ಲಯನ್ಸ್ ಕ್ಲಬ್ ಕಾರ್ಯ ಶ್ಲಾಘನೀಯ

ಅಂಕೋಲಾ: ಲಯನ್ಸ್ ಕ್ಲಬ್ ಅಂಕೋಲಾ ಕರಾವಳಿ ವತಿಯಿಂದ ಶೈಕ್ಷಣಿಕ ಸಹಾಯ ಯೋಜನೆ ಅಡಿಯಲ್ಲಿ ಕೇಣಿಯ ಸರ್ಕಾರಿ ಮಾಧ್ಯಮಿಕ ಶಾಲೆಗೆ ಕುಡಿಯುವ ನೀರಿನ ಯೋಜನೆಗೆ 32 ಸಾವಿರ ರೂಪಾಯಿಗಳ ಕೊಡುಗೆ ನೀಡಲಾಯಿತು.

ಲಯನ್ಸ್ ಹಿರಿಯ ಸದಸ್ಯ ಮಹಾಂತೇಶ ರೇವಡಿ ಈ ಸಂದರ್ಭದಲ್ಲಿ ಮಾತನಾಡಿ ಸರ್ಕಾರಿ ಶಾಲೆಗಳಿಗೆ ಉತ್ತಮ ಸೌಲಭ್ಯಗಳನ್ನು ಒದಗಿಸುವಲ್ಲಿ ಖಾಸಗಿ ಸಂಘ ಸಂಸ್ಥೆಗಳ ಕೈಜೋಡಿಸುವಿಕೆ ಅತ್ಯಗತ್ಯ ಎಂದರು.

ಶಾಲೆಯ ಹಿರಿಯ ಶಿಕ್ಷಕ ಸುಧೀರ ನಾಯಕ ಮಾತನಾಡಿ, ಲಯನ್ಸ್ ಸೇವಾ ಸಂಸ್ಥೆ ಸಾಮಾಜಿಕ, ಆರೋಗ್ಯ ಮತ್ತು ಶೈಕ್ಷಣಿಕ ಕ್ಷೇತ್ರಗಳಿಗೆ ಸಹಾಯ ನೀಡುವ ಮೂಲಕ ಸಮಾಜಕ್ಕೆ ಅಗತ್ಯ ಕೊಡುಗೆಗಳನ್ನು ನೀಡುತ್ತಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಮುಖ್ಯಾಧ್ಯಾಪಕ ಹರ್ಷಿತಾ ನಾಯಕ ಮಾತನಾಡಿ, ಮಕ್ಕಳ ಕುಡಿಯುವ ನೀರಿನ ಅಗತ್ಯತೆಗೆ ಸ್ಪಂದಿಸಿ ಸಹಾಯ ಮಾಡಿರುವ ಲಯನ್ಸ್ ಸಂಸ್ಥೆಗೆ ಕೃತಜ್ಞತೆಗಳನ್ನು ತಿಳಿಸಿದರು. ಲಯನ್ಸ್ ಕರಾವಳಿ ಅಧ್ಯಕ್ಷ ರಮೇಶ ಪರಮಾರ,ಕಾರ್ಯದರ್ಶಿ ಕೆ.ಎಂ.ಗೌಡ, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ದಿನೇಶ ನಾಯ್ಕ, ಶಿಕ್ಷಕ ಉಮೇಶ ನಾಯಕ, ಲಯನ್ಸ್ ಪ್ರಮುಖರುಗಳಾದ ಚೈನ್ ಸಿಂಗ್ ಚೌಹಾಣ್,ಸತೀಶ ನಾಯಕ, ಓಂಪ್ರಕಾಶ ಪಟೇಲ್,ಚಂದನ ಸಿಂಗ್ ಉಪಸ್ಥಿತರಿದ್ದರು.



ಅಂಕೋಲಾ: ಲಯನ್ಸ್ ಕ್ಲಬ್ ಅಂಕೋಲಾ ಕರಾವಳಿ ವತಿಯಿಂದ ಶೈಕ್ಷಣಿಕ ಸಹಾಯ ಯೋಜನೆ ಅಡಿಯಲ್ಲಿ ಕೇಣಿಯ ಸರ್ಕಾರಿ ಮಾಧ್ಯಮಿಕ ಶಾಲೆಗೆ ಕುಡಿಯುವ ನೀರಿನ ಯೋಜನೆಗೆ 32 ಸಾವಿರ ರೂಪಾಯಿಗಳ ಕೊಡುಗೆ ನೀಡಲಾಯಿತು. ಲಯನ್ಸ್ ಕರಾವಳಿ ಅಧ್ಯಕ್ಷ ರಮೇಶ ಪರಮಾರ,ಕಾರ್ಯದರ್ಶಿ ಕೆ.ಎಂ.ಗೌಡ, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ದಿನೇಶ ನಾಯ್ಕ, ಶಿಕ್ಷಕ ಉಮೇಶ ನಾಯಕ ಉಪಸ್ಥಿತರಿದ್ದರು.

ಕೈಕೊಟ್ಟ ಮುಂಗಾರು: ಅನ್ನದಾತ ಕಂಗಾಲು

ಮುಗಿಲತ್ತ ಮುಖ ಮಾಡಿದ ರೈತ

ನಾಗರಾಜ ಶೆಟ್ಟಿ

ದಿಗಂತ ವಿಶೇಷ



ಅಂಕೋಲಾ: ಮಳೆಗಾಲವೆಂದರೆ ಭೀತಿ ಮೂಡಿಸುತ್ತಿದ್ದ ಜಿಲ್ಲೆಯ ಕರಾವಳಿ ಮಲೆನಾಡು ಭಾಗಗಳಲ್ಲಿ ಆರಂಭಿಕ ಹಂತದ ಮಳೆ ಸಂಪೂರ್ಣ ಕೈಕೊಟ್ಟಿದ್ದು ಜೂನ್ ಮಧ್ಯಂತರ ಕಳೆದರೂ ಕರಾವಳಿಯ ಮಳೆಗಾಲದ ಲಕ್ಷಣಗಳು ಕಾಣದಂತಾಗಿ, ಬಿರು ಬೇಸಿಗೆಯ ವಾತಾವರಣ ಕಂಡುಬರುತ್ತಿರುವುದು ಜನಸಾಮಾನ್ಯರಲ್ಲಿ ಆತಂಕ ಮೂಡಿಸಿದ್ದು ಕೃಷಿಚಟುವಟಿಕೆಗಳಿಗೂ ಹಿನ್ನಡೆಯಾಗಿ ರೈತರು ಮುಗಿಲು ನೋಡುವಂತಾಗಿದೆ.

ಉತ್ತರ ಕನ್ನಡ ಜಿಲ್ಲೆಗೆ ಜೂನ್ ಮೊದಲ ವಾರದಲ್ಲೇ ಮುಂಗಾರು ಮಾರುತಗಳ ಪ್ರವೇಶವಾಗಿದ್ದು, ಭಾರೀ ಮಳೆಯ ಕುರಿತಂತೆ ಹವಾಮಾನ ಇಲಾಖೆಯಿಂದ ರೆಡ್ ಅಲರ್ಟ್ ಸಹ ನೀಡಲಾಗಿತ್ತು ಆದರೆ ಲೆಕ್ಕಾಚಾರ ತಲೆಕೆಳಗಾದಂತೆ ಕಂಡು ಬಂದಿದ್ದು, ಮುಂಗಾರು ಪೂರ್ವದ ಮತ್ತು ಮುಂಗಾರಿನ ಜಿಟಿಜಿಟಿ ಮಳೆ ಬಿಟ್ಟರೆ ಇದುವರೆಗೆ ಹೇಳಿಕೊಳ್ಳುವಂತ ಮಳೆಯೇನೂ ಆಗಿಲ್ಲ. ತಾಪಮಾನದ ಏರಿಕೆಯಿಂದ ಉಂಟಾಗಿರುವ ಹವಾಮಾನ ವೈಪರಿತ್ಯ ಎಲ್ ನೀನೊ ಪರಿಣಾಮ ಮುಂಗಾರು ಮಾರುತಗಳ ಮೇಲೆ ಪರಿಣಾಮ ಬೀರಿದ್ದು ಜಿಲ್ಲೆಯಲ್ಲಿ ಮುಂಗಾರು ಮಳೆಯ ವೈಭವವನ್ನು ಕಾಣೆಯಾಗಿಸಿದೆ.

ಘಟ್ಟದ ಮೇಲಿನ ಪ್ರದೇಶಗಳಲ್ಲಿ ಕೆಲವು ದಿನಗಳ ಹಿಂದೆ ಮಳೆಯಾಗಿರುವುದರಿಂದ ಗಂಗಾವಳಿ, ಅಘನಾಶಿನಿ ನದಿಗಳಲ್ಲಿ ನೀರಿನ ಹರಿವು ಕಂಡು ಬರುತ್ತಿದೆಯಾದರೂ ಕುಡಿಯಲು ಬಾವಿ ನೀರನ್ನು ಹೆಚ್ಚಾಗಿ ಅವಲಂಬಿಸಿರುವ ಜನರಿಗೆ ಜೂನ್ ಕಳೆಯುತ್ತ ಬಂದರೂ ಬಾವಿ ನೀರು ನಿರೀಕ್ಷಿತ ರೀತಿಯಲ್ಲಿ ಏರದಿರುವುದು ಭವಿಷ್ಯದ ಕುರಿತು ಆಲೋಚನೆ ಮಾಡುವಂತಾಗಿದೆ.

ಜಿಲ್ಲೆಯ ಕರಾವಳಿ ಮಲೆನಾಡು ಪ್ರದೇಶಗಳಲ್ಲಿ ಮುಂಗಾರಿನಲ್ಲಿ ಬೆಳೆಯುವ ಭತ್ತದ ಬೆಳೆ ಮಳೆಯ ಮೇಲೆ ಅವಲಂಬಿತವಾಗಿದ್ದು ಇದುವರೆಗೆ ನಿರೀಕ್ಷೆಗಿಂತ ತೀರಾ ಕಡಿಮೆ ಮಳೆ ಸುರಿದಿರುವುದರಿಂದ ರೈತರು ಕೃಷಿ ಚಟುವಟಿಕೆಗಳನ್ನು ಆರಂಭಿಸಿಲ್ಲ.

ಮೃಗಶಿರಾ ಮಳೆಯಿಂದ ನೀರು ತುಂಬಿ ಕಂಗೊಳಿಸುವ ಹೊಲಗದ್ದೆಗಳು ನೀರಿಲ್ಲದೆ ಒಣಗುತ್ತಿದ್ದು ರೈತರು ಮುಂದಿನ ದಿನಗಳಲ್ಲಿ ಮಳೆ ಸುರಿದು ಕೃಷಿ ಕಾರ್ಯಗಳಿಗೆ ಹೊಲಕ್ಕಿಳಿಯುವ ಆಶಾಭಾವನೆಯಿಂದ ಕಾಯುವಂತ ಪರಿಸ್ಥಿತಿ ನಿರ್ಮಾಣವಾಗಿದೆ.

ಆಗಾಗ ಕಾಣುವ ಮೋಡಗಳು ಕಂಡಷ್ಟೇ ಬೇಗನೆ ಮಾಯವಾಗಿ ಬಿಸಿಲಿನ ತಾಪ ಹೆಚ್ಚುತ್ತಿದ್ದು 30 ರಿಂದ 33 ಡಿಗ್ರಿವರೆಗೆ ದಾಖಲಾಗುತ್ತಿರುವ ತಾಪಮಾನಕ್ಕೆ ಜನ ಹೈರಾಣಾಗಿದ್ದಾರೆ.

ರಾಜ್ಯಾದ್ಯಂತ ಈ ಬಾರಿ ಬರಗಾಲದ ಪರಿಸ್ಥಿತಿ ಇರಲಿದೆ ಎನ್ನುವ ಮಾತುಗಳು ಬಂದಿರುವುದು ರೈತರು ಮತ್ತು ಜನಸಾಮಾನ್ಯರ ಚಿಂತೆಗೆ ಕಾರಣವಾಗಿದ್ದು ಉತ್ತಮ ಮಳೆಯಾಗಲಿ ಎಂದು ಭಗವಂತನ ಮೊರೆ ಹೋಗುವಂತಾಗಿದೆ.

ಜನತೆಯ ಪ್ರಾರ್ಥನೆ

ಉತ್ತರ ಕನ್ನಡ ಜಿಲ್ಲೆಯಲ್ಲಿ ಮುಂದಿನ ಒಂದೆರಡು ದಿನಗಳಲ್ಲಿ ಭಾರೀ ಪ್ರಮಾಣದಲ್ಲಿ ಮಳೆ ಸುರಿಯುವ ಕುರಿತಂತೆ ಹವಾಮಾನ ಇಲಾಖೆಯಿಂದ ಮುನ್ಸೂಚನೆ ನೀಡಲಾಗಿದೆ. ಈ ವರ್ಷ ಮಳೆ ಕಡಿಮೆ ಇರಲಿದೆ ಎನ್ನಲಾಗುತ್ತಿದ್ದರೂ ವರ್ಷದ ಬೆಳೆ ಮತ್ತು ಕುಡಿಯುವ ನೀರಿನ ಅಗತ್ಯತೆಗೆ ತಕ್ಕ ಮಟ್ಟದಲ್ಲಾದರೂ ಮಳೆ ಸುರಿಯಲಿ ಎಂದು ಜಿಲ್ಲೆಯ ಜನತೆ ಪ್ರಾರ್ಥಿಸುತ್ತಿದ್ದಾರೆ.

ವಿದ್ಯಾರ್ಥಿ ಸಾವು: ಕ್ರಮ ಕೈಗೊಳ್ಳಲು ಒತ್ತಾಯ

ಸಿದ್ದಾಪುರ: ವಿದ್ಯಾರ್ಥಿ ಗೋಕುಲ ಕೃಷ್ಣ ಗೌಡ ಈತನ ಸಾವು ಆತ್ಮಹತ್ಯೆ ಎಂದು ಬಿಂಬಿಸಲಾಗಿದೆ. ಇದು ಆತ್ಮಹತ್ಯೆಯಲ್ಲ, ಈ ಕುರಿತು ಮೃತ ಬಾಲಕನ ತಾಯಿ ಪೊಲೀಸರಿಗೆ ದೂರು ಸಲ್ಲಿಸಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿ ಗುರುವಾರ ಸಿದ್ದಾಪುರ ಪಟ್ಟಣದಲ್ಲಿ ಭಾರೀ ಪ್ರತಿಭಟನೆ ನಡೆಸಲಾಯಿತು.

ತಾಲೂಕಿನ ಕಾನಸೂರು ಇಂದಿರಾ ಗಾಂಧಿ ವಸತಿ ಶಾಲೆಯಲ್ಲಿ ಸಾವನ್ನಪ್ಪಿದ ಗೋಕುಲ ಕೃಷ್ಣ ಗೌಡ ಹುತ್ಗಾರ ಎಂಬ ವಿದ್ಯಾರ್ಥಿಯ ಸಾವಿಗೆ ನಿಷ್ಪಕ್ಷಪಾತವಾಗಿ ನ್ಯಾಯ ಒದಗಿಸಬೇಕು ಎಂದು ತಾಲೂಕು ಒಕ್ಕಲಿಗರ ಸಮುದಾಯದವರು ಪ್ರತಿಭಟನೆ ನಡೆಸಿದರು.

ಪಟ್ಟಣದ ತಿಮ್ಮಪ್ಪ ನಾಯಕ ವೃತ್ತದಿಂದ ಸಿದ್ದಾಪುರ, ಶಿರಸಿ, ಹೊನ್ನಾವರ, ಕುಮಟಾ, ಸೊರಬ, ಸಾಗರ ಮತ್ತಿತರ ತಾಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದ ಜನರು ತಿಮ್ಮಪ್ಪ ನಾಯಕ ವೃತ್ತದಿಂದ ಪ್ರತಿಭಟನಾ ಮೆರವಣಿಗೆ ಪ್ರಾರಂಭಿಸಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ನಂತರ ತಹಶೀಲ್ದಾರ ಕಚೇರಿಯ ಎದುರಿನ ಸಾಗರ ರಸ್ತೆಯಲ್ಲಿ ಸುಮಾರು ಒಂದು ತಾಸು ರಸ್ತೆ ತಡೆ ನಡೆಸಿ ನಮಗೆ ನ್ಯಾಯ ಬೇಕೇಬೇಕು. ಒಕ್ಕಲಿಗೆ ಸಮುದಾಯದರನ್ನು ಕೆರಳಿಸಬೇಡಿ ಎಂದು ಘೋಷಣೆ ಕೂಗಿ ನಾವು ನ್ಯಾಯಕ್ಕಾಗಿ ಹೋರಾಟ ಮಾಡುತಿದ್ದೇವೆ ಎಂದು ಎಚ್ಚರಿಕೆ ನೀಡಿದರು. ಸ್ಥಳಕ್ಕೆ ಆಗಮಿಸಿದ ಶಿರಸಿ ಡಿಎಸ್‌ಪಿ ಗೀತಾ ಪಾಟೀಲ ಮಾತನಾಡಿ, ಈ ಘಟನೆಯ ಕುರಿತು ಈಗಾಗಲೇ ಎಲ್ಲ ರೀತಿಯ ತನಿಖೆ ಮಾಡುತ್ತಿದ್ದೇವೆ. ನಿಮಗೆ ಯಾರ ಮೇಲಾದರೂ ಸಂಶಯ ಇದ್ದರೆ ಹೇಳಿ ಎಂದಾಗ ಮೃತ ವಿದ್ಯಾರ್ಥಿಯ ತಾಯಿ ಜಯಶ್ರೀ ಗೌಡ ಅವರು ಶಾಲೆಯ ಎಲ್ಲಾ ಶಿಕ್ಷಕರ ಮೇಲೆಯೂ ದೂರು ಸಲ್ಲಿಸುತ್ತೇನೆ ಎಂದು ಹೇಳಿದರು. ಆದಕ್ಕೆ ಡಿಎಸ್‌ಪಿ ಅವರು ಒಪ್ಪಿಗೆ ನೀಡಿ ಇನ್ನು ಒಂದು ವಾರದೊಳಗೆ ತನಿಖೆ ಪೂರ್ಣಗೊಳಿಸುತ್ತೇವೆ ಎಂದು ಭರವಸೆ ನೀಡಿದರು. ಈ ಹಿನ್ನೆಲೆಯಲ್ಲಿ ಪ್ರತಿಭಟನೆಯನ್ನು ಮುಕ್ತಾಯ ಮಾಡಲಾಯಿತು. ತಾಲೂಕಿನ ವಿವಿಧ ಭಾಗದ ಮಹಿಳೆಯರೂ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಸುಡು ಬಿಸಿಲಿನಲ್ಲಿ ರಸ್ತೆಯ ಮೇಲೆ ಕುಳಿತು ಪ್ರತಿಭಟನೆ ನಡೆಸಿದ್ದು ವಿಶೇಷವಾಗಿತ್ತು. ಮೋಹನ ಗೌಡ, ಭಾಸ್ಕರ ಪಟಗಾರ, ವಿನಾಯಕ ಪಟಗಾರ, ಶ್ರೀಧರ ಗೌಡ, ಮಹೇಶ ಗೌಡ, ಮಹಾಬಲೇಶ್ವರ ಗೌಡ, ಸುಮಾ ಗೌಡ, ಪದ್ಮಾವತಿ ಗೌಡ, ಸೀತಾರಾಮ ಗೌಡ, ಅಣ್ಣಪ್ಪ ಗೌಡ, ವಿ.ಆರ್.ಗೌಡ, ಮಂಜುನಾಥ ಗೌಡ, ತಾಲೂಕು ಬಿಜೆಪಿ ಘಟಕದ ಅಧ್ಯಕ್ಷ ತಿಮ್ಮಪ್ಪ ಎಂ.ಕೆ., ತಾಲೂಕು ಕಾಂಗ್ರೆಸ್ ಅಧ್ಯಕ್ಷ ವಸಂತ ನಾಯ್ಕ, ಜೆಡಿಎಸ್ ಮುಖಂಡ ಉಪೇಂದ್ರ ಪೈ, ಎನ್‌ಎಸ್‌ಯುಐನ ವಿಶ್ವಗೌಡ ಇತರರಿದ್ದರು.

ಸ್ಥಳದಲ್ಲಿ ಸಿದ್ದಾಪುರ ಸಿಪಿಐ ಜೆ.ಬಿ.ಸೀತಾರಾಮ, ಪಿಎಸ್‌ಐಗಳಾದ ನಾಗಪ್ಪ ಇದ್ದರು.



ಹೊಸ ವಿಚಾರಗಳ ಬಗ್ಗೆ ಆಸಕ್ತಿ ವಹಿಸಿ

ಶಿರಸಿ: ದೊಡ್ಡಬಳ್ಳಾಪುರದಲ್ಲಿ ಕರ್ನಾಟಕ ವೈಜ್ಞಾನಿಕ ಸಂಶೋಧನಾ ಪರಿಷತ್ ವತಿಯಿಂದ ಆಯೋಜಿಸಲಾದ 'ನಾನು ವಿಜ್ಞಾನಿ-2025' ಟೆಲಿಸ್ಕೋಪ್ ತಯಾರಿಕಾ ಕಾರ್ಯಗಾರದಲ್ಲಿ ಭಾಗವಹಿಸಿ ಸಾಧನೆಗೈದ ಶಿರಸಿ ಶೈಕ್ಷಣಿಕ ಜಿಲ್ಲೆಯ ವಿದ್ಯಾರ್ಥಿಗಳಿಗೆ ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್ ಪಶಸ್ತಿ ಪತ್ರ ವಿತರಣಾ ಸಮಾರಂಭ ಚಂದನ ಆಂಗ್ಲ ಮಾಧ್ಯಮ ಶಾಲೆ, ನರೇಬೈಲ್ ಶಿರಸಿಯಲ್ಲಿ ನಡೆಯಿತು.

ಕಾರ್ಯಕ್ರಮವನ್ನು ಮಲೆನಾಡು ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ, ಶಿರಸಿ, ಚಂದನ ಆಂಗ್ಲ ಮಾಧ್ಯಮ ಶಾಲೆ, ನರೇಬೈಲ್, ಕರ್ನಾಟಕ ವೈಜ್ಞಾನಿಕ ಸಂಶೋಧನಾ ಪರಿಷತ್ ಬೆಂಗಳೂರು, ಕದಂಬ ಕನ್ನಡ ಸೇನೆ ಕರ್ನಾಟಕ, ಕರ್ನಾಟಕ ನವ ನಿರ್ಮಾಣ ವೇದಿಕೆ ಹಾಗೂ ಕಲ್ಪವೃಕ್ಷಚಾರಿಟೇಬಲ್‌ಟ್ರಸ್ಟ್, ಶಿರಸಿಇವರುಗಳ ಸಹಯೋಗದಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಉಮೇಶ ನಾಯ್ಕ್ ಅವರು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಮಲೆನಾಡು ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಸಂಸ್ಥಾಪಕ ಎಲ್.ಎಂ. ಹೆಗಡೆ ಅವರು ವಹಿಸಿದ್ದರು.ಉದ್ಘಾಟಕರಾಗಿ ಮಾತನಾಡಿದ ಉಮೇಶ ನಾಯ್ಕ್ ಅವರು, ಪೋಷಕರು ಮತ್ತು ಶಿಕ್ಷಕರು ಮಕ್ಕಳ ಪ್ರಶ್ನಿಸುವ ಮನೋಭಾವವನ್ನು ಉತ್ತೇಜಿಸಬೇಕು. ಮಕ್ಕಳು ಕೂಡ ಕುತೂಹಲ ಬೆಳೆಸಿಕೊಳ್ಳಬೇಕು ಹಾಗೂ ಹೊಸ ಹೊಸ ವಿಚಾರಗಳ ಬಗ್ಗೆ ಆಸಕ್ತಿ ವಹಿಸಬೇಕು. ಇಂತಹ ಕಾರ್ಯಕ್ರಮಗಳು ಮಕ್ಕಳ ಭವಿಷ್ಯಕ್ಕೆ ಪ್ರೇರಣೆಯಾಗುತ್ತವೆ ಎಂದು ಅಭಿಪ್ರಾಯಪಟ್ಟರು.

ಕಲ್ಪವೃಕ್ಷ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ನವೀನ್ ಬಿ. ಶೆಟ್ಟಿ ಅವರು ಮಾತನಾಡಿ, ಗ್ರಾಮೀಣ ಭಾಗದ ಮಕ್ಕಳಲ್ಲಿ ಅಪಾರ ಪ್ರತಿಭೆ ಇದೆ. ಟೆಲಿಸ್ಕೋಪ್ ತಯಾರಿಕಾ ಕಾರ್ಯಗಾರದಲ್ಲಿ ಭಾಗವಹಿಸಿ ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್ ಮಾನ್ಯತೆಗೆ ಪಾತ್ರರಾದ ಈ ವಿದ್ಯಾರ್ಥಿಗಳ ಸಾಧನೆ ಶಿರಸಿ ಶೈಕ್ಷಣಿಕ ಜಿಲ್ಲೆಯ ಹೆಮ್ಮೆ. ಮಕ್ಕಳಲ್ಲಿ ವಿಜ್ಞಾನದ ಬಗ್ಗೆ ಕುತೂಹಲ, ಸಂಶೋಧನಾ ಮನೋಭಾವ ಮತ್ತು ಆತ್ಮವಿಶ್ವಾಸ ಬೆಳೆಸುವುದು ಇಂದಿನ ಅಗತ್ಯವಾಗಿದೆ ಎಂದರು.

ನಾಗರಾಜ್ ಕಮನಹಳ್ಳಿ ಪ್ರಸ್ತಾವಿಕವಾಗಿ ಮಾತನಾಡಿದರು. ಕದಂಬ ಕನ್ನಡ ಸೇನೆ ಕರ್ನಾಟಕ ರಾಜ್ಯ ಕಾರ್ಯಾಧ್ಯಕ್ಷ ಸತೀಶ್ ಎಸ್.ನಾಯ್ಕ್ ವಂದಿಸಿದರು. ವಿದ್ಯಾ ನಾಯ್ಕ್, ಪ್ರವೀಣ್ ನಾಯ್ಕ್, ಅನುಸೂಯ ಹೆಗಡೆ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ಸಾಧನೆಗೈದ ವಿದ್ಯಾರ್ಥಿಗಳಿಗೆ ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್ ಪಶಸ್ತಿ ಪತ್ರ ವಿತರಿಸಿ ಅಭಿನಂದಿಸಲಾಯಿತು. ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು ಹಾಗೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಭಾಗವಹಿಸಿದ್ದರು.



ಉತ್ತರ ಕನ್ನಡ ಜಿಲ್ಲೆ ಸೇರ್ಪಡೆ ಸಲ್ಲ

ಯಲ್ಲಾಪುರ: ಮಂಗಳೂರು ಹಾಗೂ ಉಡುಪಿ ಜಿಲ್ಲೆಗಳ ಜನರ ಅನುಕೂಲಕ್ಕಾಗಿ ಹೈಕೋರ್ಟ್ ಸಂಚಾರಿ ಪೀಠವನ್ನು ಮಂಗಳೂರಿನಲ್ಲಿ ಆರಂಭಿಸಲು ಸರ್ಕಾರ ಮುಂದಾಗಿದ್ದು, ಅದಕ್ಕೆ ನಮ್ಮ ಸ್ವಾಗತವಿದೆ. ಆದರೆ ಈ ಪೀಠದ ವ್ಯಾಪ್ತಿಯಲ್ಲಿ ಉಕ ಜಿಲ್ಲೆಯನ್ನು ಸೇರಿಸಲು ಹೊರಟಿದ್ದು ಮಾತ್ರ ಸರ್ವಥಾ ಸಮರ್ಥನೀಯವಲ್ಲ ಎಂದು ನಾಗರೀಕ ವೇದಿಕೆ ಅಧ್ಯಕ್ಷ ರಾಮು ನಾಯ್ಕ ಅಸಮಾಧಾನ ವ್ಯಕ್ತ ಪಡಿಸಿದರು.

ಅವರು ಗುರುವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಉಕ ಜಿಲ್ಲೆಯ ಈ ಸೇರ್ಪಡೆಯನ್ನು ತೀವ್ರವಾಗಿ ವಿರೋಧಿಸುತ್ತೇವೆ. 2008ರಲ್ಲಿ ಧಾರವಾಡ ಸಂಚಾರಿ ಪೀಠ ಪ್ರಾರಂಭವಾದಾಗಿನಿಂದ ನಾವು ಜೊತೆಗೆ ಜೋಡಿಸಿಕೊಂಡಿದ್ದೇವೆ. ಇದಕ್ಕೆ ಬಹುಮುಖ್ಯ ಕಾರಣ ನಾವು ಧಾರವಾಡ ಜಿಲ್ಲೆಗೆ ಬಹಳ ಹತ್ತಿರದಲ್ಲಿದ್ದೇವೆ. ಹಾಗೂ ವ್ಯಾವಹಾರಿಕವಾಗಿಯೂ, ಭಾವನಾತ್ಮಕವಾಗಿ ಹುಬ್ಬಳ್ಳಿ-ಧಾರವಾಡದ ಜೊತೆ ನಂಟನ್ನು ಹೊಂದಿದ್ದೇವೆ.

ಧಾರವಾಡವನ್ನು ಬಿಟ್ಟು ಮಂಗಳೂರಿಗೆ ಹೋಗಬೇಕಾದರೆ, 150 ರಿಂದ 160 ಕಿ.ಮಿ. ಹೆಚ್ಚು ದೂರ ಕ್ರಮಿಸಬೇಕಾಗುತ್ತದೆ. ಇದರಿಂದ ಅಧಿಕ ಶ್ರಮ, ವೇಳೆ ಆರ್ಥಿಕ ವ್ಯಯವಾಗುತ್ತದೆ. ಯಾರನ್ನೋ ತೃಪ್ತಿಪಡಿಸಲು ಇನ್ಯಾರನ್ನೋ ಬಲಿಕೊಡುವ ಈ ಅವಾಸ್ತವಿಕ ತೀರ್ಮಾನವೇ ತಪ್ಪು. ಅಧಿಕಾರ ವಿಕೇಂದ್ರಿಕರಣದ ಹೆಸರಿನಲ್ಲಿ ಸರ್ಕಾರ ಏಕಪಕ್ಷೀಯ ನಿರ್ಣಯ ಕೈಗೊಂಡರೆ, ಉಕ ಜಿಲ್ಲೆಯ ಜನರಿಂದ ತೀವ್ರ ಪ್ರತಿಭಟನೆ ಎದುರಿಸಬೇಕಾಗುತ್ತದೆ.

ಸುದ್ದಿಗೋಷ್ಠಿಯಲ್ಲಿ ನಾಗರೀಕ ವೇದಿಕೆಯ ಪ್ರಮುಖರಾದ ಬೀರಣ್ಣ ನಾಯಕ್ ಮೊಗಟಾ, ವೇಣುಗೋಪಾಲ್ ಮದ್ಗುಣಿ, ಶ್ರೀರಂಗ ಕಟ್ಟಿ, ಶ್ಯಾಮಿಲಿ ಪಾಠಣಕರ್, ರಮೇಶ ಕಾಮತ, ಪ್ರಭಾಕರ ನಾಯ್ಕ ಇದ್ದರು.



ಮತದಾರರ ಪಟ್ಟಿ ಪರಿಷ್ಕರಣೆಗೆ ಪಕ್ಷಗಳ ಸಹಕಾರ ಅಗತ್ಯ

ಕಾರವಾರ: ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಅಂಗವಾಗಿ ಜಿಲ್ಲೆಯಲ್ಲಿ ಜೂನ್ 30 ರಿಂದ ಜು.29 ರವರೆಗೆ ಮತಗಟ್ಟೆ ಅಧಿಕಾರಿಗಳು ಮನೆ ಮನೆಗೆ ಭೇಟಿ ನೀಡಿ ಮತದಾರರಿಗೆ ಎನ್ಯೂಮರೇಷನ್ ಫಾರ್ಮ್‌ಗಳನ್ನು ನೀಡುವ ಮತ್ತು ಅವುಗಳನ್ನು ಸಂಗ್ರಹಿಸುವ ಕಾರ್ಯದ ಯಶಸ್ಸಿಗೆ ಜಿಲ್ಲೆಯ ಎಲ್ಲಾ ರಾಜಕೀಯ ಪಕ್ಷಗಳು ಅಗತ್ಯ ಸಹಕಾರವನ್ನು ನೀಡುವಂತೆ ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಹೇಳಿದರು.

ಅವರು ಗುರುವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಜಿಲ್ಲೆಯ ರಾಜಕೀಯ ಪಕ್ಷಗಳಿಗೆ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕುರಿತು ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಮಾತನಾಡಿದರು.

ಮತಗಟ್ಟೆ ಅಧಿಕಾರಿಗಳು ಪ್ರಿ ಫಿಲ್ಡ್ ಎನ್ಯೂಮರೇಷನ್ ಫಾರ್ಮ್‌ಗಳನ್ನು ನೀಡಲು ಒಂದು ಬಾರಿ ಮತ್ತು ಭರ್ತಿ ಮಾಡಿದ ಅರ್ಜಿಗಳನ್ನು ಸಂಗ್ರಹಿಸಲು ಮೂರು ಬಾರಿ ಮತದಾರರ ಮನೆಗೆ ಭೇಟಿ ನೀಡಲಿದ್ದು, ಬಿಎಲ್‌ಒಗಳು ತಮ್ಮ ಮನೆಗೆ ಬಂದಾಗ ಫಾರ್ಮ್‌ಗಳನ್ನು ಭರ್ತಿ ಮಾಡಿ ಅವರಿಗೆ ಮರಳಿ ನೀಡುವುದು ಅತ್ಯಂತ ಕಡ್ಡಾಯವಾಗಿದೆ ಎಂದರು.

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಗೆ 1,445 ಬಿಎಲ್‌ಒ ಮತ್ತು 144 ಬಿಎಲ್‌ಓ ಸೂಪರ್ ವೈಸರ್‌ಗಳನ್ನು ನೇಮಕ ಮಾಡಲಾಗಿದೆ. ಈಗಾಗಲೇ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳು ಬೂತ್ ಮಟ್ಟದ 2,822 ಏಜೆಂಟರನ್ನು ನೇಮಕ ಮಾಡಿದ್ದಾರೆ ಎಂದರು.



ರಾಜಕೀಯ ಪಕ್ಷದ ಪ್ರತಿನಿಧಿಗಳು ಮಾತನಾಡಿದರು. ಅಪರ ಜಿಲ್ಲಾಧಿಕಾರಿ ಸಾಜಿದ್ ಮುಲ್ಲಾ, ಬಿಜೆಪಿ ಪಕ್ಷದ ಜಿಲ್ಲಾ ಉಪಾಧ್ಯಕ್ಷ ಸಂಜಯ ಸಾಳುಂಕೆ, ಕಾಂಗ್ರೆಸ್ ಪಕ್ಷದ ಜಿಲ್ಲಾ ಉಪಾಧ್ಯಕ್ಷ ಕೆ. ಶಂಭುಶೆಟ್ಟಿ, ತಾಲೂಕು ಉಪಾಧ್ಯಕ್ಷ ಬಾಬು ಶೇಟ್, ಜೆ.ಡಿ.ಎಸ್ ಅಧ್ಯಕ್ಷ ಸೂರಜ್ ನಾಯ್ಕ ಸೋನಿ, ಸಿಪಿಐ(ಎಂ) ನ ಶ್ಯಾಮ, ಶಾಂತಾರಾಮ ನಾಯಕ್ ಮತ್ತಿತರರು ಇದ್ದರು.

ಸ್ವಾತಂತ್ರ್ಯ ಹೋರಾಟಗಾರರ ಗೌರವಾರ್ಥ ಕಾರ್ಯಕ್ರಮ

ಅಂಕೋಲಾ: ತಾಲೂಕಿನ ಸ್ವಾತಂತ್ರ್ಯ ಹೋರಾಟಗಾರರ ನೆನಪಿನ ಮತ್ತು ಅವರ ಗೌರವಾರ್ಥ ಕಾರ್ಯಕ್ರಮ ಜೂನ್ 23ರಂದು ಬೆಳಗ್ಗೆ 11 ಗಂಟೆಗೆ ತಾಲೂಕಿನ ಸ್ವಾತಂತ್ರ್ಯ ಸಂಗ್ರಾಮ ಸ್ಮಾರಕ ಭವನದ ಸ್ವಾತಂತ್ರ್ಯ ಹೋರಾಟಗಾರರ ಫಲಕದ ಎದುರು ನಡೆಯಲಿದೆ.

ಸ್ವಾತಂತ್ರ್ಯ ಹೋರಾಟದಲ್ಲಿ ತಾಲೂಕಿನ ವಿವಿಧ ಗ್ರಾಮಗಳ ಹಲವಾರು ಜನರು ಕೆಚ್ಚೆದೆಯ ಹೋರಾಟ ನಡೆಸಿದ್ದರಿಂದ ತಾಲೂಕು ಕರ್ನಾಟಕದ ಬಾರ್ಡೋಲಿ ಎಂದು ಖ್ಯಾತಿ ಪಡೆದಿದ್ದು ನೆನಪಿನ ಕಾರ್ಯಕ್ರಮದ ಪ್ರಯುಕ್ತ ಸ್ವಾತಂತ್ರ್ಯಯೋಧರ ಕುಟುಂಬದ ಹಿರಿಯ ಸದಸ್ಯ,ಚಿಂತಕ ಕಾಳಪ್ಪ ನಾಯಕ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ನೆನಪಿನ ಕಾರ್ಯಕ್ರಮದ ಸಂಚಲನಾ ಸಮಿತಿ ರಚಿಸಲಾಗಿದ್ದು ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದ ಸದಸ್ಯರುಗಳಾದ ಪುರಸಭೆಮಾಜಿ ಅಧ್ಯಕ್ಷಅರುಣನಾಡಕರ್ಣಿ,ಗೋಪಾಲಕೃಷ್ಣನಾಯಕ, ಉದಯವಾಮನನಾಯಕಭಾವಿಕೇರಿಮತ್ತು,ದೇವಾನಂದಗಾಂವಕರ ಬಾಸಗೋಡ ಇವರು ಸಮಿತಿಯಲ್ಲಿ ಕಾರ್ಯನಿರ್ವಹಿಸಲಿದ್ದಾರೆ. ಮುಂದಿನ ದಿನಗಳಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದ ಓರ್ವರನ್ನು ಸಮಿತಿಯ ಸದಸ್ಯರನ್ನಾಗಿಸಿ ಸಮಿತಿಯ ನೋಂದಣಿ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಗಿದ್ದು, ಜೂನ್ 23 ರಂದು ನಡೆಯಲಿರುವ ಕಾರ್ಯಕ್ರಮದಲ್ಲಿ ಸ್ವಾತಂತ್ರ್ಯಹೋರಾಟಗಾರರ ಕುಟುಂಬದವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಕೋರಲಾಗಿದೆ.

ನಾಯಕರವರ ಕೊಡುಗೆ ಅಪಾರ



ಅಂಕೋಲಾ: ಕನ್ನಡ ಸಾಹಿತ್ಯ ಪರಿಷತ್ತಿನ ಹಿರಿಯ ಸದಸ್ಯ ಜಿ.ಆರ್.ನಾಯಕ ಅವರಿಗೆ ಕನ್ನಡ ಸಾಹಿತ್ಯ ಪರಿಷತ್ತು ಉತ್ತರ ಕನ್ನಡ ಜಿಲ್ಲಾ ಘಟಕದಿಂದ ಸನ್ಮಾನಿಸಿ ಗೌರವಿಸಲಾಯಿತು.

ಜಿ.ಆರ್.ನಾಯಕ ಅವರ ಮನೆಗೆ ತೆರಳಿದ ಸಾಹಿತ್ಯ ಪರಿಷತ್ತಿನ ಪ್ರಮುಖರು ನಾಯಕ ದಂಪತಿಯನ್ನು ಸನ್ಮಾನಿಸಿ ಗೌರವಿಸಿದರು.

ಕಸಾಪ ಜಿಲ್ಲಾಧ್ಯಕ್ಷ ಬಿ.ಎನ್.ವಾಸರೆ ಮಾತನಾಡಿ, ಕನ್ನಡ ನಾಡು ನುಡಿಯ ಸೇವೆಗೆ ಜಿ.ಆರ್.ನಾಯಕ ಅವರ ಕೊಡುಗೆ ಅಪಾರವಾಗಿದ್ದು, ಜಿಲ್ಲಾ ಸಾಹಿತ್ಯ ಸಮ್ಮೇಳನದ ಗೌರವಕ್ಕೆ ಪಾತ್ರರಾಗಿದ್ದ ಅವರು ಅನಾರೋಗ್ಯದಿಂದ ಪಾಲ್ಗೊಳ್ಳಲು ಸಾಧ್ಯವಾಗದ ಕಾರಣ ಅವರ ಮನೆಗೆ ಬಂದು ಗೌರವಿಸುತ್ತಿದ್ದೇವೆ ಎಂದರು. ಕಸಾಪ ತಾಲೂಕು ಅಧ್ಯಕ್ಷ ಗೋಪಾಲಕೃಷ್ಣ ನಾಯಕ ಮಾತನಾಡಿ, ಸಾಹಿತ್ಯ ಪರಿಷತ್ತಿನ ಪ್ರತಿಯೊಂದು ಕಾರ್ಯಕ್ರಮದಲ್ಲಿ ಕ್ರಿಯಾಶೀಲರಾಗಿ ತೊಡಗಿಕೊಳ್ಳುವ ಜಿ.ಆರ್.ನಾಯಕ ಯುವಕರಿಗೆ ಮಾದರಿಯಾಗಿದ್ದಾರೆ ಎಂದರು.

ಹಿರಿಯ ಸಾಹಿತಿ ರಾಮಕೃಷ್ಣ ಗುಂದಿ, ಮಹಾಂತೇಶ ರೇವಡಿ, ನಾಗೇಂದ್ರ ನಾಯಕ, ರಫೀಕ ಶೇಖ್,ನಾಗರಾಜ ಮಂಜಗುಣಿ, ಸುಜೀತ ನಾಯ್ಕ ಉಪಸ್ಥಿತರಿದ್ದರು.

ವಿದ್ಯುತ್ ಖಾಸಗೀಕರಣ ಅರ್ಜಿ ತಿರಸ್ಕರಿಸಲು ಒತ್ತಾಯ

ಹಳಿಯಾಳ: ಕರ್ನಾಟಕದಲ್ಲಿ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಖಾಸಗಿ ಕಂಪನಿಗಳ ಕೈಗೆ ನೀಡುವ ಯಾವುದೇ ಕ್ರಮಕ್ಕೆ ಅವಕಾಶ ನೀಡಬಾರದು ಹಾಗೂ ಟಾಟಾ ಪವರ್ ಕಂಪನಿ ಸಲ್ಲಿಸಿರುವ ವಿದ್ಯುತ್ ವಿತರಣಾ ಪರವಾನಗಿ ಅರ್ಜಿಯನ್ನು ಕರ್ನಾಟಕ ವಿದ್ಯುತ್ ಶಕ್ತಿ ನಿಯಂತ್ರಣ ಆಯೋಗ ತಿರಸ್ಕರಿಸಬೇಕು ಎಂದು ಕಬ್ಬು ಬೆಳೆಗಾರರ ಹಿತ ಸಂರಕ್ಷಣಾ ಸಮಿತಿ ಅಧ್ಯಕ್ಷ ನಾಗೇಂದ್ರ ಜಿವೋಜಿ ಒತ್ತಾಯಿಸಿದರು.

ಪಟ್ಟಣದ ಮರಾಠ ಭವನದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿದ್ಯುತ್ ವಿತರಣಾಕ್ಷೇತ್ರದಖಾಸಗೀಕರಣದಿಂದರೈತರು,ಕಾರ್ಮಿಕರು ಮತ್ತು ಸಾಮಾನ್ಯ ಗ್ರಾಹಕರಿಗೆ ದೀರ್ಘಾವಧಿಯಲ್ಲಿ ಗಂಭೀರ ಪರಿಣಾಮಗಳು ಎದುರಾಗುವ ಸಾಧ್ಯತೆ ಇದೆ ಎಂದು ಹೇಳಿದರು.ಸರ್ಕಾರದಿಂದಜಾರಿಯಲ್ಲಿರುವಹಲವು ಜನಪರ ಹಾಗೂ ರೈತಪರ ಯೋಜನೆಗಳಿಗೂ ಹಿನ್ನಡೆಯಾಗುವ ಅಪಾಯವಿದ್ದು, ರೈತರಿಗೆ ನೀಡಲಾಗುತ್ತಿರುವ ಉಚಿತ ವಿದ್ಯುತ್ ಸೌಲಭ್ಯ ಮುಂದುವರಿಯುವುದರ ಬಗ್ಗೆ ಅನಿಶ್ಚಿತತೆ ಉಂಟಾಗಬಹುದು ಎಂದು ತಿಳಿಸಿದರು.

ಖಾಸಗಿ ಕಂಪನಿಗಳು ಸೇವೆಗಿಂತ ಲಾಭಕ್ಕೆ ಹೆಚ್ಚಿನ ಆದ್ಯತೆ ನೀಡುವ ಸಾಧ್ಯತೆ ಇರುವುದರಿಂದ ವಿದ್ಯುತ್ ದರ ಏರಿಕೆಯಾಗುವ ಅಪಾಯವಿದೆ. ಇದರಿಂದ ಸಾಮಾನ್ಯ ಗ್ರಾಹಕರು ಹಾಗೂ ರೈತರ ಮೇಲೆ ಹೆಚ್ಚುವರಿ ಆರ್ಥಿಕ ಹೊರೆ ಬೀಳಲಿದೆ ಎಂದು ಆತಂಕ ವ್ಯಕ್ತಪಡಿಸಿದರು.




ಉಕ ಸೇರಿದಂತೆ ರಾಜ್ಯದ 19 ಜಿಲ್ಲೆಗಳಲ್ಲಿ ವಿದ್ಯುತ್ ವಿತರಣೆಗೆ ಟಾಟಾ ಪವರ್ ಕಂಪನಿ ಪರವಾನಗಿ ಕೋರಿದ್ದು, ಸಾರ್ವಜನಿಕ ಹಿತಾಸಕ್ತಿಯನ್ನು ಪರಿಗಣಿಸಿ ಅದರ ಅರ್ಜಿಯನ್ನು ತಿರಸ್ಕರಿಸಬೇಕು ಎಂದು ಆಗ್ರಹಿಸಿದರು.ಕರ್ನಾಟಕವು ಕೃಷಿ ಪ್ರಧಾನ ರಾಜ್ಯವಾಗಿದ್ದು, ಲಕ್ಷಾಂತರ ರೈತರು ನೀರಾವರಿ ಪಂಪ್‌ಸೆಟ್‌ಗಳ ಮೇಲೆ ಅವಲಂಬಿತರಾಗಿದ್ದಾರೆ. ಕೃಷಿ ಉತ್ಪಾದನೆ ಕುಂಠಿತಗೊಂಡರೆ ಆಹಾರ ಭದ್ರತೆಯ ಮೇಲೂ ಪ್ರತಿಕೂಲ ಪರಿಣಾಮ ಉಂಟಾಗಬಹುದು. ಜೊತೆಗೆ, ಸರ್ಕಾರಿ ವಿದ್ಯುತ್ ಸಂಸ್ಥೆಗಳ ನೌಕರರ ಉದ್ಯೋಗ ಭದ್ರತೆಯ ಮೇಲೂ ಪರಿಣಾಮ ಬೀಳುವ ಸಾಧ್ಯತೆ ಇದೆ ಎಂದು ಅವರು ಹೇಳಿದರು.ಈ ವಿಷಯಕ್ಕೆ ಸಂಬಂಧಿಸಿದಂತೆ ಶುಕ್ರವಾರ ಸಾಂಕೇತಿಕ ಪ್ರತಿಭಟನೆ ನಡೆಸಿ ಸಂಬಂಧಪಟ್ಟ ಅಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದು ತಿಳಿಸಿದರು. ರೈತರು ಹಾಗೂ ವಿವಿಧ ಸಂಘಟನೆಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಹೋರಾಟಕ್ಕೆ ಬೆಂಬಲ ನೀಡುವಂತೆ ಮನವಿ ಮಾಡಿದರು.ಶಂಕರ ಕಾಜಗಾರ, ರಾಮದಾಸ ಬೆಳಗಾಂವಕರ, ನಕುಲ ಕೆಂಚನವರ, ಬಳಿರಾಮ ಮೋರೆ ಇತರರು ಇದ್ದರು.

ಎಮ್ಮೆ ಡಿಕ್ಕಿ: ಸವಾರ ಸಾವು

ದಾಂಡೇಲಿ: ಅಂಬಿಕಾನಗರದಿಂದ ಸಂಬಂಧಿಕರ ಮನೆಯಾದ ಜನತಾ ಕಾಲೋನಿಗೆ ಬರುತ್ತಿದ್ದಾಗ ಹಠಾತ್ತನೇ ಓಡಿ ಬಂದ ಎಮ್ಮೆಯೊಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿಯಾಗಿ, ದ್ವಿಚಕ್ರ ವಾಹನದ ಸವಾರ ಗಂಭೀರ ಗಾಯಗೊಂಡು ಸಾವನ್ನಪ್ಪಿದ ಘಟನೆ ತಾಲೂಕಿನ ಕುಳಗಿಯಲ್ಲಿ ಬುಧವಾರ ಸಂಜೆ ನಡೆದಿದೆ. ಅಂಬಿಕಾನಗರದ ಅಂಚೆ ಇಲಾಖೆಯ ಉದ್ಯೋಗಿ ಹಾಗೂ ಹಳಿಯಾಳ ತಾಲೂಕಿನ ಮುರ್ಕವಾಡ ಗ್ರಾಮದ ನಿವಾಸಿಯಾಗಿರುವ ಉಮೇಶ್ ಭಟ್ (59) ಎಂಬವರೇ ಮೃತಪಟ್ಟ ವ್ಯಕ್ತಿ. ಸಂಬಂಧಿಕರ ಮನೆಗೆ ಹೋಗುತ್ತಿರುವಾಗ ಕುಳಗಿಯ ಕನ್ನಡ ಶಾಲೆಯ ಹತ್ತಿರ ಏಕಾಏಕಿ ಎಮ್ಮೆಯೊಂದು ಓಡಿಬಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿಯಾಗಿ ಗಂಭೀರ ಗಾಯಗೊಂಡಿದ್ದಾರೆ. ಗಾಯಗೊಂಡ ಅವರನ್ನು ದಾಂಡೇಲಿಯ ಸಾರ್ವಜನಿಕ ಆಸ್ಪತ್ರೆಗೆಕರೆತಂದು ಪ್ರಾಥಮಿಕ ಚಿಕಿತ್ಸೆಯನ್ನು ನೀಡಿ, ಹೆಚ್ಚಿನ ಚಿಕಿತ್ಸೆಗೆ ಧಾರವಾಡದ ಎಸ್‌ಡಿಎಂ ಆಸ್ಪತ್ರೆಗೆ ರವಾನಿಸಲಾಗಿತ್ತು. ಎಸ್.ಡಿ.ಎಂ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ.

ಕಿರುಸುದ್ದಿ



ಹಾನಗಲ್ಲ: ಬೃಹತ್ ಕೈಗಾರಿಕೆ ಹಾಗೂ ಮಧ್ಯಮ ಕೈಗಾರಿಕಾ ಇಲಾಖೆಯ ರಾಜ್ಯ ಸಚಿವರಾದ ಸನ್ಮಾನ್ಯ ಎಮ್.ಬಿ.ಪಾಟೀಲರವರನ್ನು ಬೆಂಗಳೂರಿನ ನಿವಾಸದಲ್ಲಿ ಕೆಪಿಸಿಸಿ ಕಾರ್ಯದರ್ಶಿ ಪ್ರಕಾಶಗೌಡ ಪಾಟೀಲ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಎಮ್.ಎಮ್.ಸರಖಾಜಿ, ಪಿ.ಬಿ. ಪಾಟೀಲ. ಜಿ.ಅಶೋಕ್ ಇತರರು ಉಪಸ್ಥಿತರಿದ್ದರು.

ಜೂ.21ಕ್ಕೆ ಅಂತಾರಾಷ್ಟ್ರೀಯ ಯೋಗ ದಿನ

• **ಹಾವೇರಿ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಯುಷ್ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮ 'ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ' ಎಂಬ ಘೋಷವಾಕ್ಯದೊಂದಿಗೆ ಇದೇ ಜೂನ್ 21ರಂದು ಬೆಳಗ್ಗೆ 6.30ಕ್ಕೆ ಹಾವೇರಿ ನಗರದ ರಜನಿ ಸಭಾಂಗಣದಲ್ಲಿ ಜರುಗಲಿದೆ. ಬೆಳಿಗ್ಗೆ 6.15ಕ್ಕೆ ಸಾಮೂಹಿಕ ಯೋಗ ಕಾರ್ಯಕ್ರಮ ಜರುಗಲಿದ್ದು, ಸಾರ್ವಜನಿಕರು, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಯೋಗಾಸಕ್ತರು ಈ ಯೋಗ ಕಾರ್ಯಕ್ರಮದಲ್ಲಿ ಭಾಗವಹಿಸಿ ಸದುಪಯೋಗ ಪಡೆದುಕೊಳ್ಳಬೇಕು ಎಂದು ಜಿಲ್ಲಾ ಆಯುಷ್ ಅಧಿಕಾರಿ ಡಾ.ಜಿ.ಸಿ.ನಿಡಗುಂದಿ ಅವರು ತಿಳಿಸಿದ್ದಾರೆ. ಕಾರ್ಯಕ್ರಮ ವಿವರ: ಕೇಂದ್ರ ಸಚಿವರಾದ ಪ್ರಹ್ಲಾದ ಜೋಶಿ, ವಿಧಾನ ಪರಿಷತ್ ಸಭಾಪತಿಗಳಾದ ಬಸವರಾಜ ಹೊರಟ್ಟಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ. ಖಾದರ್ ಹಾಗೂ ಮಾಜಿ ಸಿಎಂ ಹಾಗೂ ಸಂಸದರಾದ ಬಸವರಾಜ ಬೊಮ್ಮಾಯಿ ಅವರ ಗೌರವ ಅವರ ಘನ ಉಪಸ್ಥಿತಿಯಲ್ಲಿ, ಶಾಸಕರು ಹಾಗೂ ವಿಧಾನಸಭೆ ಸಭಾಧ್ಯಕ್ಷರಾದ ರುದ್ರಪ್ಪ ಮಾನಪ್ಪ ಲಮಾಣಿ ಉದ್ಘಾಟನೆ ನೆರವೇರಿಸಿ, ಅಧ್ಯಕ್ಷತೆ ವಹಿಸಲಿದ್ದಾರೆ.

ಶಿಕ್ಷಣ, ಉದ್ಯೋಗಕ್ಕೆ ಆದ್ಯತೆ ನೀಡಿ



• **ಶಿಗ್ಗಾವಿ:** ಗ್ರಾಮೀಣ ವಿದ್ಯಾರ್ಥಿಗಳು ಇಂದು ನಗರ ಮತ್ತು ಪಟ್ಟಣಗಳ ಮಕ್ಕಳಿಗಿಂತ ಹೆಚ್ಚಿನ ಪ್ರತಿಭೆ ತೋರುತ್ತಿದ್ದಾರೆ. ಮಕ್ಕಳ ಪ್ರತಿಭೆ ಅನಾವರಣಕ್ಕೆ ಇನ್ನು ಹೆಚ್ಚಿನ ಪ್ರೋತ್ಸಾಹ ನೀಡುವುದು ಅವಶ್ಯವಾಗಿದೆ ಎಂದು ಕಾಂಗ್ರೆಸ್ ಮುಖಂಡ ಎಂ.ಎಂ.ಪಠಾಣ ಹೇಳಿದರು.

ತಾಲೂಕಿನ ಹಿರೇಬೆಂಡಿಗೇರಿ ಗ್ರಾಮದಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಆರೋಗ್ಯ, ಶಿಕ್ಷಣ ಮತ್ತು ಉದ್ಯೋಗಕ್ಕೆ ಸರ್ಕಾರ ಹೆಚ್ಚಿನ ಆದ್ಯತೆ ನೀಡಿದೆ. ಅದರಂತೆ ಮಕ್ಕಳ ಪಾಲಕರು ಸಹ ಕೂಲಿ ಮಾಡಿಯಾದರು ಮಕ್ಕಳಿ ಕಲಿಕೆಗೆ ಬೆಂಬಲವಾಗಿ ನಿಲ್ಲುತ್ತಿದ್ದಾರೆ. ಶಿಕ್ಷಣ ಭವಿಷ್ಯದ ಬದುಕಿಗೆ ಶಕ್ತಿ ಸಾಮರ್ಥ್ಯ ನೀಡುತ್ತಿದೆ ಎಂದರು.

ಧಾರವಾಡ ಕೆಸಿಸಿ ಬ್ಯಾಂಕಿನ ನಿರ್ದೇಶಕ ಸಂಗಮೇಶ ಕಂಬಾಳಿಮಠ ಮಾತನಾಡಿದರು.ತಾಲೂಕಾ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಬಾಬರ ಬೊವಾಜಿ, ತಾಲೂಕಾ ವೈದ್ಯಾಧಿಕಾರಿ ಡಾ.ಸತೀಶ, ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ ಇಂದುಧರ ಮುತ್ತಳ್ಳಿ, ಸಿಡಿಪಿ ಗಣೇಶ ಲಿಂಗನಗೌಡ್ರ, ಶಂಕರಗೌಡ ಪಾಟೀಲ, ಡಿಕಪ್ಪ ಗಬ್ಬೂರ, ಪರೀದಖಾನ್ ಐರಣಿ, ಬಸೀರಹ್ಮದ ಹುಲಗೂರ, ಬಸವರಾಜ ನಾಶೀಪುಡಿ, ರಮೇಶ ಗೊರವರ, ಉಮೇಶ ಧರ್ಮಣ್ಣವರ, ದ್ಯಾಮಣ್ಣ ಕಾಳೆ ಸೇರಿದಂತೆ ಶಾಲೆ ಶಿಕ್ಷಕರು, ಸಿಬ್ಬಂದಿ ಇದ್ದರು.



ಹಾನಗಲ್ಲ: ಮೋಹರಂ ಹಬ್ಬದ ಅಂಗವಾಗಿ ತಾಲೂಕಿನಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಹಾನಗಲ್ಲ ಪಟ್ಟಣ ಸೇರಿದಂತೆ ತಾಲೂಕಿನ ಅಕ್ಕಿಆಲೂರ, ಬೊಮ್ಮನಹಳ್ಳಿ, ಉಪ್ಪಣಸಿ ಹಾಗೂ ತಿಳವಳ್ಳಿ ಜಿಪಂ ವ್ಯಾಪ್ತಿಯಲ್ಲಿ ಪೊಲೀಸ್ ಇಲಾಖೆ ಹಾಗೂ ಆರ್‌ಎಫ್ ವತಿಯಿಂದ ಆಕರ್ಷಕ ಪಥಸಂಚಲನ ನಡೆಯಿತು.ಪಟ್ಟಣದ ಪೊಲೀಸ್ ಠಾಣೆಯಿಂದ ಹೊರಟ ಫಥಸಂಚಲನ ಇಲ್ಲಿನ ಕಂಚಗಾರ ಓಣಿ, ಸಿಂಪಿಗಲ್ಲಿ, ಸೋಮವಾರ ಪೇಟೆ, ಅಲಾಹಜರತ್ ದರ್ಗಾ ಮೂಲಕ ರೂಟ್ ಮಾರ್ಸ್ ನಡೆಯಿತು.

ಶಿಬಿರದ ಸದುಪಯೋಗ ಪಡೆದುಕೊಳ್ಳಿ: ಪಾಟೀಲ

• **ರಟ್ಟೀಹಳ್ಳಿ:** ಶಿಕ್ಷಣ, ಆರೋಗ್ಯ, ಪರಿಸರ ಸಂರಕ್ಷಣೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ನಿರಂತರವಾಗಿ ಸಮಾಜಮುಖಿ ಸೇವೆ ಸಲ್ಲಿಸುತ್ತಿರುವ ರಟ್ಟಿಹಳ್ಳಿ ಲಯನ್ಸ್ ಕ್ಲಬ್, ಮುಂದಿನ ದಿನಗಳಲ್ಲಿ ತನ್ನ ಸೇವಾ ಚಟುವಟಿಕೆಗಳನ್ನು ಇನ್ನಷ್ಟು ವಿಸ್ತರಿಸಲು ಯೋಜನೆ ರೂಪಿಸಿದೆ ಎಂದು ಕ್ಲಬ್‌ನ ನಿಯೋಜಿತ ಅಧ್ಯಕ್ಷ ಲಿಂಗರಾಜ ಚಪ್ಪರದಳ್ಳಿ ಹಾಗೂ ಪ್ರಾದೇಶಿಕ ಅಧ್ಯಕ್ಷ ಸಂದೀಪ ಪಾಟೀಲ ತಿಳಿಸಿದರು. ಪಟ್ಟಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಲಯನ್ಸ್ ಕ್ಲಬ್ ಹಲವು ವರ್ಷಗಳಿಂದ ಶಿವಮೊಗ್ಗ ಶಂಕರ ಕಣ್ಣಿನ ಆಸ್ಪತ್ರೆಯ ಸಹಯೋಗದೊಂದಿಗೆ ಉಚಿತ ನೇತ್ರ ತಪಾಸಣೆ ಮತ್ತು ಶಸ್ತ್ರಚಿಕಿತ್ಸಾ ಶಿಬಿರಗಳನ್ನು ಆಯೋಜಿಸುತ್ತಿದ್ದು, ಗ್ರಾಮೀಣ ಭಾಗದ ಬಡ ಹಾಗೂ ಅಗತ್ಯವಿರುವ ಜನರಿಗೆ ಆರೋಗ್ಯ ಸೇವೆ ಒದಗಿಸುವ ಮಹತ್ವದ ಕಾರ್ಯವನ್ನು ನಿರ್ವಹಿಸುತ್ತಿದೆ ಎಂದು ಹೇಳಿದರು.

ಈ ವೇಳೆ ರಟ್ಟಿಹಳ್ಳಿ ಲಯನ್ಸ್ ಕ್ಲಬ್‌ನ 2026-27ನೇ ಸಾಲಿನ ನೂತನ ಅಧ್ಯಕ್ಷರಾಗಿ ಲಿಂಗರಾಜ ಚಪ್ಪರದಳ್ಳಿ ಆಯ್ಕೆಯಾಗಿರುವುದಾಗಿ ತಿಳಿಸಿದರು. ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭವು ಜೂನ್ 20ರಂದು ಬೆಳಗ್ಗೆ 10 ಗಂಟೆಗೆ ಪಟ್ಟಣದ ವೀರಭದ್ರೇಶ್ವರ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ. ಕಾರ್ಯಕ್ರಮದಲ್ಲಿ ಬಸವರಾಜ ಬೊಮ್ಮಾಯಿ, ಯು.ಬಿ. ಬಣಕಾರ ಹಾಗೂ ಬಿ.ಸಿ. ಪಾಟೀಲ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಲಯನ್ಸ್ ಕ್ಲಬ್‌ನ ಸದ್ಯಸರಾದ ಕೃಷ್ಣ ಜಿ ರಾವ್ ಬಾಜಿರಾವ್ ಲಯನ್ ಸಂದೀಪ್ ಪಾಟೀಲ್, ಹಾಲಪ್ಪ ಮುದಿಗೌಡರ್ ಉಪಸ್ಥಿತರಿದ್ದರು. ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಸಂಘಟಕರು ಮನವಿ ಮಾಡಿದ್ದಾರೆ.



ರಟ್ಟೀಹಳ್ಳಿ: ಪಟ್ಟಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಲಯನ್ಸ್ ಕ್ಲಬ್ ಹಲವು ವರ್ಷಗಳಿಂದ ಶಿವಮೊಗ್ಗ ಶಂಕರ ಕಣ್ಣಿನ ಆಸ್ಪತ್ರೆಯ ಸಹಯೋಗದೊಂದಿಗೆ ಉಚಿತ ನೇತ್ರ ತಪಾಸಣೆ ಮತ್ತು ಶಸ್ತ್ರಚಿಕಿತ್ಸಾ ಶಿಬಿರ ನಡೆಯಿತು.

ಜೂ.21ಕ್ಕೆ ಪರೀಕ್ಷೆ | ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ಸೂಚನೆ

ನೀಟ್ ಪರೀಕ್ಷೆ ವ್ಯವಸ್ಥಿತವಾಗಿ ನಡೆಸಿ

• **ಹಾವೇರಿ:** ಜಿಲ್ಲೆಯಲ್ಲಿ 2026ನೇ ಸಾಲಿನ ನೀಟ್ ಪರೀಕ್ಷೆ ಇದೇ ಜೂನ್ 21ರಂದು ಭಾನುವಾರ ಹಾವೇರಿ ನಗರದ ಐದು ಪರೀಕ್ಷಾ ಕೇಂದ್ರಗಳಲ್ಲಿ ಜರುಗಲಿದ್ದು, ಪಾರದರ್ಶಕವಾಗಿ ಹಾಗೂ ವ್ಯವಸ್ಥಿತವಾಗಿ ಪರೀಕ್ಷೆ ನಡೆಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು. ಯಾವುದೇ ಲೋಪವಾಗದಂತೆ ಎಚ್ಚರಿಕೆ ವಹಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರ ಸೂಚನೆ ನೀಡಿದರು.



ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ನೀಟ್ ಪರೀಕ್ಷಾ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಪರೀಕ್ಷಾ ಕಾರ್ಯಕ್ಕೆ ನಿಯೋಜಿಸಿದ ಎಲ್ಲರೂ ಪರೀಕ್ಷಾ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದರು. ನೀಟ್ ಪರೀಕ್ಷೆ ಬಹಳ ಸೂಕ್ಷ್ಮವಾಗಿದೆ, ಪರೀಕ್ಷಾ ಕಾರ್ಯಕ್ಕೆ ನಿಯೋಜಿಸಲಾದ ಅಧಿಕಾರಿಗಳು, ಮಾರ್ಗಾಧಿಕಾರಿಗಳು, ವೀಕ್ಷಕರು, ಸ್ಕ್ವಾಡ್‌ಗಳು, ಕೊಠಡಿ ಮೇಲ್ವಿಚಾರಕರು ತಮ್ಮ ಕರ್ತವ್ಯಗಳಲ್ಲಿ ಯಾವುದೇ ಲೋಪವಾಗದಂತೆ ಜವಾಬ್ದಾರಿಯಿಂದ ಅಚ್ಚುಕಟ್ಟಾಗಿ ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದರು.

ಪರೀಕ್ಷಾ ಕೇಂದ್ರದ ಹೊರವಲಯ ಹಾಗೂ ಕೊಠಡಿಯ ಒಳಗೆ ಶಿಸ್ತುಬದ್ಧವಾಗಿ ಪರೀಕ್ಷಾ ಪ್ರಾಧಿಕಾರದ ನಿಯಮಗಳ ಉಲ್ಲಂಘನೆಯಾಗದಂತೆ ಎಚ್ಚರಿಕೆಯಿಂದ ಕೆಲಸಮಾಡಿ. ಎಲ್ಲ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿ ಟಿವಿ ಅಳವಡಿಕೆ ಹಾಗೂ ಕೊಠಡಿಯೊಳಗೆ ಗಡಿಯಾರ ಅಳವಡಿಕೆ ಕಡ್ಡಾಯ. ಪರೀಕ್ಷಾರ್ಥಿಗಳಿಗೆ ಶುದ್ಧ ಕುಡಿಯುವ ನೀರು, ಗಾಳಿ, ಬೆಳಕು, ಸೂಕ್ತ ಪೀಠೋಪಕರಣ ಒಳಗೊಂಡಂತೆ ಮೂಲಭೂತ ಸೌಕರ್ಯ ಒದಗಿಸಬೇಕು. ವಿಶೇಷಚೇತನ ವಿದ್ಯಾರ್ಥಿಗಳಿಗೆ ನೆಲಮಹಡಿಯಲ್ಲಿ ವ್ಯವಸ್ಥೆ ಮಾಡಿ ಎಂದರು.

ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಾರ್ಥಿಗಳ ತಪಾಸಣೆಗೆ ಪೊಲೀಸ್ ಸಿಬ್ಬಂದಿ ನಿಯೋಜಿಸಬೇಕು. ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಕೈಗೊಳ್ಳಬೇಕು. ಪರೀಕ್ಷೆ ದಿನಗಳಂದು ವಿದ್ಯುತ್ ವ್ಯತ್ಯಯವಾಗದಂತೆ ನೋಡಿಕೊಳ್ಳಬೇಕು. ಪ್ರತಿ ಪರೀಕ್ಷಾ ಕೇಂದ್ರಗಳಿಗೆ ಆರೋಗ್ಯ ಸಹಾಯಕರನ್ನು ನಿಯೋಜನೆ ಮಾಡಿ, ಎಂದು ಸೂಚನೆ ನೀಡಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ ಮಾತನಾಡಿ, ಪರೀಕ್ಷೆಗಳು ಪಾರದರ್ಶಕವಾಗಿ ಶಾಂತಿಯುತವಾಗಿ ನಡೆಯಲು ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗುತ್ತದೆ.

ಪರೀಕ್ಷಾ ಕೇಂದ್ರಗಳಲ್ಲಿ, ಪರೀಕ್ಷಾ ಕಾರ್ಯಕ್ಕೆ ಉಪಯೋಗಿಸುವ ಕೊಠಡಿಗಳನ್ನು ಹೊರತುಪಡಿಸಿ ಹೆಚ್ಚುವರಿ ಕೊಠಡಿಗಳಿಗೆ ಬೀಗಹಾಕಬೇಕು ಎಂದು ಸಲಹೆ ನೀಡಿದರು.

ವಸ್ತ್ರ ಸಂಹಿತೆ: ನಿಗದಿಪಡಿಸಿದ ವಸ್ತ್ರ ಸಂಹಿತೆ (ಡ್ರೆಸ್ ಕೋಡ್)ನ್ನು ಪ್ರತಿಯೊಬ್ಬ ಅಭ್ಯರ್ಥಿಯು ಕಡ್ಡಾಯವಾಗಿ ಪಾಲಿಸಬೇಕು. ಉದ್ದ ತೋಳಿನ ಹಾಗೂ ತಲೆ ಮುಚ್ಚುವ ಉಡುಪು ಧರಿಸಿ ಬರುವಂತಿಲ್ಲ, ಬೆಲ್ಟ್, ಟೋಪಿ ಹಾಗೂ ಯಾವುದೇ ಆಭರಣಗಳನ್ನು ಧರಿಸುವಂತಿಲ್ಲ (ಮಂಗಳಸೂತ್ರ ಹೊರತುಪಡಿಸಿ). ಶೂ ಹಾಕಿಕೊಂಡು ಬರುವಂತಿಲ್ಲ, ಸಾಧಾ ಚಪ್ಪಲಿಗಳನ್ನು ಧರಿಸಿರಬೇಕು ಎಂದು ತಿಳಿಸಿದರು.

ಕೇಂದ್ರೀಯ ವಿದ್ಯಾಲಯ ಪ್ರಾಂಶುಪಾಲ ಪಿ.ಎಸ್. ರಾಜು ಮಾತನಾಡಿ, ಜಿಲ್ಲೆಯಲ್ಲಿ 2,532 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಈಗಾಗಲೇ ಪರೀಕ್ಷಾ ಪೂರ್ವ ತಯಾರಿ ಮಾಡಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು. ಸಭೆಯಲ್ಲಿ ಜಿಪಂ ಸಿಇಒ, ದಲ್ಜಿತ್ ಕುಮಾರ, ಎಡಿಸಿ ಡಾ.ನಾಗರಾಜ ಎಲ್., ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಪರೀಕ್ಷಾ ಕೇಂದ್ರಗಳು

ಹಾವೇರಿ ಜಿ.ಎಚ್. ಗುದ್ಲೆಪ್ಪ ಹಳ್ಳಿಕೇರಿ ಪದವಿಪೂರ್ವ ಕಾಲೇಜು, ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜು, ಬಾಲಕರ ಪದವಿಪೂರ್ವ ಕಾಲೇಜು, ದೇವಗಿರಿ ಸರ್ಕಾರಿ ಇಂಜಿನೀಯರ್ ಕಾಲೇಜು ಹಾಗೂ ಗಾಂಧಿಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು.

> ಪರೀಕ್ಷೆಗಳು ಪಾರದರ್ಶಕವಾಗಿ ಶಾಂತಿಯುತವಾಗಿ ನಡೆಯಲು ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗುತ್ತದೆ. ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಾ ಕಾರ್ಯಕ್ಕೆ ಉಪಯೋಗಿಸುವ ಕೊಠಡಿಗಳನ್ನು ಹೊರತುಪಡಿಸಿ ಹೆಚ್ಚುವರಿ ಕೊಠಡಿಗಳಿಗೆ ಬೀಗಹಾಕಬೇಕು.
>
> ■ ಯಶೋಧಾ ವಂಟಗೋಡಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಶಾಶ್ವತ ಮನೆ ಮಾಲೀಕತ್ವದ ಹಕ್ಕುಪತ್ರ ವಿತರಣೆ

• **ಹಾನಗಲ್ಲ:** ತಾಲೂಕಿನಲ್ಲಿ 6 ನೇ ಗ್ಯಾರಂಟಿಯಾಗಿ 13 ಸಾವಿರಕ್ಕೂ ಹೆಚ್ಚು ಫಲಾನುಭವಿ ಕುಟುಂಬಗಳಿಗೆ ಶಾಶ್ವತ ಮನೆ ಮಾಲೀಕತ್ವದ ಹಕ್ಕುಪತ್ರ ಒದಗಿಸಲಾಗುತ್ತಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ತಾಲೂಕಿನ ಬ್ಯಾತನಾಳ ಗ್ರಾಮದಲ್ಲಿ ನಡೆದ ಸಮಾರಂಭದಲ್ಲಿ ಕಂದಾಯ ಗ್ರಾಮ, ಉಪ ಗ್ರಾಮ ಫಲಾನುಭವಿ ಕುಟುಂಬಗಳಿಗೆ ಹಕ್ಕುಪತ್ರ ವಿತರಿಸಿ ಅವರು ಮಾತನಾಡಿದರು. ತಾಲೂಕಿನಲ್ಲಿ ಕೃಷಿಯನ್ನೇ ಅವಲಂಬಿಸಿದ ಕುಟುಂಬಗಳ ಸಂಖ್ಯೆ ಹೆಚ್ಚಿದೆ. ತಾತ, ಮುತ್ತಾತನ ಕಾಲದಿಂದಲೂ ಸರ್ಕಾರಿ ಮತ್ತು ಖಾಸಗಿ ಜಮೀನುಗಳಲ್ಲಿ ದಾಖಲೆ ಇಲ್ಲದೇ ಮನೆ ಕಟ್ಟಿಕೊಂಡ ಕುಟುಂಬಗಳ ಸಂಖ್ಯೆ ಹೆಚ್ಚಿದೆ. 2023 ರಲ್ಲಿ ಸಾರ್ವತ್ರಿಕ ಚುನಾವಣೆಗೂ ಮೊದಲು ದೃಢಸಂಕಲ್ಪ ಯಾತ್ರೆ ಕೈಗೊಂಡಾಗ ಪ್ರತಿ ಬೀದಿ, ಬೀದಿಗಳಲ್ಲಿ ಪಾದಯಾತ್ರೆ ಮೂಲಕ ಸಂಚರಿಸಿ ಅಂಥ ಕುಟುಂಬಗಳ ದುಗುಡ, ದುಮ್ಮಾನ ಕಣ್ಣಾರೆ ಕಾಣಲಾಗಿತ್ತು. ಆ ಸಂದರ್ಭದಲ್ಲಿ ರಾಜ್ಯ ಸರ್ಕಾರ ಪಂಚ ಗ್ಯಾರಂಟಿಗಳ ಭರವಸೆ ನೀಡಿದರೆ, ತಾಲೂಕಿನಲ್ಲಿ ಶಾಶ್ವತ ಮನೆ ಮಾಲಿಕತ್ವ ನೀಡುವ 6 ಗ್ಯಾರಂಟಿ ಘೋಷಣೆ ಮಾಡಲಾಗಿತ್ತು. ಇದೀಗ ನುಡಿದಂತೆ ನಡೆದರು ಅತಂತ್ರ ಕುಟುಂಬಗಳನ್ನು ಸ್ವತಂತ್ರಗೊಳಿಸಲಾಗಿದೆ. ಇಡೀ ರಾಜ್ಯದಲ್ಲಿಯೇ ಭೂಗ್ಯಾರಂಟಿ ಕಾರ್ಯಕ್ರಮದಡಿ ಅತೀ ಹೆಚ್ಚಿನ ಸಂಖ್ಯೆಯ ಫಲಾನುಭವಿ ಕುಟುಂಬಗಳು ಲಾಭ ಪಡೆದಿದ್ದರೆ ಅದು ನಮ್ಮ ಹಾನಗಲ್ಲ ತಾಲೂಕು ಎಂದರು. ತಹಶೀಲ್ದಾರ್ ವಿಠ್ಠಲ ಚೌಗಲಾ ಮಾತನಾಡಿದರು. ಈ ಸಂದರ್ಭದಲ್ಲಿ ಬ್ಯಾತನಾಳ ಗ್ರಾಮದ 404, ಇನಾಂಲಕ್ಮಾಪುರ 43, ಕರೆಕ್ಯಾತನಹಳ್ಳಿ 48 ಹಾಗೂ ಮಾಳಾಪುರ ಗ್ರಾಮದ 180 ಸೇರಿದಂತೆ ಒಟ್ಟು 675 ಕುಟುಂಬಗಳಿಗೆ ಈ ಸಂದರ್ಭದಲ್ಲಿ ಶಾಶ್ವತ ಮನೆ ಮಾಲಿಕತ್ವದ ಹಕ್ಕುಪತ್ರ ವಿತರಿಸಲಾಯಿತು.

ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕಾಧ್ಯಕ್ಷ ಈರಪ್ಪ ಬೈಲವಾಳ, ಕೆಪಿಸಿಸಿ ಸದಸ್ಯ ಟಾಕನಗೌಡ ಪಾಟೀಲ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮಂಜು ಗೊರಣ್ಣನವರ, ಬಸನಗೌಡ ಪಾಟೀಲ, ಕೆಎಂಎಫ್ ನಿರ್ದೇಶಕ ಚಂದ್ರಪ್ಪ ಜಾಲಗಾರ, ಮುಖಂಡರಾದ ಭೀಮಣ್ಣ ಲಮಾಣಿ, ರಾಮಣ್ಣ ಶೇಷಗಿರಿ, ಫಯಾಜ್ ಲೋಹಾರ, ಭರಮಣ್ಣ ಶಿವೂರ, ಲೋಕೇಶ ಅಗಸಿಬಾಗಿಲ, ಪರಮೇಶ ಶಿಗಡಿ, ಬಸವರಾಜ ಕಾನ್ನನಿ, ರಮೇಶ ಮದಿಯಣ್ಣನವರ, ಕರಿಯಪ್ಪ ತಹಶೀಲ್ದಾರ್, ವೆಂಕಟೇಶ ಅಗಸಿಬಾಗಿಲ, ಕೃಷ್ಣ ಮಡ್ಲೂರ, ಬಸವಂತ ನಾಯ್ಕ, ಕಾಂತೇಶ ಲಮಾಣಿ, ಬಸವಂತಪ್ಪ ಲಮಾಣಿ, ಯುವರಾಜಗೌಡ ಪಾಟೀಲ, ನಾಗಪ್ಪ ಪೂಜಾರ, ವೀರಭದ್ರಪ್ಪ ಕೋಳೂರ, ಬಂಗಾರೆಪ್ಪ ಕಲಕೇರಿ, ನಾಗರಾಜ ವಡ್ಡರ, ಸಿದ್ದಪ್ಪ ಜಾಲಗಾರ, ಅಶೋಕ ಕಿರವಾಡಿ, ಗಿರೀಶ ದೊಡ್ಡಮನಿ, ಕರಬಸಪ್ಪ ಕ್ವಾಟಿಹಳ್ಳಿ ಸೇರಿದಂತೆ ಇತರರು ಇದ್ದರು.



ಎಸ್‌ಐಆರ್ ನೀತಿ ವಿರೋಧಿಸಿ ಪ್ರತಿಭಟನೆ

• **ಹಾವೇರಿ:** ಕೇಂದ್ರ ಸರ್ಕಾರದ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನೀತಿಯನ್ನು ವಿರೋಧಿಸಿ ರಾಜ್ಯಾದ್ಯಂತ ಹಮ್ಮಿಕೊಳ್ಳಲಾಗಿರುವ ಎಸ್‌ಐಆರ್ ವಿರೋಧಿ ಕರ್ನಾಟಕ ಜನಜಾಗೃತಿ ಜಾಥಾ ಗುರುವಾರ ನಗರಕ್ಕೆ ಆಗಮಿಸಿದ್ದು, ನಗರದ ಹುತಾತ್ಮ ಮೈಲಾರ ಮಹದೇವಪ್ಪ ವೃತ್ತದಲ್ಲಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿತು. ಈ ವೇಳೆ ಜಿಲ್ಲೆಯ ಪ್ರಗತಿಪರ ಸಂಘಟನೆಗಳ ಒಕ್ಕೂಟದವರು ಎಸ್‌ಐಆರ್ ಪಾರದರ್ಶಕವಾಗಿ ಮತ್ತು ನ್ಯಾಯಸಮ್ಮತವಾಗಿ ನಡೆಯಬೇಕೆಂದು ಆಗ್ರಹಿಸಿದರು.

ರಾಜ್ಯದಲ್ಲಿ ಎಸ್‌ಐಆರ್ ಜಾರಿಯನ್ನು ವಿರೋಧಿಸಿ ರಾಜ್ಯದ ಐದು ಸ್ಥಳಗಳಿಂದ ಜನಜಾಗೃತಿ ಜಾಥಾ ಆಯೋಜಿಸಿದ್ದು, ಕಿತ್ತೂರ ಕರ್ನಾಟಕ ಭಾಗದಿಂದ ಹೊರಟಿರುವ ಎಸ್ ಐಆರ್ ವಿರೋಧಿ ಜನಜಾಗೃತಿ ಜಾಥಾ ಗುರುವಾರ ನಗರವನ್ನು ತಲುಪಿತು. ಎಸ್ ಐಆರ್ ವಿರೋಧಿ ಕರ್ನಾಟಕ ಹಾಗೂ ಎದ್ದೇಳು ಕರ್ನಾಟಕ, ಜಾತ್ಯಾತೀತ ಪಕ್ಷಗಳು ಹಾಗೂ ಪ್ರಗತಿಪರ ಸಂಘಟನೆಗಳ ನೇತೃತ್ವದಲ್ಲಿ ನಡೆಯಲಿರುವ ಜಾಥಾವು ಜೂ.13ರಂದು ಆರಂಭವಾಗಿ, ಕಿತ್ತೂರ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಸಂಚರಿಸಿ ಜೂ.20ರಂದು ಬೆಂಗಳೂರಿನ ಪ್ರೀಡಂ ಪಾರ್ಕ್‌ನಲ್ಲಿ ಬೃಹತ್ ಸಮಾವೇಶಗೊಳ್ಳಲಿದೆ. ಜಿಲ್ಲೆಯಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರಬೇಕೆಂದು ಒಕ್ಕೂಟದ ಪದಾಧಿಕಾರಿಗಳು ಮನವಿ ಮಾಡಿದರು.ಎದ್ದೇಳು ಕರ್ನಾಟಕ ತಂಡದ ಸಂಚಾಲಕಿ ಡಾ.ಹಿಸ್ಸಾ ಬೆಲ್ಲ ಮಾತನಾಡಿ, 'ದೇಶದೆಲ್ಲೆಡೆ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಜಾರಿ ಮಾಡುವ ಮೂಲಕ ಲಕ್ಷಾಂತರ ಅರ್ಹ ಮತದಾರರ ಸಾಂವಿಧಾನಿಕವಾದ ಮತದಾನದ ಹಕ್ಕು ಕಸಿದುಕೊಳ್ಳಲಾಗುತ್ತಿದೆ. ಇದೀಗ ಕರ್ನಾಟಕದಲ್ಲಿ ಎಸ್‌ಐಆರ್ ಜಾರಿಯಾಗಲಿದ್ದು, ಅರ್ಹ ಮತದಾರರನ್ನು ಯಾವುದೇ ಕಾರಣಕ್ಕೂ ಕೈಬಿಡಬಾರದು'' ಎಂದು ಆಗ್ರಹಿಸಿದರು.

ಎದ್ದೇಳು ಕರ್ನಾಟಕ ತಂಡದ ಸದಸ್ಯ ಯೂಸೂಫ ಖನ್ನಿ, ಜಿಲ್ಲಾ ಪ್ರಗತಿಪರ ಸಂಘಟನೆಗಳ ಒಕ್ಕೂಟದ ಮುಖ್ಯಸ್ಥರಾದ ಪರಿಮಳ ಜೈನ್, ಮುಖಂಡ ಆರೀಫ್ ಉಲ್ಲಾ ಮಾತನಾಡಿದರು. ನಂತರ ತಹಶೀಲ್ದಾರರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಈ ವೇಳೆ ಪ್ರಗತಿಪರ ಸಂಘಟನೆ ಪದಾಧಿಕಾರಿಗಳಾದ ಬಸವರಾಜ ಪೂಜಾರ, ಉಡಚಪ್ಪ ಮಾಳಗಿ, ಬಸವರಾಜ ಎಸ್., ಶೆಟ್ಟಿ ವಿಭೂತಿ, ಸುರೇಶ ಚಲವಾದಿ, ಖಲಂದರ್ ಅಲಿಗೌಡ್ರ, ಹಸೀನಾ ಹೆಡಿಯಾಲ, ಪ್ರೇಮಲತಾ ಮುದ್ದಿ, ಸುಮಂಗಲಾ ಇಪ್ಪಿಕೊಪ್ಪ, ಐಶ್ವರ್ಯ ಮಡಿವಾಳರ, ಚೈತ್ರಾ ಕೊರವರ, ಸುಧಾ ವಡಕಣ್ಣನವರ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಗ್ಯಾರಂಟಿ ಫಲಾನುಭವಿಗಳಿಗೆ ಆತಂಕ ಬೇಡ: ಮಣ್ಣಕಟ್ಟಿ

• **ಶಿಗ್ಗಾವಿ :** ಗ್ಯಾರಂಟಿ ಯೋಜನೆಗಳು ಯತಾವತ್ತು ಚಾಲನೆಯಲ್ಲಿದ್ದು ಗ್ಯಾರಂಟಿ ಫಲಾನುಭವಿಗಳು ಯಾವೂದೇ ಆತಂಕಕ್ಕೆ ಒಳಗಾಗಬಾರದು ಎಂದು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮೀತಿ ಅಧ್ಯಕ್ಷ ಶೇಖಪ್ಪ ಮಣಕಟ್ಟಿ ಹೇಳಿದರು.

ಪಟ್ಟಣದ ತಾಪಂ ಆವರಣದಲ್ಲಿ ತಾಲೂಕಾ ಗ್ಯಾರಂಟಿ ಯೋಜನಾ ಅನುಷ್ಠಾನ ಸಮೀತಿಯ ಸಭೆಯಲ್ಲಿ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ಡಿ.ಕೆ. ಶಿವಕುಮಾರ ಅವರು, ರಾಜ್ಯದ ಮುಖ್ಯಮಂತ್ರಿಯಾಗಿ ಪದಗ್ರಹಣವಾದ ನಂತರ ರಾಜ್ಯ ಸರಕಾರ ಘೋಷಣೆ ಮಾಡಿದ ಐದು ಗ್ಯಾರಂಟಿಗಳನ್ನು ಪರಿಷ್ಕರಣೆಗಾಗಿ ರಾಜ್ಯ ಸರ್ಕಾರದ ಇಲಾಖೆಗೆ ಯಾವೂದೇ ವಿಶೇಷ ಸೂಚನಾ ಆದೇಶಗಳನ್ನು ನೀಡಿಲ್ಲಾ ಮತ್ತು ಗ್ಯಾರಂಟಿಗಳನ್ನು ತಡೆ ಹಿಡಿದಿಲ್ಲ ಎಂದರು.

ಸರ್ಕಾರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ವಿದ್ಯುತ್ತ ಸರಭರಾಜು ಕಂಪನಿಗಳಿಗೆ ಪರಿಶೀಲನೆ ಕೈಗೊಳ್ಳುವಂತೆ ಸುತ್ತೋಲೆ ನೀಡಿಲ್ಲ. ರಾಜ್ಯ ಸರ್ಕಾರದ ಆದೇಶಗಳೂ ಇಲ್ಲಾ. ಗ್ಯಾರಂಟಿಗಳು ಫಲಾನುಭವಿಗಳ ಮರುಪರಿಶೀಲನೆಯಾಗಬೇಕು. ಪುನಃ ಅರ್ಜಿ ಕೇವಲ ಸಲ್ಲಿಸಬೇಕು. ಎಂಬುದೆಲ್ಲಾ ಉಹಾಪೋಹ. ಇದು ಸೋಶೀಯಲ್ ಮೀಡಿಯಾಗಳ ಸುಳ್ಳು ಹೇಳಿಕೆಗಳು ಮಾತ್ರ ಸರ್ಕಾರದ ಪ್ರಸ್ತಾವನೆಯಂದು ನಂಬಬಾರದು, ಹೆಸ್ಕಾಂ ಅಧಿಕಾರಿಗಳು ಸಮರ್ಪಕ ವಿದ್ಯುತ್ತ ನೀಡುತ್ತಿಲ್ಲ, ಪದೇ ಪದೇ ವಿದ್ಯುತ್ತ ಕಣ್ಣು ಮುಚ್ಚಾಲೆಯಾಗುತ್ತಿದೆ. ಸದಸ್ಯ ಶಂಕರ ಗಂಗಣ್ಣವರ ಆರೋಪಿಸಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಹಳೆ ಬಂಕಾಪೂರ ಮೂಕಬಸರಿಕಟ್ಟಿ, ಬಾಡ ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವ ತಲೆದೋರಿದೆ ಸರಿಪಡಿಸಿ ಎಂದರು.



ಸಿಡಿಪಿಓ ಗಣೇಶ ಲಿಂಗನಗೌಡ್ರ, ಸಹಾಯಕ ಯೋಜನಾ ಅಧಿಕಾರಿ ಶಿವಾನಂದ ಸಣ್ಣಕ್ಕಿ. ರಾಯಪ್ಪ ನಾಗಪ್ಪನವರ. ಸುರೇಶ ತಗ್ಗಿಹಳ್ಳಿ ಗ್ಯಾರಂಟಿ ಸಮೀತಿಯ ಸರ್ವ ಸದಸ್ಯರು ಉಪಸ್ಥಿತರಿದ್ದರು.

ಪರಿಶ್ರಮದಿಂದ ಯಶಸ್ಸು ಸಾಧ್ಯ

• **ಶಿಗ್ಗಾವಿ:** ಬದುಕಿನ ಯಶಸ್ವಿಗೆ ವಿದ್ಯಾರ್ಥಿ ಜೀವನದಲ್ಲಿ ಪರಿಶ್ರಮ ಪಡುವದು ಮುಖ್ಯವಾಗಿದೆ. ಅಂತಹ ವಿದ್ಯಾರ್ಥಿಗಳು ಬದುಕು ಕಟ್ಟಕೊಳ್ಳಲು ಸದೃಢರಾಗುತ್ತಾರೆ. ಸಮಾಜಕ್ಕೆ ಉತ್ತಮ ಕೊಡುಗೆ ನೀಡುವಂತಾಗುತ್ತಾರೆ ಎಂದು ಚನ್ನಪ್ಪ ಕುನ್ನೂರ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ನಾಗರಾಜ ದ್ಯಾಮನಕೊಪ್ಪ ಹೇಳಿದರು.

ಪಟ್ಟಣದ ರಂಭಾಪುರಿ ಪದವಿ ಕಾಲೇಜಿನಲ್ಲಿ ಹಮ್ಮಿಕೊಂಡ ಕಾಲೇಜಿನ ಒಕ್ಕೂಟ ಮತ್ತು ವಿವಿಧ ಸಂಘಗಳ ಮತ್ತು ಎನ್‌ಎಸ್‌ಎಸ್ ಘಟಕದ ಕಾರ್ಯ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಯಶಸ್ಸಿಗೆ ಕೇವಲ ಪುಸ್ತಕದ ಜ್ಞಾನವಷ್ಟೇ ಅಲ್ಲದೆ, ಶ್ರದ್ಧೆ, ಏಕಾಗ್ರತೆ ಮತ್ತು ಸವಾಲುಗಳನ್ನು ಎದುರಿಸುವ ಛಲವನ್ನು ಬೆಳೆಸಿಕೊಳ್ಳುವುದು ಪರಿಶ್ರಮದ ಲಕ್ಷಣವಾಗಿದೆ ಎಂದರು.ಕಾರ್ಯಕ್ರಮದಲ್ಲಿ ವಿವಿಧ ಸಾಧನಗೈದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಹಾಗೂ ಕ್ರೀಡೆಯಲ್ಲಿ ಸಾಧನೆಗೈದ ಕ್ರೀಡಾಪಟುಗಳಿಗೆ,



ಕ್ರೀಡಾ ಸಿರಿ ಪ್ರಶಸ್ತಿ ಸೇರಿದಂತೆ ವಿವಿಧ ಸಂಘಗಳ ಪ್ರಶಸ್ತಿಗಳನ್ನು ನೀಡಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಆಡಳಿತಾಧಿಕಾರಿ ಲಿಂಗಯ್ಯ ಹಿರೇಮಠ ವಹಿಸಿ ಮಾತನಾಡಿದರು, ಪ್ರೋ. ಡಾ. ಬಿ.ವೈ. ತೊಂಡಿಹಾಳ್ 2025-26ನೇ ಸಾಲಿನ ವರದಿ ವಾಚನ ಮಾಡಿದರು.

ಪದವಿ ಪೂರ್ವ ಕಾಲೇಜಿನ ಪ್ರಾ.ಎಫ್. ಎಸ್. ಶಿವಣ್ಣವರ ಐ.ಕ್ಯೂ.ಎ.ಸಿ. ಸಂಯೋಜಕ ಡಾ.ಎಚ್ ಕೆ ವಿನಯ್, ಡಾ.ಆರ್.ಸಿ. ದಾದುಗೌಡರ ಮತ್ತು ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

ಸಮರ್ಪಕ ಬಸ್ ವ್ಯವಸ್ಥೆ ಒದಗಿಸಲು ಒತ್ತಾಯ

• **ಹಾವೇರಿ:** ಕೆರಿಮತ್ತಿಹಳ್ಳಿಯಲ್ಲಿರುವ ಹಾವೇರಿ ವಿಶ್ವ ವಿದ್ಯಾಲಯಕ್ಕೆ ಸಂಪರ್ಕ ಕಲ್ಪಿಸುವ ಎರಡು ಕಿಮೀ ಉದ್ದದ ರಸ್ತೆ ಸಂಪೂರ್ಣ ಹಾಳಾಗಿದ್ದು, ರಸ್ತೆ ದುರಸ್ಥಿ ಪಡಿಸುವುದು ಹಾಗೂ ಸಮರ್ಪಕ ಬಸ್ ವ್ಯವಸ್ಥೆ ಕಲ್ಪಿಸುವಂತೆ ಆಗ್ರಹಿಸಿ ಎಬಿವಿಪಿ ನಗರ ಘಟಕದ ಪದಾಧಿಕಾರಿಗಳು ಗುರುವಾರ ಹಾವೇರಿ ವಿವಿ ಬಳಿಯ ರಸ್ತೆಯಲ್ಲಿ ಪ್ರತಿಭಟನೆ ನಡೆಸಿದರು.



ಹಾವೇರಿ ವಿವಿಕ್ಯಾಂಪಸ್‌ನಿಂದ ಹೊಸಳ್ಳಿಯವರೆಗೆ ಪ್ರತಿಭಟನಾ ಪಾದಯಾತ್ರೆ ನಡೆಸಿದ ಎಬಿವಿಪಿ ಕಾರ್ಯಕರ್ತರು ಹಾಗೂ ವಿದ್ಯಾರ್ಥಿಗಳು ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೇ ರಸ್ತೆ ದುರಸ್ತಿ ಮತ್ತು ಸಮರ್ಪಕ ಬಸ್ ವ್ಯವಸ್ಥೆ ಒದಗಿಸುವಂತೆ ಆಗ್ರಹಿಸಿದರು.

ಈ ವೇಳೆ ಎಬಿವಿಪಿ ಜಿಲ್ಲಾ ಸಂಚಾಲಕ ಅಭಿಷೇಕ ದೊಡ್ಡಮನಿ, ನಗರ ಘಟಕದ ಕಾರ್ಯದರ್ಶಿ ಸಾಗರ್ ಪೊಲೀಸ್‌ಗೌಡ್ರ ಹಾಗೂ ಯಶವಂತ ಬಿ. ಅವರು ಮಾತನಾಡಿ, ಹಾವೇರಿ ವಿಶ್ವವಿದ್ಯಾಲಯವು ಸ್ಥಾಪನೆಗೊಂಡು ಮೂರು ವರ್ಷ ಕಳೆದರೂ ಮೂಲಭೂತ ಸೌಕರ್ಯಗಳಿಲ್ಲ. ಅದರಲ್ಲೂ ಬಹುಮುಖ್ಯವಾಗಿ ರಸ್ತೆ ಹಾಗೂ ಸಾರಿಗೆ ಸಮಸ್ಯೆಯನ್ನು ವಿದ್ಯಾರ್ಥಿಗಳು ಎದುರಿಸುತ್ತಿದ್ದಾರೆ. ದಿನನಿತ್ಯ ನೂರಾರು ವಿದ್ಯಾರ್ಥಿಗಳು ತಮ್ಮ ಖಾಸಗಿ ವಾಹನಗಳನ್ನು ಅವಲಂಬಿಸಿಕೊಂಡು ಬರುತ್ತಿದ್ದಾರೆ ಎಂದರು.

ಹೊಸಳ್ಳಿ ಕ್ರಾಸ್‌ನಿಂದ ಹಾವೇರಿ ವಿಶ್ವವಿದ್ಯಾಲಯಕ್ಕೆ ತೆರಳುವ ರಸ್ತೆ ಮಾರ್ಗ ಬಹಳಷ್ಟು ಹದಗೆಟ್ಟಿದ್ದು, ತಗ್ಗು ಗುಂಡಿಗಳೇ ತುಂಬಿಕೊಂಡಿವೆ. ಬೈಕ್‌ನಲ್ಲಿ ಸಂಚರಿಸುವ ವಿದ್ಯಾರ್ಥಿಗಳು ಅಪಘಾತಕ್ಕೀಡಾಗುವ ಸಾಧ್ಯತೆಗಳು ದಟ್ಟವಾಗಿವೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸಂಬಂಧಿಸಿದ ಶಾಸಕರು ಹಾಗೂ ಅಧಿಕಾರಿಗಳು ರಸ್ತೆ ದುರಸ್ಥಿಪಡಿಸಬೇಕು. ಜತೆಗೆ ಬೆಳಗ್ಗೆ ಎರಡು ಬಸ್ಸುಗಳು ಮಾತ್ರ ವಿವಿಗೆ ಸಂಚರಿಸುತ್ತಿದ್ದು, ಉಳಿದ ಅವಧಿಯಲ್ಲಿ ಓಡಾಡುವುದೇ ಇಲ್ಲ. ವಿದ್ಯಾರ್ಥಿಗಳು ಎರಡು ಕಿಮೀನಷ್ಟು ದೂರ ನಡೆದುಕೊಂಡೇ ವಿವಿಗೆ ಹೋಗುವಂತಾಗಿದೆ. ಹಾಗಾಗಿ ಸಂಬಂಧಿಸಿದ ಅಧಿಕಾರಿಗಳು ವಿದ್ಯಾರ್ಥಿಗಳ ಅನುಕೂಲಕ್ಕೆ ತಕ್ಕಂತೆ ಹೆಚ್ಚುವರಿ ಮತ್ತು ಸಮರ್ಪಕ ಬಸ್ ವ್ಯವಸ್ಥೆ ಕಲ್ಪಿಸಬೇಕೆಂದು ಆಗ್ರಹಿಸಿದರು.

ಬಳಿಕ ಅಪರ ಜಿಲ್ಲಾಧಿಕಾರಿಗಳ ಮೂಲಕ ಶಾಸಕರಿಗೆ, ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಈ ವೇಳೆ ಎಬಿವಿಪಿ ಕಾರ್ಯಕರ್ತರಾದ ಕಾರ್ತಿಕ ಕಲಾಲ, ಈಶ್ವರಿ ಬಡಿಗೇರ, ಅಕಿಲೇಶ, ದರ್ಶನ್, ಅನುಷಾ, ಸುಜಾತಾ ಸೇರಿದಂತೆ ಅನೇಕ ಕಾರ್ಯಕರ್ತರು ಹಾಗೂ ವಿವಿ ವಿದ್ಯಾರ್ಥಿಗಳು ಹಾಜರಿದ್ದರು.

ಸಾರ್ವಜನಿಕ ದೂರುಗಳಿಗೆ ತ್ವರಿತವಾಗಿ ಸ್ಪಂದಿಸಿ

• **ಹಾವೇರಿ:** ಜಿಲ್ಲೆಯಲ್ಲಿ ಗ್ಯಾರಂಟಿ ಯೋಜನೆಗಳ ಕುರಿತು ಸಾರ್ವಜನಿಕರಿಂದ ವ್ಯಕ್ತವಾಗುವ ದೂರುಗಳಿಗೆ ತ್ವರಿತವಾಗಿ ಸ್ಪಂದಿಸಿ ಸಮಸ್ಯೆಗಳನ್ನು ಇತ್ಯಾರ್ಥಪಡಿಸಬೇಕು ಎಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಹನುಮಂತಪ್ಪ ಈರಪ್ಪ ಮರಗಡಿ ಹೇಳಿದರು.

ಪ್ರಗತಿ ಪರಿಶೀಲನಾ ಸಭೆ

ಜಿಪಂ ಸಭಾಂಗಣದಲ್ಲಿ ಜಿಲ್ಲಾಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಗ್ಯಾರಂಟಿ ಯೋಜನೆಗಳಾದ ಶಕ್ತಿ, ಗೃಹಜ್ಯೋತಿ, ಅನ್ನಭಾಗ್ಯ, ಗೃಹಲಕ್ಷ್ಮಿ ಹಾಗೂ ಯುವನಿಧಿ ಯೋಜನೆಗಳ ಪ್ರಗತಿಯನ್ನು ಪರಿಶೀಲಿಸಿ ಸಂಬಂಧಿಸಿದ ಅಧಿಕಾರಿಗಳಿಂದ ಅಗತ್ಯ ಮಾಹಿತಿ ಪಡೆದುಕೊಂಡರು.

ಶಕ್ತಿ ಯೋಜನೆ: ಜಿಲ್ಲೆಯ ಮಹಿಳೆಯರು ಶೇ.100ರಷ್ಟು ಶಕ್ತಿ ಯೋಜನೆಯಡಿ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ. ಹಾವೇರಿ ವಿಭಾಗಕ್ಕೆ ಒಟ್ಟು 134 ಹೊಸ ಬಸ್‌ಗಳು ಹಾವೇರಿ ವಿಭಾಗಕ್ಕೆ ಮಂಜೂರಾಗಿವೆ. ಎಲ್ಲಾ ಬಸ್ ನಿಲ್ದಾಣಗಳು ಹಾಗೂ ಶೌಚಾಲಯಗಳನ್ನು ಕಡ್ಡಾಯವಾಗಿ ಸ್ವಚ್ಛವಾಗಿಟ್ಟುಕೊಳ್ಳಿ ಹಾಗೆಯೇ ಇತ್ತೀಚಿಗೆ ಸರ್ಕಾರ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ವಿತರಣೆಯನ್ನು ಆರಂಭಿಸಿದ್ದು ಇದರ ಬಗ್ಗೆ ವ್ಯಾಪಕ ಪ್ರಚಾರಗೊಳಿಸಿ ಎಂದರು

ಗ್ರಾಮೀಣ ಪ್ರದೇಶಗಳಲ್ಲಿ ಬೀದಿ ದೀಪಗಳು ಅನಗತ್ಯವಾಗಿ ಉರಿಯುವುದನ್ನು ತಡೆಯಲು ಹಾಗೂ ಗ್ರಾಪಂಗಳ ವಿದ್ಯುತ್ ಬಿಲ್ ಹೊರೆ ತಗ್ಗಿಸಲು ಅಗತ್ಯ ಕ್ರಮ ವಹಿಸಿ, ಪ್ರತಿ ತಾಲೂಕಿನಲ್ಲಿ ಸರ್ಕಾರಿ ಜಾಗವಿದ್ದರೆ ಸೋಲಾರ್ ಮೈಕ್ರೋ ಗ್ರಿಡ್‌ಗಳನ್ನು ಸ್ಥಾಪಿಸಿ ವಿದ್ಯುತ್ ಉತ್ಪಾದನೆಗೆ ಕ್ರಮ ವಹಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ ಎಂದು ಹೆಸ್ಕಾಂ ಅಧಿಕಾರಿಗಳಿಗೆ ಸೂಚಿಸಿದರು.

ಗೃಹಲಕ್ಷ್ಮಿ ಯೋಜನೆಯಡಿ ಇದುವರೆಗೂ ಸರ್ಕಾರರಿಂದ 30 ಕಂತುಗಳನ್ನು ಬಿಡುಗಡೆ ಮಾಡಲಾಗಿದೆ ಎರಡು ತಿಂಗಳ ಕಂತುಗಳು ಬಾಕಿ ಇವೆ. ಇ-ಕೆವೈಸಿ ಸಮಸ್ಯೆದಿಂದಾಗಿ ಕೆಲವು ಫಲಾನುಭವಿಗಳು ಯೋಜನೆಯ ಸೌಲಭ್ಯದಿಂದ ವಂಚಿತರಾಗುತ್ತಿದ್ದಾರೆ ಅಂತವರು ಸಂಬಂಧಿತ ತಾಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಗೆ ಭೇಟಿ ನೀಡಿ ಇ-ಕೆವೈಸಿ ನವೀಕರಿಸಿಕೊಳ್ಳುವಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಹಾಗೆಯೇ ಗೃಹಲಕ್ಷ್ಮಿ ಹಣ ಜಮೆಯಾಗದಿದ್ದಲ್ಲಿ ಸಂಬಂಧಿತ ದಾಖಲೆಗಳೊಂದಿಗೆ ಅಧಿಕಾರಿಗಳನ್ನು ಸಂಪರ್ಕಿಸಿದರೆ ಪರಿಶೀಲಿಸಿ ಸಮಸ್ಯೆ ಪರಿಹರಿಸಿ ಎಂದರು.



ಯುವನಿಧಿ ಯೋಜನೆಯಡಿ ಜಿಲ್ಲೆಯಲ್ಲಿ ಇದುವರೆಗೆ 9,978 ಅರ್ಜಿಗಳು ನೋಂದಣಿಯಾಗಿದ್ದು ಅದರಲ್ಲಿ 8,643 ಅರ್ಹ ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆ ಮಾಡಲಾಗಿದೆ. ಇದು ಶೇ.87ರಷ್ಟು ಸಾಧನೆಯಾಗಿದೆ ಎಂದು ಸಭೆಗೆ ತಿಳಿಸಿದರು. ಸಭೆಯಲ್ಲಿ ಜಿಪಂ ಸಿಇಒ ದಲ್ಜಿತ್ ಕುಮಾರ್, ಉಪ ಕಾರ್ಯದರ್ಶಿ ಡಾ. ಪುನೀತ್, ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಕಿರುಸುದ್ದಿ

ಇಂದಿನಿಂದ ವಾರಾಚರಣೆ



• **ಯಮಕನಮರಡಿ:** ಗ್ರಾಮದಲ್ಲಿ ಶ್ರೀ ಲಕ್ಷ್ಮಿದೇವಿ ಜಾತ್ರೆ ಪ್ರಯುಕ್ತ ಶುಕ್ರವಾರದಿಂದ ವಾರಚರಣೆಗೆ ಚಾಲನೆ ನೀಡಲಾಗುವುದು. ನಾಲ್ಕು ಶುಕ್ರವಾರಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಿ ಶ್ರೀದೇವಿಯ ಜಾತ್ರೆ ಅಂಗವಾಗಿ ಕೋಣಗಳನ್ನು ಬಿಡುವ ಕಾರ್ಯಕ್ರಮದ ಅಂಗವಾಗಿ ಒಂದು ತಿಂಗಳ ಕಾಲ ಶುಕ್ರವಾರ ರೈತರು, ಗ್ರಾಮಸ್ಥರು, ವ್ಯಾಪಾರಸ್ಥರು, ಯಾವುದೇ ತರದ ಸಮಾರಂಭ ಚಟುವಟಿಕೆಗಳನ್ನು ನಡೆಸಬಾರದೆಂದು ಲಕ್ಷ್ಮೀದೇವಿ ಯಾತ್ರಾ ಪಂಚ ಕಮಿಟಿ ಪ್ರಕಟಣೆಯಲ್ಲಿ ತಿಳಿಸಿದೆ.

ಮಾರುತಿ ದೇವರ ಓಕುಳಿ ಜೂ.20ರಿಂದ



• **ಗೋಕಾಕ:** ತಾಲೂಕಿನ ಬೆಟಗೇರಿ ಗ್ರಾಮದ ಜಾಗೃತ ಮಾರುತಿ ದೇವರ ಓಕುಳಿ ಜೂ.20ರಿಂದ ಜೂ.23ರವರೆಗೆ ಜರುಗಲಿದೆ. ಜೂ.20ರಂದು ಬೆಳಿಗ್ಗೆ 7ಗಂಟೆಗೆ ಮಾರುತಿ ದೇವರ ಗದ್ದುಗೆಗೆ ಮಹಾರುದ್ರಾಭಿಷೇಕ, ಕುಂಕುಮ ಮತ್ತು ಮಹಾಪೂಜೆ, ಸಂಜೆ 5 ಗಂಟೆಗೆ ಓಕುಳಿ ಕೊಂಡ ಪೂಜೆ, ನಂತರ ಕರಡಿ, ಹಲಗೆ ಮಜಲು ಸೇರಿದಂತೆ ಸಕಲ ವಾದ್ಯಗಳ ವಾದನ, ಪಲ್ಲಕ್ಕಿ ಉತ್ಸವ ನಡೆಯಲಿದೆ.

ಜೂ.21ರಂದು ಬೆಳಿಗ್ಗೆ 7ಗಂಟೆಗೆ ಮಾರುತಿ ದೇವರ ಗದ್ದುಗೆಗೆ ಅಭಿಷೇಕ, ಪೂಜೆ, ಸಂಜೆ 5 ಗಂಟೆಗೆ ನಡು ಓಕುಳಿ. ಜೂ.22ರಂದು ಬೆಳಿಗ್ಗೆ 8 ಗಂಟೆಯಿಂದ ಪುರಜನರಿಂದ ಪೂಜೆ-ಪುನಸ್ಕಾರ, ನೈವೈದ್ಯ, ಹರಕೆ ಸಮರ್ಪಣೆ ನಡೆದು, ಸಾಯಂಕಾಲ 5 ಗಂಟೆಗೆ ಓಕುಳಿ ಕೊಂಡಕ್ಕೆ ಸ್ಥಳೀಯ ವಿವಿಧ ದೇವರ ಪಲ್ಲಕ್ಕಿ ಪ್ರದಕ್ಷಿಣೆ ಬಳಿಕ ಕಡೆ ಓಕಳಿ ನಡೆಯಲಿದ್ದು, ವಿವಿಧ ಪ್ರಾಣಿಗಳ ಸೊಗಿನ ಕುಣಿತದ ಪ್ರದರ್ಶನ, ಅದೇ ದಿನ ಸಂಜೆ 8 ಗಂಟೆಗೆ ಶ್ರೀಗಳಿಗೆ, ಅನ್ನದಾನಿಗಳಿಗೆ ಸತ್ಕಾರ ಕಾರ್ಯಕ್ರಮದ ಬಳಿಕ ರಾತ್ರಿ 10.30ಕ್ಕೆ ತುಳಸಿಗೇರಿ ಜೈ ಹನುಮಾನ ನಾಟ್ಯ ಸಂಘದವರಿಂದ ಕೃಷ್ಣಪಾರಿಜಾತ ಕಲಾಸಂಘದವರಿಂದ ನಾಟಕ ಪ್ರದರ್ಶನ ಜರುಗಲಿದೆ.

ಮಂಗಳವಾರ ಜೂ.23ರಂದು ಬೆಳಿಗ್ಗೆ 7ಗಂಟೆಗೆ ಮಾರುತಿ ದೇವರ ಗದ್ದುಗೆಗೆ ಅಭಿಷೇಕ, ಪೂಜೆ, ಸಂಜೆ 4 ಗಂಟೆಗೆ ಜಂಗಿ ಕುಸ್ತಿಗಳು ನಡೆದ ಬಳಿಕ ಸಂಜೆ ಮಾರುತಿ ದೇವರ ದೇವಾಲಯಕ್ಕೆ ಪಲ್ಲಕ್ಕಿ ಪ್ರದರ್ಕ್ಷಣೆ ನಡೆಯಲಿದೆ ಎಂದು ಇಲ್ಲಿಯ ಮಾರುತಿ ದೇವರ ಓಕುಳಿ ಉತ್ಸವ ಆಚರಣಾ ಸಮಿತಿ ಪತ್ರಿಕಾ ಪ್ರಕಟಣೆಗೆ ತಿಳಿಸಿದ್ದಾರೆ.

ಜು.14ರಂದು ಮಾಜಿ ಸೈನಿಕರಿಗೆ ಸನ್ಮಾನ, ಪ್ರತಿಭಾ ಪುರಸ್ಕಾರ

• **ರಾಮದುರ್ಗ:** ತಾಲೂಕಿನ ಕಿಲ್ಲಾತೊರಗಲ್ಲ ಸಂಸ್ಥಾನ ಗಚ್ಚಿನ ಹಿರೇಮಠದಲ್ಲಿ ಜು.14ರಂದು ಜರುಗಲಿರುವ ಶ್ರೀ ರಾಚೋಟೇಶ್ವರ ಶಿವಯೋಗಿಗಳವರ 49 ನೇಯ ಜಾತ್ರಾಮಹೋತ್ಸವದಲ್ಲಿ ಭಾರತೀಯ ಸೇನೆಯಿಂದ ಸೇವಾನಿವೃತ್ತಿ ಹೊಂದಿದ ಶ್ರೀಮಠದ ಸದ್ಭಕ್ತ ಮಾಜಿ ಸೈನಿಕರಿಗೆ ಶ್ರೀಗುರು ರಕ್ಷೆಯ ಸನ್ಮಾನ ಹಾಗೂ ಕೆ. ಜುನಿಪೇಠ ಗ್ರಾಪಂ ವ್ಯಾಪ್ತಿಯ ಗ್ರಾಮಗಳ ಪ್ರತಿಭಾ ಪುರಸ್ಕಾರ ಆಯೋಜಿಸಲಾಗಿದೆ.

2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ. 80ಕ್ಕಿಂತ ಹೆಚ್ಚು ಅಂಕ ಪಡೆದ ಕೆ. ಜುನಿಪೇಠ ಗ್ರಾಮ ಪಂಚಾಯತಿ ವ್ಯಾಪ್ತಿಯ ಕಿಲ್ಲಾತೊರಗಲ್ಲ, ಖಾನಪೇಟ , ಗೊಣಗನೂರ , ಹಾಲೊಳ್ಳಿ ಹಾಗೂ ಸರ್ವಾಪೂರ ಗ್ರಾಮಗಳಲ್ಲಿನ ವಿದ್ಯಾರ್ಥಿ / ನಿಯರಿಗೆ '' ಕಿಲ್ಲಾತೊರಗಲ್ಲ ಸಂಸ್ಥಾನ ಗಚ್ಚಿನ ಹಿರೇಮಠದ ಪ್ರತಿಭಾ ಪುರಸ್ಕಾರದ ಶ್ರೀಗುರು ರಕ್ಷೆಯ ಸನ್ಮಾನ ನೀಡಲಾಗುವುದು. ಅರ್ಹ ಆಸಕ್ತ ವಿದ್ಯಾರ್ಥಿಗಳು ತಮ್ಮ ಸ್ವ ವಿವರದ ಅರ್ಜಿಯೊಂದಿಗೆ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ, ಆಧಾರ ಕಾರ್ಡ್, ಝುರಾಕ್ಸ ಪ್ರತಿಯೊಂದಿಗೆ ಜು.10ರೊಳಗಾಗಿ ತಲುಪುವಂತೆ ಅಂಚೆಯ ಮೂಲಕ ಅಥವಾ ಖುದ್ದಾಗಿ ಶ್ರೀಮಠದ ಪೀಠಾಧಿಪತಿಗಳು, ಕಿಲ್ಲಾತೊರಗಲ್ಲ ಸಂಸ್ಥಾನ ಗಚ್ಚಿನಹಿರೇಮಠ , ಕಿಲ್ಲಾತೊರಗಲ್ಲ, ತಾ.ರಾಮದುರ್ಗ, ಜಿ. ಬೆಳಗಾವಿ ವಿಳಾಸಕ್ಕೆ ಸಲ್ಲಿಸಲು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮಹಾಂತೇಶ. ಬ. ಶಿದ್ದಿಭಾವಿ 9483471292, ಶ್ರೀಧರ ಬಾ. ಶಿಂಧೆ 9606371898, ಶಿವರಾಜ ಫ. ಕಣವಿ 9448897396, ದಿಲೀಪ ಕ.ಭೋವಿ-9481005538 ಸಂಪರ್ಕಿಸಲು ಶ್ರೀಮಠ ತಿಳಿಸಿದೆ.



ಬೆಳಗಾವಿ: ಹೊನಗಾದಲ್ಲಿರುವ ಫಿನಿಕ್ಸ್ ಸಾರ್ವಜನಿಕ ಶಾಲೆ ಹಾಗೂ ಫೀನಿಕ್ಸ್ ಸ್ಪೋರ್ಟ್ಸ್ ಕೌನ್ಸಿಲ್ ಆಶ್ರಯದಲ್ಲಿ 28ನೇ ವರ್ಷದ ಸಂಸ್ಥಾಪನಾ ಸಪ್ತಾಹದ ಅಂಗವಾಗಿ ಆಯೋಜಿಸಲಾಗಿದ್ದ ಬಾಲಕ ಮತ್ತು ಬಾಲಕಿಯರ ಅಂತರಶಾಲಾ ಫುಟ್ಬಾಲ್ ಕ್ರೀಡಾಕೂಟಕ್ಕೆ ಮಂಗಳವಾರ ಅದ್ದೂರಿಯಾಗಿ ಚಾಲನೆ ದೊರೆಯಿತು. ವಿವಿಧ ಶಾಲೆಗಳ ಕ್ರೀಡಾಪಟುಗಳು ಪಂದ್ಯಾವಳಿಯಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು.

ಫುಟ್ಬಾಲ್ ಕ್ರೀಡಾಕೂಟಕ್ಕೆ ಅದ್ದೂರಿ ಚಾಲನೆ

• **ಬೆಳಗಾವಿ:** ಹೊನಗಾದಲ್ಲಿರುವ ಫಿನಿಕ್ಸ್ ಸಾರ್ವಜನಿಕ ಶಾಲೆ ಹಾಗೂ ಫೀನಿಕ್ಸ್ ಸ್ಪೋರ್ಟ್ಸ್ ಕೌನ್ಸಿಲ್ ಆಶ್ರಯದಲ್ಲಿ 28ನೇ ವರ್ಷದ ಸಂಸ್ಥಾಪನಾ ಸಪ್ತಾಹದ ಅಂಗವಾಗಿ ಆಯೋಜಿಸಲಾಗಿದ್ದ ಬಾಲಕ ಮತ್ತು ಬಾಲಕಿಯರ ಅಂತರಶಾಲಾ ಫುಟ್ಬಾಲ್ ಕ್ರೀಡಾಕೂಟಕ್ಕೆ ಮಂಗಳವಾರ ಅದ್ದೂರಿಯಾಗಿ ಚಾಲನೆ ದೊರೆಯಿತು. ವಿವಿಧ ಶಾಲೆಗಳ ಕ್ರೀಡಾಪಟುಗಳು ಪಂದ್ಯಾವಳಿಯಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು.ಫೀನಿಕ್ಸ್ ಶಾಲಾ ಮೈದಾನದಲ್ಲಿ ನಡೆದ ಉದ್ಘಾಟನಾ ಸಮಾರಂಭದಲ್ಲಿ ಆರ್‌ಎಲ್‌ಎಸ್ ಕಾಲೇಜಿನ ಪ್ರಾಚಾರ್ಯೆ ಡಾ. ಜ್ಯೋತಿ ಕವಳೇಕರ್ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಫಿನಿಕ್ಸ್ ಶಾಲೆಯ ಪ್ರಾಚಾರ್ಯೆ ನಿಶಾ ರಾಜೇಂದ್ರನ್ ಹಾಗೂ ಕನಕ ಶಾಲೆಯ ಪ್ರಾಚಾರ್ಯ ಜಾಕಿರ್ ಹುಸೇನ್ ಲಷ್ಕರಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು. ಅರುಣ್ ಕಂಬ್ಳೆ, ಮಹಾಂತೇಶ್ ಗವಿ, ಡಾ. ಪ್ರಶಾಂತ್ ಮತ್ತು ಸರ್ಫುನ್ನಿಸಾ ಸುಬೇದಾರ್ ಸಹ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಶಾಲೆಯ ಕ್ರೀಡಾಪಟುಗಳಾದ ಜಿಯಾ ಮುಜೇರಿ, ಅಮೃತಾ ಗವಿ, ಭೂಮಿಕಾ ಖೋತ್ ಹಾಗೂ ಜಾನ್ವಿ ಮಲವಾಡ್ಕರ್ ಕ್ರೀಡಾಜ್ಯೋತಿಯನ್ನು ಮೈದಾನದ ಸುತ್ತ ಪ್ರದಕ್ಷಿಣೆ ಹಾಕಿ ಅತಿಥಿಗಳಿಗೆ ಹಸ್ತಾಂತರಿಸಿದರು.ಡಾ. ಜ್ಯೋತಿ ಕವಳೇಕರ್ ಮಾತನಾಡಿದರು. ಕ್ರೀಡಾಪಟು ಭೂಮಿಕಾ ಖೋತ್ ಕ್ರೀಡಾ ಪ್ರಮಾಣ ವಚನ ಬೋಧಿಸಿದರು. ನಂತರ ಅತಿಥಿಗಳು ಪಾರಿವಾಳಗಳನ್ನು ಆಕಾಶಕ್ಕೆ ಹಾರಿಸುವ ಮೂಲಕ ಕ್ರೀಡಾಕೂಟಕ್ಕೆ ಅಧಿಕೃತ ಚಾಲನೆ ನೀಡಿದರು. ಶಿಕ್ಷಕಿಯರಾದ ಹೀನಾ ಮೊಕಾಶಿ, ಸಾಕ್ಷಿ ಕುಕಡೊಳಿ, ನಂದಿಕಾ ಟಿ.ಎಸ್. ಹಾಗೂ ಇಸ್ರಾ ಜಿನಾಬಡೆ ಕಾರ್ಯಕ್ರಮ ನಿರೂಪಿಸಿದರು.



ಗೋಕಾಕ: ಸಮೃದ್ಧಿ ಕಾಲೇಜ ಆಫ್ ನರ್ಸಿಂಗ, ತುಕ್ಕಾರ ಸ್ಕೂಲ್ ಆಫ್ ನರ್ಸಿಂಗ ಗೋಕಾಕ ಹಾಗೂ ಆರೋಗ್ಯ ಕಾಲೇಜ ಆಫ್ ನರ್ಸಿಂಗ ಮೂಡಲಗಿ ಇವುಗಳ ದೀಪ ಪ್ರಜ್ವಲನ ಹಾಗೂ ಪ್ರತಿಜ್ಞಾವಿದಿ ಕಾರ್ಯಕ್ರಮವನ್ನು ಬಾಗಲಕೋಟೆಯ ಬಿಇಎಸ್ ಕಾಲೇಜ ಆಫ್ ನರ್ಸಿಂಗನ ಪ್ರಾಚಾರ್ಯ ಡಾ.ಯು ಎನ್ ದಂಡರಗಿ ಉದ್ಘಾಟಿಸಿದರು. ಅಧ್ಯಕ್ಷ ಡಾ.ಮಹಾಂತೇಶ ಕಡಾಡಿ, ಕಾರ್ಯದರ್ಶಿ ಮಯೂರಿ ಕಡಾಡಿ, ಪ್ರಾಚಾರ್ಯರಾದ ವಿಜಯಕುಮಾರ ಎಮ್, ಡಾ.ಚನ್ನಮಲ್ಲಪ್ಪ ಎಚ್, ಡಾ.ಮಹಾಂತೇಶ ಎನ್ ಹಾಗೂ ವ್ಯವಸ್ಥಾಪಕ ಮಹಾದೇವ ಬಂಡ್ರೋಳಿ ಇದ್ದರು.

ಅತಿವೃಷ್ಟಿ, ಅನಾವೃಷ್ಟಿ ಪೂರ್ವಭಾವಿ ಸಭೆ | ತಹಶೀಲ್ದಾರ್ ಹನುಮಂತ ಸೂಚನೆ

ಮುಂಜಾಗ್ರತಾ ಕ್ರಮ ಕೈಗೊಳ್ಳಿ

• **ಬೆಳಗಾವಿ:** ತಾಲೂಕಿನಲ್ಲಿ ಅತಿವೃಷ್ಟಿ ಹಾಗೂ ಅನಾವೃಷ್ಟಿ ಪರಿಸ್ಥಿತಿಗಳನ್ನು ಸಮರ್ಥವಾಗಿ ಎದುರಿಸಲು ಅಗತ್ಯ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳುವಂತೆ ಆಡಳಿತಾಧಿಕಾರಿಗಳು ಹಾಗೂ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ತಹಶೀಲ್ದಾರ್ ಹನುಮಂತ ಶಿರಹಟ್ಟಿ ಸೂಚನೆ ನೀಡಿದರು.

ಸ್ಥಳೀಯ ರೈತ ತರಬೇತಿ ಕೇಂದ್ರದಲ್ಲಿ ನಡೆದ ವಿಪತ್ತು ನಿರ್ವಹಣಾ ಸಭೆಯಲ್ಲಿ ಮಾತನಾಡಿದ ಅವರು, ಮತದಾರರ ಪಟ್ಟಿಯ ಪರಿಷ್ಕರಣೆ ಕುರಿತು ಗ್ರಾಮೀಣ ಮಟ್ಟದಲ್ಲಿ ವ್ಯಾಪಕ ಜಾಗೃತಿ ಮೂಡಿಸಬೇಕು ಎಂದು ತಿಳಿಸಿದರು.

ಸಾರ್ವಜನಿಕ ಪ್ರಚಾರ ಕಾರ್ಯಕ್ರಮಗಳ ಮೂಲಕ ಮತದಾರರ ನೋಂದಣಿ ಮತ್ತು ತಿದ್ದುಪಡಿ ಕುರಿತು ಮಾಹಿತಿ ನೀಡುವಂತೆ ಸೂಚಿಸಿದರು.

ಇದಲ್ಲದೆ ವಿವಿಧ ಇಲಾಖೆಗಳ ವ್ಯಾಪ್ತಿಯಲ್ಲಿರುವ ಕೆರೆಗಳು ಮತ್ತು ಇತರ ಸಾರ್ವಜನಿಕ ಆಸ್ತಿಗಳ ಮೇಲೆ ಯಾವುದೇ ಒತ್ತುವರಿ ಆಗದಂತೆ ಅಧಿಕಾರಿಗಳು ಕ್ರಮವಹಿಸಬೇಕು. ಸರ್ವೇ ಇಲಾಖೆಯ ಮೂಲಕ



ಅಳತೆ ಕಾರ್ಯ ನಡೆಸಿ, ಸಂಬಂಧಿತ ದಾಖಲೆಗಳನ್ನು ನವೀಕರಿಸಿ ಸೂಕ್ತ ದಾಖಲಾತಿಗಳನ್ನು ನಿರ್ವಹಿಸುವಂತೆ ತಿಳಿಸಿದರು.

ಕಾರ್ಯನಿರ್ವಾಹಕ ಅಧಿಕಾರಿಗಳಾದ ಯಶಂತಕುಮಾರ ಮಾತನಾಡಿ, ಗ್ರಾಮೀಣ ಪ್ರದೇಶಗಳಲ್ಲಿಕುಡಿಯುವನೀರಿನಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು ನಿಯಮಿತವಾಗಿ ನೀರಿನ ಪರೀಕ್ಷೆಗಳನ್ನು ನಡೆಸಬೇಕು ಎಂದರು. ನೀರನ್ನು ಕುದಿಸಿ ಆರಿಸಿ ಕುಡಿಯುವ ಕುರಿತು ಜಿಂಗಲ್ಸ್, ಆಡಿಯೋ ಸಂದೇಶಗಳು ಹಾಗೂ ಇತರ ಜಾಗೃತಿ ಕಾರ್ಯಕ್ರಮಗಳ ಮೂಲಕ ಸಾರ್ವಜನಿಕರಿಗೆ ಮಾಹಿತಿ ನೀಡಬೇಕು ಎಂದು ತಿಳಿಸಿದರು.

ಬರಗಾಲದ ಪರಿಸ್ಥಿತಿ ಎದುರಾದಲ್ಲಿ ಗ್ರಾಮೀಣ ಜನರಿಗೆ ಉದ್ಯೋಗ ಖಾತರಿ ಯೋಜನೆಯಡಿ ನಿರಂತರ ಉದ್ಯೋಗಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ಪಿಡಿಒಗಳು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಅವರು ಸೂಚಿಸಿದರು.

ಸಭೆಯಲ್ಲಿ ಕೃಷಿ ಇಲಾಖೆಯ ಉಪನಿರ್ದೇಶಕರಾದ ಸಲೀಮ್ ಸಂಗತ್ರಾಸ್ ಆಡಳಿತಾಧಿಕಾರಿಗಳು, ಪಿಡಿಒಗಳು, ತಾಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಸೋಯಾಬಿನ್ ಬೆಳೆಗೆ ರೋಗ: ಪೀಡೆ ಸಮೀಕ್ಷೆ ತಂಡ ಭೇಟಿ

• **ಬೆಳಗಾವಿ:** ತಾಲೂಕಿನ ಕೆಲವು ಗ್ರಾಮಗಳ ಕೃಷಿ ಪ್ರದೇಶಗಳಿಗೆ ಜಂಟಿ ಕೃಷಿ ನಿರ್ದೇಶಕರಾದ ಎಚ್ .ಡಿ.ಕೋಳೇಕರ ಅವರನ್ನು ಒಳಗೊಂಡ ಸರ್ವೇಕ್ಷಣಾ ತಂಡವು ಪೀಡೆ ಸರ್ವೇಕ್ಷಣೆ ಕೈಗೊಂಡಿತು.

ಕೆಲ ಕೃಷಿ ಪರದೇಶಗಳಲ್ಲಿ ಸೋಯಾ ಅವರೆಯಲ್ಲಿ ಅಲ್ಲಲ್ಲಿ ಕಾಂಡ ಕೊರಕ ಮತ್ತು ಹಸಿರುಕಾಯಿ ಕೊರಕ, ಹೆಲಿಕೊವ ಕೀಟಭಾದೆ ಕಂಡುಬಂದಿದ್ದು, ಇದನ್ನು ನಿರ್ವಹಿಸಲು ಮುಂಜಾಗ್ರತಾ ಕ್ರಮವಾಗಿ ರೈತ ಬಾಂಧವರು ಹಸಿರುಕಾಯಿ ಕೊರಕ, ಹೆಲಿಕೊವ ಕೀಟದ ಹತೋಟಿಗಾಗಿ ಕ್ಲೋರಾಂಟ್ರನಿಲಿ ಪ್ರೋಲೀಲ್ ನೀರಿನಲ್ಲಿ ಕರಗುವ ರಸಗೊಬ್ಬರವನ್ನು 5 ಗ್ರಾಂ ಪ್ರತಿ ಲೀಟರ ನೀರಿಗೆ ಬೆರೆಸಿ ಸಿಂಪಡಿಸಬೇಕು.

ಪ್ರತಿ ಎಕರೆಗೆ 5 ರಿಂದ 8 ಹೆಲಿಲ್ಯೂರ್ ಮೋಹಕ ಬಲೆಗಳನ್ನು ಕೀಟದ ಹತೋಟಿಗೆ ಬಳಸುವುದು. ಕಾಂಡ ಕೊರಕ ಹತೋಟಿಗೆ ಥಿಯಾಮೆಥಾಕ್ಸಮ್ 12.6%+ ಲ್ಯಾಂಬ್ಡಾ ಸೈಹಲೋಥ್ರಿನ್ 9.5% 1ಮಿ.ಲೀ. ಪ್ರತಿ ಲೀಟರ್ ನೀರಿಗೆ ಬೆರಸಿ ಸಿಂಪರಣೆ ಮಾಡಬೇಕು.

ಸ್ಕ್ಲಿರೋಷಿಯಂ ಕಾಂಡ ಕೊಳೆ ರೋಗ ಅಲ್ಲಲ್ಲಿ ಕಂಡು ಬಂದಿದ್ದು, ಕಾರ್ಬಾಕ್ಸಿನ್ 37.5%+ಥೈರಮ್37.5% (ವಿಟಾವ್ಯಾಕ್ಸಪೌಡರ) 2 ಗ್ರಾಂ ಪ್ರತಿ ಲೀಟರ್ ನೀರಿಗೆ ಬೆರೆಸಿ ರೋಗ ಕಂಡು ಬಂದ ಗಿಡದ ಸುತ್ತಲಿನ ನೆಲವನ್ನು ಔಷಧಿಯಿಂದ ಒದ್ದೆ ಮಾಡಬೇಕು.

ಔಷಧಿ ಸಿಂಪರಣೆ ಮಾಡುವಾಗ ರೈತರು ದಯವಿಟ್ಟು ಸೂಕ್ತ ಸುರಕ್ಷಾ ಕ್ರಮಗಳನ್ನು ಅನುಸರಿಸುವುದು ಹಾಗೂ ಗಾಳಿಯ ವಿರುದ್ಧ ದಿಕ್ಕಿನಲ್ಲಿ ಸಿಂಪರಣೆ ಕೈಗೊಳ್ಳಬಾರದಂತೆ ಈ ಮೂಲಕ ಕೋರಲಾಗಿದೆ. ಬೆಳೆಗಳಲ್ಲಿ ಕಳೆ ನಿಯಂತ್ರಣ ಮತ್ತು ಮಣ್ಣಿನ ತೇವಾಂಶ ರಕ್ಷಣೆಗಾಗಿ ಸೂಕ್ತ ಸಮಯದಲ್ಲಿ ಎಡೆ ಕುಂಟೆ ಕಾರ್ಯ ಕೈಗೊಳ್ಳುವುದು ಮತ್ತು ಸಾಧ್ಯವಾದಲ್ಲಿ ಬೆಳೆ ಒಣಗದಂತೆ ರಕ್ಷಿಸಲು ರಕ್ಷಣಾತ್ಮಕ ನೀರಾವರಿ ಒದಗಿಸಲು ತಿಳಿಸಲಾಯಿತು.



ಹಾರೂಗೇರಿಯಲ್ಲಿ ಮಳೆಗಾಗಿ ಕತ್ತೆ ಮದುವೆ

• **ಹಾರೂಗೇರಿ:** ಅನ್ನದಾತನ ಹಾಗೂ ಪ್ರತಿ ಜೀವಿಯ ಜೀವಾಳವಾಗಿರುವ ಮಳೆರಾಯನ ಆಗಮನಕ್ಕಾಗಿ ಹಾಗೂ ಅವಶ್ಯವಿರುವ ಮಳೆ ಸಕಾಲಕ್ಕೆ ಆಗಲಿ ಎಂದು ಗುರುವಾರ ಹಾರೂಗೇರಿಯ ಸೌದತ್ತಿಯವರ ತೋಟ ಕಮತದಲ್ಲಿ ಮಲಗೌಡ ಕಲಗೌಡ ಪಾಟೀಲ ಹಾಗೂ ಮಲ್ಲನಗೌಡ ಬಸಗೌಡ ಪಾಟೀಲರ ನೇತೃತ್ವದಲ್ಲಿ ಹಾಗೂ ಗ್ರಾಮದ ಗುರುಹಿರಿಯರ ಸಮ್ಮುಖದಲ್ಲಿ ಕತ್ತೆಗಳ ಮದುವೆ ಮಾಡಲಾಯಿತು. ಈ ಸಂದರ್ಭದಲ್ಲಿ ಹಣಮಂತ ಮಹಾರಾಜರು,ಪ್ರಕಾಶಗೌಡ ಪಾಟೀಲ, ಮಹಾಂತೇಶಗೌಡ ಪಾಟೀಲ,ದಾನಯ್ಯ ಮಠಪತಿ,ಸೌದತ್ತಿ ಬಂಧುಗಳು ಹಾಗೂ ಅನೇಕ ಜನ ಉಪಸ್ಥಿತರಿದ್ದರು



ಎಂಇಎಸ್ ಪ್ರತಿಭಟನೆಗೆ ಅನುಮತಿ ನೀಡದಿರಲು ಆಗ್ರಹ

• **ಬೆಳಗಾವಿ:** ಜೂನ್ 22ರಂದು ಬೆಳಗಾವಿಯಲ್ಲಿ ಕನ್ನಡ ಕಡ್ಡಾಯದ ವಿರುದ್ಧ ಎಂಇಎಸ್ ನಾಯಕರು ನಡೆಸಲು ಉದ್ದೇಶಿಸಿರುವ ಪ್ರತಿಭಟನೆಗೆ ಯಾವುದೇ ಕಾರಣಕ್ಕೂ ಅನುಮತಿ ನೀಡಬಾರದೆಂದು ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ (ಕನ್ನಡಪರ ಸಂಘಟನೆಗಳ ಒಕ್ಕೂಟ) ಜಿಲ್ಲಾ ಘಟಕದ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಗುರುವಾರ ಕರವೇ ಕಾರ್ಯಕರ್ತರು ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟಿಸಿ, ಕಳೆದ ಹಲವು ದಶಕಗಳಿಂದ ಗಡಿಭಾಗದಲ್ಲಿ ಭಾಷಾ ಆಧಾರಿತ ರಾಜಕಾರಣ ನಡೆಸುತ್ತಾ ಬಂದಿರುವ ಎಂಇಎಸ್ ನಾಯಕರು ಮತ್ತೆ ಬೆಳಗಾವಿಯಲ್ಲಿ ಚಟುವಟಿಕೆಗಳನ್ನು ಆರಂಭಿಸಿದ್ದು, ಇದರಿಂದ ಶಾಂತಿ-ಸುವ್ಯವಸ್ಥೆಗೆ ಧಕ್ಕೆಯಾಗುವ ಸಾಧ್ಯತೆ ಇದೆ ಎಂದು ಅಸಮಾಧಾನ ಹೊರ ಹಾಕಿದರು.

ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗವಾಗಿದ್ದು, ಕನ್ನಡ ಭಾಷೆ, ನೆಲ, ಜಲ ಹಾಗೂ ಸಂಸ್ಕೃತಿಗೆ ಗೌರವ ನೀಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಇಂತಹ ಸಂದರ್ಭದಲ್ಲಿ ಕನ್ನಡ ಕಡ್ಡಾಯದ ವಿರುದ್ಧ ಪ್ರತಿಭಟನೆ ನಡೆಸಲು ಮುಂದಾಗಿರುವ ಎಂಇಎಸ್ ನಾಯಕರನ್ನು ಮುಂಜಾಗ್ರತಾ ಕ್ರಮವಾಗಿ ಬಂಧಿಸಬೇಕು ಹಾಗೂ ಅವರ ಪ್ರತಿಭಟನೆಗೆ ಅನುಮತಿ ನಿರಾಕರಿಸಬೇಕು ಎಂದು ಮನವಿಯಲ್ಲಿ ಒತ್ತಾಯಿದರು. ಈ ವೇಳೆ ಕರವೇ ರಾಜ್ಯ ಸಂಚಾಲಕ ಸುರೇಶ್ ಗವನ್ನವರ, ಜಿಲ್ಲಾ ಅಧ್ಯಕ್ಷ ದೀಪಕ ಗುಡಗನಟ್ಟಿ, ಮಹಿಳಾ ಕಾರ್ಯಕರ್ತರು ಸೇರಿದಂತೆ ಹಲವರು ಕಾರ್ಯಕರ್ತುರು ಪಾಲ್ಗೊಂಡಿದ್ದರು.



ಸ್ವಾಭಿಮಾನಿ ರ್‍ಯಾಲಿಯ ಎಚ್ಚರಿಕೆ

ರಾಜಕೀಯ ಒತ್ತಡಗಳಿಗೆ ಮಣಿದು ಜಿಲ್ಲಾಡಳಿತ ಎಂಇಎಸ್ ಪ್ರತಿಭಟನೆಗೆ ಅನುಮತಿ ನೀಡಿದಲ್ಲಿ, ಅದಕ್ಕೆ ಪ್ರತಿಯಾಗಿ ಜೂನ್ 22ರಂದು ಕನ್ನಡವೇ ಸಾರ್ವಭೌಮ ಎಂಬ ಘೋಷಣೆಯೊಂದಿಗೆ ಕನ್ನಡ ಸ್ವಾಭಿಮಾನಿ ರ್‍ಯಾಲಿಯನ್ನು ಬೆಳಗಾವಿಯಲ್ಲಿ ಹಮ್ಮಿಕೊಳ್ಳಲಾಗುವುದು ಎಂದು ಕರವೇ ಜಿಲ್ಲಾಧ್ಯಕ್ಷ ದೀಪಕ್ ಗುಡಗನಟ್ಟಿನ ಅವರ ನೇತೃತ್ವದಲ್ಲಿ ಎಚ್ಚರಿಕೆ ನೀಡಲಾಗಿದೆ.

ಮಹಾರಾಣಾ ಪ್ರತಾಪ್ ಸಿಂಹ ಜಯಂತಿ: ಸ್ವಚ್ಛತಾ ಕಾರ್ಯಕ್ರಮ

• **ಬೆಳಗಾವಿ:** ಮಹಾರಾಣಾ ಪ್ರತಾಪ್ ಸಿಂಹ ಮಹಾರಾಜರ ಜಯಂತಿಯ ನಿಮಿತ್ತವಾಗಿ ಸರ್ವ ಲೋಕ ಸೇವಾ ಫೌಂಡೇಶನ್, ರೇವಣಸಿದ್ದೇಶ್ವರ ಜ್ಯೋತಿ ಶಾಲೆ ಹಾಗೂ ಇನ್ನೋವೇಟಿವ್ ಪ್ರಿಂಟಿಂಗ್ ಪ್ರೆಸ್ ಇವರ ಸಂಯುಕ್ತ ಆಶ್ರಯದಲ್ಲಿ ಗುರುವಾರ ಬೆಳಗಾವಿ ಮಹಾನಗರದ ಸದಾಶಿವನಗರದಲ್ಲಿರುವ ಮರಗಾಯಿ ದೇವಸ್ಥಾನದ ಪರಿಸರದಲ್ಲಿ ಸ್ವಚ್ಛತಾ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ದೇವಸ್ಥಾನದ ಸುತ್ತಮುತ್ತಲಿನ ಪ್ರದೇಶವನ್ನು ಸ್ವಚ್ಛಗೊಳಿಸಿ, ಸಾರ್ವಜನಿಕರಲ್ಲಿ ಸ್ವಚ್ಛತೆ ಮತ್ತು ಪರಿಸರ ಸಂರಕ್ಷಣೆಯ ಕುರಿತು ಜಾಗೃತಿ ಮೂಡಿಸಲಾಯಿತು. ಸಮಾಜದಲ್ಲಿ ಸ್ವಚ್ಛತೆಯ ಮಹತ್ವವನ್ನು ತಿಳಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ನೀಲಕಂಠಯ್ಯ ಆರ್. ಹಿರೇಮಠ, ವೀರೇಶ್ ಬಸಯ್ಯ ಹಿರೇಮಠ್, ಸಂತೋಷ್ ದೇಶ್ನೂರ್, ದೇವಪ್ಪ ಕಾಂಬಳೆ, ರವಿಕಿರಣ್ ಹೆಗ್ಗೇರಿ, ಗೌರೀಶ್ ಹಿರೇಮಠ್ ಸೇರಿದಂತೆ ಹಲವರು ಭಾಗವಹಿಸಿ ಕಾರ್ಯಕ್ರಮದ ಯಶಸ್ಸಿಗೆ ಕೈಜೋಡಿಸಿದರು.

ಸಂಘಟಕರು ಮಾತನಾಡಿ, ಮಹಾನ್ ಯೋಧ ಮಹಾರಾಣಾ ಪ್ರತಾಪ್ ಸಿಂಗ್ ಅವರ ಆದರ್ಶಗಳನ್ನು ಸ್ಮರಿಸುತ್ತಾ ಸಮಾಜಮುಖಿ ಚಟುವಟಿಕೆಗಳ ಮೂಲಕ ಅವರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸುವುದು ಅಗತ್ಯ ಎಂದು ತಿಳಿಸಿದರು.



ವಿದ್ಯುತ್ ಖಾಸಗೀಕರಣಕ್ಕೆ ವಿರೋಧ

• **ಬೆಳಗಾವಿ:** ಹೆಸ್ಕಾಂ ವ್ಯಾಪ್ತಿಯ ಜಿಲ್ಲೆಗಳಲ್ಲಿ ವಿದ್ಯುತ್ ವಿತರಣಾ ಪರವಾನಿಗೆ ಕೋರಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಲ್ಲಿಸಿರುವ ಅರ್ಜಿ ವಿರುದ್ಧ ಹೆಸ್ಕಾಂ ನೌಕರರು ಹಾಗೂ ಗ್ರಾಹಕರ ಪರವಾಗಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ತಕರಾರು ಸಲ್ಲಿಸಲಾಗಿದೆ.

ಅರ್ಜಿಯಲ್ಲಿ ಖಾಸಗಿ ಸಂಸ್ಥೆಗಳು ಲಾಭದಾಯಕ ನಗರ ಹಾಗೂ ಕೈಗಾರಿಕಾ ಪ್ರದೇಶಗಳ ಗ್ರಾಹಕರನ್ನು ಮಾತ್ರ ಆಯ್ಕೆ ಮಾಡಿಕೊಂಡು ಸೇವೆ ನೀಡಲು ಮುಂದಾಗುತ್ತಿದ್ದು, ಇದರಿಂದ ಗ್ರಾಮೀಣ ಪ್ರದೇಶಗಳಿಗೆ ನಿರಂತರ ಸೇವೆ ಒದಗಿಸುತ್ತಿರುವ ಹೆಸ್ಕಾಂ ಸೇರಿದಂತೆ ಸಾರ್ವಜನಿಕ ವಿದ್ಯುತ್ ಸಂಸ್ಥೆಗಳಿಗೆ ಭಾರೀ ಆರ್ಥಿಕ ನಷ್ಟ ಉಂಟಾಗುವ ಸಾಧ್ಯತೆ ಇದೆ ಎಂದು ಹೆಸ್ಕಾಂ ಸಿಬ್ಬಂದಿಗಳು ಬೆಳಗಾವಿ ನಗರದ ಹೆಸ್ಕಾಂ ಪ್ರದಾನ ಕಛೇರಿಯ ಆವರಣದಲ್ಲಿ ಪ್ರತಿಭಟನೆ ನಡೆಸಿದರು.

ಹೆಸ್ಕಾಂ ಸಂಸ್ಥೆಯು ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ನಿರ್ಮಿಸಿರುವ ವಿದ್ಯುತ್ ಕಂಬಗಳು, ಉಪಕೇಂದ್ರಗಳು ಹಾಗೂ ವಿತರಣಾ ಜಾಲವನ್ನು ಖಾಸಗಿ ಕಂಪನಿಗಳು ಬಳಸಿಕೊಳ್ಳಲು ಅವಕಾಶ ನೀಡುವುದು ಸಾರ್ವಜನಿಕ ಆಸ್ತಿಯನ್ನು ಖಾಸಗಿಯವರಿಗೆ ಹಸ್ತಾಂತರಿಸಿದಂತಾಗುತ್ತದೆ ಎಂದು ಪ್ರತಿಭಟನೆಯಲ್ಲಿ ಅಸಮಾಧಾನ ಹೊರ ಹಾಕಿದರು.



ಹೆಸ್ಕಾಂನ ಆರ್ಥಿಕ ಸ್ಥಿರತೆ, ಸಾವಿರಾರು ವಿದ್ಯುತ್ ನೌಕರರ ಉದ್ಯೋಗ ಭದ್ರತೆ ಹಾಗೂ ಗ್ರಾಮೀಣ ಗ್ರಾಹಕರ, ವಿಶೇಷವಾಗಿ ರೈತರ ಹಿತಾಸಕ್ತಿಯನ್ನು ಪರಿಗಣಿಸಿ, ಟಾಟಾ ಪವರ್ ಕಂಪನಿ ಲಿಮಿಟೆಡ್ ಸಲ್ಲಿಸಿರುವ ವಿದ್ಯುತ್ ವಿತರಣಾ ಪರವಾನಿಗೆ ಅರ್ಜಿಯನ್ನು ತಿರಸ್ಕರಿಸುವಂತೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಪ್ರತಿಭಟನೆಯ ಮೂಲಕ ಮನವಿ ಮಾಡಿಕೊಂಡರು. ಈ ವೇಳೆ ಹೆಸ್ಕಾಂನ ನೂರಾರು ಸಿಬ್ಬಂದಿಗಳು ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ಹೊಸ ಕಾನೂನುಗಳ ಮಾಹಿತಿ ಪಡೆದ ವಿದ್ಯಾರ್ಥಿಗಳು

• **ಬೆಳಗಾವಿ:** ಕರ್ನಾಟಕ ಲಾ ಸೊಸೈಟಿಯ ರಾಜಾ ಲಖಮಗೌಡ ಕಾನೂನು ಮಹಾವಿದ್ಯಾಲಯದ ಸೆಮಿನಾರ್ ಹಾಗೂ ಅತಿಥಿ ಉಪನ್ಯಾಸ ವಿಭಾಗದ ವತಿಯಿಂದ ಎಂ.ಕೆ. ನಂಬಿಯಾರ್ ಮೂಟ್ ಕೋರ್ಟ್ ಸಭಾಂಗಣದಲ್ಲಿ ನೂತನ ಕಾರ್ಮಿಕ ಸಂಹಿತೆ ಕುರಿತು ವಿಶೇಷ ಅತಿಥಿ ಉಪನ್ಯಾಸವನ್ನು ಆಯೋಜಿಸಲಾಗಿತ್ತು.

ಕಾನೂನು ವಿದ್ಯಾರ್ಥಿಗಳಲ್ಲಿ ನೂತನ ಕಾರ್ಮಿಕ ಸಂಹಿತೆಯ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ವಿಶೇಷವಾಗಿ ವೇತನ ಸಂಹಿತೆ2019 ಹಾಗೂ ವಿವಿಧ ಕಾರ್ಮಿಕ ಕಾನೂನುಗಳ ಏಕೀಕರಣ ಮತ್ತು ರದ್ದತಿಯ ಮೂಲಕ ಜಾರಿಗೆ ಬಂದಿರುವ ಮಹತ್ವದ ತಿದ್ದುಪಡಿಗಳ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಾಯಿತು. ಕಾರ್ಮಿಕ ಮತ್ತು ಕೈಗಾರಿಕಾ ಸಂಬಂಧಗಳು ವಿಷಯವನ್ನು ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಈ ಉಪನ್ಯಾಸ ಅತ್ಯಂತ ಉಪಯುಕ್ತವಾಗಿತ್ತು.

ಎಲ್.ಎಲ್.ಬಿ., ಬಿ.ಎ. ಎಲ್.ಎಲ್.ಬಿ. ಹಾಗೂ ಬಿ.ಬಿ.ಎ. ಎಲ್.ಎಲ್.ಬಿ. ವಿಭಾಗಗಳ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು.ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಬೆಳಗಾವಿ ಪ್ರಾದೇಶಿಕ ಉಪ ಕಾರ್ಮಿಕ ಆಯುಕ್ತ ಡಿ.ಬಿ. ನಾಗೇಶ್ ಅವರು ನೂತನ ವೇತನ ಸಂಹಿತೆ2019ರ ಕುರಿತು ಸಮಗ್ರ ಮಾಹಿತಿ ನೀಡಿದರು. ಉದ್ಯೋಗದಾತಉದ್ಯೋಗಿ ಸಂಬಂಧ, ಕಾರ್ಮಿಕರ ವರ್ಗೀಕರಣ, ಗುತ್ತಿಗೆ ಕಾರ್ಮಿಕರು, ವೇತನ, ವೇತನ ನಿಗದಿ, ಪಾವತಿ ವಿಧಾನ, ಸೂಕ್ತ ಪ್ರಾಧಿಕಾರ, ಬೋನಸ್ ಪಾವತಿ, ಇನ್ಸ್ಪೆಕ್ಟರ್-ಕಮ್-ಫೆಸಿಲಿಟೇಟರ್, ಅಪರಾಧಗಳು ಮತ್ತು ದಂಡಗಳು, ಕೈಗಾರಿಕಾ ನ್ಯಾಯಮಂಡಳಿಗಳ ಮುಂದೆ ದಾವೆ ಸಲ್ಲಿಸುವ ವಿಧಾನ ಸೇರಿದಂತೆ ವಿವಿಧ ಪ್ರಮುಖ ಅಂಶಗಳನ್ನು ಅವರು ವಿವರಿಸಿದರು.



ನೂತನ ಕಾರ್ಮಿಕ ಕಾನೂನುಗಳು ಕಾರ್ಮಿಕ ಕಾನೂನು ವ್ಯವಸ್ಥೆಯನ್ನು ಹೇಗೆ ಸರಳೀಕರಿಸಿವೆ ಹಾಗೂ ಕಾರ್ಮಿಕರು, ಉದ್ಯೋಗದಾತರು ಮತ್ತು ಕಾನೂನು ವೃತ್ತಿಪರರ ಮೇಲೆ ಅದರ ಪ್ರಾಯೋಗಿಕ ಪರಿಣಾಮಗಳೇನು ಎಂಬುದರ ಕುರಿತು ಅವರು ಬೆಳಕು ಚೆಲ್ಲಿದರು. ಸಂವಾದಾತ್ಮಕ ಉಪನ್ಯಾಸದ ಮೂಲಕ ವಿದ್ಯಾರ್ಥಿಗಳು ಸಮಕಾಲೀನ ಕಾರ್ಮಿಕ ಕಾನೂನು ಸುಧಾರಣೆಗಳ ಬಗ್ಗೆ ಆಳವಾದ ತಿಳುವಳಿಕೆಯನ್ನು ಪಡೆದುಕೊಂಡರು.

ಆರ್.ಎಲ್. ಕಾನೂನು ಮಹಾವಿದ್ಯಾಲಯದ ಆಡಳಿತ ಮಂಡಳಿಯ ಅಧ್ಯಕ್ಷ ಆರ್.ಎಸ್. ಮುತಾಲಿಕ್ ಹಾಗೂ ಪ್ರಾಂಶುಪಾಲ ಡಾ. ಎ.ಎಚ್. ಹವಾಲ್ದಾರ್ ಅವರ ಮಾರ್ಗದರ್ಶನದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸೆಮಿನಾರ್ ಹಾಗೂ ಅತಿಥಿ ಉಪನ್ಯಾಸ ವಿಭಾಗದ ಅಧ್ಯಕ್ಷೆ ಪ್ರೊ. ಶಿಲ್ಪಾ ಎ. ರೈಕರ್ ಅವರು ಕಾರ್ಯಕ್ರಮದ ಸಂಯೋಜನೆ ಮಾಡಿದ್ದರು. ಪ್ರೊ. ಚೇತನ್ಕುಮಾರ್ ವಂದಿಸಿದರು.

ಕ್ರೀಡೆಯೊಂದಿಗೆ ಓದಿನತ್ತಲೂ ಗಮನಹರಿಸಿ

• **ಗೋಕಾಕ:** ವಿದ್ಯಾರ್ಥಿಗಳು ಕ್ರೀಡಾ ಚಟುವಟಿಕೆಗಳ ಜೊತೆ ವಿದ್ಯಾಭ್ಯಾಸದ ಕಡೆ ಗಮನ ಹರಿಸಿ ಉತ್ತಮ ಸಾಧಕರಾಗಬೇಕು ಎಂದು ನಗರಸಭೆ ಪೌರಾಯುಕ್ತ ರವಿ ರಂಗಸುಭೆ ಹೇಳಿದರು.


ಗುರುವಾರ ನಗರದ ಶ್ರೀ ಚನ್ನಬಸವೇಶ್ವರ ವಿದ್ಯಾಪೀಠ ಗೋಕಾಕ ಕನ್ನಡ ಮತ್ತು ಆಂಗ್ಲ ಮಾಧ್ಯಮ ಶಾಲೆಗಳ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಉದ್ಘಾಟನಾ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಪರಿಸದ ಕಡೆಗೆ ಸಹ ಗಮನ ಹರಿಸಿ ನಗರಸಭೆಯಿಂದ ದಿನಾಲೂ ಬರುವ ಕಸದ ಗಾಡಿಯಲ್ಲಿಯೇ ಕಸವನ್ನು ವಿಂಗಡಿಸಿ ನೀಡುವಂತೆ ಪಾಲಕರಿಗೆ ತಿಳಿಸಿ ಹೇಳಬೇಕು. ವಿದ್ಯಾರ್ಥಿ ದಿಸೆಯಲ್ಲಿಯೇ ಪರಿಸದ ಬಗ್ಗೆ ಕಾಳಜಿ ವಹಿಸಿ ಪರಿಸರವನ್ನು ಸಂರಕ್ಷಿಸುವಂತಾಗಬೇಕುಶ ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ನಿರ್ದೇಶಕ ವಿವೇಕ ಜತ್ತಿ, ಪ್ರಾಚಾರ್ಯ ಎಸ್ ಕೆ ಮಠದ, ಆಡಳಿತಾಧಿಕಾರಿ ಅಡಿವೇಶ ಗವಿಮಠ ಉಪಸ್ಥಿತರಿದ್ದರು.



ಸೈನ್ಯಕ್ಕೆ ಸೇರುವುದು ಹೆಮ್ಮೆ



• **ಕಕಮರಿ** : ಯುವಕರು ಭಾರತಾಂಬೆಯ ಸೇವೆಗೈಯಲು ಸೈನ್ಯಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಿರುವುದು ನಮಗೆಲ್ಲರೂ ಹೆಮ್ಮೆಯ ಸಂಗತಿ. ತಾಯಿ ಭಾರತಮಾತೆಯು ಎಲ್ಲರನ್ನು ಕಾಪಾಡಲಿ, ದೇಶಕ್ಕೆ ನಿಮ್ಮ ಉತ್ತಮ ಸೇವೆ ದೊರಕಲಿ ಎಂದು ಧರ್ಮೋ ರಕ್ಷತಿ: ರಕ್ಷಿತ: ಸಂಘಟನೆಯ ಮುಖ್ಯಸ್ಥ ಮಲ್ಲಿಕಾರ್ಜುನ ನಾಟೀಕಾರ ಹೇಳಿದರು.

ಅವರು ಗ್ರಾಮದ ಯುವಕ ಅರುಣ ಕಲ್ಲಪ್ಪ ಮಠಾಣೆ ಭಾರತೀಯ ವಾಯುಪಡೆ ಇಲಾಖೆ ಹುದ್ದೆಗೆ ಆಯ್ಕೆಯಾದ ಹಿನ್ನಲೆಯಲ್ಲಿ ಧರ್ಮೋ ರಕ್ಷತಿ ರಕ್ಷಿತ: ಸೇವಾ ಸಮಿತಿಯಿಂದ ಸತ್ಕರಿಸಿ ಮಾತನಾಡಿದರು.

ಲಾಯಪ್ಪ ಬಾಳಿಕಾಯಿ, ಬಾಹುಬಲಿ ಸವದತ್ತಿ, ಸಹಜಾನಂದ ಬಸರಗಿ, ಸಿದ್ದು ಬಿಳ್ಳೂರ, ಮಲ್ಲಿಕಾರ್ಜುನ ಪೂಜಾರಿ, ಮಲ್ಲಿಕಾರ್ಜುನ ಗೆಜ್ಜಿ, ಸಂದೀಪ ದುಂಡಿ, ಸಿದ್ದಪ್ಪ ಅಡಹಳ್ಳಿ, ಶಿವಾನಂದ ಬಸರಗಿ, ಮಹಾಂತೇಶ ದುಂಡಿ, ರಾಜಕುಮಾರ ಬಸರಗಿ, ಚಿದಾನಂದ ಬಿಳ್ಳೂರ, ಸಂತೋಷ ಪಾಟೀಲ, ಶ್ರೀದೇವಿ ಮಠಾಣೆ, ಅನುಜಾಕ್ಷಿ ಮೈಗೂರ, ಇತರರಿದ್ದರು.

ಕಿರುಸುದ್ದಿ

ಮೊಬೈಲ್ ಸಂಖ್ಯೆ ಜೋಡಣೆ ಕಡ್ಡಾಯ

•**ಬೆಳಗಾವಿ:** ಕೆಯುಡಬ್ಲ್ಯುಎಸ್ ಎಮ್‌ಬಿ. 24★7 ಕುಡಿಯುವ ನೀರು ಸರಬರಾಜು ಯೋಜನೆಯಡಿ ಬಿಬಿಪಿಎಸ್ ಸೇರಿದಂತೆ ಆನ್ಲೈನ್ ಮೂಲಕ ನೀರಿನ ಬಿಲ್ ಪಾವತಿಸಲು ಹಾಗೂ ವಿವಿಧ ಸೇವಾ ಸಂದೇಶಗಳನ್ನು ಪಡೆಯಲು ಮೊಬೈಲ್ ಸಂಖ್ಯೆಯನ್ನು ನೀರಿನ ಸಂಪರ್ಕದೊಂದಿಗೆ ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿದೆ. ನೀರು ಸರಬರಾಜು ವೇಳಾಪಟ್ಟಿ ಮಾಹಿತಿ, ನೀರು ಸರಬರಾಜು ವ್ಯತ್ಯಯ / ತುರ್ತು ನಿರ್ವಹಣಾ ಮಾಹಿತಿ, ಬಿಲ್ ಪಾವತಿ ಜ್ಞಾಪನ, ಆನ್ಲೈನ್ ಬಿಲ್ ಪಾವತಿ ಮಾಹಿತಿ, ದೂರು ದಾಖಲಾತಿ ಹಾಗೂ ಪರಿಹಾರ ಮಾಹಿತಿ, ಇತರೆ ಪ್ರಮುಖ ಸಾರ್ವಜನಿಕ ಪ್ರಕಟಣೆಗಳನ್ನು ಮೊಬೈಲ್ ಸಂಖ್ಯೆ ನೋಂದಾಯಿಸಿದ್ದಲ್ಲಿ ಮಾತ್ರ ಪಡೆಯಬಹುದಾಗಿದೆ. ಮೊಬೈಲ್ ಸಂಖ್ಯೆಯನ್ನು ನವೀಕರಿಸುವ ವಿಧಾನಗಳು: ನಿಮ್ಮ ಪ್ರದೇಶದ ಬಿಲ್ ಕಲೆಕ್ಟರ್ ಅವರಿಗೆ ಮಾಹಿತಿ ನೀಡಿ, ಟೋಲ್ ಫ್ರೀ ಸಂಖ್ಯೆ (1800 425 5656) ಗೆ ಕರೆ ಮಾಡಿ ಹತ್ತಿರದ ಗ್ರಾಹಕ ಸೇವಾ ಕೇಂದ್ರಕ್ಕೆ ಭೇಟಿ ನೀಡಿ ನಿಮ್ಮ ಮೊಬೈಲ್ ಸಂಖ್ಯೆಯನ್ನು ನೋಂದಾಯಿಸಿ, ನವೀಕರಿಸಿಕೊಳ್ಳಿ ಎಂದು ಕೆ.ಯು.ಡಬ್ಲ್ಯು.ಎಸ್.ಎಮ್.ಬಿ. ಯ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುಂದು ಕೊರತೆ ಸಭೆ ನಾಳೆ

•**ಸವದತ್ತಿ:** ಹೆಸ್ಕಾಂ ಸವದತ್ತಿ ಉಪ ವಿಭಾಗ ಕಚೇರಿಯಲ್ಲಿ ಜೂ.20ರಂದು ಬೆಳಗ್ಗೆ 10 ಗಂಟೆಗೆ ಗ್ರಾಹಕರ ಕುಂದು ಕೊರತೆ ವಿಚಾರಣಾ ಸಭೆಯನ್ನು ಹಮ್ಮಿಕೊಳ್ಳಲಾಗಿದೆ.ಹೆಸ್ಕಾಂ ಸವದತ್ತಿ ಉಪ ವಿಭಾಗ ವ್ಯಾಪ್ತಿಯ ಗ್ರಾಹಕರು ನಮ್ಮ ಇಲಾಖೆಗೆ ಸಂಬಂಧಿಸಿದ ಕುಂದು ಕೊರತೆಗಳನ್ನು ಪರಿಹರಿಸಿಕೊಳ್ಳಬಹುದಾಗಿದೆ ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕಾರ್ಯ ಮತ್ತು ಪಾಲನೆ ಉಪ ವಿಭಾಗ ಸವದತ್ತಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಲೆಗೆ ಹೋಗಿದ್ದ ಶಿಕ್ಷಕ ನಾಪತ್ತೆ



•**ಹಿರೇಬಾಗೇವಾಡಿ:** ಜೂನ್ ಒಂದರಂದು ಶಾಲೆಗೆ ಹೋಗಿ ಬರುವುದಾಗಿ ಹೇಳಿ ಹೋದ ಇಲ್ಲಿಯ ಬಸವ ನಗರದ ಶಿಕ್ಷಕ ಮನೆಗೆ ಮರಳಿ ಬರದೆ ಕಾಣೆಯಾಗಿದ್ದಾರೆ. ಸಮೀಪದ ಹೊಳಿಹೊಸೂರಿನ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದ ಮಹಾಂತೇಶ ನಾಗಪ್ಪ ನಾಶಿ (54) ಇವರು ಈವರೆಗೂ ಮನೆಗೆ ಬರದೇ ಇದ್ದುದರಿಂದ ಇವರ ಎಲ್ಲ ಕಡೆ ಶೋಧ ನಡೆಸಿದ ಅವರ ಪತ್ನಿ ಮಹಾದೇವಿ ನಾಶಿ ಹಿರೇಬಾಗೇವಾಡಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ನೀಲಿ ಶರ್ಟ್ ಮತ್ತು ಕಪ್ಪು ಬಣ್ಣದ ಪ್ಯಾಂಟ್ ಧರಿಸಿರುವ ಅವರು ಕನ್ನಡ ಭಾಷೆ ಮಾತನಾಡುತ್ತಾರೆ. ಇವರ ಬಗ್ಗೆ ಮಾಹಿತಿ ಇದ್ದವರು ಹಿರೇಬಾಗೇವಾಡಿ ಪೊಲೀಸ್ ಠಾಣೆಯನ್ನು ಸಂಪರ್ಕಿಸುವಂತೆ ಕೋರಲಾಗಿದೆ.

ಅಪರಿಚಿತ ವ್ಯಕ್ತಿ ಸಾವು

•**ಬೆಳಗಾವಿ:** ಬೆಳಗಾವಿ ಬ್ಯಾರಿ ನಾಲೆ ಉಪ ಕಾಲುವೆಯಲ್ಲಿ ಅಪರಿಚಿತ ವ್ಯಕ್ತಿ ಬಿದ್ದು (ಅಂದಾಜು ವಯಸ್ಸು 40–45 ವರ್ಷ) ನೀರಿನಲ್ಲಿ ಮುಳುಗಿ, ಅಥವಾ ಆತ್ಮಹತ್ಯೆ ಮಾಡಿಕೊಂಡಾಗಿದೆ ಅಥವಾ ಇನ್ನಿತರ ಕಾರಣದಿಂದಾಗಿ ಮರಣ ಹೊಂದಿರುತ್ತಾನೆ. ಈ ಬಗ್ಗೆ ಶಹಾಪೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ. ಮೃತನ ಬಗ್ಗೆ ಹಾಗೂ ಆತನ ವಾರಸುದಾರರ ಬಗ್ಗೆ ಯಾವುದೇ ಮಾಹಿತಿ ದೊರಕಿರುವುದಿಲ್ಲ ಕಾರಣ ಶವವನ್ನು ಜಿಲ್ಲಾ ಆಸ್ಪತ್ರೆಯ ಶವಾಗಾರದ ಶೈತ್ಯಾಗಾರದಲ್ಲಿ ಇರಿಸಲಾಗಿರುತ್ತದೆ. ಮೃತ ವ್ಯಕ್ತಿಯ ಚಹರೆ: 5'4' ಪೂಟ ಎತ್ತರ, ಶವವು ಕೊಳತು ಉಬ್ಬಿದಂತಾಗಿದ್ದು ಚಹರೆ ಗುರುತು ಸಿಗುವದಿಲ್ಲ, ಕಂದು ಬಣ್ಣದ ಶರ್ಟ ಕಪ್ಪು ಬಣ್ಣದ ಪ್ಯಾಂಟ್ ಧರಿಸಿರುತ್ತಾನೆ. ಮೃತ ವ್ಯಕ್ತಿಯ ಬಗ್ಗೆ ಮಾಹಿತಿ ದೊರೆತಲ್ಲಿ ಶಹಾಪೂರ ಪೊಲೀಸ್ ಠಾಣೆ, ಶಹಾಪೂರ ಪೊಲೀಸ್ ಠಾಣೆ ಪಿ.ಐ ಸಂಪರ್ಕಿಸಬಹುದು ಎಂದು ಶಹಾಪೂರ ಪೊಲೀಸ್ ಠಾಣೆಯ ಪಿಎಸ್ಐ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ಸುದ್ದಿ

ಶಂಕರ ಈರಪ್ಪ ಬಡಿಗೇರ



•**ಯರಗಟ್ಟಿ:** ಸಮೀಪದ ಸೊಪ್ಪಡ್ಲ ಗ್ರಾಮದ ನಿವಾಸಿಯಾದ ವಿಶ್ವಕರ್ಮ ಸಮಾಜದ ಹಿರಿಯರು ಹಾಗೂ ಗ್ರಾಮದೇವಿ ಅರ್ಚಕರಾದ ಶಂಕರ ಈರಪ್ಪ ಬಡಿಗೇರ (50) ಮಂಗಳವಾರ ನಿಧನರಾಗಿದ್ದಾರೆ. ಮೃತರು ಪತ್ನಿ, ಮೂವರು ಪುತ್ರರು, ಸಹೋದರರು, ಸಹೋದರಿಯರು ಅಪಾರ ಬಂದು ಬಳಗವನ್ನು ಅಗಲಿದ್ದಾರೆ.



ಬೆಳಗಾವಿ: ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ವೃತ್ತಿ ಮಾರ್ಗದರ್ಶನ ಮತ್ತು ಉದ್ಯೋಗ ಕೋಶದ ವತಿಯಿಂದ, ಟಾಟಾ ಕಂಪನಿಗೆ ಆಯ್ಕೆಯಾಗಿರುವ ವಿದ್ಯಾರ್ಥಿನಿಯರಿಗಾಗಿ ಬೀಳ್ಕೊಡುಗೆ ಸಮಾರಂಭ ನಡೆಯಿತು.

ರಾಸಾಯನಿಕ ಗೊಬ್ಬರ ಕಡಿಮೆ ಬಳಸಿ

•**ನೇಸರಗಿ:** ಖೇತ್ ಬಚಾವೋ ಅಭಿಯಾನ''ದ ಅಂಗವಾಗಿ ಐಸಿಎಆರ್ ಕೆಎಲ್ಇ ಕೃಷಿ ವಿಜ್ಞಾನಕೇಂದ್ರ, ಮತ್ತಿಕೊಪ್ಪವು ಕೃಷಿ ಇಲಾಖೆ, ಸವದತ್ತಿ ಸಹಯೋಗದೊಂದಿಗೆ ಯರಗಟ್ಟಿ ತಾಲೂಕಿನ ಸತ್ತಿಗೇರಿಗ್ರಾಮದಲ್ಲಿ ''ಕಡಿಮೆಯಾದ ರಾಸಾಯನಿಕ ಗೊಬ್ಬರಗಳಲ್ಲಿ ಮಣ್ಣಿನ ಉತ್ಪಾದಕತೆ ನಿರ್ವಹಣೆ'' ಕುರಿತು ಸಂವಾದ ಅಧಿವೇಶನವನ್ನು ಆಯೋಜಿಸಲಾಗಿತ್ತು. ಕೇಂದ್ರದ ಮಣ್ಣು ವಿಜ್ಞಾನಿ ಎಸ್.ಎಂ. ವಾರದ ಹೆಚ್ಚಿನ ಪ್ರಮಾಣದರಾಸಾಯನಿಕ ಗೊಬ್ಬರಗಳನ್ನು ಬಳಸುವುದರಿಂದ ಮಣ್ಣಿನಜೈವಿಕ ಗುಣಲಕ್ಷಣಗಳ ಮೇಲೆ ಮತ್ತು ಮಣ್ಣಿನ ಉತ್ಪಾದಕತೆಯ ಮೇಲೆ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ರೈತರನ್ನು ಉದ್ದೇಶಿಸಿ ಮಾತನಾಡಿದರು. ಪೋಷಕಾಂಶಗಳ ಸಮತೋಲನವನ್ನು ಕಾಪಾಡಿಕೊಳ್ಳಲು ಮತ್ತು ಬೆಳೆಗೆ ಶಿಫಾರಸು ಮಾಡಲಾದ ಪ್ರಮಾಣದ ಸಾವಯವ ಗೊಬ್ಬರಗಳನ್ನು ಸೇರಿಸುವ ಅಭ್ಯಾಸವನ್ನು ಅಳವಡಿಸಿಕೊಳ್ಳಲು ಮಣ್ಣಿನ ಪರೀಕ್ಷೆಯ ಫಲಿತಾಂಶಗಳ ಆಧಾರದ ಮೇಲೆ ಸರಿಯಾದ ಪೋಷಕಾಂಶ ನಿರ್ವಹಣೆಯ ಮಹತ್ವವನ್ನುಅವರು ತಿಳಿಸಿದರು. ಕಬ್ಬಿನಕಸವನ್ನು ಸುಡುವುದನ್ನುತಕ್ಷಣವೇ ನಿಲ್ಲಿಸುವಂತೆ ಅವರುರೈತರಿಗೆ ಸೂಚಿಸಿದರು.ಇದು ಇಂಗಾಲದ ಹೊರಸೂಸುವಿಕೆಯ ಜೊತೆಗೆ ಹೆಚ್ಚಿನ ಪ್ರಮಾಣದ ಪೋಷಕಾಂಶಗಳನ್ನು ಕಳೆದುಕೊಳ್ಳುತ್ತದೆ ಎಂದರು. ಕೃಷಿ ಇಲಾಖೆಯ ಕೃಷಿ ಅಧಿಕಾರಿ ಎಸ್.ಎಲ್. ದೇಸಾಯಿಇಲಾಖೆಯ ಯೋಜನೆಗಳನ್ನು ವಿವರಿಸಿದರು. ಕೃಷಿ ಅಧಿಕಾರಿ ಜಿ.ಎಂ. ಕಲಾದಪ್ಪನವರ, ಎಟಿಎಂ, ಆತ್ಮ ಉಮೇಶ ಮತ್ತು ಸತ್ತಿಗೇರಿ ಗ್ರಾಮ ಪಂಚಾಯತಿ ಕಾರ್ಯದರ್ಶಿ ಸುರೇಶ್‌ತೋಟದ ಸಂದರ್ಭದಲ್ಲಿ ಉಪಸ್ಥಿತರಿದ್ದರು.



ನೇಸರಗಿ: ಖೇತ್ ಬಚಾವೋ ಅಭಿಯಾನ''ದ ಅಂಗವಾಗಿ ಐಸಿಎಆರ್ ಕೆಎಲ್‌ಇ ಕೃಷಿ ವಿಜ್ಞಾನಕೇಂದ್ರ, ಮತ್ತಿಕೊಪ್ಪವು ಕೃಷಿ ಇಲಾಖೆ, ಸವದತ್ತಿ ಸಹಯೋಗದೊಂದಿಗೆ ಯರಗಟ್ಟಿ ತಾಲೂಕಿನ ಸತ್ತಿಗೇರಿಗ್ರಾಮದಲ್ಲಿ ''ಕಡಿಮೆಯಾದ ರಾಸಾಯನಿಕ ಗೊಬ್ಬರಗಳಲ್ಲಿ ಮಣ್ಣಿನ ಉತ್ಪಾದಕತೆ ನಿರ್ವಹಣೆ'' ಕುರಿತು ಸಂವಾದ ಅಧಿವೇಶನವನ್ನುಆಯೋಜಿಸಲಾಗಿತ್ತು.

ಪಾಲಿಕೆ ಆಯುಕ್ತ ಕಾರ್ತಿಕ್ ಎಂ. ಹೇಳಿಕೆ

ಎಸ್ಐಆರ್ ಯಶಸ್ವಿಗೆ ಶ್ರಮಿಸಿ

•**ಬೆಳಗಾವಿ:** ಚುನಾವಣಾ ಆಯೋಗದ ಆದೇಶದಂತೆಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕಾರ್ಯ ಆರಂಭವಾಗಲಿದ್ದು, ಯಶಸ್ವಿಗೆ ನಗರ ಸೇವಕರ ಸಹಕಾರ ಅಗತ್ಯವಾಗಿ ಬೇಕು ಎಂದು ಪಾಲಿಕೆ ಆಯುಕ್ತ ಕಾರ್ತಿಕ್ ಎಂ ಹೇಳಿದರು.

ಗುರುವಾರಪಾಲಿಕೆಯ ಪರಿಷತ್‌ಸಭಾಂಗಣದಲ್ಲಿ ನಗರ ಸೇವಕರಿಗಾಗಿ ಆಯೋಜಿಸಲಾಗಿದ್ದ ಎಸ್ಐಆರ್ ಕುರಿತ ಮಾಹಿತಿ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಉತ್ತರ ದಕ್ಷಿಣ ಎರಡು ವಿಭಾಗಗಳಿದ್ದು, ದಕ್ಷಿಣಕ್ಕೆ ಚುನಾವಣಾ ಅಧಿಕಾರಿಯಾಗಿ ನಾನು, ಸಹಾಯಕ ಚುನಾವಣಾ ಅಧಿಕಾರಿಯಾಗಿ ಕಂದಾಯ ವಿಭಾಗದ ಉಪ ಆಯುಕ್ತ ಡಾ. ಸಿದ್ದು ಹುಲ್ಲೋಳಿ ಹಾಗೂ ಉತ್ತರ ಭಾಗದ ಚುನಾವಣಾ ಅಧಿಕಾರಿಯಾಗಿ ಪಾಲಿಕೆ ಆಡಳಿತ ವಿಭಾಗದ ಉಪ ಆಯುಕ್ತ ಉದಯಕುಮಾರ ತಳವಾರ, ಸಹ ಚುನಾವಣಾ ಅಧಿಕಾರಿಯಾಗಿ ಅಭಿವೃದ್ಧಿ ವಿಭಾಗದ ಉಪ ಆಯುಕ್ತರಾದ ಲಕ್ಷ್ಮೀ ನಿಪ್ಪಾಣಿಕರ್ ನೇಮಕಗೊಂಡಿದ್ದಾರೆ .

40 ಮೇಲ್ವಿಚಾರಕರ ಮಾರ್ಗದರ್ಶನದಲ್ಲಿ ಉತ್ತರ ದಕ್ಷಿಣ ಸೇರಿ ಒಟ್ಟು 514 ಮತಗಟ್ಟೆ ಅಧಿಕಾರಿಗಳು ಕಾರ್ಯನಿರ್ವಹಿಸುವರು. ಈಗಾಗಲೇ ಉತ್ತರದಲ್ಲಿ ಶೇ.75. ದಕ್ಷಿಣದಲ್ಲಿ 85 ರಷ್ಟು ಮ್ಯಾಪಿಂಗ್ ಕಾರ್ಯ ಮುಗಿದಿದ್ದು, ಸಿಬ್ಬಂದಿಗೆ ಅಗತ್ಯ ತರಬೇತಿ ನೀಡಲಾಗುತ್ತಿದೆ. ಎಲ್ಲ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಜೂ. 30 ರಿಂದ ಜು 29 ರವರಿಗೆ ಎಸ್‌ಐಆರ್ ಸಲುವಾಗಿ ಎಲ್ಲ ಮತಗಟ್ಟೆ ಅಧಿಕಾರಿಗಳು ಮನೆ ಮನೆ ಸಮೀಕ್ಷೆ ಕಾರ್ಯ ನಡೆಯಲಿದೆ. ನಿಯೋಜಿಸಲಾಗಿರುವ ಆಯಾ ಹಂತದ ಅಧಿಕಾರಿಗಳು ಹಾಗೂ ಸಿಬ್ಬಂದಿ ಕಾರ್ಯ ಆರಂಭ ಮಾಡಲಿದ್ದಾರೆ. ಇದೊಂದು ಚುನಾವಣಾ ಸಿಬ್ಬಂದಿಯನ್ನು ಒಳಗೊಂಡ ಪಾರದರ್ಶಕ ಪ್ರಕ್ರಿಯೆಯಾಗಿದೆ. ಬೂತ್ ಮಟ್ಟದ ಅಧಿಕಾರಿಗಳು ಗಣತಿ ನಮೂನೆಗಳ ವಿತರಣೆ ಮತ್ತು ಸಂಗ್ರಹಕ್ಕಾಗಿ ಮನೆಗಳಿಗೆ ಭೇಟಿ ನೀಡಲಿದ್ದಾರೆ. ಸಿಬ್ಬಂದಿಗೆ ಮತ್ತು ಮತದಾರರಿಗೆ ಸಹಕಾರ ನೀಡುವ ನಿಟ್ಟಿನಲ್ಲಿ ನಗರಸೇವಕರು ತಮ್ಮ ತಮ್ಮ ವಾರ್ಡ್‌ಗಳ ಮತದಾರರಲ್ಲಿ ಜಾಗೃತಿಯನ್ನು ಉಂಟು ಮಾಡಬೇಕು ಅಲ್ಲದೆ ಈ ಕುರಿತ ಸಮಸ್ಯೆಗಳಿದ್ದರೆ ಸಂಬಂಧಪಟ್ಟ ಸಿಬ್ಬಂದಿ ಅಧಿಕಾರಿ ಗಮನಕ್ಕೆ ತರಬೇಕು. ಈ ಕುರಿತು ತಮ್ಮೆಲ್ಲರ ಸಲಹೆ ಸೂಚನೆಗಳನ್ನು ನಾವು ಗಂಭೀರವಾಗಿ ಪರಿಗಣಿಸುತ್ತೇವೆ.



ಕೈ ಜೋಡಿಸಿ
ಪ್ರಜಾಪ್ರಭುತ್ವದ ಅವಿಭಾಜ್ಯ ಅಂಗವಾಗಿರುವ ಮತದಾರರು ತಮ್ಮ ನಾಗರಿಕತ್ವ ಮತ್ತು ಮತದಾನದ ಹಕ್ಕನ್ನು ಖಾತರಿಪಡಿಸಿಕೊಳ್ಳಲು. ಈ ಮಹತ್ವದ ಪ್ರಕ್ರಿಯೆ ನಡೆಯುತ್ತಿದ್ದು, ಅರ್ಹ ಮತದಾರರನ್ನು ಗುರುತಿಸಲು ಅನುವು ಮಾಡಿಕೊಡುವ ರಾಷ್ಟ್ರದ ಮಹತ್ವದ ಕಾರ್ಯಕ್ಕೆ ನಗರಸೇವಕರೆಲ್ಲರೂ ಕೈಜೋಡಿಸಿ ಯಶಸ್ವಿಗೊಳಿಸಬೇಕೆಂದು ಪಾಲಿಕೆ ಆಯುಕ್ತ ಕಾರ್ತಿಕ್ ಎಂ ಮನವಿ ಮಾಡಿದರು.

ಕಂದಾಯ ವಿಭಾಗದ ಉಪ ಆಯುಕ್ತ, ದಕ್ಷಿಣ ವಿಭಾಗದ ಸ.ಚುನಾವಣಾ ಅಧಿಕಾರಿ ಡಾ. ಸಿದ್ದು ಹುಲ್ಲೋಳಿ ಅವರು ಎಸ್‌ಐಆರ್ ಕುರಿತು ಪ್ರಾತ್ಯಕ್ಷಿಕೆ ಸಹಿತ ಸಮಗ್ರ ಮಾಹಿತಿ ನೀಡಿದರಲ್ಲದೇ ನಗರಸೇವಕರ ಅನೇಕ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡಿದರು.

ಮೇಯರ್ ಪ್ರೀತಿ ಕಾಮಕರ, ಉಪ ಮಹಾಪೌರ ಹಣಮಂತ ಕೊಂಗಾಲಿ, ಆಡಳಿತ ಪಕ್ಷದ ನಾಯಕ ಸಂತೋಷ ಪೇಡ್ನೇರ್ಕ, ವಿರೋಧ ಪಕ್ಷದ ನಾಯಕ ಮೊಹಮ್ಮದ ಸೋಹೈಲ್ ಸಂಗೊಳ್ಳಿ ಹಾಗೂ ನಗರಸೇವಕರು, ಪರಿಷತ್ ಕಾರ್ಯದರ್ಶಿ ಲಕ್ಷ್ಮೀ ನಿಪ್ಪಾಣಿಕರ, ಆಡಳಿತ ವಿಭಾಗದ ಉಪ ಆಯುಕ್ತ ಉದಯಕುಮಾರ ಟಿ. ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

ಬಾಲ್ಯ ವಿವಾಹಕ್ಕೆ ಕಡಿವಾಣ ಅಗತ್ಯ

•**ಯರಗಟ್ಟಿ:** ಸಮೀಪದ ಮುಗಳಿಹಾಳ ಗ್ರಾಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಗ್ರಾಮದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಯೋಜನೆಗಳ ಕುರಿತು ವಿಶೇಷ ಅರಿವು ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಬೇಟಿ ಬಚಾವೋ, ಬೇಟಿ ಪಡಾವೋ ಯೋಜನೆಯ ಉದ್ದೇಶಗಳು, ಹೆಣ್ಣು ಮಕ್ಕಳ ಶಿಕ್ಷಣ, ಸುರಕ್ಷತೆ, ಆರೋಗ್ಯ ಹಾಗೂ ಸಬಲೀಕರಣದ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡಲಾಯಿತು.

ಯರಗಟ್ಟಿ ತಾಲೂಕು ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಗೋಪಾಲ ದಳವಾಯಿ, ಹೆಣ್ಣು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ, ಸುರಕ್ಷಿತ ವಾತಾವರಣ ಮತ್ತು ಆರೋಗ್ಯಕರ ಜೀವನ ಕಲ್ಪಿಸುವುದು ಸಮಾಜದ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಹೇಳಿದರು. ಹೆಣ್ಣು ಮಕ್ಕಳು ಶಿಕ್ಷಣವಂತರಾದಾಗ ಕುಟುಂಬ, ಸಮಾಜ ಹಾಗೂ ದೇಶದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡುತ್ತಾರೆ. ಆದ್ದರಿಂದ ಪೋಷಕರು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದರು. ಬಾಲ್ಯ ವಿವಾಹದಂತಹ ಅನಿಷ್ಟ ಪದ್ಧತಿಗಳನ್ನು ನಿರ್ಮೂಲನೆಗೊಳಿಸಲು ಸರ್ಕಾರ ಹಲವು ಯೋಜನೆಗಳನ್ನು ಜಾರಿಗೆ ತಂದಿದ್ದು, ಅವುಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಸಲಹೆ ನೀಡಿದರು.

> **ಹೆಣ್ಣು ಮಕ್ಕಳ ಸಬಲೀಕರಣವೇ ಸಮಾಜದ ಪ್ರಗತಿಯ ಮೂಲವಾಗಿದೆ. ಶಿಕ್ಷಣ ಮತ್ತು ಆರೋಗ್ಯದ ಮೂಲಕವೇ ಅವರ ಉಜ್ವಲ ಭವಿಷ್ಯ ನಿರ್ಮಾಣ ಸಾಧ್ಯ.**
> ■ **ಡಿ.ಆರ್. ಜಾಧವ,** ಮುಖ್ಯೋಪಾಧ್ಯಾಯರು

ಗ್ರಾಮ ಪಂಚಾಯಿತಿ ಪಿಡಿಓ ಯಲ್ಲಪ್ಪ ಮೂಡಲಗಿ , ಉಮೇಶ ಬೆಟಗೇರಿ ಮಾತನಾಡಿದರು.

ಈ ಸಂದರ್ಭದಲ್ಲಿ ಅಂಗನವಾಡಿ ಮೇಲ್ವಿಚಾರಕರು ಎಮ್ ಎಸ್ ಮುಗಳಿಹಾಳ, ಕಾರ್ಯಕರ್ತೆಯರಾದ ಮಹಾನಂದಾ ಕೌಜಲಗಿ, ಜ್ಯೋತಿ ಪಾಟೀಲ, ಮಾಯಮ್ಮ ಚಂದರಗಿ, ಸಕ್ಕುಭಾಯಿ ಕರಡಿಗುಡ್ಡ, ಜ್ಯೋತಿ ದಳವಾಯಿ, ಸಿದ್ದವ್ವ ಅರಭಾವಿ, ಶಾರಮ್ಮ ನಾಯ್ಕರ, ಕುಸುಮಾ ಪತ್ತಾರ ಹಾಗೂ ಆಶಾ ಕಾರ್ಯಕರ್ತರು ಸೇರಿದಂತೆ ಅನೇಕರು ಉಪಸ್ತಿತರಿದ್ದರು.



ಎಸ್‌ಐಆರ್ ಕಾರ್ಯದ ಸಭೆ ಯಶಸ್ವಿ

•**ಯಮಕನಮರಡಿ:** ಭಾರತೀಯ ಜನತಾ ಪಕ್ಷದ ವತಿಯಿಂದ ಚಿಕ್ಕೋಡಿ ಜಿಲ್ಲೆ ಬಿಜೆಪಿ ಅಧ್ಯಕ್ಷರಾದ ಸತೀಶ ಅಪ್ಪಾಜಿಗೊಳ ನೇತೃತ್ವದಲ್ಲಿ ಯಮಕನಮರಡಿ ವಿಧಾನಸಭಾ ಕ್ಷೇತ್ರದಲ್ಲಿ ವಿಶೇಷ ಮತದಾರರ ಪಟ್ಟಿಯ ತೀವ್ರ ಪರಿಷ್ಕರಣೆ ಕಾರ್ಯದ ಕುರಿತು ಮಹತ್ವದ ಸಭೆ ನಡೆಯಿತು. ಮತದಾರರ ಪಟ್ಟಿಯ ಪರಿಷ್ಕರಣೆ ಕಾರ್ಯವನ್ನು ಪರಿಣಾಮಕಾರಿಯಾಗಿ ನಡೆಸುವುದರ ಜೊತೆಗೆ ಬೂತ್ ಮಟ್ಟದಲ್ಲಿ ಪಕ್ಷ ಸಂಘಟನೆಯನ್ನು ಇನ್ನಷ್ಟು ಬಲಪಡಿಸುವ ಉದ್ದೇಶದಿಂದ ಸಭೆಯನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಸಭೆಗೆಸ್ವಾಗತ ಕೋರಿದ ಉತ್ತರ ಮಂಡಲ ಅಧ್ಯಕ್ಷ ಶ್ರೀಶೈಲ ಯಮಕನಮರಡಿ, ಎಸ್‌ಐಆರ್ ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ಪಕ್ಷದ ಕಾರ್ಯಕರ್ತರು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದರು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಡಾ. ಸೋನಾಲಿ ಸರ್ನೋಬತ್ ಅವರು ವಿಶೇಷ ಮತದಾರರ ಪಟ್ಟಿಯ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯ ಮಹತ್ವವನ್ನು ವಿವರಿಸಿದರು. ಬೂತ್ ಲೆವೆಲ್ ಏಜೆಂಟ್ (ಬಿಎಲ್‌ಎ) ತಂಡದ ಜವಾಬ್ದಾರಿಗಳು, ಕಾರ್ಯವೈಖರಿ ಹಾಗೂ ಮತದಾರರ ಪಟ್ಟಿಯನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿ ಅವರ ಪಾತ್ರದ ಕುರಿತು ಸವಿಸ್ತಾರವಾಗಿ ತಿಳಿಸಿದರು. ಪಕ್ಷದ ಬಲವು ಬೂತ್ ಮಟ್ಟದ ಸಂಘಟನೆಯ ಮೇಲೆ ಅವಲಂಬಿತವಾಗಿದ್ದು, ಪ್ರತಿಯೊಬ್ಬ ಕಾರ್ಯಕರ್ತರೂ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸುವ ಮೂಲಕ ಸಂಘಟನೆಯನ್ನು ಮತ್ತಷ್ಟು ಬಲಿಷ್ಠಗೊಳಿಸಬೇಕು ಎಂದರು.

ಬಿಎಲ್ಎ ತಂಡದ ಕಾರ್ಯದರ್ಶಿ ರಾಜೇಂದ್ರ ಮಠಪತಿ ಮಾತನಾಡಿದರು.

ಈ ಸಂದರ್ಭದಲ್ಲಿ ಬಸವರಾಜ ಹುಂದ್ರಿ, ಅಪ್ಪಯ್ಯ ಜಾಜರಿ ಸೇರಿದಂತೆ ಮುಖಂಡರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಸಭೆಯ ವೇದಿಕೆಯಲ್ಲಿ ಯಮಕನಮರಡಿ ವಿಧಾನಸಭಾ ಕ್ಷೇತ್ರದ ಎಸ್‌ಐಆರ್ ಪ್ರಭಾರಿ ಹಾಗೂ ಬಿಜೆಪಿ ಮಹಿಳಾ ಮೋರ್ಚಾ ಕರ್ನಾಟಕ ರಾಜ್ಯ ಕಾರ್ಯದರ್ಶಿ ಡಾ. ಸೋನಾಲಿ ಸರ್ನೋಬತ್, ಬಿಜೆಪಿ ಪರಿಶಿಷ್ಟ ಪಂಗಡ ಮೋರ್ಚಾ ಕರ್ನಾಟಕ ರಾಜ್ಯ ಕಾರ್ಯದರ್ಶಿ ಬಸವರಾಜ ಹುಂದ್ರಿ, ಉತ್ತರ ಮಂಡಲ ಅಧ್ಯಕ್ಷ ಶ್ರೀಶೈಲ ಯಮಕನಮರಡಿ, ದಕ್ಷಿಣ ಮಂಡಲ ಅಧ್ಯಕ್ಷ ಅಪ್ಪಯ್ಯ ಜಾಜರಿ, ಕಲಗೌಡ ಪಾಟೀಲ ಹಾಗೂ ಬಿಎಲ್‌ಎ ತಂಡದ ಕಾರ್ಯದರ್ಶಿ ರಾಜೇಂದ್ರ ಮಠಪತಿ ಉಪಸ್ಥಿತರಿದ್ದರು.



ಕೋಥಳಿ-ಕುಪ್ಪಾನವಾಡಿಯಲ್ಲಿ ಖೇತ್ ಬಚಾವೋ ಅಭಿಯಾನಕ್ಕೆ ಚಾಲನೆ

•**ಚಿಕ್ಕೋಡಿ:** ಉತ್ತಮ ಆರೋಗ್ಯಕ್ಕಾಗಿ ರಾಸಾಯನಿಕ ಮುಕ್ತ ಸಾವಯವ ಮತ್ತು ನೈಸರ್ಗಿಕ ಕೃಷಿಯನ್ನು ಕೈಗೊಳ್ಳಬೇಕು. ಇದರಿಂದ ಮಣ್ಣಿನ ಫಲವತ್ತತೆ ಹಾಗೂ ಪರಿಸರ ಸಂರಕ್ಷಣೆ ಸಾಧ್ಯವಿದೆ ಎಂದು ಬೆಳಗಾವಿಯ ಜಂಟಿ ಕೃಷಿ ನಿರ್ದೇಶಕ ಹೆಚ್ ಡಿ ಕೋಳೆಕರ ಹೇಳಿದರು.

ತಾಲೂಕಿನ ಕೋಥಳಿ-ಕುಪ್ಪಾನವಾಡಿಯ ದೇಶಭೂಷಣ ಪ್ರಾಥಮಿಕ ಶಾಲೆ ಆವರಣದಲ್ಲಿ ಕೃಷಿ ಇಲಾಖೆ, ಚಿಕ್ಕೋಡಿ ಹಾಗೂ ಕೃಷಿ ವಿಜ್ಞಾನ ಕೇಂದ್ರ, ಮತ್ತಿಕೊಪ್ಪ ಇವುಗಳ ಸಹಯೋಗದಲ್ಲಿ ಪಿ ಎಮ್ ಕೆ ಎಸ್ ವೈ ಡಬ್ಲ್ಯು ಡಿ ಸಿ 2.0 ಯೋಜನೆಯಡಿ ಬುಧವಾರ ಹಮ್ಮಿಕೊಂಡಿದ್ದ ಮರಭೂಮೀಕರಣ ಮತ್ತು ಬರ ಎದುರಿಸುವ ವಿಶ್ವ ದಿನಾಚರಣೆ ಹಾಗೂ ಖೇತ್ ಬಚಾವೋ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು.

ಚಿಕ್ಕೋಡಿ ವಿಭಾಗ ಮಟ್ಟದ ಉಪ ಕೃಷಿ ನಿರ್ದೇಶಕ ಸಹದೇವ ಯರಗೊಪ್ಪ ಮಾತನಾಡಿ, ಮಾನವನ ಅತಿಯಾದ ಚಟುವಟಿಕೆಗಳಿಂದ ನಿಸರ್ಗದಲ್ಲಿ ಏರುಪೇರಾಗಿ ಭೂಮಿಯು ಬರಡಾಗುತ್ತಿದೆ. ವಾತಾವರಣದಲ್ಲಿ ತಾಪಮಾನ ಹೆಚ್ಚಾಗಿ ಮಳೆ ವ್ಯತ್ಯಾಸ ಉಂಟಾಗಿ ಬರಗಾಲದ ಕಾರ್ಮೋಡ ಆವರಿಸುತ್ತಿದೆ. ಬರಗಾಲವನ್ನು ನಾವೆಲ್ಲರೂ ಕೂಡಿ ಎದುರಿಸಲು ಸನ್ನದ್ಧರಾಗಬೇಕಿದೆ ಎಂದರು.

ಚಿಕ್ಕೋಡಿಯ ಸಹಾಯಕ ಕೃಷಿ ನಿರ್ದೇಶಕ ಬಸವರಾಜ ದಳವಾಯಿ ಮಾತನಾಡಿ, ರೈತರು ಸಮತೋಲನ ರಸಗೊಬ್ಬರ ಬಳಕೆ ಮಾಡಿ ಕೃಷಿ ಉತ್ಪಾದನೆ ಮಾಡಬೇಕು. ಖೇತ ಬಚಾವೋ ಯೋಜನೆಯ ಲಾಭವನ್ನು ರೈತರು ಪಡೆದುಕೊಳ್ಳಬೇಕು. ಕೃಷಿ ಸುಧಾರಣೆಯ ಮೂಲಕ ರೈತರು ತಮ್ಮ ಆರ್ಥಿಕ ಸ್ಥಿತಿಗತಿಯನ್ನು ಸುಧಾರಿಸಿಕೊಳ್ಳಬಹುದಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕೋಥಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಜಿತೇಂದ್ರ ಪಾಟೀಲ, ಉಪಾಧ್ಯಕ್ಷೆ ರತ್ನವ್ವ ಕುಂಬಾರ, ಸುನೀಲ ಗೋಟೂರೆ, ಅಜೀತ ಕಣಗಲೆ, ಜಾವೇದ ಜಮಾದಾರ, ಕೃಷಿ ಅಧಿಕಾರಿಗಳಾದ ಶಂಕರ ಚರಾಟೆ, ಪ್ರಶಾಂತ ಹುಲಿಮನಿ, ಸದಾಶಿವ ಮಂಚದ, ಅನುಪಮಾ ಮಹಾಜನ ಇತರರು ಇದ್ದರು.



ತೋಪಿನಕಟ್ಟಿಯಲ್ಲಿ ರಕ್ತದಾನ ಶಿಬಿರ

•**ಖಾನಾಪುರ:** ತಾಲೂಕಿನ ತೋಪಿನಕಟ್ಟಿ ಗ್ರಾಮದಲ್ಲಿ ಗುರುವಾರ ತೋಪಿನಕಟ್ಟಿ ಗ್ರಾಮ ಪಂಚಾಯತಿ, ಆರೋಗ್ಯ ಇಲಾಖೆ ಮತ್ತು ಜಿಲ್ಲಾ ರಕ್ತಭಂಡಾರದ ಸಹಯೋಗದಲ್ಲಿ ಸ್ವಯಂಪ್ರೇರಿತ ರಕ್ತದಾನ ಶಿಬಿರ ಜರುಗಿತು. ಶಿಬಿರದಲ್ಲಿ ಪಾಲ್ಗೊಂಡಿದ್ದ ತೋಪಿನಕಟ್ಟಿ, ಬಿದರಬಾವಿ, ಸಣ್ಣಹೊಸೂರ ಗ್ರಾಮಗಳ 31 ದಾನಿಗಳು ಜಿಲ್ಲಾ ರಕ್ತಭಂಡಾರಕ್ಕೆ ತಮ್ಮ ರಕ್ತವನ್ನು ದಾನವಾಗಿ ನೀಡಿದರು.

ತಾಲೂಕು ಆರೋಗ್ಯಾಧಿಕಾರಿ ಡಾ.ಮಹೇಶ ಕಿವಡಸಣ್ಣವರ ರಕ್ತದಾನಿಗಳಿಗೆ ಪ್ರಮಾಣಪತ್ರ ವಿತರಿಸಿದರು. ಬಳಿಕ ಮಾತನಾಡಿ, ಪಾರಿಶ್ವಾಡದ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಆಯೋಜಿಸಿದ್ದ ರಕ್ತದಾನ ಶಿಬಿರಕ್ಕೆ ಉತ್ತಮ ಸ್ಪಂದನೆ ಸಿಕ್ಕಿದೆ ಎಂದರು. ಈ ಸಂದರ್ಭದಲ್ಲಿ ತೋಪಿನಕಟ್ಟಿ ಗ್ರಾಮ ಪಂಚಾಯತಿ ಅಧಿಕಾರಿಗಳು, ಸಿಬ್ಬಂದಿ, ಆರೋಗ್ಯ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಹಾಗೂ ಸ್ಥಳೀಯರು ಇದ್ದರು.



ಸ್ವಂತ ಖರ್ಚಿನಲ್ಲಿ ಬಸ್ ತಂಗುದಾಣ ನಿರ್ಮಿಸಿದ ಗ್ರಾಮಸ್ಥ

•**ಖಾನಾಪುರ:** ತಾಲೂಕಿನ ನೀಲಾವಡೆ ಗ್ರಾಮ ಪಂಚಾಯತಿಯ ಮಾಜಿ ಸದಸ್ಯ ಹಾಗೂ ಮಳವ ಗ್ರಾಮದ ನಿವಾಸಿ ಸಾತೇರಿ ಪಾರ್ಸೇಕರ ಅವರು ತಮ್ಮ ಸ್ವಂತ ಖರ್ಚಿನಲ್ಲಿ ತಮ್ಮೂರಿನ ಸಮೀಪದ ಮಳವ ಕ್ರಾಸ್‌ನಲ್ಲಿ ಸುಸಜ್ಜಿತ ಬಸ್ ತಂಗುದಾಣ ನಿರ್ಮಿಸಿದ್ದಾರೆ. ಲೋಕೋಪಯೋಗಿ ಉದ್ದೇಶದಿಂದ ಇವರು ಕೈಗೊಂಡಿರುವ ಕಾರ್ಯವನ್ನು ಶ್ಲಾಘಿಸಿರುವ ಶಾಸಕ ವಿಠ್ಠಲ ಹಲಗೇಕರ ಖಾನಾಪುರ-ನೀಲಾವಡೆ ಮುಖ್ಯ ರಸ್ತೆಯ ಪಕ್ಕದ ಮಳವ ಕ್ರಾಸ್‌ನಲ್ಲಿ ತಲೆ ಎತ್ತಿರುವ ಬಸ್ ತಂಗುದಾಣವನ್ನು ಗುರುವಾರ ಲೋಕಾರ್ಪಣೆಗೊಳಿಸಿದ್ದಾರೆ.

ನೀಲಾವಡೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಪುಟ್ಟಗ್ರಾಮ ಮಳವ ಅಂದಾಜು 800 ಜನಸಂಖ್ಯೆ ಹೊಂದಿದೆ. ಈ ಗ್ರಾಮ ಖಾನಾಪುರ-ನೀಲಾವಡೆ ರಸ್ತೆಯಿಂದ ಅರ್ಧ ಕಿಮೀ ಒಳಗಿದೆ. ಪಟ್ಟಣದಿಂದ 8 ಕಿಮೀ ದೂರದಲ್ಲಿರುವ ಈ ಗ್ರಾಮದಿಂದ ನಿತ್ಯ ಹಲವು ವಿದ್ಯಾರ್ಥಿಗಳು, ಗ್ರಾಮಸ್ಥರು ಖಾನಾಪುರಕ್ಕೆ ಬಂದುಹೋಗುತ್ತಾರೆ. ಮುಖ್ಯ ರಸ್ತೆಯಿಂದ ಮಳವ ಗ್ರಾಮವರೆಗೆ ಸಾಗುವ ಮಾರ್ಗದ ಎರಡೂ ಬದಿ ದಟ್ಟ ಅರಣ್ಯವಿದೆ. ಖಾನಾಪುರ-ನೀಲಾವಡೆ ಮಾರ್ಗದ ಬಸ್‌ಗಳು ಮಳವ ಕ್ರಾಸ್‌ನಲ್ಲಿ ಬಸ್ ನಿಲ್ಲಿಸಿ ಪ್ರಯಾಣಿಕರನ್ನು ಇಳಿಸಿ ಹೋಗುತ್ತವೆ. ಹೀಗಾಗಿ ಮಳವ ಗ್ರಾಮಸ್ಥರು ಸಾರ್ವಜನಿಕ ಸಾರಿಗೆಗಾಗಿ ತಮ್ಮೂರಿನಿಂದ ಕ್ರಾಸ್‌ವರೆಗೆ ನಡೆದುಕೊಂಡೇ ಹೋಗಿಬರುವ ಪರಿಪಾಠ ಮೊದಲಿನಿಂದಲೂ ರೂಢಿಯಲ್ಲಿದೆ.



▸▸ **ಗ್ರಾಪಂ ಮಾಜಿ ಸದಸ್ಯ ಸಾತೇರಿಯವರ ಕಾರ್ಯಕ್ಕೆ ಶಾಸಕರಿಂದ ಶ್ಲಾಘನೆ**

ಈಗ ಎಲ್ಲೆಡೆ ಶಾಲಾ-ಕಾಲೇಜುಗಳು ಆರಂಭವಾಗಿದ್ದು, ಮಳವ ಗ್ರಾಮದಿಂದ ಖಾನಾಪುರ ಪಟ್ಟಣಕ್ಕೆ ನಿತ್ಯ ಸಂಚರಿಸುವ ವಿದ್ಯಾರ್ಥಿಗಳು, ಗ್ರಾಮಸ್ಥರು ಬಿಸಿಲು-ಮಳೆ ಲೆಕ್ಕಿಸದೇ ಮಳವ ಕ್ರಾಸ್‌ನಲ್ಲಿ ಬಸ್‌ಗಾಗಿ ರಸ್ತೆ ಬದಿಯಲ್ಲಿ ಕಾಯುತ್ತ ನಿಲ್ಲುವ ಅನಿವಾರ್ಯತೆ ಇತ್ತು. ಇದನ್ನು ಗಮನಿಸಿದ ಸಾತೇರಿಯವರು ಈ ಹಿಂದೆ ಹಲವು ಬಾರಿ ಸಂಬಂಧಿಸಿದವರಿಗೆ ಪತ್ರ ಬರೆದು ಬಸ್ ತಂಗುದಾಣ ನಿರ್ಮಾಣ ಮಾಡಲು ಕೋರಿದ್ದರು. ಸರ್ಕಾರದಿಂದ ಸೂಕ್ತ ಸ್ಪಂದನೆ ಬಾರದ ಹಿನ್ನೆಲೆಯಲ್ಲಿ ಕಳೆದ ಹದಿನೈದು ದಿನಗಳಲ್ಲಿ ತಮ್ಮ ಜೇಬಿನಿಂದ ಅಂದಾಜು 40 ಸಾವಿರ ವ್ಯಯಿಸಿ ಬಸ್ ತಂಗುದಾಣ ನಿರ್ಮಿಸಿದ್ದಾರೆ. ಇದರಿಂದ ಗ್ರಾಮದ ಜನರಿಗೆ, ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ.

> **ಮಳವ ಗ್ರಾಮದ ಸಾತೇರಿ ಪಾರ್ಸೇಕರ ಅವರು ಸ್ವಂತ ಖರ್ಚಿನಿಂದ ಬಸ್ ತಂಗುದಾಣ ನಿರ್ಮಿಸಿ ಗ್ರಾಮದ ಜನರಿಗೆ ಅನುಕೂಲ ಕಲ್ಪಿಸಿದ್ದಾರೆ.**
> ■ **ವಿಠ್ಠಲ ಹಲಗೇಕರ,** ಶಾಸಕರು, ಖಾನಾಪುರ

> **ನಮ್ಮೂರಿನ ಕ್ರಾಸ್‌ನಲ್ಲಿ ಬಸ್ ಶೆಲ್ಟರ್ ನಿರ್ಮಿಸಲು ಎಲ್ಲ ಇಲಾಖೆಗಳಿಗೆ ಮನವಿ ಸಲ್ಲಿಸಿದ್ದೆ. ನಮ್ಮೂರ ಕ್ರಾಸ್‌ನಲ್ಲಿ ಬಸ್ ಶೆಲ್ಟರ್ ಇಲ್ಲದ್ದರಿಂದ ಜನರಿಗೆ ತೊಂದರೆ ಉಂಟಾಗುತ್ತಿದ್ದುದನ್ನು ಗಮನಿಸಿ ಸ್ವಂತ ಖರ್ಚಿನಲ್ಲಿ ಬಸ್ ಶೆಲ್ಟರ್ ನಿರ್ಮಿಸಿದ್ದೇನೆ. ನಮ್ಮ ತಾಲೂಕಿನ ಶಾಸಕರನ್ನು ಭೇಟಿಯಾಗಿ ನನ್ನ ಈ ಕೆಲಸದ ಬಗ್ಗೆ ವಿವರಿಸಿದಾಗ ಅವರು ಖುಷಿಯಿಂದ ಆಗಮಿಸಿ ಬಸ್ ಶೆಲ್ಟರ್ ಲೋಕಾರ್ಪಣೆಗೊಳಿಸಿದ್ದಾರೆ.**
> ■ **ಸಾತೇರಿ ಪಾರ್ಸೇಕರ,** ಮಳವ ಗ್ರಾಮಸ್ಥ.

ಕಲಾಕ್ಷೇತ್ರಕ್ಕೆ ಉಕ ಕೊಡುಗೆ ಅಪಾರ: ಅನಿರುದ್ಧ

•**ಗೋಕಾಕ:** ಕಲೆ, ಸಾಹಿತ್ಯ ಕ್ಷೇತ್ರಕ್ಕೆ ಉತ್ತರ ಕರ್ನಾಟಕದ ಕೊಡುಗೆ ಅಪಾರವೆಂದು ಚಲನಚಿತ್ರ ಮತ್ತು ಕಿರುತೆರೆ ನಟ ಅನಿರುದ್ಧ ಜತಕರ ಹೇಳಿದರು.

ಅವರು, ಗುರುವಾರದಂದು ನಗರದ ರೋಟರಿ ರಕ್ತ ಭಂಡಾರ ಸಭಾ ಭವನದಲ್ಲಿ ಆಶಾ ಕಿರಣ ಕಲಾ ಟ್ರಸ್ಟರವರು ಆಯೋಜಿಸಿದ್ದ ಸಾಧಕರಿಗೆ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಮರೆಯದ ಮಾಣಿಕ್ಯ ಪ್ರಶಸ್ತಿಯನ್ನು ಪ್ರದಾನ ಮಾಡಿ ಮಾತನಾಡಿದರು.

ಉತ್ತರ ಕರ್ನಾಟಕ ಮಹಾನ ಸಾಹಿತಿಗಳು ಹಾಗೂ ಕಲಾವಿದರನ್ನು ಪ್ರೋತ್ಸಾಹಿಸುವ ಮೂಲಕ ರಾಜ್ಯದ ಸಾಂಸ್ಕೃತಿಕ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ. ರಂಗ ಭೂಮಿ ಬೆಳವಣಿಗೆಯಲ್ಲಿ ಈ ಭಾಗದ ಕಲಾವಿದರ ಪಾತ್ರ ಮಹತ್ವದ್ದಾಗಿದೆ. ಯುವ ಪೀಳಿಗೆಯಲ್ಲೂ ನಮ್ಮ ಸಂಸ್ಕೃತಿಯ ಅರಿವು ಮೂಡಿಸಬೇಕಿದೆ. ಮಾಲತಿಶ್ರೀಯವರು ತಾವು ಕಲಾವಿದರಾಗಿ ಸೇವೆ ಸಲ್ಲಿಸುತ್ತಾ ಸಾಧಕರನ್ನು ಪ್ರೋತ್ಸಾಹಿಸುತ್ತಿರುವದು ಮಾದರಿಯಾಗಿದೆ ಎಂದರು.

ಈ ಸಂದರ್ಭದಲ್ಲಿ ಕೃಷಿ ಕ್ಷೇತ್ರದಿಂದ ಆನಂದ ಕಮತ, ನಿವೃತ್ತ ಸೈನಿಕ ರುದ್ರಪ್ಪ ಕರಿಗಾರ, ಸಾಮಾಜಿಕ ಕಾರ್ಯಕರ್ತ ಬಸವರಾಜ ಹಟ್ಟಿಗೌಡರ, ಜ್ಞಾನ ಹಾಗೂ ಯೋಗ ಕ್ಷೇತ್ರದಿಂದ ಮಲ್ಲಿಕಾರ್ಜುನ ಕರಜಗಿಮಠ, ಉದ್ಯಮಿ ಸುನೀಲ ಪರಮಾರ, ಸಂಗೀತಗಾರ ಜಿ ಕೆ ಕಾಡೇಶಕುಮಾರ, ಕಲಾ ಕ್ಷೇತ್ರದಿಂದ ಬಸವರಾಜ ಪಟ್ಟಣಶೆಟ್ಟಿ, ಪತ್ರಕರ್ತ ವಿರೇಂದ್ರ ಪತಕಿ, ಸಾಮಾಜಿಕ ಕಾರ್ಯಕರ್ತ ಅಕ್ಬರಖಾನ ಜಮಾದಾರ, ಪೌರಕಾರ್ಮಿಕ ಅಶೋಕ ವೈದ್ಯ, ಮನೋವಿಜ್ಞಾನದಿಂದ ಡಾ.ಶಾಂತಲಾ ಭರಭರಿ ಸಾಧಕರನ್ನು ಸತ್ಕರಿಸಲಾಯಿತು.

ಸಾನಿಧ್ಯವನ್ನು ಬಸವಪ್ರಭು ಸ್ವಾಮಿಜಿ ವಹಿಸಿದ್ದರು. ಅಧ್ಯಕ್ಷತೆಯನ್ನು ಆಶಾ ಕಿರಣ ಕಲಾ ಟ್ರಸ್ಟನ ಮಾಲತಿಶ್ರೀ ಮೈಸೂರು ವಹಿಸಿದ್ದರು.ವೇದಿಕೆಯ ಮೇಲೆ ರಾಜಕೀಯ ಧುರೀಣ ಅಶೋಕ ಪೂಜೇರಿ, ಕಾರ್ಯನಿರ್ವಾಹಕ ಅಧಿಕಾರಿ ಪರಶುರಾಮ ಘಸ್ತೆ, ಅಖಿಲಭಾರತ ಸಾಹಿತ್ಯ ಪರಿಷತನ ಜಿಲ್ಲಾಧ್ಯಕ್ಷ ಮಹಾಂತೇಶ ತಾಂವಶಿ, ಸಿರಿಗನ್ನಡ ಮಹಿಳಾ ವೇದಿಕೆ ರಾಜ್ಯಾಧ್ಯಕ್ಷೆ ರಜನಿ ಜಿರಗ್ಯಾಳ ಇದ್ದರು.



ಕಿರುಸುದ್ದಿ



ಕಲಾದಗಿ: ಬೀಳಗಿ ಮತಕ್ಷೇತ್ರ ವ್ಯಾಪ್ತಿಯ ದೇವನಾಳ, ಮುರನಾಳ ಹಾಗೂ ಸೀಮಿಕೇರಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಭೂತ ಅಧ್ಯಕ್ಷರು ಹಾಗೂ ಬಿಎಲ್ಎ2 ಗಳ ಸಭೆಯಲ್ಲಿ ಎಸ್ಐಆರ್ ಕುರಿತು ಸಮಗ್ರ ಮಾಹಿತಿ ನೀಡಲಾಯಿತು. ವಿಧಾನ ಪರಿಷತ ಸದಸ್ಯ ಪಿ.ಎಚ್.ಪೂಜಾರ, ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷ ಹೂವಪ್ಪ ರಾಠೋಡ, ಚಂದ್ರಕಾಂತ ಕೇಸನೂರ, ಮಹಾದೇವಪ್ಪ ತಳವಾರ, ವಿಠ್ಠಲ ಯತ್ನಟ್ಟಿ, ಭರತ ಬಾರಕೇರ ಸೇರಿದಂತೆ ಭಾಜಪಾ ಪಕ್ಷದ ಮುಖಂಡರು, ಕಾರ್ಯಕರ್ತರು ಇದ್ದರು.

ಕಾಶಪ್ಪನವರಿಗೆ ಸಚಿವ ಸ್ಥಾನ ನೀಡಿ

ಜಮಖಂಡಿ: ಹುನಗುಂದ ಶಾಸಕ ವಿಜಯಾನಂದ ಕಾಶಪ್ಪನವರಿಗೆ ಸಚಿವರಾಗಿ ಮಾಡಿ ಬಾಗಲಕೋಟೆ ಉಸ್ತುವಾರಿ ಸಚಿವ ಸ್ಥಾನ ನೀಡಬೇಕು ಎಂದು ಹಿರಿಯ ವಕೀಲ, ಪಂಚಮಸಾಲಿ ಮಹಾಸಭಾದ ಖಜಾಂಚಿ ಎಸ್.ಎಸ್.ಕಣಬೂರ ಒತ್ತಾಯಿಸಿದರು. ಲಿಂಗಾಯತ ಪಂಚಮಸಾಲಿ ಸಮಾಜ 80 ಲಕ್ಷಕ್ಕೂ ಅಧಿಕ ಜನಸಂಖ್ಯೆ ಹೊಂದಿದೆ, ಕನಿಷ್ಠ ನಾಲ್ಕು ಸಚಿವ ಸ್ಥಾನ ನೀಡಬೇಕು. ಮೊದಲಿನ ಪಟ್ಟಿಯಲ್ಲಿ ಕಾಶಪ್ಪನವರ ಹೆಸರು ಇರಬೇಕಿತ್ತು ಆದರೆ ಇರದ ಕಾರಣ ಸಮಾಜದ ಜನರಿಗೆ ನೋವಾಗಿದೆ, ಎರಡನೇ ಪಟ್ಟಿಯಲ್ಲಿ ಸಚಿವ ಸ್ಥಾನ ನೀಡಬೇಕು. ಜಿಲ್ಲೆಯಲ್ಲಿ ಪಕ್ಷವನ್ನು ಬೆಳೆಸುವ ಕೆಲಸವನ್ನು ಕ್ರಿಯಾಶೀಲವಾಗಿ ಮಾಡುತ್ತಿದ್ದಾರೆ, ಜಿಲ್ಲೆಯ ಅಭಿವೃದ್ಧಿ ದೃಷ್ಟಿಯಿಂದ ಹಾಗೂ ಈ ಭಾಗದ ಜನರ ಹಿತ ಕಾಪಾಡಲು ಸಚಿವ ಸ್ಥಾನ ನೀಡುವ ಅವಶ್ಯಕತೆ ಇದೆ ಎಂದರು. ಮಲ್ಲು ರಾಮಗೊಂಡ, ಮಲ್ಲಪ್ಪ ಮಂಟೂರ, ಬಸವರಾಜ ಮಲಕಪ್ಪನವರ ಇದ್ದರು.

ಉಚಿತ ಶಿಬಿರ ನಾಳೆ

ಗುಳೇದಗುಡ್ಡ: ಪಟ್ಟಣದ ಬನಶಂಕರಿ ಆಸ್ಪತ್ರೆ ವತಿಯಿಂದ ಜೂ.20ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 3ರ ವರೆಗೆ ಉಚಿತ ಕಣ್ಣಿನ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಕಣ್ಣಿನ ಸಮಸ್ಯೆಗಳು, ದೃಷ್ಟಿ ಮಸುಕಾಗುವುದು, ಕಣ್ಣಿನಲ್ಲಿ ನೀರು ಬರುವುದು, ಕಣ್ಣಿನ ಉರಿ, ಕಣ್ಣಿನ ಪೊರೆ ಸೇರಿದಂತೆ ವಿವಿಧ ಕಣ್ಣಿನ ತೊಂದರೆಗಳಿಗಾಗಿ ಈ ಶಿಬಿರದಲ್ಲಿ ಉಚಿತವಾಗಿ ತಪಾಸಣೆ ಮಾಡಲಾಗುವುದು. ಡಾ.ಪೂಜಾ ರಾಥೋಡ ಶಿಬಿರದಲ್ಲಿ ಕಣ್ಣಿನ ತಪಾಸಣೆ ಕೈಗೊಳ್ಳುವರು ಎಂದು ಡಾ.ಬಸವರಾಜ ಬಂಟನೂರು ತಿಳಿಸಿದ್ದಾರೆ.

ರಸ್ತೆ ದುರಸ್ತಿಗೆ ಆಗ್ರಹ

ಬೀಳಗಿ: ಕಲಾದಗಿ-ಕಾಗವಾಡ ರಾಜ್ಯ ಹೆದ್ದಾರಿಯ ಕಾತರಕಿ-ಕಲಾದಗಿ ಸೇತುವೆ ಮೇಲಿನ ರಸ್ತೆಯಲ್ಲಿ ಎರಡ್ಮೂರು ಗುಂಡಿಗಳು ಬಿದ್ದು ಅಪಾಯಕ್ಕೆ ಆಹ್ವಾನ ನೀಡುತ್ತಿವೆ. ತಾಲೂಕಿನ ಲಿಂಗಾಪೂರ (ಎಸ್.ಕೆ.) ಗ್ರಾಮದ ಕಡೆಯಿಂದ ಕಲಾದಗಿಗೆ ಹೋಗುವ ರಸ್ತೆಗೆ ದೊಡ್ಡ ಗುಂಡಿ ಬಿದ್ದಿದ್ದು, ಕರುವಿನಲ್ಲಿ ಜೋರಾಗಿ ಬರುವುದರಿಂದ ಗುಂಡಿ ವಾಹನ ಸವಾರರಿಗೆ ಗೊತ್ತಾಗುವದಿಲ್ಲ, ಗುಂಡಿಗೆ ಹಾಯ್ದು ದ್ವಿಚಕ್ರ ವಾಹನಗಳು ಕೆಳಕ್ಕೆ ಬಿದ್ದು ಅಪಘಾತ ಸಂಭವಿಸುತ್ತಿವೆ. ಈಗಾಗಲೇ ಹಲವಾರು ದ್ವಿ ಚಕ್ರ ವಾಹನ ಸವಾರರು ಕೆಳಗೆ ಬಿದ್ದು ಗಾಯಗೊಂಡಿರುವರು. ಸಂಬಂಧಪಟ್ಟ ಅಧಿಕಾರಿಗಳು ಗುಂಡಿಗಳಿಗೆ ಡಾಂಬರ ಅಥವಾ ಕಾಂಕ್ರೀಟ್ ಹಾಕಿ ಮುಚ್ಚಬೇಕು. ಇದರಿಂದ ದ್ವಿಚಕ್ರ ವಾಹನ ಸವಾರರು ಹಿಡಿಶಾಪ ಹಾಕುವಂತಾಗಿದೆ. ಒಮ್ಮೊಮ್ಮೆ ಕಲಹಕ್ಕೂ ಕಾರಣವಾಗುತ್ತಿದೆ.ಎರಡು ಬದಿಗೆ ಶೇಖರಣೆಗೊಂಡಿರುವ ಮಣ್ಣು ತೆಗೆದು ಹಾಕಿ ಸ್ವಚ್ಛಗೊಳಿಸುವ ಮೂಲಕ ನೀರು ಸರಾಗವಾಗಿ ಕೆಳಕ್ಕೆ ಹೋಗಲು ಅನವು ಮಾಡಿಕೊಡಬೇಕೆಂದು ಆಗ್ರಹಿಸಿದ್ದಾರೆ.

ಜೂ.25ರಂದು ಅದಾಲತ್

ಬಾಗಲಕೋಟೆ: ಅಂಚೆ ಕಚೇರಿಗಳಿಗೆ ಸಂಬಂಧಿಸಿದ ದೂರುಗಳು ಮತ್ತು ಕುಂದುಕೊರತೆ ನಿವಾರಿಸಲು ವಿಭಾಗೀಯ ಮಟ್ಟದ ಡಾಕ್ ಅದಾಲತ್‌ನ್ನು ಜೂ.25ರಂದು ಸಂಜೆ 4 ಗಂಟೆಗೆ ಅಂಚೆ ಅಧೀಕ್ಷಕರ ಕಚೇರಿ ಬಾಗಲಕೋಟೆಯಲ್ಲಿ ನಡೆಸಲಾಗುತ್ತಿದೆ. ಅಂಚೆ ಸೇವೆಗಳಿಗೆ ಸಂಬಂಧಿಸಿದ ಎಲ್ಲ ರೀತಿಯ ಸಮಸ್ಯೆಗಳನ್ನು, ವಿಶೇಷವಾಗಿ ಮೇಲ್‌ಗಳು, ಸ್ಪೀಡ್ ಪೋಸ್ಟ್ ವಸ್ತುಗಳು, ಪಾರ್ಸಲ್‌ಗಳು, ಕೌಂಟರ್ ಸೇವೆ, ಉಳಿತಾಯ ಬ್ಯಾಂಕ್ ಮತ್ತು ಮನಿ ಆರ್ಡರಗೆ ಸಂಬಂಧಿಸಿದ ಸಮಸ್ಯೆಗಳನ್ನು ಡಾಕ್ ಅದಾಲತ್‌ನಲ್ಲಿ ಪರಿಗಣಿಸಲಾಗುತ್ತದೆ. ಸಾರ್ವಜನಿಕರು ಯಾವುದೇ ದೂರುಗಳಿದ್ದರೆ, ವಿವರವಾಗಿ ಬರೆದು ಅಂಚೆ ಅಧೀಕ್ಷಕರ ಕಚೇರಿ, ಬಾಗಲಕೋಟೆ ವಿಭಾಗ, ಬಾಗಲಕೋಟೆ ಇವರಿಗೆ ಕಳುಹಿಸಬಹುದಾಗಿದೆ. ಸ್ವತಃ ಭಾಗವಹಿಸಲು ಇಚ್ಛಿಸುವವರು ಇಮೇಲ್ ಐಡಿ dobagalkot.ka@indiapost.gov.in ಗೆ ಕಳುಹಿಸುವಂತೆ ಅಂಚೆ ಅಧೀಕ್ಷಕರು ತಿಳಿಸಿದ್ದಾರೆ.



ಮಹಾಲಿಂಗಪುರ: ಸಮೀಪದ ಸೈದಾಪುರ ಸಮೀರವಾಡಿಯ ಅಕ್ಕಮಹಾದೇವಿ ಗ್ರಾಮೀಣಾಭಿವೃದ್ಧಿ ಸಂಸ್ಥೆ ವತಿಯಿಂದ ಅಧಿಕ ಮಾಸದ ಪ್ರಯುಕ್ತ ಮನೆಯಲ್ಲಿ ಮಹಾಮನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಸಂಸ್ಥೆಯ ಅಧ್ಯಕ್ಷೆ ಕವಿತಾ ಮಡಿವಾಳ, ಸದಸ್ಯರಾದ ಶಾರದಾ ತೆಗ್ಗಳ್ಳಿ ಲಕ್ಷ್ಮೀಬಾಯಿ ಸಾಲುಂಕೆ, ಮಹಾದೇವಿ ಹಂಜಿ, ಭಾರತಿ ರಾಮದುರ್ಗ, ವನಜಾಕ್ಷಿ ಕೊಣ್ಣೂರ, ಸುಮಿತ್ರ ಹಂಜಿ, ಶಿವಲೀಲಾ ಮುಚ್ಚಟ್ಟಿ, ಕವಿತಾ ಕಿರೂರ, ಶ್ರೀದೇವಿ ಗೌಡರ ಇದ್ದರು.

ಸೌಹಾರ್ದತೆಯಿಂದ ಮೊಹರಂ ಆಚರಿಸಿ

ಗುಳೇದಗುಡ್ಡ: ಭಾವೈಕ್ಯತೆಯ ಹಬ್ಬವಾದ ಮೋಹರಂ ಹಬ್ಬವನ್ನು ಎಲ್ಲರೂ ಶಾಂತಿ ಸೌಹಾರ್ದತೆಯಿಂದ ಆಚರಿಸಬೇಕು. ಹಬ್ಬದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಹಬ್ಬವನ್ನು ಆಚರಿಸಬೇಕು ಎಂದು ಪಿಎಸ್ಐ ಸಿದ್ದಣ್ಣ ಯಡಹಳ್ಳಿ ಹೇಳಿದರು. ಬುಧವಾರ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಮೋಹರಂ ಹಬ್ಬದ ನಿಮಿತ್ತ ಹಮ್ಮಿಕೊಂಡಿದ್ದ ಶಾಂತಿಪಾಲನಾ ಸಭೆಯಲ್ಲಿ ಮಾತನಾಡಿ, ನಮ್ಮಲ್ಲಿರುವ ಕಲೆ ಮತ್ತು ಸಂಸ್ಕೃತಿ ಅನಾವರಣ ಮಾಡುವಂತಹ ಈ ಹಬ್ಬಗಳಲ್ಲಿ ಹಿರಿಯರು ಮತ್ತು ಯುವಕರು ಭಾಗಿಯಾಗಿ ಹಬ್ಬವನ್ನು ಆಚರಿಸಿರಿ. ಯಾವುದೇ ಅಹಿತಕರ ಘಟನೆ ಕಂಡು ಬಂದರೆ ನಮಗೆ ತಕ್ಷಣ ಮಾಹಿತಿ ಕೊಡಿ. ಎಲ್ಲರೂ ಶಾಂತಿಯಿಂದ ಮೊಹರಂ ಎಲ್ಲರೂ ಸೇರಿ ಆಚರಿಸೋಣ. ಸಾಮಾಜಿಕ ಜಾಲತಾಣದಲ್ಲಿ ದೇವರು, ಧರ್ಮ ಇತ್ಯಾದಿ ವಿಷಯಗಳ ಬಗ್ಗೆ ಅನಗತ್ಯ, ಅಹಿತಕರ ಪೋಸ್ಟ್ ಮಾಡುವುದು, ಕಾಮೆಂಟ್ ಮಾಡುವುದು ಅಪರಾಧ. ಇದನ್ನು ಮಾಡಬೇಡಿ ಎಂದರು. ಮುರುಡಿ ಗ್ರಾಮದ ದಳಪತಿ, ಕೋಟೆಕಲ್ ಗ್ರಾಪಂ ಮಾಜಿ ಅಧ್ಯಕ್ಷ ರಹೆಮಾನ್ ಯಳ್ಳಿಗುತ್ತಿ ಮಾತನಾಡಿದರು. ಈ ಸಂದರ್ಭದಲ್ಲಿ ಮುನ್ನಾ ಮೂಗನೂರ, ಜಮೀರ್ ಮೌಲ್ವಿ, ಅಖಂಡೇಶ್ವರ ಪತ್ತಾರ, ಶ್ರೀಮಂತ ದೇಸಾಯಿ, ಮಂಜುನಾಥ ಉಂಕಿ, ನಬಿಸಾಬ ಮಕಾನದಾರ, ಮಹಾಂತೇಶ ಕಡಪಟ್ಟಿ, ಸುರೇಶ ಕುರಿ, ಅಮೀನಸಾಬ ಸಾಧನಿ, ಆದಪ್ಪ ಚೆಲ್ಲಾಪೂರ, ಉಸ್ಮಾನಗಣಿ ಕಂಟ್ರಾಕ್ಟರ್, ಬಸವರಾಜ ಉಪ್ಪಾರ, ಬಾಷಾಸಬ ಮುದ್ದೇಬಿಹಾಳ, ಮಣಿಕಂಠ ಉಂಕಿ, ಶಂಕ್ರಪ್ಪ ಉಣಚಗಿ ಸೇರಿದಂತೆ ತಾಲೂಕಿನ ಹಳದೂರ, ಹಂಸನೂರ, ರಾಘಾಪೂರ, ಕೋಟೆಕಲ್, ಲಾಯದಗುಂದಿ ಸೇರಿದಂತೆ ಗ್ರಾಮಸ್ಥರು ಇದ್ದರು.



ಕೆರೂರ: ಪಟ್ಟಣದಿಂದ ಅಗ್ನಿವೀರ ಸೇನೆಗೆ ಆಯ್ಕೆಯಾದ ಇಬ್ಬರು ವಿದ್ಯಾರ್ಥಿಗಳನ್ನು ಭೋವಿ ಸಮಾಜದ ಯುವಕ ಮಿತ್ರರು ಸನ್ಮಾನಿಸಿದರು. ಗೋಪಾಲ ವಡ್ಡತ, ಜಗದೀಶ ಪ್ರಭಾಕರ, ಜಯತಪ್ರಕಾಶ ವಡ್ಡರ, ನಾಗೇಶ ವಡ್ಡರ, ಶಿವು ಅಬ್ಬಿಗೇರಿ, ಮುತ್ತು ವಡ್ಡರ ಇದ್ದರು.

ಜೂ.21ರಂದು ನೀಟ್-2026 ಮರು ಪರೀಕ್ಷೆಗೆ ಸಿದ್ಧತೆ: ಡಿಸಿ ಸೂಚನೆ

ಪಾರದರ್ಶಕವಾಗಿ ಪರೀಕ್ಷೆ ನಡೆಸಿ

ಬಾಗಲಕೋಟೆ: ಜಿಲ್ಲೆಯಲ್ಲಿ ಜೂ.21ರಂದು ನಡೆಯಲಿರುವ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್-ಯುಜಿ) 2026ರ ಮರು ಪರೀಕ್ಷೆಯನ್ನು ಸುಗಮ, ಪಾರದರ್ಶಕ ಹಾಗೂ ದೋಷರಹಿತವಾಗಿ ನಡೆಸಲು ಎಲ್ಲ ರೀತಿ ಸಿದ್ಧತೆ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಸಂಗಪ್ಪ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಬುಧವಾರ ನಡೆದ ನೀಟ್ ಪರೀಕ್ಷೆ-2026ರ ಕುರಿತು ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಬಾಗಲಕೋಟೆ ಜನರದಲ್ಲಿ 11 ಪರೀಕ್ಷಾ ಕೇಂದ್ರಗಳಲ್ಲಿ ನೀಟ್ ಪರೀಕ್ಷೆ ನಡೆಯಲಿದ್ದು, ಒಟ್ಟು 3967 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಪರೀಕ್ಷಾ ಸಿದ್ಧತೆ ಮತ್ತು ಸುಗಮ ನಿರ್ವಹಣೆಗೆ ಸಂಬಂಧಿಸಿದಂತೆ ಪ್ರತಿಯೊಂದು ಕೇಂದ್ರಗಳ ಸಿಬ್ಬಂದಿಗಳ ಚಲನವಲನ ಗಮನಿಸಲು ಓರ್ವ ಸಿಬ್ಬಂದಿ ನೇಮಿಸಲು ತಿಳಿಸಿದರು.

ಪರೀಕ್ಷಾ ಕೇಂದ್ರಗಳಲ್ಲಿ ಅಗತ್ಯ ಮೂಲಸೌಕರ್ಯಗಳಾದ ವಿದ್ಯುತ್, ಕುಡಿಯುವ ನೀರು, ಸೌಚಾಲಯ, ತುರ್ತು ವೈದ್ಯಕೀಯ ಸೌಲಭ್ಯಗಳನ್ನು ಕಡ್ಡಾಯವಾಗಿ ಕಲ್ಪಿಸಬೇಕು. ಪರೀಕ್ಷಾರ್ಥಿಗಳು ಯಾವುದೇ ರೀತಿಯ ತೊಂದರೆ ತೊಂದತೆಯಾಗದಂತೆ ನೋಡಿಕೊಳ್ಳಬೇಕು. ಅಲ್ಲದೇ ಕಾನೂನು ಸುವ್ಯವಸ್ಥೆ ಕಾಪಾಡುವ ಕುರಿತು ಚರ್ಚೆ ನಡೆಸಿದ ಜಿಲ್ಲಾಧಿಕಾರಿಗಳು ಪ್ರಶ್ನೆ ಪತ್ರಿಕೆಗಳ ಸುರಕ್ಷತೆ ಸಾಗಣೆ, ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಕಣ್ಗಾವಲು, ಪೊಲೀಸ್ ಬಂದೋಬಸ್ತ ಹಾಗೂ ಕೇಂದ್ರಗಳ ಸುತ್ತ ನಿಷೇದಾಜ್ಞೆ ಜಾರಿಗಲೊಳಿಸುವ ಕುರಿತು ಅಧಿಕಾರಿಗಳಿಗೆ ಸೂಚನೆ ನೀಡಿದರು.



ನೀಟ್ ಮರು ಪರೀಕ್ಷೆಯು ಜೂ.21ರಂದು ಮಧ್ಯಾಹ್ನ 2ರಿಂದ ಸಂಜೆ 5.15ರ ವರೆಗೆ ನಡೆಯಲಿದ್ದು, ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳ ಪ್ರಿಸ್ಕಿಂಗ್ ಕಾರ್ಯ ಬೆಳಗ್ಗೆ 11 ರಿಂದ ಮಧ್ಯಾಹ್ನ 1.30 ವರೆಗೆ ನಡೆಯಲಿದ್ದು, ವಿದ್ಯಾರ್ಥಿಗಳು 11 ಗಂಟೆಗೆ ಹಾಜರಾಗಬೇಕು. ಪ್ರಿಸ್ಕಿಂಗ್ ಸಮಯದಲ್ಲಿ ಎನ್.ಟಿ.ಎ ನಿಯೋಜಿಸಿರುವ ಏಜೆನ್ಸಿ ಜೊತೆಗೆ ಓರ್ವ ಪೊಲೀಸ್ ಸಿಬ್ಬಂದಿ ನಿಯೋಜಿಸಿ ಅವರ ಮೂಲಕ ಪ್ರಿಸ್ಕಿಂಗ್ ಕಾರ್ಯ ನಡೆಸಬೇಕು.

ಜೂನ್ ತಿಂಗಳಲ್ಲಿ ಮಳೆಗಾಲ ಇರುವದರಿಂದ ಪರೀಕ್ಷಾ ಕೇಂದ್ರದ ಕಟ್ಟಡದಲ್ಲಿ ನೀರು ಸೋರಿಕೆಯಾಗದಂತೆ ಮುಂಚಿತವಾಗಿ ತಪಾಸಣೆ ಮಾಡಲು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್ ಮಾತನಾಡಿ ನೀಟ್ ಮರು ಪರೀಕ್ಷೆಗೆ 11 ಪರೀಕ್ಷಾ ಕೇಂದ್ರಗಳಿದ್ದು, ಪ್ರತಿಯೊಂದು ಕೇಂದ್ರಗಳಿಗೆ 10 ಜನ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗುತ್ತಿದೆ.

ಗೌಪ್ಯ ಸಾಮಗ್ರಿಗಳನ್ನು ಸುರಕ್ಷಿತವಾಗಿ ನಿರ್ವಹಿಸಲು ಬ್ಯಾಂಕಿನ ಸ್ಟಾಂಗ್ ರೂಮ್‌ಗೆ ಓರ್ವ ಎ.ಎಸ್.ಐ ಮತ್ತು 4 ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗುತ್ತಿದೆ ಎಂದು ತಿಳಿಸಿದರು.

ಸರಕಾರಿ ಪಾಲಿಟೆಕ್ನಿಕ್ ಕಾಲೇಜನ ಪ್ರಾಚಾರ್ಯ ಪ್ರಭಾಕರ ಪಾಟೀಲ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎ.ಸಿ.ಮನ್ನಿಕೇರಿ, ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರು ಹಾಗೂ ಪರೀಕ್ಷಾ ವೀಕ್ಷಕರು ಉಪಸ್ಥಿತರಿದ್ದರು.

ಅಕ್ಷರ ಅಭ್ಯಾಸ ಪ್ರಾರಂಭೋತ್ಸವ

ಇಳಕಲ್: ನಗರದ ಸಜ್ಜನ ವಿದ್ಯಾವರ್ಧಕ ಸಂಘದ ಆಡಿಯಲ್ಲಿ ನಡೆಯುವ ವಿವಿಧ ಅಂಗ ಸಂಸ್ಥೆಗಳಲ್ಲಿ ಗುರುವಾರ ಗುರು ಪುಷ್ಯಾಮೃತ ಯೋಗದ ಶುಭ ನಿಮಿತ್ತ 2026-2027ನೇ ಸಾಲಿನ ಅಕ್ಷರ ಅಭ್ಯಾಸ ಪ್ರಾರಂಭೋತ್ಸವ ಕಾರ್ಯಕ್ರಮವನ್ನು ಅತ್ಯಂತ ಸಡಗರ-ಸಂಭ್ರಮದಿಂದ ಆಚರಿಸಲಾಯಿತು.

ಮಕ್ಕಳಿಗೆ ಅಕ್ಷರ ಜ್ಞಾನದ ಮೊದಲ ಹೆಜ್ಜೆಯನ್ನಿಡಿಸುವ ಈ ಪವಿತ್ರ ಕಾರ್ಯಕ್ರಮದಲ್ಲಿ ಸಂಸ್ಥೆಯ ಪದಾಧಿಕಾರಿಗಳು ಹಾಗೂ ಗುರು ಹಿರಿಯರು ಪಾಲ್ಗೊಂಡು ಜ್ಞಾನದ ಜ್ಯೋತಿಯನ್ನು ಬೆಳಗಿಸಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಮುಖಂಡರು ಹಾಗೂ ಶೈಕ್ಷಣಿಕ ಮಾರ್ಗದರ್ಶಕರು ಪಾಲ್ಗೊಂಡು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು:

ಸಜ್ಜನ ಸಂಸ್ಥೆಯ ಗೌರವಾಧ್ಯಕ್ಷ ಸಿ.ಎಂ. ಸಜ್ಜನ, ಅಧ್ಯಕ್ಷ ಎಂ.ಬಿ.ಸಜ್ಜನ, ಆಂಗ್ಲ ಮಾಧ್ಯಮ ಅಧ್ಯಕ್ಷ ಮಂಜುನಾಥ ಜಿ. ಸಜ್ಜನ, ಕಾರ್ಯದರ್ಶಿ ಶಿವಣ್ಣ ಎಮ್. ಸಜ್ಜನ, ಶೈಕ್ಷಣಿಕ ಮಾರ್ಗದರ್ಶಿಕ ವಿ.ಎನ್ ಹುರುಳಿ ಇದರೊಂದಿಗೆ ಸಂಸ್ಥೆಯ ಕಾರ್ಯಕಾರಿ ಮಂಡಳಿಯ ಸರ್ವ ಸದಸ್ಯರು ಉಪಸ್ಥಿತರಿದ್ದು ಕಾರ್ಯಕ್ರಮಕ್ಕೆ ಕಳೆ ನೀಡಿದರು.

ಪ್ರೌಢ ವಿಭಾಗದ ಮುಖ್ಯೋಪಾಧ್ಯಾಯ ಎಮ್.ಎಸ್.ಸಜ್ಜನ,

ಪ್ರಾಥಮಿಕ ವಿಭಾಗದ ಮುಖ್ಯ ಗುರುಗಳು ಆರ್.ಪಿ.ಚನ್ನಗೌಡರ, ಆಂಗ್ಲ ಮಾಧ್ಯಮ ಶಾಲೆಯ ಮುಖ್ಯ ಗುರುಮಾತೆ ಎಸ್.ಕೆ.ಪೂಜಾರ ಗುರು ಪುಷ್ಯಾಮೃತ ಯೋಗದ ಈ ಪವಿತ್ರ ದಿನದಂದು ವಿದ್ಯಾರಂಭ ಮಾಡುವುದರಿಂದ ಮಕ್ಕಳಲ್ಲಿ ಜ್ಞಾನ, ಬುದ್ಧಿ ಮತ್ತು ಸಂಸ್ಕಾರ ಬೆಳೆಯುತ್ತದೆ ಎಂದು ಗಣ್ಯರು ಅಭಿಪ್ರಾಯಪಟ್ಟರು.

ಸಂಸ್ಥೆಯ ಸಮಸ್ತ ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿ ವರ್ಗದವರು ಸಕ್ರಿಯವಾಗಿ ಪಾಲ್ಗೊಂಡು, ಹೊಸದಾಗಿ ಶಾಲೆಗೆ ಪಾದಾರ್ಪಣೆ ಮಾಡಿದ ಪುಟಾಣಿ ಮಕ್ಕಳನ್ನು ಪ್ರೀತಿಯಿಂದ ಬರಮಾಡಿಕೊಳ್ಳುವ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸಿದರು.



ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಅಳವಡಿಕೆ: ಪ್ರಶಂಸೆ

ಗುಳೇದಗುಡ್ಡ: ಶಾಸಕ ಭೀಮಸೇನ ಚಿಮ್ಮನಕಟ್ಟಿ ಅವರ ಆಸಕ್ತಿ ಮೇರೆಗೆ ಪುರಸಭೆ ಆಡಳಿತಾಧಿಕಾರಿ ಸಂತೋಷ ಜಗಲಾಸರ ಅವರ ಒಪ್ಪಿಗೆ ಮೇರೆಗೆ ಪುರಸಭೆ ನಿಧಿಯಲ್ಲಿ ಪಟ್ಟಣದ ಸರ್ಕಾರಿ ಹಾಗೂ ಖಾಸಗಿ ಅನುದಾನಿತ 10 ಶಾಲೆಗಳ ಮಕ್ಕಳಿಗೆ ಶುದ್ಧ ಕುಡಿಯುವ ನೀರಿಗಾಗಿ ಆರ್‌ಒ ಘಟಕಗಳನ್ನು ಅಳವಡಿಸಿದ್ದು ಸಾರ್ವಜನಿಕರ ಪ್ರಶಂಸೆಗೆ ಪಾತ್ರವಾಗಿದೆ.

ಪಟ್ಟಣದ ಸರಕಾರಿ ಕನ್ನಡ ಗಂಡು ಮಕ್ಕಳ ಹಿರಿಯ ಪ್ರಾಥಮಿಕ ಶಾಲೆ, ನಂ.1, ನಂ.4, ಸರಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ನಂ.1, ಸರಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ನಂ.2, ಶಾಸಕರ ಸರಕಾರಿ ಮಾದರಿ ಪ್ರಾಥಮಿಕ ಶಾಲೆ, ಆರ್.ಡಿ.ಸೋನಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ನಂ.3, ಬಾಲಕಿಯರ ಸರಕಾರಿ ಪ್ರೌಢ ಶಾಲೆ, ಮಲ್ಲಿಕಾರ್ಜುನ ಕನ್ನಡ ಗಂಡು ಮಕ್ಕಳ ಶಾಲೆ, ಒಪ್ಪತ್ತಿನ ಸ್ವಾಮಿಗಳ ಕನ್ನಡ ಹಿರಿಯ ಪ್ರಾಥಮಿಕ ಶಾಲೆ, ಹೀಗೆ ಒಟ್ಟು 10 ಪಟ್ಟಣದ ಶಾಲೆಗಳಿಗೆ ಪುರಸಭೆ ತನ್ನ ಅನುದಾನದಲ್ಲಿ ಮಕ್ಕಳಿಗೆ ನಿತ್ಯ ಶುದ್ಧ ಕುಡಿಯುವ ನೀರಿಗೆ ವ್ಯವಸ್ಥೆ ಮಾಡಿ ಕೊಡಲಾಗಿದೆ. ಪ್ರತಿ ಶಾಲೆಗಳು ಈ ಘಟಕಗಳನ್ನು ಸರಿಯಾಗಿಟ್ಟುಕೊಳ್ಳಬೇಕೆಂದು ಶಾಲಾ ಮುಖ್ಯಸ್ಥರುಗಳಿಗೆಮುಖ್ಯಾಧಿಕಾರಿ ಎ.ಎಚ್. ಮುಜಾವರ ವಿನಂತಿಸಿಕೊಂಡಿದ್ದಾರೆ.



> **ಹೆಚ್ಚಿನ ಸಾಂಕ್ರಾಮಿಕ ರೋಗಗಳಿಗೆ ನಾವು ನಿತ್ಯ ಬಳಸುವ ಕುಡಿಯುವ ನೀರೇ ಕಾರಣವಾಗುತ್ತದೆ. ನಮ್ಮ ಶಾಲಾ ಮಕ್ಕಳಲ್ಲಿ ಶುದ್ಧ ಕುಡಿಯುವ ನೀರು ಕುಡಿಯುವ ರೂಢಿ ಬೆಳೆಯಲಿ. ಅದರಿಂದ ಅವರ ಆರೋಗ್ಯ ಸುಧಾರಿಸಲಿ ಎಂಬ ಸದುದ್ದೇಶದಿಂದ ಈ ಕಾರ್ಯ ಮಾಡಿಸಲಾಗಿದೆ.**
>
> **■ ಭೀಮಸೇನ ಚಿಮ್ಮನಕಟ್ಟಿ, ಶಾಸಕರು.**

ಮುಖ್ಯಗುರು ಎನ್.ಎಂ.ಚಿತ್ತರಗಿ ಮಾತನಾಡಿ, ಗುಳೇದಗುಡ್ಡ. ನಮ್ಮ ಶಾಲೆಯಲ್ಲಿ 200 ವಿದ್ಯಾರ್ಥಿಗಳಿದ್ದಾರೆ. ಈ ಮೊದಲು ನಳದ ನೀರನ್ನು ಟಾಕಿಯಲ್ಲಿ ಸಂಗ್ರಹಿಸಿ ಕೊಡಲಾಗಿತ್ತು. ಈಗ ಪುರಸಭೆಯವರ ಶುದ್ಧ ನೀರಿನ ಘಟಕ ಅನುಕೂಲವಾಗಿದೆ. ಗಂಟೆಗೆ 100 ಲೀ. ಪೂರೈಕೆ ಇದೆ ಎಂದರು.

ಜಾನಪದ ಸಂಸ್ಕೃತಿಯ ಪ್ರತಿಬಿಂಬ: ಗುರುಸಿದ್ದೇಶ್ವರ ಶ್ರೀಗಳು

ಗುಳೇದಗುಡ್ಡ: ಬದುಕಿನ ಪ್ರತಿಬಿಂಬವಾದ ಜಾನಪದ ಸಾಹಿತ್ಯವು ಮೌಲ್ಯಗಳ ಅಕ್ಷಯ ನಿಧಿಯಾಗಿದೆ. ಜನಪದ ಹಾಡುಗಳು, ಆಚರಣೆಗಳು ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಿವೆ. ಆಧುನಿಕ ಜೀವನ ಶೈಲಿ ಹಾಗೂ ಸೌಲಭ್ಯಗಳಿಂದಾಗಿ ಜನಪದ ಸಾಹಿತ್ಯ ಮೌಲ್ಯ ಕಡೆಗಣಿಸೆಯಾಗುತ್ತಿದೆ ಎಂದು ಪಟ್ಟಣದ ಗುರುಸಿದ್ದೇಶ್ವರ ಮಠದ ಗುರುಸಿದ್ಧ ಪಟ್ಟದಾರ್ಯ ಸ್ವಾಮಿಗಳು ಹೇಳಿದರು.

ಪಟ್ಟಣದ ಶಿವಪ್ಪಯ್ಯಮಠದ ಆವರಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಹಾಗೂ ಸ್ಥಳೀಯ ಗಜಾನನ ಸಾಂಸ್ಕೃತಿಕ ಹಾಗೂ ಕ್ರೀಡಾ ಯುವಕ ಮಂಡಳಿವತಿಯಿಂದ ಹಮ್ಮಿಕೊಂಡಿದ್ದ ಜಾನಪದ ಸಂಭ್ರಮ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿ, ಶ್ರಮ ಸಂಸ್ಕೃತಿಗೆ ಪೂರಕವಾದ ಜನಪದ ಗೀತೆಗಳು ಜನರ ನೋವು ನಲಿವುಗಳನ್ನು ಪರಿಣಾಮಕಾರಿಯಾಗಿ ಬಿಂಬಿಸುತ್ತವೆ ಎಂದರು.

ಹಿರಿಯ ಕಲಾವಿದರಾದ ಜ್ಞಾನೇಶ್ವರ ಬೊಂಬಲೇಕರ, ಷಣ್ಮುಖಪ್ಪ ತಟ್ಟಿ, ಮಲ್ಲಿಕಾರ್ಜುನ ಕಲಕೇರಿ, ಶೇಖರಪ್ಪ ಗೌಡ್ರ ಅವರನ್ನು ಸನ್ಮಾನಿಸಲಾಯಿತು. ಸಂಗಯ್ಯನವರು ಶಿವಪ್ಪಯನಮಠ ಸಾನ್ನಿಧ್ಯ ವಹಿಸಿದ್ದರು. ಮಂಡಳಿಯ ಅಧ್ಯಕ್ಷ ಕೂಡ್ಲೆಪ್ಪ ಕಲ್ಯಾಣಿ ಅಧ್ಯಕ್ಷತೆ ವಹಿಸಿದ್ದರು. ಜೆಡಿಎಸ್ ಜಿಲ್ಲಾಧ್ಯಕ್ಷ ಹನಮಂತ ಮಾವಿನಮರದ, ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ಸಾಲೇಶ್ವರ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಚಂದ್ರಕಾಂತ ಶೇಖಾ, ಶಿವಾನಂದ ಎಣ್ಣಿ, ಸಿದ್ದಪ್ಪ ಸಾರಂಗಿ, ಮುತ್ತಣ್ಣ ತಾಂಡೂರ, ಸಿದಬಸಪ್ಪ ಕೆಲೂಡಿ, ಸುರೇಶ ಸಾರಂಗಿ, ಸಿದ್ದಾರೂಡ ಪರಗಿ, ರಾಚಪ್ಪ ಸಾರಂಗಿ, ಮಲ್ಲಿಕಾರ್ಜುನ ಹಳ್ಳೂರ, ವಿಜಯಕುಮಾರ ಬೆಟಗೇರಿ ಉಪಸ್ಥಿತರಿದ್ದರು.



ಜೂ.24ರಂದು ವಿಚಾರ ಸಂಕಿರಣ



ಜಮಖಂಡಿ: ಜಾತಿ ಧರ್ಮ, ದೇವರು ದೇವಸ್ಥಾನ ಕಾರಣದಿಂದ ಮೂಲಭೂತವಾದಿ ಮನಸ್ಸುಗಳಿಂದ ನಡೆಯುವ ಕ್ರೌರ್ಯ ತಡೆಯಲಿಕ್ಕೆ ದಲಿತ ಸಮುದಾಯದಲ್ಲಿ ಜಾಗೃತಿ ಮೂಡಿಸಲು ಜೂ.24ರಂದು ಬುಧವಾರ ಬೆಂಗಳೂರಿನ ಗಾಂಧಿ ಭವನದಲ್ಲಿ ಪ್ರಜಾಪ್ರಭುತ್ವದಲ್ಲಿ ದಲಿತರ ಸ್ಥಾನಮಾನ ಕುರಿತು ಜನಜಾಗೃತಿ ರಾಜ್ಯಮಟ್ಟದ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿದೆ ಎಂದು ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕ ಶ್ಯಾಮರಾವ ಘಾಟಗೆ ಹೇಳಿದರು. ನಗರದ ಪತ್ರಿಕಾ ಭವನದಲ್ಲಿ ಸಿದ್ದುಗೋಷ್ಠಿಯಲ್ಲಿ ಮಾತನಾಡಿದ ಅವರು ಈ ವಿಚಾರ ಸಂಕಿರಣದಲ್ಲಿ ಸಚಿವ ಸತೀಶ ಜಾರಕಿಹೊಳಿ, ಮಾಜಿ ಸಚಿವರಾದ ಶಿವಾನಂದ ಪಾಟೀಲ, ಆರ್.ಬಿ.ತಿಮ್ಮಾಪುರ, ಶಾಸಕ ಪ್ರಸಾದ ಅಬ್ಬಯ್ಯ, ಇಂದಿರಾ ಸುಬ್ಬಯ್ಯ ಡಿಎಸ್ ಎಸ್ ರಾಜ್ಯ ಸಹ ಸಂಚಲಕ ವೆಂಕಟೇಶಮೂರ್ತಿ ಆನೇಕಲ, ಚಂದ್ರು ಚಕವರ್ತಿ, ಕೆಂಪಯ್ಯ ಸಾಗ್ಯ ಆಗಮಿಸಲಿದ್ದಾರೆ. ಪರಶುರಾಮ ಮಾಂಗ, ಬಸವರಾಜ ಜಮಖಂಡಿ, ಪುಂಡಲೀಕ ಮಾರದ, ಆನಂದ ಮೇತ್ರಿ, ಪ್ರಕಾಶ ಜಂಬಗಿ ಇದ್ದರು.

ಮಲ್ಲಿಕಾರ್ಜುನ ಮಂದಿರಕ್ಕೆ ದೇಣಿಗೆ

ಜಮಖಂಡಿ: ತಾಲೂಕಿನ ಹುಲ್ಯಾಳ ಗುರುದೇವಾಶ್ರಮದ ಆವರಣದಲ್ಲಿ ನಿರ್ಮಾಣಗೊಳ್ಳುತ್ತಿರುವ ವೇದಾಂತ ಕೇಸರಿ ಮಲ್ಲಿಕಾರ್ಜುನ ಶಿವಯೋಗಿಗಳ ಮಂದಿರಕ್ಕೆಮರೇಗುದ್ದಿಗ್ರಾಮಸ್ಥರಿಂದರೂ.4,11,000ದೇಣಿಗೆಯನ್ನುಹರ್ಷಾನಂದ ಶ್ರೀಗಳಿಗೆ ಹಸ್ತಾಂತರಿಸಲಾಯಿತು. ವಿಜಯಪುರ ಜ್ಞಾನಯೋಗಾಶ್ರಮದ ಸಿದ್ದೇಶ್ವರ ಶ್ರೀಗಳ ಸಂಕಲ್ಪದಂತೆ ಅವರ ಗುರುಗಳಾದ ವೇದಾಂತಕೇಸರಿ ಮಲ್ಲಿಕಾರ್ಜುನ ಶಿವಯೋಗಿಗಳ ಮಂದಿರ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ಸಿದ್ದೇಶ್ವರ ಶ್ರೀಗಳ ಸಂಕಲ್ಪ ಪೂರೈಕೆಗೆ ಅಳಿಲು ಸೇವೆ ಸಲ್ಲಿಸುವ ದೃಷ್ಟಿಯಿಂದ ಗ್ರಾಮಸ್ಥರಿಂದ ಕೈಲಾದ ವಂತಿಗೆ ಸಂಗ್ರಹಿಸಿ ಹರ್ಷಾನಂದ ಶ್ರೀಗಳಿಗೆ ಸಮರ್ಪಿಸಿದ್ದಾರೆ. ಮಲ್ಲಪ್ಪ ಅಥಣಿ, ಬಸಪ್ಪ ಬಾರಿಕಾಯಿ, ಸೋಮಪ್ಪ ಹವಾಲ್ದಾರ, ಹನಮಂತ ಗುಡಿ, ಹನಮಂತ ಕನಸನವರ, ರಾಚಪ್ಪ ಹುನ್ನೂರ, ಹನಮಂತ ದಾಶ್ಯಾಳ(ಘಟ್ನಟ್ಟಿ), ಸಂಗನಗೌಡ ಪಾಟೀಲ, ಅಡಿವೆಪ್ಪ ಗಸ್ತಿ, ರಾಚಯ್ಯ ಮಠಪತಿ ಇದ್ದರು.



101 ಸೈನಿಕ ದಂಪತಿಗೆ ಸೈನಿಕ ರತ್ನ ಪ್ರಶಸ್ತಿ ಪ್ರದಾನ

ಬಾದಾಮಿ: ಲೋಕ ಕಲ್ಯಾಣಾರ್ಥವಾಗಿ ಒಂದು ತಿಂಗಳ ಅಧಿಕ ಮಾಸದ ನಿಮಿತ್ತ ಪಟ್ಟಣದ ನವಗ್ರಹ ಹಿರೇಮಠದ ಶಿವಪೂಜಾ ಶಿವಾಚಾರ್ಯ ಶ್ರೀಗಳಿಂದ 8ನೇ ವರ್ಷದ ಅಧಿಕ ಮಾಸದ ಮೌನ ಅನುಷ್ಠಾನ, 15 ದಿನ ಗುಡ್ಡಾಪುರ ದಾನಮ್ಮದೇವಿ ಪುರಾಣ ಮಹಾಮಂಗಲ, ಅಯ್ಯಾಚಾರ, ಲಿಂಗದೀಕ್ಷೆ, 101 ಸೈನಿಕ ದಂಪತಿಗೆ ಸೈನಿಕ ರತ್ನ ಪ್ರಶಸ್ತಿ ಪ್ರದಾನ, 1008 ಮುತ್ತೈದೆಯರಿಗೆ ಉಡಿ ತುಂಬುವುದು, ಪಂಚ ತುಲಾಭಾರ, ವಿಭೂತಿ, ಬಾಳೆಹಣ್ಣು ನಾಣ್ಯ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಹೆಚ್ಚಿನ ಅಂಕ ಪಡೆದವರಿಗೆ ಸನ್ಮಾನ ಕಾರ್ಯಕ್ರಮ ನವಗ್ರಹ ಹಿರೇಮಠದಲ್ಲಿ ಜರುಗಿತು.

ಮೌನ ಮಂಗಳವನ್ನು ಘನ ಚಕ್ರವರ್ತಿ ಮರುಳಸಿದ್ಧ ಶಿವಾಚಾರ್ಯರು ಹಿರೇಮಠ ನರಸಾಪುರಅವರಿಂದಮೌನಮಂಗಳ ಮಾಡಿಸಿದರು. ನರಗುಂದ ಪತ್ರಿವನ ಮಠದ ಮ.ಘ.ಚ.ಡಾ.ಸಿದ್ದವೀರ ಶಿವಾಯೋಗಿ ಶಿವಾಚಾರ್ಯರು ಮಾತನಾಡಿ, ಲೋಕ ಉದ್ಧಾರಕ್ಕೆ ಮಳೆ ಬೆಳೆ ಸಮೃದ್ಧಿ ಹೊಂದಲು ಅಧಿಕ ವರ್ಷದಲ್ಲೂ ಈ ಇಂತಹ ಕಾರ್ಯವನ್ನು ಮಾಡುತ್ತಿರುವುದು ಶ್ಲಾಘನೀಯ. ಅಧಿಕ ಮಾಸದಲ್ಲಿ ದಾನ ಧರ್ಮ ಮಾಡಬೇಕು. ಶ್ರೀಗಳು ಸಂಕಲ್ಪ ಮಾಡಿದ ಎಲ್ಲಾ ಕಾರ್ಯಗಳು ಈಡೇರಿವೆ ಎಂದು ಭಕ್ತಿ ಗುರುವಿನ ಬಗ್ಗೆ ಹೇಳಿದರು.



ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕ ಹೊನ್ನಮ್ಮ ಹಿರೇಮಠ ಮಾತನಾಡಿ, ಶ್ರೀಗಳಿಂದ ನಾನು ಬ್ಯಾಂಕ್ ಉದ್ಘಾಟನೆ ಮಾಡಿಸಿದೆ. ಅದು ಚೆನ್ನಾಗಿ ಬೆಳೆದಿದೆ. ನನ್ನನ್ನು ಉನ್ನತ ಮಟ್ಟಕ್ಕೆ ಬೆಳೆಸಿದೆ ಎಂದು ಶ್ರೀಗಳನ್ನು ಶ್ಲಾಘಿಸಿದರು.

ಜಿಪಂ ಮಾಜಿ ಸದಸ್ಯ ಹನಮಂತ ಮಾವಿನಮರದ, ಕಾಡಾ ಮಾಜಿ ಅಧ್ಯಕ್ಷ ಬಿ.ಪಿ.ಹಳ್ಳೂರ, ಪುರಸಭೆ ಮಾಜಿ ಸದಸ್ಯೆ ಶಕುಂತಲಾ ನಾಯ್ಕರ, ಚನ್ನಮ್ಮ ಅಬಕ್ಕನವರ, ಮುಸ್ಲಿಂ ಧರ್ಮಗುರುಗಳು, ಚನ್ನಬಸಪ್ಪ ಅಥಣಿ, ಶಿಕ್ಷಕ ವಿ.ಎಸ್. ಶೆಟ್ಟರ ಸೇರಿದಂತೆ ಮುಖಂಡರು ಹಾಜರಿದ್ದರು.

ಕಾನೂನು ಸುವ್ಯವಸ್ಥೆಗೆ ಆದ್ಯತೆ

ಜಮಖಂಡಿ: ಕಾನೂನು ಸುವ್ಯವಸ್ಥೆ ಕಾಪಾಡಲು ಆದ್ಯತೆ ನೀಡಲಾಗುವದು. ಸಮಾಜಘಾತುಕ ಚಟುವಟಿಕೆಗಳು ಸೇರಿದಂತೆ ಇನ್ನಿತರ ಅಪರಾಧಗಳ ಸಂಖ್ಯೆ ಕಡಿಮೆಗೊಳಿಸಲು ಕ್ರಮ ಜರುಗಿಸಲಾಗುವುದ ಎಂದು ಬೆಳಗಾವಿ ನೂತನ ಐಜಿಪಿ ಸಂದೀಪ ಪಾಟೀಲ ತಿಳಿಸಿದರು.

ನಗರ ಠಾಣೆಗೆ ಭೇಟಿ ನೀಡಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. ನೂತನವಾಗಿ ಉತ್ತರ ವಲಯ ಐಜಿಪಿಯಾಗಿ ಅಧಿಕಾರ ವಹಿಸಿಕೊಂಡ ನಂತರ ವಿವಿಧ ನಗರಗಳಿಗೆ ಭೇಟಿ ನೀಡುತ್ತಿದ್ದೇನೆ. ದಾಖಲಾದ ಅರಾಧಗಳ ಸಂಖ್ಯೆ, ಕೈಗೊಂಡ ಕ್ರಮಗಳ ಕುರಿತು ಮಾಹಿತಿ ಪಡೆದಿದ್ದೇನೆ. ಗಾಂಜಾ, ಮಾವಾ, ಡ್ರಗ್ಸ್ ಮಾರಾಟ ಜಾಲಗಳನ್ನು ಪತ್ತೆಹಚ್ಚಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ ಎಂದರು.

ತಾಲುಕಿನಲ್ಲಿ ಅಕ್ರಮ ಮರಳುಗಾರಿಕೆ ನಡೆಯುತ್ತಿರುವ ಕುರಿತು ಮಾಹಿತಿ ಲಭ್ಯವಾಗಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಅಕ್ರಮ ತಡೆಯಲು ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡುತ್ತೇನೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಡಿವೈಎಸ್ಪಿ ಸೈಯದ್ ರೋಷನ್ ಜಮೀರ್, ಸಿಪಿಐ ಮಲ್ಲಪ್ಪ ಮಡ್ಡಿ, ಪಿಎಸ್ಐ ಅನೀಲ ಕುಂಬಾರ ಸೇರಿದಂತೆ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಇದ್ದರು.



ಶಾಸಕ ಜೆ.ಟಿ.ಪಾಟೀಲಗೆ ಸಚಿವ ಸ್ಥಾನ ನೀಡಿ

ಬೀಳಗಿ: ಸಚಿವ ಸಂಪುಟದಲ್ಲಿ ಹಿರಿಯ ಶಾಸಕ ಜೆ.ಟಿ.ಪಾಟೀಲರಿಗೆ ಸಚಿವ ಸ್ಥಾನ ನೀಡಬೇಕು ಎಂದು ತಾಲೂಕು ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಕಾರದ ಅಧ್ಯಕ್ಷ ಅಣವೀರಯ್ಯ ಪ್ಯಾಟಿಮಠ ಒತ್ತಾಯಿಸಿದ್ದಾರೆ.

ಪಟ್ಟಣದ ಜಿಎಲ್‌ಬಿಸಿ ಪ್ರವಾಸಿ ಮಂದಿರದಲ್ಲಿ ಕರೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೀಳಗಿ ವಿಧಾನಸಭಾ ಕ್ಷೇತ್ರದಿಂದ ಇಲ್ಲಿಯವರೆಗೆ ಕಾಂಗ್ರೆಸ್ಸಿನಿಂದ ಆಯ್ಕೆಯಾದ ಯಾವುದೇ ಶಾಸಕರಿಗೆ ಸಚಿವ ಸ್ಥಾನ ಸಿಕ್ಕಿಲ್ಲ. ಜೆ.ಟಿ.ಪಾಟೀಲ ಅವರಿಗೆ ಸಚಿವ ಸ್ಥಾನ ನೀಡಿದರೆ ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿ ಸಾಧ್ಯ. ಜೊತೆಗೆ ಕೃಷ್ಣಾ ಮೇಲ್ದಂಡೆ ಯೋಜನೆ ಸೇರಿದಂತೆ ಹಲವು ನೀರಾವರಿ ಯೋಜನೆಗಳು ವೇಗವಾಗಿ ಪೂರ್ಣಗೊಳ್ಳಲಿವೆ ಎಂಬ ಭರವಸೆ ಜಿಲ್ಲೆಯ ಜನರಿಗಿದೆ ಎಂದರು.



ಕೃಷ್ಣಾಮೇಲ್ದಂಡೆಯೋಜನೆಯಡಿ ಮುಳುಗಡೆಯಾಗುವ ನೀರಾವರಿ ಜಮೀನುಗಳಿಗೆತಲಾ 40 ಲಕ್ಷಹಾಗೂ ಒಣ ಬೇಸಾಯದ ಜಮೀನುಗಳಿಗೆ ತಲಾ 30 ಲಕ್ಷ ರೂ.ಪರಿಹಾರವನ್ನು ಫಲಾನುಭವಿಗಳಿಗೆ ಕೊಡಿಸಲು ಶಾಸಕ ಜೆ.ಟಿ.ಪಾಟೀಲ ಅವರು ಸರ್ಕಾರದ ಮೇಲೆ ನಿರಂತರ ಒತ್ತಡ ಹೇರಿದ್ದರು ಎಂದು ವಿವರಿಸಿದರು.

ಕಾಂಗ್ರೆಸ್ ಮುಖಂಡ ಸಂಗಪ್ಪ ಕಂದಗಲ್ ಮಾತನಾಡಿ, ಜೆ.ಟಿ.ಪಾಟೀಲ ಅವರು ಯಾವುದೇ ಕಳಂಕವಿಲ್ಲದ ಕ್ಲೀನ್ ಇಮೇಜ್ ಹೊಂದಿರುವ ಹಿರಿಯ ಶಾಸಕರು. ಈ ಬಾರಿ ಕಾರ್ಯಕರ್ತರು ಅತ್ಯಂತ ಹುಮ್ಮಸ್ಸಿನಿಂದ ಅವರನ್ನು ಗೆಲ್ಲಿಸಿಕೊಂಡು ಬಂದಿದ್ದಾರೆ. ಒಂದು ವೇಳೆ ಅವರಿಗೆ ಸಚಿವ ಸ್ಥಾನ ನೀಡದಿದ್ದರೆ ತೀವ್ರ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಪಪಂ ಮಾಜಿ ಮಾಜಿ ಅಧ್ಯಕ್ಷ ಅನಿಲ ಗಚ್ಚಿನಮನಿ, ಸಿದ್ದು ಮೇಟಿ, ಹಾಸಿಂಫೀರ ಮುಜಾವರ, ವಾಚಮೇಕರ, ಕೃಷ್ಣಾ ಬಾಲಗಾವಿ, ಅಬುಶಮಾ ಖಾಜಿ, ಮಾಯಪ್ಪ ಬಿದರಿ, ಶ್ಯಾಮಾ ಮುಲ್ಲಾ, ಹನಮಂತ ಗಚ್ಚಿನಮನಿ, ರಾಹುಲ ಚಲವಾದಿ, ಸಾಗರ ಚಲವಾದಿ, ಇಮಾಮ ಬಾಗವಾನ, ಮಹಮ್ಮದ ರಫಿಕ ಮುಜಾವರ, ಸುನಿಲ ಗಚ್ಚಿನಮನಿ, ಪರಸು ಕಳ್ಳಿಮನಿ, ಪಾರೀಶ ಚಲವಾದಿ ಉಪಸ್ಥಿತರಿದ್ದರು.

ಕಿರುಸುದ್ದಿ

ಜೂ.20, 21ರಂದು ಪತಂಜಲಿ ಯೋಗ ತರಬೇತಿ

• **ಕೊಲ್ಹಾರ:** ಪಟ್ಟಣದ ವಿಶ್ವಭಾರತಿ ವಿದ್ಯಾವರ್ಧಕ ಸಂಸ್ಥೆಯ ಆವರಣದಲ್ಲಿ ವಿಶ್ವಯೋಗ ದಿನದ ಅಂಗವಾಗಿ ಪತಂಜಲಿ ಯೋಗ ತರಬೇತಿ ಹಮ್ಮಿಕೊಳ್ಳಲಾಗಿದೆ ಎಂದು ಸಂಘಟಕರಾದ ಈರಯ್ಯ ಹಲಗಯ್ಯ ಮಠಪತಿ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜೂ.20, 21ರಂದು ಎರಡು ದಿನ ಬೆಳಗ್ಗೆ 6 ಗಂಟೆಯಿಂದ 7 ಗಂಟೆಯವರೆಗೆ ಮಾಜಿ ಸಚಿವ ಯೋಗ ಶಿಕ್ಷಕ ಎಸ್.ಕೆ.ಬೆಳ್ಳುಬ್ಬಿಯವರ ಮಾರ್ಗದರ್ಶನದಲ್ಲಿ ನಡೆಯುವ ತರಬೇತಿಯಲ್ಲಿ ಶಾಲಾ ಮಕ್ಕಳು ಊರಿನ ಸಾರ್ವಜನಿಕರು ಯೋಗ ಶಿಕ್ಷಣ ಪಡೆಯಬೇಕು ಎನ್ನುವ ಆಸಕ್ತರು ತರಬೇತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು. ಪಪಂ ಮಾಜಿ ಅಧ್ಯಕ್ಷ ಕಲ್ಲಪ್ಪ ಶಿ.ಸೊನ್ನದ, ವಿರುಪಾಕ್ಷಿ ನಾ.ಕೊಲಕಾರ, ಸಂಗಪ್ಪ ಹುಚ್ಚಪ್ಪಗೋಳ ಉಪಸ್ಥಿತರಿದ್ದರು.

ಮಲಕಪ್ಪ ಹೂಗಾರ ಕಸಾಪ ದತ್ತಿ ಪ್ರಶಸ್ತಿ ಆಯ್ಕೆ

• **ವಿಜಯಪುರ:** ಜಿಲ್ಲೆಯ ಮಲಕಪ್ಪ ಹೂಗಾರ ಅವರು ದಿ.ಅಚ್ಯುತರಾವ ಬಲವಂತರಾವ ಕುಲಕರ್ಣಿ ಸ್ಮರಣಾರ್ಥ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ದತ್ತಿ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.



ಮಲಕಪ್ಪ ಹೂಗಾರ ಅವರು ಕಳೆದ ಇಪ್ಪತ್ತು ವರ್ಷಗಳಿಂದ ಅನೇಕ ಪತ್ರಿಕೆಗಳ ವಿತರಣೆ ಕೆಲಸದಲ್ಲಿ ಸೇವೆ ಮಾಡುತ್ತ ಬಂದಿದ್ದು ಅವರು ಈ ಸೇವೆಯಿಂದ ಕಸಾಪ ದತ್ತಿ ಪ್ರಶಸ್ತಿಗೆ ಆಯ್ಕೆಗೊಂಡಿದ್ದು, ಕಸಾಪ ಗೌರವ ಕಾರ್ಯದರ್ಶಿ ಡಾ.ಮಾಧವ ಗುಡಿ, ಶಿಲ್ಪಾ ಭಸ್ಮೆ ಅಭಿಷೇಕ ಚಕ್ರವರ್ತಿ ಆಯ್ಕೆ ಸಮಿತಿಯಲ್ಲಿದ್ದರು. ಜೂ.21ರಂದು ಇಲ್ಲಿನ ಕಸಾಪ ಭವನದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಕಸಾಪ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲೀಕಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೃದ್ಧರಿಗೆ ಕಚ್ಚಿದ ಮಂಗಗಳು

• **ನಾಲತವಾಡ:** ಪಟ್ಟಣದಲ್ಲಿ ಮಂಗಗಳ ಉಪಟಳ ಸಾರ್ವಜನಿಕರನ್ನು ನಿದ್ದೆಗೆಡಿಸಿದ್ದು, ಮಂಗವಾರ ವೃದ್ಧರಿಬ್ಬರಿಗೆ ಮಂಗಗಳು ದಾಳಿ ಮಾಡುವ ಮೂಲಕ ಕಚ್ಚಿ ಗಾಯಗೊಳಿಸಿದ ಘಟನೆ ನಡೆದಿದೆ. ಸುಮಾರು ಒಂದು ವರ್ಷದಿಂದಲೂ ಪಟ್ಟಣದಲ್ಲೇ ಸುಮಾರು ಮಂಗಗಳ ಹಿಂಡು ಬೀಡು ಬಿಟ್ಟ ಪರಿಣಾಮ ವಸತಿ ನಿಲಯ, ಬಸ್ ನಿಲ್ದಾಣ ಆಕ್ತ ಗಲ್ಲಿ ಗಲ್ಲಿಗಳಲ್ಲಿ ಉಗ್ರೆಯ್ಡು ಪರಿಣಾಮ ಸಾರ್ವಜನೀಕರಲ್ಲಿ ಭೀತಿ ಉಂಟು ಮಾಡಿವೆ. ಕಳೆದ 5 ತಿಂಗಳಷ್ಟೇ ಹಲವಡೆ ದಾಳಿ ಮಾಡಿದ ಮಂಗಗಳು ಶಾಲಾ ಮಕ್ಕಳ ಮೇಲೆ ದಾಳಿಗೈದು ಗಾಯಗೊಳಿಸಿದ್ದವು, ಪಾಲಕರೂ ಸಹ ಮಕ್ಕಳ ರಕ್ಷಣೆಗೆ ಹರಸಾಹಸ ಪಡುವಂತಾಗಿದ್ದು ಅರಣ್ಯ ಇಲಾಖೆಯವರು ಕೈಕಟ್ಟಿ ಕುಳಿತ ನತ ಆಕ್ರೋಶ ಉಂಟು ಮಾಡಿದೆ. ಮಂಗಗಳ ತಂಡೋಪ ತಂಡ ಆಗಮನದ ಹಿನ್ನಲೆ ನಿವಾಸಿಗಳು ಮನೆಯಂಗಳ ಹಾಗೂ ಕಂಪೌಂಡ್‌ಗಳಲ್ಲಿ ಆಹಾರದ ವಸ್ತುಗಳನ್ನು ಇಟ್ಟಲ್ಲಿ ಅಲ್ಲಿಯೂ ದಾಳಿ ಮಾಡುತ್ತಿದ್ದು ನುಂಗಲಾರದ ತುತ್ತಾಗಿದೆ. ದಳೆದ ಒಂದು ವರ್ಷದಿಂದಲೂ ವಿಪರಿತ ಮಂಗಗಳು ಬೀಡು ಬಿಟ್ಟಿವೆ, ಶಾಲಾ ಮಕ್ಕಳು ವೃದ್ಧರಿಗೆ ಹಲವಾರು ಬಾರಿ ಕಚ್ಚಿ ಗಾಯಗೊಳಿಸಿದ್ದ ವಿಷಯ ಗೊತ್ತಿದ್ದರೂ ಅರಣ್ಯ ಇಲಾಖೆಯವರು ಕೈಕಟ್ಟಿ ಕುಳಿತುಕೊಂಡಿದ್ದಾರೆ ಸಾರ್ವಜನೀಕರ ಹಿತಕ್ಕೆ ಮುಂದಾಗುವ ಮೂಲಕ ಮಂಗಗಳ ಸ್ಥಳಾಂತರಕ್ಕೆ ಮುಂದಾಗಬೇಕಿದೆ ಎಂದು ಚನ್ನಪ್ಪಗೌಡ ಹಂಪನಗೌಡ್ರ ಆಗ್ರಹಿಸಿದ್ದಾರೆ.

ಪ್ರೊ.ಭಗವಾನ್ ವಿರುದ್ಧ ಕ್ರಮಕ್ಕೆ ಆಗ್ರಹ

• **ವಿಜಯಪುರ:** ಮರ್ಯಾದಾ ಪುರುಷೋತ್ತಮ ರಾಮಚಂದ್ರನ ಬಗ್ಗೆ ಅವಾಚ್ಯ ಶಬ್ದಗಳನ್ನು ಬಳಸಿದ ಪ್ರೊ.ಕೆ.ಎಸ್. ಭಗವಾನ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಸ್ವರಾಜ್ಯ ಸೇನಾ ವಿಜಯಪುರ ವತಿಯಿಂದ ಜಿಲ್ಲಾಧಿಕಾರಿ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು. ಸಂಘಟನೆ ಸಂಸ್ಥಾಪಕ ಅಧ್ಯಕ್ಷ ಕಿರಣ ಕಾಳೆ ಮಾತನಾಡಿ, ಇಡೀ ವಿಶ್ವಕ್ಕೆ ಆದರ್ಶವಾಗಿರುವ ರಾಮನ ಬಗ್ಗೆ ಮತ್ತು ಹಿಂದೂ ಸಂಸ್ಕೃತಿ ಬಗ್ಗೆ ಪ್ರೊ.ಕೆ.ಎಸ್.ಭಗವಾನ್ ಅವಹೇಳನಕಾರಿ ಹೇಳಿಕೆ ನೀಡಿದ್ದು ಖಂಡನೀಯ. ಚುನಾವಣೆ ಸಮಯದಲ್ಲಿ ನನ್ನ ಹೆಸರಿನಲ್ಲೂ ರಾಮ ಇದ್ದಾನೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹೇಳಿದ್ದರೆ, ನಾನು ಹಿಂದು ಇದ್ದೇನೆ, ರಾಜಕೀಯಕ್ಕಾಗಿ ನನ್ನ ಧರ್ಮ ಬಿಡಲಾಗಲ್ಲ ಎಂದು ಹೇಳಿದ್ದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರೇ, ನಿಮ್ಮ ಹಿಂದು ಧರ್ಮದ ಬಗ್ಗೆ ಅವಹೇಳನ ನಡೆದರೂ ತಾವು ಏಕೆ ಕ್ರಮ ಕೈಗೊಳ್ಳುತ್ತಿಲ್ಲ? ಕೂಡಲೇ ಸರ್ಕಾರ ಇಂತಹ ಹಿಂದೂ ವಿರೋಧಿಗಳ ಮೇಲೆ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ, ರಾಜ್ಯಾದ್ಯಂತ ಸಮಸ್ತ ಹಿಂದೂ ಬಾಂಧವರು ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಸಂಘಟನೆಯ ಪದಾಧಿಕಾರಿ ಆನಂದ ಚೌಧರಿ, ಪವನ ನಲಗೆ, ಗಣೇಶ ಗರುಡಕರ, ಸ್ವರೂಪ ಸಪ್ತಾಳೆ, ಆಕಾಶ ಗೋತ್ರಾಳೆ ಇದ್ದರು.



ಕೊಲ್ಹಾರ. ತಾಲೂಕಿನ ಕೂಡಗಿ ಗ್ರಾಮ ಹಾಗೂ ಕೂಡಗಿ ತಾಂಡಾದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಮಾಜಿ ಸಚಿವ ಶಿವಾನಂದ ಪಾಟೀಲ ಭೂಮಿಪೂಜೆ ನೆರವೇರಿಸಿದರು. ಸಾನಿಧ್ಯವನ್ನು ಗಂಗಾಧರಯ್ಯ ಹಿರೇಮಠ, ಮಹೇರಾಜಪೀರಾ ಜಾಗಿರದಾರ, ಆರೀಫ್ ತಾಳಿಕೋಟಿ, ಅಂಜುಮನ್ ಕಮಿಟಿ ಅಧ್ಯಕ್ಷ ಕಾಶಿಮಸಾಬ ಕೊಡಗಾನೂರ, ಗ್ಯಾರಂಟಿ ಸಮಿತಿ ಅಧ್ಯಕ್ಷ ಸಂತೋಷ ಗಣಾಚಾರಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಆರ್.ಬಿ ಪಕಾಲಿ, ತಹಶೀಲ್ದಾರ್ ಎಸ್.ಎಚ್. ಅರಕೇರಿ, ತಾಪಂ ಇಒ ಸುನೀಲ ಮದ್ದಿನ್, ಜಿಲ್ಲಾ ಪಪಂ ಸಹಾಯಕ ಕಾರ್ಯಪಾಲಕ ಅಭಿಯಂತರ ವಿಲಾಸ ರಾಠೋಡ, ಕೆಆರ್‌ಐಡಿಎಲ್ ಕಾರ್ಯಪಾಲಕ ಅಭಿಯಂತರ ಆನಂದಸ್ವಾಮಿ, ಇದ್ದರು.

ಸಂದರ್ಶನ: 94 ವಿದ್ಯಾರ್ಥಿಗಳು ಆಯ್ಕೆ

• **ವಿಜಯಪುರ:** ನಗರದ ಬಿಎಲ್‌ಡಿಇ ಸಂಸ್ಥೆಯ ಸಂಗನಬಸವ ಮಹಾಸ್ವಾಮೀಜಿ ಪಾಲಿಟೆಕ್ನಿಕ್‌ನಲ್ಲಿ ಎರಡು ದಿನ ನಡೆದ ಕ್ಯಾಂಪಸ್ ಸಂದರ್ಶನದಲ್ಲಿ 46 ಡಿಪ್ಲೋಮಾ ಮತ್ತು 48 ಐಟಿಐ ಸೇರಿ 94 ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ. ಧಾರವಾಡದ ನಿಡೆಕ್ ಸಂಸ್ಥೆ ಮತ್ತು ಬಿಎಲ್‌ಡಿಇ ಪಾಲಿಟೆಕ್ನಿಕ್ ಹಾಗೂ ಐಟಿಐ ವತಿಯಿಂದ ಆಯೋಜಿಸಲಾದ ಈ ಕ್ಯಾಂಪಸ್ ಸಂದರ್ಶನದಲ್ಲಿ ನಿಡೆಕ್ ಮುಖ್ಯ ವ್ಯವಸ್ಥಾಪಕ ಸೋಮಶೇಖರ, ವ್ಯವಸ್ಥಾಪಕ ಮಂಜುನಾಥ, ಮಾನವ ಸಂಪನ್ಮೂಲ ವಿಭಾಗದ ಚಂದನಾ ಹಾಗೂ ನಿಶ್ಮಿತಾ ಸಂದರ್ಶನ ನಡೆಸಿದರು. ವಿಜಯಪುರ ಮತ್ತು ಸುತ್ತಮುತ್ತಲಿನ ಜಿಲ್ಲೆಗಳ ಡಿಪ್ಲೊಮಾ ಮೆಕ್ಯಾನಿಕಲ್, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ವಿಭಾಗಗಳ ಒಟ್ಟು 60 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮತ್ತು ನಾನಾ ಐಟಿಐ ವಿಭಾಗಗಳ 110ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಲಿಖಿತ ಪರೀಕ್ಷೆಯಲ್ಲಿ 52 ವಿದ್ಯಾರ್ಥಿಗಳನ್ನು ಆಯ್ಕೆಮಾಡಿ ಮೌಖಿಕ ಸಂದರ್ಶನ ನಡೆಸಲಾಯಿತು. ಬಿಎಲ್‌ಡಿಇ ಡಿಪ್ಲೊಮಾ ಕಾಲೇಜಿನ ಪ್ರಾಚಾರ್ಯ ಪ್ರಭುದೇವ ಬಿ ಕಳಸಗೊಂಡ, ಉದ್ಯೋಗಾಧಿಕಾರಿ ಸುಧನ್ವ ಕುಲಕರ್ಣಿ, ಸಂತೋಷ ಹಿರೇಮಠ, ಪಾಂಡುರಂಗ ಅಸ್ಲಂಕರ, ಐಟಿಐ ಉದ್ಯೋಗಾಧಿಕಾರಿ ವಾಗೀಶ ಮರೀಮಠ ಸೇರಿದಂತೆ ಎಲ್ಲ ವಿಭಾಗದ ಮುಖ್ಯಸ್ಥರು ಹಾಗೂ ಉಪನ್ಯಾಸಕರು ಇದ್ದರು. ಬಿಎಲ್‌ಡಿಇ ಸಂಸ್ಥೆಯ ಅಧ್ಯಕ್ಷ ಮತ್ತು ಸಚಿವ ಎಂ.ಬಿ.ಪಾಟೀಲ, ಪ್ರಧಾನ ಕಾರ್ಯದರ್ಶಿ ಮತ್ತು ವಿಧಾನ ಪರಿಷತ್ ಸದಸ್ಯ ಸುನೀಲಗೌಡ ಪಾಟೀಲ ಅಭಿನಂದನೆ ತಿಳಿಸಿದ್ದಾರೆ.



ವಿಜಯಪುರ: ನಗರದ ಬಿಎಲ್‌ಡಿಇ ಸಂಸ್ಥೆಯ ಸಂಗನಬಸವ ಮಹಾಸ್ವಾಮೀಜಿ ಪಾಲಿಟೆಕ್ನಿಕ್‌ನಲ್ಲಿ ಎರಡು ದಿನ ನಡೆದ ಕ್ಯಾಂಪಸ್ ಸಂದರ್ಶನದಲ್ಲಿ 46 ಡಿಪ್ಲೋಮಾ ಮತ್ತು 48 ಐಟಿಐ ಸೇರಿ 94 ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ. ಬಿಎಲ್‌ಡಿಇ ಸಂಸ್ಥೆಯ ಅಧ್ಯಕ್ಷ ಮತ್ತು ಸಚಿವ ಎಂ.ಬಿ.ಪಾಟೀಲ, ಪ್ರಧಾನ ಕಾರ್ಯದರ್ಶಿ ಮತ್ತು ವಿಧಾನ ಪರಿಷತ್ ಸದಸ್ಯ ಸುನೀಲಗೌಡ ಪಾಟೀಲ ಅಭಿನಂದನೆ ತಿಳಿಸಿದ್ದಾರೆ.

ಅರ್ಹ ಫಲಾನುಭವಿಗಳ ಅರ್ಜಿಗಳನ್ನು ಬಾಕಿ ಉಳಿಕೊಳ್ಳಬೇಡಿ | ಡಿಸಿ ಸೂಚನೆ

ನಿಗದಿತ ಅವಧಿಯೊಳಗೆ ಇತ್ಯರ್ಥಪಡಿಸಿ

• **ವಿಜಯಪುರ:** ಸರ್ಕಾರದಿಂದ ಅನುಷ್ಠಾನಗೊಳ್ಳುವ ಯೋಜನೆಗೆ ಸಂಬಂಧಿಸಿದಂತೆ ಬ್ಯಾಂಕಿನಲ್ಲಿ ಅರ್ಹ ಫಲಾನುಭವಿಗಳ ಅರ್ಜಿಗಳನ್ನು ಬಾಕಿ ಉಳಿಸಿಕೊಳ್ಳದೇ ನಿಗದಿತ ಅವಧಿಯಲ್ಲಿ ಇತ್ಯರ್ಥಪಡಿಸಬೇಕು ಎಂದು ಜಿಲ್ಲಾಧಿಕಾರಿ ಡಾ.ಆನಂದ ಕೆ. ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ಹಮ್ಮಿಕೊಂಡ ಜಿಲ್ಲಾ ಮಟ್ಟದ ದೌರ್ಜನ್ಯ ನಿಯಂತ್ರಣ 1989 ಪ್ರತಿಬಂಧ ಕಾಯ್ದೆಯಡಿ ರಚಿತವಾದ ಜಿಲ್ಲಾ ಮಟ್ಟದ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರತಿ ಮೂರು ತಿಂಗಳಿಗೊಮ್ಮೆ ಬ್ಯಾಂಕಿನ ಅಧಿಕಾರಿಗಳ ಸಭೆ ನಡೆಸಲಾಗುತ್ತಿದೆ. ಈ ಬಗ್ಗೆ ನಿರಂತರ ಪ್ರಗತಿ ವರದಿ ಅವಲೋಕಿಸಲಾಗುತ್ತಿದೆ. ಜಿಲ್ಲೆಯ ವಿವಿಧ ಬ್ಯಾಂಕಿನ ಶಾಖಾ ವ್ಯವಸ್ಥಾಪಕರೊಂದಿಗೆ ವಿವಿಧ ಸರ್ಕಾರದ ಯೋಜನೆಯಡಿ ಫಲಾನುಭವಿಗಳ ಬಾಕಿ ಅರ್ಜಿ ಸ್ಥಿತಿಗತಿ ಕುರಿತು ಅಗ್ರಣೀಯ ಬ್ಯಾಂಕಿನ ಅಧಿಕಾರಿಗಳು ಕಾಲ- ಕಾಲಕ್ಕೆ ಸಭೆ ನಡಸಬೇಕು.

ಈ ವಿಷಯದಲ್ಲಿ ವಿನಾ ಕಾರಣ ವಿಳಂಬ ಆಗದಂತೆ ಕ್ರಮ ಕೈಗೊಳ್ಳಬೇಕು ಎಂದು ಅಗ್ರಣೀಯ ಬ್ಯಾಂಕ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ನೀರಾವರಿ ಪಂಪ್‌ಸೆಟ್ ಅರ್ಜಿ ಪರಿಶೀಲಿಸಿ ವಿದ್ಯುತ್ ಪರಿವರ್ತಕ ಅಳವಡಿಸಲು ಕ್ರಮವಹಿಸಬೇಕು. ಪರಿಶಿಷ್ಟ ಜಾತಿ ಸಮುದಾಯದವರು ವಾಸಿಸುವ ಕಾಲೋನಿಯಲ್ಲಿ ಕುಡಿಯುವ ನೀರಿನ ಅಭಾವವಾಗದಂತೆ



> ಸಭೆಯಲ್ಲಿ ಚರ್ಚೆಯಾದ ವಿಷಯದ ಸಮಸ್ಯೆಗಳನ್ನು ತಕ್ಷಣ ಇತ್ಯರ್ಥಪಡಿಸಬೇಕು. ದೌರ್ಜನ್ಯ ಪ್ರಕರಣಗಳಲ್ಲಿ ವಿಳಂಬ ಮಾಡದೇ ಪರಿಹಾರ ಒದಗಿಸಬೇಕು.
> ■ ಡಾ.ಆನಂದ ಕೆ. ಜಿಲ್ಲಾಧಿಕಾರಿ

ಸಮರ್ಪಕವಾಗಿ ನೀರು ಪೂರೈಕೆಗೆ ಕ್ರಮ ಕೈಗೊಳ್ಳಬೇಕು ಎಂದರು.

ಚರಂಡಿ ನೀರು ಸರಾಗವಾಗಿ ಹರಿಯಲು ಇರುವ ತೊಂದರೆಯನ್ನು ನಿವಾರಿಸಿಕೊಂಡು ಸಮಸ್ಯೆ ಪರಿಹರಿಸಬೇಕು. ಸಮಾಜದ ಮುಖಂಡರೊಂದಿಗೆ ಸಮಿತಿ ಸಭೆಯನ್ನು ಕಾಲಕಾಲಕ್ಕೆ ನಡೆಸಬೇಕು. ಅರ್ಹರಿಗೆ ಸೂರು ಒದಗಿಸಲು ಗ್ರಾಮ ಸಭೆ ನಡೆಸಿ ಪಾರದರ್ಶಕವಾಗಿ ಫಲಾನುಭವಿಗಳನ್ನು ಆಯ್ಕೆ ಮಾಡಿ, ವಿವಿಧ ಯೋಜನೆಯಡಿ ಅರ್ಜಿ ಸಲ್ಲಿಸುವ ಅರ್ಹ ಫಲಾನುಭವಿಗಳ ಅರ್ಜಿ ಪರಿಶೀಲನೆ ನಡೆಸಿ ವಿಳಂಬ ಮಾಡದೇ ತಕ್ಷಣ ವಿಲೇವಾರಿ ಮಾಡಬೇಕು ಎಂದರು.

ದೌರ್ಜನ್ಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಪರಿಹಾರ ಧನ ವಿತರಣೆಯಲ್ಲಿ ವೃಥಾ ವಿಳಂಬ ಮಾಡದೇ, ತ್ವರಿತಗತಿಯಲ್ಲಿ ಪರಿಹಾರ ಒದಗಿಸಬೇಕು. ಜನವರಿಯಿಂದ ಮೇ ತಿಂಗಳವರೆಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ದೌರ್ಜನ್ಯ ಅಧಿನಿಯಮ 1989ರನ್ವಯ ದಾಖಲಾದ ಪ್ರಕರಣಗಳ ಮಾಹಿತಿ ಸಭೆಗೆ ನೀಡಲಾಯಿತು.

ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ರಿಷಿ ಆನಂದ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮನಗೌಡ ಹಟ್ಟಿ, ವಿಜಯಪುರ ಉಪ ವಿಭಾಗಾಧಿಕಾರಿ ಗುರುನಾಥ ದಡ್ಡೆ, ಇಂಡಿ ಉಪ ವಿಭಾಗಾಧಿಕಾರಿ ಗುರುಸ್ವಾಮಿ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಮಹೇಶ ಪೋತದಾರ, ಜಿಲ್ಲಾ ಮಟ್ಟದ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸದಸ್ಯರಾದ ಅಭಿಷೇಕ ಚಕ್ರವರ್ತಿ, ನಾನು ಲಮಾಣಿ, ರವಿಕಾಂತ ಬಿರಾದಾರ, ಸಿದ್ದು ರಾಯಣ್ಣವರ, ಯಮುನಪ್ಪ ಸಿದರಡ್ಡಿ, ಮಲ್ಲು ತಳವಾರ, ರಾಜಶೇಖರ ಕೂಚಬಾಳ, ಮಲ್ಲಪ್ಪ ಹಾದಿಮನಿ ಇದ್ದರು.

ಮೃತರ ಕುಟುಂಬಕ್ಕೆ ಕರ್ಣಾಟಕ ಬ್ಯಾಂಕ್ ನೆರವು

• **ದೇವರ ಹಿಪ್ಪರಗಿ:** ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಸಾಮಾಜಿಕ ಭದ್ರತಾ ವಿಮಾ ಯೋಜನೆಗಳು ಗ್ರಾಮೀಣ ಭಾಗದ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳ ಪಾಲಿಗೆ ಸಂಕಷ್ಟದ ಸಮಯದಲ್ಲಿ ನಿಜವಾದ ಆಪದ್ಬಾಂಧವನಂತೆ ಆಸರೆಯಾಗುತ್ತವೆ ಎಂದು ಕರ್ಣಾಟಕ ಬ್ಯಾಂಕ್ ಕಲಬುರಗಿ ವಲಯದ ಸಹಾಯಕ ಮಹಾಪ್ರಬಂಧಕರಾದ ಮಲ್ಲನಗೌಡ ಬಿರಾದಾರ ಹೇಳಿದರು.

ಪಟ್ಟಣದ ಕರ್ಣಾಟಕ ಬ್ಯಾಂಕ್ ಶಾಖೆಯಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಪಿಎಮ್‌ಜೆಜೆಬಿವಾಯ್ ಹಾಗೂ ಪಿಎಮ್‌ಎಸ್‌ಬಿವಾಯ್ ಫಲಾನುಭವಿಗೆ ರೂ. 4 ಲಕ್ಷ ಮೊತ್ತದ ವಿಮಾ ಪರಿಹಾರದ ಚೆಕ್ ವಿತರಿಸಿ ಮಾತನಾಡಿದ ಅವರು, ಬ್ಯಾಂಕಿಂಗ್ ವ್ಯವಹಾರಗಳು ಕೇವಲ ಠೇವಣಿ ಮತ್ತು ಸಾಲಕ್ಕೆ ಸೀಮಿತವಾಗದೇ ಸಾರ್ವಜನಿಕರ ಜೀವಕ್ಕೆ ಆರ್ಥಿಕ ಭದ್ರತೆ ನೀಡುವುದು ನಮ್ಮ ಆದ್ಯತೆಯಾಗಿದೆ. ಸರ್ಕಾರ ಜಾರಿಗೆ ತಂದಿರುವ ಅತ್ಯಂತ ಕಡಿಮೆ ವೆಚ್ಚದ ಈ ವಿಮಾ ಯೋಜನೆಗಳು ಅನಿರೀಕ್ಷಿತ ದುರ್ಘಟನೆಗಳು ಸಂಭವಿಸಿದಾಗ ಕುಟುಂಬವನ್ನು ಆರ್ಥಿಕ ದಿವಾಳಿತನದಿಂದ ರಕ್ಷಿಸುತ್ತವೆ. ಪ್ರತಿಯೊಬ್ಬ ನಾಗರಿಕರು, ವಿಶೇ?ವಾಗಿ ಗ್ರಾಮೀಣ ಭಾಗದ ಶ್ರಮಿಕ ವರ್ಗದವರು ಕಡ್ಡಾಯವಾಗಿ ಈ ವಿಮಾ ಸೌಲಭ್ಯ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಶಾಖಾ ವ್ಯವಸ್ಥಾಪಕರಾದ ಮಹಾಂತಯ್ಯ ಹಿರೆಮಠ ವಿಮಾ ಯೋಜನೆ ಕುರಿತು ಮಾತನಾಡಿ ನಾಗರಿಕರು ತಮ್ಮ ಉಳಿತಾಯ ಖಾತೆಯ ಮೂಲಕ ವರ್ಷಕ್ಕೆ ಪಿಎಮ್‌ಜೆಜೆಬಿವಾಯ್ ರೂ. 456 ಹಾಗೂ ಪಿಎಮ್‌ಎಸ್‌ಬಿವಾಯ್ ರೂ. 20 ಪಾವತಿಸುವ ಮೂಲಕ ಒಟ್ಟು ರೂ. 4 ಲಕ್ಷ ರೂಪಾಯಿಗಳ ಜೀವ ಹಾಗೂ ಅಪಘಾತ ವಿಮಾ ರಕ್ಷಣೆ ದೊರೆಯುತ್ತದೆ. ಬ್ಯಾಂಕ್ ಖಾತೆ ಹೊಂದಿರುವ 18 ರಿಂದ 50 ವರ್ಷದೊಳಗಿನ ಯಾರು ಬೇಕಾದರೂ ಈ ಯೋಜನೆಯ ಲಾಭ ಪಡೆಯಬಹುದಾಗಿದೆ ಎಂದು ಮಾಹಿತಿ ನೀಡಿದರು.

ಅತ್ಯಂತ ಕಡಿಮೆ ಪ್ರೀಮಿಯಂ ಅವಧಿಯಲ್ಲಿ ತಮಗೆ ದೊರೆತ ಈ ಸಕಾಲಿಕ ಆರ್ಥಿಕ ನೆರವಿಗಾಗಿ ಫಲಾನುಭವಿ ಹೀನಾ ಹಳ್ಳಿ ಅವರು ಬ್ಯಾಂಕ್ ಆಡಳಿತ ಮಂಡಳಿ ಮತ್ತು ಸಿಬ್ಬಂದಿಗೆ ಕೃತಜ್ಞತೆ ಸಲ್ಲಿಸಿದರು.

ಬ್ಯಾಂಕ ಸಿಬ್ಬಂದಿ ರಾಮಯ್ಯಾ ಕಾ ಖಿಂಡಕಿ, ಐಶ್ವರ್ಯ ಪಂಚಾಕ್ಷರಿಮಠ, ಮಲ್ಲಿಕಾರ್ಜುನ ಸುಂಕದ, ಶಿಲ್ಪಾ ವೈ., ರೂಪಾ ಕುಂಬಾರ ಹಾಗೂ ಗ್ರಾಹಕರಾದ ಬಸಯ್ಯ ಮಲ್ಲಿಕಾರ್ಜುನಮಠ, ಸೈಮೂನ ಮುಲ್ಲಾ, ಸಿದ್ದನಗೌಡ ಪಾಟೀಲ, ಆನಂದ ಜಡಿಮಠ, ಮಿಯಾಜ ಯಲಗಾರ ಇದ್ದರು.



ಕೆಐಎಡಿಬಿ ಕಾಯ್ದೆ ದುರುಪಯೋಗ ಸಲ್ಲ: ಕುಲಕರ್ಣಿ

• **ವಿಜಯಪುರ:** ಇತ್ತೀಚಿನ ದಿನಗಳಲ್ಲಿ ಸಮಾಜಿಕ ಕಳಕಳಿ ಇಲ್ಲದ ಕೆಲವು ಸ್ವಾರ್ಥ ರಾಜಕಾರಣಿಗಳು ತಮ್ಮ ರಾಜಕೀಯ ಪ್ರಭಾವದಿಂದ ಕೈಗಾರಿಕೆ ಸ್ಥಾಪಿಸಲು ಬಲವಂತದಿಂದ ಫಲವತ್ತಾದ ಭೂಮಿಯನ್ನು ಕಿತ್ತುಕೊಳ್ಳಲು ಮುಂದಾಗಿದ್ದು, ಕೆಐಎಡಿಬಿ ಕಾಯ್ದೆ ಕಲಂ 66ರ ಅಡಿಯಲ್ಲಿ ಕಾಯ್ದೆಯನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ ಎಂದು ಅಖಂಡ ಕರ್ನಾಟಕ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ, ನೊಂದ ರೈತ ರವೀಂದ್ರಗೌಡ ಪಾಟೀಲ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೈಗಾರಿಕಾ ಅಭಿವೃದ್ಧಿಗಾಗಿ ರೂಪಿಸಿದ ಕೆಐಎಡಿಬಿ ಕಾಯ್ದೆಯನ್ನು ಸಾರ್ವಜನಿಕ ಹಿತಕ್ಕಾಗಿ ಬಳಸಬೇಕು. ಆದರೆ ಇಲ್ಲಿ ಜನಪ್ರತಿನಿದಿಗಳು ತಮ್ಮ ಸ್ವಾರ್ಥಕ್ಕೋಸ್ಕರ ವಯುಕ್ತಿಕವಾಗಿ ರಾಜಕೀಯ ಪ್ರಭಾವ ಬೆಳೆಸಿ ಅಧಿಕಾರಿಗಳನ್ನು ಮುಂದಿಟ್ಟುಕೊಂಡು ರೈತರ ಫಲವತ್ತಾದ ಜಮೀನುಗಳನ್ನು ಕಸಿದುಕೊಳ್ಳುತ್ತಿದ್ದಾರೆ. ಇರುವ ಅಲ್ಪಸ್ವಲ್ಪ ಭೂಮಿಯನ್ನು ವೈಯಕ್ತಿಕ ಸ್ವಾರ್ಥಕ್ಕಾಗಿ ವಶಪಡಿಸಿಕೊಂಡರೆ ರೈತ ಬದುಕುವುದಾದರು ಹೇಗೆ?, ರೈತನೇ ದೇಶದ ಬೆನ್ನೆಲುಬು ಎಂದು ಹೇಳುವ ಸರ್ಕಾರಗಳು ರೈತನ ಬೆನ್ನೆಲುಬು ಮುರಿಯಲು ಹೊರಟ್ಟಿದ್ದಾರೆ. ಯಾವುದೇ ಕಾರಣಕ್ಕೂ ರೈತನ ಒಪ್ಪಿಗೆ ಇಲ್ಲದೆ ಜನಪ್ರತಿನಿಧಿಗಳ ವೈಯಕ್ತಿಕ ಹಿತಾಸಕ್ತಿಗೆ ಸರ್ಕಾರ ರೈತರನ್ನು ಬಲಿತಗೆದುಕೊಳ್ಳಬಾರದು ಎಂದರು.

ಇಂತಹದೊಂದು ಪ್ರಕರಣ ನಡೆದದ್ದು, ಬಬಲೇಶ್ವರ ತಾಲೂಕಿನ ಕಂಬಾಗಿ ಗ್ರಾಮದ ವ್ಯಾಪ್ತಿಯ ಲಿಂಗದಳ್ಳಿ ಗ್ರಾಮದ ದ್ರಾಕ್ಷಿ ಬೆಳೆಗಾರರೈತರಾದರವೀಂದ್ರಗೌಡಪಾಟೀಲ



ಇವರ ಜಮೀನು ಕಂಬಾಗಿ ಗ್ರಾಮದಲ್ಲಿ ಬರುವ ಸರ್ವೆ ನಂ. 376/1 ಕ್ಷೇತ್ರ -1 ಎ-00 ಗುಂಟೆ ಈ ಜಮೀನನ್ನು ಗುಣಮಟ್ಟದ ಮಣುಕು (ಒಣದ್ರಾಕ್ಷಿ ಘಟಕ) ಸ್ಥಾಪನೆಗಾಗಿ 2009 ರಲ್ಲಿ ತಗೆದುಕೊಂಡಿದ್ದಾರೆ. ಇದಕ್ಕೆ ತೋಟಗಾರಿಕೆ ಇಲಾಖೆ ಮಾರ್ಗದರ್ಶನದಲ್ಲಿ ಸರ್ಕಾರದ ಅನುದಾನವನ್ನು ಪಡೆದು ಘಟಕ ಸ್ಥಾಪನೆ ಮಾಡಿರುತ್ತಾರೆ. ಈ ಸಣ್ಣ ಉದ್ಯಮ ಘಟಕವನ್ನು ಸಕ್ಕರೆ ಕಾರ್ಖಾನೆ ಸ್ಥಾಪನೆಗಾಗಿ ಇಂಡಿಯನ್ ಕೇನ್ ಪವರ್ ಲಿ. ಮಾಲೀಕರಾದ ಮಲ್ಲಿಕಾರ್ಜುನ ಶಿವಶಂಕರಪ್ಪ ಶ್ಯಾಮನೂರ ಸಾ.ದಾವಣಗೇರಿ ಸರ್ಕಾರದ ಮೇಲೆ ಒತ್ತಡ ತಂದು ರಾಜಕೀಯ ಪ್ರಭಾವ ಬಳಸಿ ವಶಪಡಿಸಿಕೊಂಡಿದ್ದಾರೆ ಎಂದರು.

ಕೈಗಾರಿಕಾ ಸಚಿವ ಎಂ.ಬಿ. ಪಾಟೀಲರು ರೈತರನ್ನು ಒಪ್ಪಿಸಿ ಜಮೀನು ಕೊಡಿಸಬಹುದಾಗಿತ್ತು. ಆದರೆ ದುರಾದೃಷ್ಟ ಅವರ ನಿರ್ಲಕ್ಷ್ಯದಿಂದ ಈ ಜಮೀನನ್ನು ಕೆಐಎಡಿಬಿ ಕಾಯ್ದೆಯಡಿಯಲ್ಲಿ ಸೇರಿಸಿರುತ್ತಾರೆ. ಈ ಸಮಸ್ಯೆ ಒಬ್ಬ ರೈತನದಲ್ಲ 12 ರೈತರ ಅಂದಾಜು 66 ಎಕರೆಯಷ್ಟು ಜಮೀನನ್ನು ವಶಪಡಿಸಿಕೊಂಡಿದ್ದಾರೆ. ಇಂಡಿಯನ್ ಕೇನ್ ಪವರ್ ಲಿ.ಸಕ್ಕರೆ ಕಾರ್ಖಾನೆ ಇದು ವೈಯಕ್ತಿಕ ಘಟಕವಾಗಿದೆ. ಸಾರ್ವಜನಿಕ ಹಿತಾಸಕ್ತಿಗೆ ಅಲ್ಲ. ಈ ರೀತಿ ದಬ್ಬಾಳಿಕೆಯಿಂದ ಫಲವತ್ತಾದ ಭೂಮಿಯನ್ನು ವಶಪಡಿಸಿಕೊಂಡಿದ್ದರಿಂದ ರೈತರು ಬೀದಿಗೆ ಬರುವ ಪರಿಸ್ಥಿತಿ ಎದುರಾಗಿದೆ. ಕಾರಣ ಸರ್ಕಾರ ವಶಪಡಿಸಿಕೊಂಡಿದ್ದ ಜಮೀನನ್ನು ಈಗಲಾದರೂ ರೈತರಿಗೆ ಮರಳಿ ನೀಡಬೇಕೆಂದು ಆಗ್ರಹಿಸಿದ್ದಾರೆ.

ಶಾಸಕ ಸಿ.ಎಸ್.ನಾಡಗೌಡಗೆ ಸಚಿವ ಸ್ಥಾನ ನೀಡಲು ಆಗ್ರಹ

• **ಮುದ್ದೇಬಿಹಾಳ:** ಸ್ಥಳೀಯ ಶಾಸಕ ಸಿ.ಎಸ್.ನಾಡಗೌಡ ಅವರಿಗೆ ಕಳೆದ ಮೂರು ದಶಕಗಳಲ್ಲಿ ಅವರಿಗೆ ಸ್ಥಾನ ವಂಚನೆ ಆಗಿದೆ ಅಲ್ಲದೆ ತಾಲೂಕಿನ ಅಭಿವೃದ್ಧಿ ಕುಂಠಿತವಾಗಿದೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗುರುನಾಥ ತಾರನಾಳ ಹೇಳಿದರು.

ಪ್ರವಾಸಿ ಮಂದಿರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿ ಸಚಿವ ಸಂಪುಟ ವಿಸ್ತರಣೆಯ ಸಂದರ್ಭದಲ್ಲಿ ನಾಡಗೌಡರಿಗೆ ನಿರಾಸೆ ಆಗಬಾರದು ಜೊತೆಗೆ ಕ್ಷೇತ್ರದ ಅಭಿವೃದ್ಧಿ ಕುಂಠಿತವಾಗಿರುವುದು ತಾಲೂಕಿನ ಜನತೆಗೆ ನಿರಾಸೆ ಉಂಟು ಮಾಡಿದ್ದು ಕಳೆದ ಕೆಲವು ದಿನಗಳಿಂದ ತಾಲೂಕಿನ ಸಂಸ್ಥೆಗಳು ಹಾಗೂ ಎಲ್ಲಾ ಪಕ್ಷ ಮತ್ತು ಸಂಘಟನೆಗಳ ಮುಖಂಡರು ಒಕ್ಕೂರಲಿನಿಂದ ಸಭೆ ನಡೆಸಿ ಒತ್ತಾಯಿಸಬೇಕು ಎಂದು ಜೂ.19ರಂದು ಶನಿವಾರ ಮುದ್ದೇಬಿಹಾಳ ಬಂದ ಕರೆಗೆ ಬೆಂಬಲಿಸಿದ್ದಾರೆ. ವಿವಿಧ ಸಂಘಟನೆಗಳು, ಶಾಲಾ ಸಂಸ್ಥೆಗಳು ಬಂದ್ ಸ್ವಯಂಪ್ರೇರಿತ ಬೆಂಬಲ ನೀಡುವುದಾಗಿ ಸಭೆಯಲ್ಲಿ ತಿಳಿಸಿದ್ದಾರೆ ಎಂದರು.



ನಾಳೆ ದಿನ ಸಾರ್ವಜನಿಕ ವಾಹನ ಕೂಡ ಸಂಚರಿಸುವುದಿಲ್ಲ, ಈ ಕುರಿತು ಶಾಂತ ರೀತಿಯಲ್ಲಿ ಬಂದ ನಡೆಯಲು ಸಹಕರಿಸಬೇಕಾಗಿ ಪೊಲೀಸ್ ಇಲಾಖೆಗೂ ವಿನಂತಿ ಮಾಡಿದೇವೆ ಎಂದು ಹೇಳಿದರು.

ಮುಖಂಡರಾದ ಗಪುರಸಾಬ ಮಕಂದಾರ, ಸಂಗಣ್ಣ ಬಿರಾದಾರ, ಮಹಿಬುಬ ಗೊಳಸಂಗಿ, ಅಮರೇಶ ಗೂಳಿ, ಕಾಮರಾಜ ಬಿರಾದಾರ ಸುರೇಶ ಪಾಟೀಲ, ಸಿಕಂದರ್ ಜಾನ್ವೇಕರ, ಶ್ರೀಕಾಂತ ಛಲವಾದಿ, ಪಿಂಟು ಸಾಲಿಮನಿ, ಹರೀಶ ಬೇವೂರ ಉಪಸ್ಥಿತರಿದ್ದರು.

ಅಗ್ನಿವೀರರಾಗಿ ಆಯ್ಕೆಯಾದ 12 ಜನ ವಿದ್ಯಾರ್ಥಿಗಳಿಗೆ ಸನ್ಮಾನ

• **ಬಸವನಬಾಗೇವಾಡಿ:** ತಾಲೂಕಿನ ಮನಗೂಳಿಯ ವಿದ್ಯಾರ್ಥಿಗಳು ಭಾರತೀಯ ಸೇನೆಗೆ(ಅಗ್ನಿವೀರ) ಆಯ್ಕೆಯಾಗುವ ಮೂಲಕ ಮನಗೂಳಿಗೆ ಹೆಸರು ಕೀರ್ತಿ ತಂದಿದ್ದಾರೆ ಎಂದು ರಾಜ್ಯ ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಸೋಮನಗೌಡ (ಅಪ್ಪುಗೌಡ) ಪಾಟೀಲ ಹೇಳಿದರು.

ತಾಲೂಕಿನ ಮನಗೂಳಿ ಬಿ.ಎಸ್.ಪಾಟೀಲ ಪಪೂ ಮಹಾವಿದ್ಯಾಲಯ ಹಾಗೂ ಬಸವ ಜನ್ಮಭೂಮಿ ಪ್ರತಿಷ್ಠಾನ ಬಸವನಬಾಗೇವಾಡಿ ಹೋಬಳಿ ಘಟಕ ಮನಗೂಳಿ ಆಶ್ರಯದಲ್ಲಿ ಕಾಲೇಜಿನ ಸಭಾಂಗಣದಲ್ಲಿ ಹಮ್ಮಿಕೊಂಡ ಭಾರತೀಯ ಸೇನೆಗೆ (ಅಗ್ನಿವೀರ) ಆಯ್ಕೆಯಾಗಿರುವ ಸೇನಾನಿಗಳ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ದೇಶದ ಗಡಿ ಕಾಯಲು ಸನ್ನದ್ಧಗೊಂಡಿರುವ ದೇಶ ಭಕ್ತರು ತಾಯಿ ಭಾರತಾಂಬೆಯ ಸಾನ್ನಿಧ್ಯದಲ್ಲಿ ರಾಷ್ಟ್ರಕ್ಕೆ ಕೀರ್ತಿ ತರುವಂತಾಗಲಿ ಎಂದರು.

ವಿಜಯಪುರ ಡಿಸಿಸಿ ಬ್ಯಾಂಕ್ ನಿರ್ದೇಶಕ ಚಂದ್ರಶೇಖರಗೌಡ ಪಾಟೀಲ ಮಾತನಾಡಿ ದೇಶ ಕಾಯುವ ಸೈನಿಕನ ಸೇವೆ ಅಮರ, ಅಂಥ ಸೇನಾನಿಗಳ ದೇಶಪ್ರೇಮ ಬಣ್ಣಿಸಲಸದಳ ಅವರ ತ್ಯಾಗದ ಪ್ರತಿಫಲ ದೇಶವಾಸಿಗಳ ನೆಮ್ಮದಿಗೆ ಕಾರಣವಾಗಿದೆ ಎಂದರು.

ವಿಜಯಪುರ ಜಿಲ್ಲಾ ಸಹಕಾರಿ ಯುನಿಯನ್ ನಿರ್ದೇಶಕ ವಿಶ್ವನಾಥಗೌಡ ಪಾಟೀಲ, ರೇವಣಸಿದ್ಧ ಮಣೂರ ಮಾತನಾಡಿದರು. ಭಾರತೀಯ ಸೇನೆಗೆ (ಅಗ್ನಿವೀರ) ಆಯ್ಕೆಯಾದ ಸುನೀಲ ಬಂಡಿವಡ್ಡರ, ಸಂತೋಷ ಹಚಡದ,



ಜಗದೀಶ ತಳೇವಾಡ, ವಿಕಾಸ ಹೂಗಾರ, ಆಕಾಶ ಕ್ಯಾತನ್ನವರ, ಮಲ್ಲಿಕಾರ್ಜುನ ಬಿರಾದಾರ, ರಾಹುಲ್ ಗುಜ್ಜಣ್ಣವರ, ಮಲ್ಲಿಕಾರ್ಜುನ ಹುಣಶಿಕಟ್ಟಿ, ಸಾಗರ ಜಾಧವ, ಚಂದ್ರಕಾಂತ ಹೂಗಾರ, ಬೀರೇಶ ಜ್ಯೋತಿ, ಸಂಗಮೇಶ ದೊಡಮನಿ ಅವರನ್ನು ಸನ್ಮಾನಿಸಲಾಯಿತು. ಜನತಾ ಎಜ್ಯುಕೇಶನ್ ಸೊಸೈಟಿ ಅಧ್ಯಕ್ಷ ರವಿಗೌಡ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಪ್ರಾಚಾರ್ಯ ಪರಶುರಾಮ ರಾಠೋಡ ಮುಖ್ಯಗುರು ಆರ್.ಕೆ.ಹನಗಂಡಿ, ಪ್ರತಿಷ್ಠಾನದ ಹೋಬಳಿ ಘಟಕದ ಅಧ್ಯಕ್ಷ ಶಿವಾಜಿ ಮೋರೆ, ವಿನೋದ ಕುಲಕರ್ಣಿ, ಅಶೋಕ ಎಲೇರಿ, ರಾಜು ಮುತ್ತಪ್ಪನವರ, ಸಂಗಮೇಶ ಚಿಮ್ಮಲಗಿ, ಎಸ್.ಬಿ.ಪತ್ತಾರ, ಎಂ.ಎ.ಚಿಕನರ್ತಿ, ಪ್ರತಿಭಾ ಓತಗೇರಿ, ರಾಜು ಬಜಂತ್ರಿ, ಸದಾಶಿವ ಚಲವಾದಿ, ಮೋಹನ್ ನಾಯಕ, ಎಂ.ಐ.ಗುಡ್ಡೇವಾಡಿ, ಎಂ.ಎಸ್.ಲಗಟಗೇರ, ಶಶಿಕಲಾ ಪೂಜಾರ, ಗೀತಾ ಕಪ್ಪೇನವರ, ಸಿ.ಕೆ.ನಾಗಜ್ಜನವರ, ಸುನೀಲ ಕಣಬೂರ, ಶ್ರೀನಿವಾಸ ಪತ್ತಾರ. ವಿದ್ಯಾರ್ಥಿನಿ ಮೋನಿಕಾ ಜಾಧವ, ಚೈತ್ರಾ ಪತ್ತಾರ, ಸಾಹಿತಿ ಮುರುಗೇಶ ಸಂಗಮ, ಪ್ರೊ.ಎಸ್.ಬಿ.ಬಿರಾದಾರ ಇದ್ದರು.

ಡೊನೇಷನ್ ಹಾವಳಿಗೆ ತಡೆ ಬೀಳುವುದೇ?

▸ ಮಲ್ಲಿಕಾರ್ಜುನಯ್ಯ ಕೋರಗಲ್ಲಮಠ

ಪ್ರವೇಶಾತಿ ಶುಲ್ಕ ಹೆಚ್ಚಳ | ಪಾಲಕರ ಬೇಸರ

• **ನಿಡಗುಂದಿ:** ಪಟ್ಟಣ ಸೇರಿದಂತೆ ತಾಲೂಕಿನಾದ್ಯಂತ ಖಾಸಗಿ ಹಾಗೂ ಅನುದಾನಿತ ಶಾಲಾ, ಕಾಲೇಜುಗಳಲ್ಲಿ ಡೊನೇಷನ್ ಹಾವಳಿ ಅವ್ಯಾಹತವಾಗಿ ನಡೆಯುತ್ತಿದ್ದು, ವಿದ್ಯಾರ್ಥಿಗಳ ಪಾಲಕರು ಆತಂಕ ಎದುರಿಸುವಂತಾಗಿದೆ.

ಸರ್ಕಾರಿ ಅನುದಾನಿತ ಶಾಲೆಗಳಲ್ಲಿಯೂ ಈ ಹಾವಳಿ ತಪ್ಪಿಲ್ಲ, ಆಡಳಿತ ಮಂಡಳಿಗಳು ವಸೂಲಿ ದಂಧೆಯನ್ನಾಗಿಸಿಕೊಂಡಿದ್ದು, ಪಟ್ಟಣದ ಖಾಸಗಿ ಕಾಲೇಜುಗಳಲ್ಲಿ ಪ್ರವೇಶಾತಿ ಶುಲ್ಕ 1000ದಿಂದ 1500ರೂ. ನಿಗದಿ ಪಡಿಸಿದ್ದರೂ 15,000ದಿಂದ 20,000 ಭರಿಸಿಕೊಳ್ಳಲಾಗುತ್ತಿದ್ದು, ಇದರಿಂದ ಬಡ ಹಾಗೂ ಆಟೋ ಚಾಲಕ, ಕೂಲಿಕಾರ್ಮಿಕ, ಹಮಾಲ, ಕಟ್ಟಡ ಕಾರ್ಮಿಕ ವರ್ಗದ ಮಕ್ಕಳು ಶಿಕ್ಷಣದಿಂದ ವಂಚಿತರಾಗುವಂತಾಗಿದೆ.

ಗಂಭೀರ ಆರೋಪ: ಇಲ್ಲಿನ ಗ್ರಾಮೀಣ ವಿದ್ಯಾವರ್ಧಕ ಸಂಘದ ಅಡಿಯಲ್ಲಿ ನಡೆಯುವ ಶಿಕ್ಷಣ ಸಂಸ್ಥೆ ವಿರುದ್ಧ ಡೊನೇಷನ್ ವಸೂಲಿಯ ಗಂಭೀರ ಆರೋಪ ಕೇಳಿ ಬಂದಿದ್ದು, ಈ ಶಿಕ್ಷಣ ಸಂಸ್ಥೆ ಪ್ರಾರಂಭದ ವೇಳೆ ತಾನು ನೀಡಿದ್ದ ಮುಚ್ಚಳಿಕೆ

> ನಿಡಗುಂದಿ ಪಟ್ಟಣದ ಜಿವಿವಿಎಸ್ ಶಿಕ್ಷಣ ಸಂಸ್ಥೆಯಲ್ಲಿ ನಡೆಯುತ್ತಿರುವ ಡೊನೇಷನ್ ಬಗ್ಗೆ ಜಿಲ್ಲಾ ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿಗಳೊಂದಿಗೆ ಮಾತನಾಡಿದ್ದೇವೆ. ಒಂದು ನಿಯೋಗ ಕಳುಹಿಸಿ ಪರಿಶೀಲಿಸಿ ಕ್ರಮ ಕೈಗೊಳ್ಳಲು ನಿರ್ದೇಶನ ನೀಡಲಾಗಿದೆ.
> ■ ಡಾ.ಆನಂದ ಕೆ., ಜಿಲ್ಲಾಧಿಕಾರಿ

ಪತ್ರದ ಕರಾರುಗಳನ್ನು ಗಾಳಿಗೆ ತೂರಿದ ಆರೋಪ ಕೇಳಿ ಬಂದಿದೆ.

ಅಂದು ಗ್ರಾಮೀಣ ವಿದ್ಯಾವರ್ಧಕ ಸಂಘದ ಶಾಲಾ ಆಡಳಿತ ಮಂಡಳಿ, ಪಟ್ಟಣದ 8 ಪುನರ್ವಸತಿ ಕೇಂದ್ರದ ಮಕ್ಕಳಿಗೆ ಉಚಿತ ಶಿಕ್ಷಣ ನೀಡುವುದಾಗಿ ಸರ್ಕಾರಕ್ಕೆ ಅಧಿಕೃತ ಲಿಖಿತ ಬಾಂಡ್ ಮೂಲಕ ಒಪ್ಪಂದ ಪತ್ರ ಬರೆದು ಕೊಟ್ಟು, ವಿಶ್ವ ಆಹಾರ ಯೋಜನೆಯಡಿ ಸರ್ಕಾರದ ವತಿಯಿಂದ 1.50 ಕೋಟಿ ರೂ.ಗಳ ಅನುದಾನ ಪಡೆದು, ಶಾಲಾ- ಕಾಲೇಜಿನ ಕಟ್ಟಡ ನಿರ್ಮಿಸಿತು. ಆದರೆ ಇಲ್ಲಿವರೆಗೂ ಒಬ್ಬ ಒಬ್ಬ ವಿದ್ಯಾರ್ಥಿಗೆ ಉಚಿತ ಶಿಕ್ಷಣ ನೀಡಿಲ್ಲ ಎಂದು ದೂರಿದರು. ಇಲ್ಲಿನ ಗ್ರಾಮೀಣ ವಿದ್ಯಾವರ್ಧಕ ಸಂಘದ ಶಾಲಾ-ಕಾಲೇಜಿನ 2 ಎಕರೆ, 30 ಗುಂಟೆ ಜಾಗೆಯ ಪೈಕಿ

> ನಾವಷ್ಟೇ ಅಲ್ಲ ರಾಜ್ಯದಲ್ಲಿ ಎಲ್ಲರೂ ಡೊನೇಷನ್ ತೆಗೆದುಕೊಳ್ಳುತ್ತಾರೆ. ಹಲವಾರು ಶಿಕ್ಷಕರು ನಿವೃತ್ತಿಯಾಗಿದ್ದಾರೆ. ಭರ್ತಿ ಮಾಡಿಕೊಳ್ಳಲು ಅನುಮತಿ ಇಲ್ಲ, ನಮ್ಮ ಸಂಸ್ಥೆಗೆ ಸರ್ಕಾರದ ಅನುದಾನವಿಲ್ಲ, ಡೊನೇಶನ್ ಹಣದಲ್ಲಿ ಶಿಕ್ಷಕರಿಗೆ ವೇತನ ಕೊಡುತ್ತೇವೆ. ಪುನರ್ವಸತಿ ಕೇಂದ್ರದವರಿಗೆ ಉಚಿತ ಶಿಕ್ಷಣಕೊಡುವುದಿಲ್ಲ, ಆದರೆ ಅವರೂ ಅರ್ಧದಷ್ಟು ಡೊನೇಷನ್ ಕೊಡಬೇಕು.
> ■ ಎಸ್.ಜಿ.ನಾಗರಾಳ, ಜಿವಿವಿಎಸ್ ಶಿಕ್ಷಣ ಸಂಸ್ಥೆಯ ಚೇರಮನ್ನ

1 ಎಕರೆ ಮಾತ್ರ ಗ್ರಾಮೀಣ ವಿದ್ಯಾವರ್ಧಕ ಸಂಘ ಹಾಗೂ 1 ಎಕರೆ, 30 ಗುಂಟೆ ಜಾಗೆ ರಾಜ್ಯಪಾಲರು ಕರ್ನಾಟಕ ಸರ್ಕಾರ ಅಂತ ಉತಾರೆಯಲ್ಲಿ ಜಂಟಿ ಹೆಸರಿನಲ್ಲಿದೆ. ಹೀಗೆ ಸರ್ಕಾರದ ಕೋಟ್ಯಂತರ ರೂ.ಗಳ ಅನುದಾನ ಪಡೆದು ಶಿಕ್ಷಣ ಸಂಸ್ಥೆ ಆರಂಭಿಸಿ, ಬಡ ಮಕ್ಕಳಿಗೆ ಉಚಿತ ಶಿಕ್ಷಣ ನೀಡದಿರುವುದು ಸರಿಯಲ್ಲ. ಪುನರ್ವಸತಿ ಕೇಂದ್ರದ ಮಕ್ಕಳ ಉಜ್ವಲ ಭವಿಷ್ಯ ಬೆಳಗಲು ಈ ಸಂಸ್ಥೆ ಉಚಿತ ಶಿಕ್ಷಣ ನೀಡಬೇಕು ಎಂದು ಇಲ್ಲಿನ ಸಂತ್ರಸ್ತರು ಒತ್ತಾಯಿಸಿದ್ದಾರೆ.

ಭಾರತೀಯ ಸೈನ್ಯದಲ್ಲಿ ಕೆಲಸ ಮಾಡುವುದು ಪುಣ್ಯದ ಕಾರ್ಯ

• **ವಿಜಯಪುರ:** ಭಾರತೀಯ ಸೈನ್ಯದಲ್ಲಿ ಕೆಲಸ ಮಾಡುವುದು ಮಹಾನ್ ಪುಣ್ಯದ ಕಾರ್ಯ, ಆ ಕಾರ್ಯ ಮಾಡುವ ಅವಕಾಶ ಎಲ್ಲರಿಗೂ ಸಿಗುವುದಿಲ್ಲ ಎಂದು ಎಬಿವಿಪಿ ಕೇಂದ್ರೀಯ ಕಾರ್ಯ ಸಮಿತಿ ಸದಸ್ಯ ಸಚಿನ್ ಕುಳಗೇರಿ ಹೇಳಿದರು.

ನಗರದಲ್ಲಿ ಸೈನಿಕ ಮಿತ್ರದ ವತಿಯಿಂದ ಹಮ್ಮಿಕೊಂಡ ನೂತನವಾಗಿ ಅಗ್ನಿವೀರರಾಗಿ ಆಯ್ಕೆಯಾದವರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಭಾರತೀಯ ಸೇನೆಯಲ್ಲಿ ಕಾರ್ಯ ಮಾಡುವುದು ಕೇವಲ ಒಂದು ಸರ್ಕಾರಿ ನೌಕರಿ ಮಾಡಿದಂತಲ್ಲ, ಅದು ಭಾರತ ಮಾತೆಯ ಸೇವೆ ಮಾಡಲು ಸಿಕ್ಕಿರುವ ಅವಕಾಶವೆಂದು ಕಾರ್ಯ ನಿರ್ವಹಿಸುತ್ತಿರುವ ಪ್ರಪಂಚದ ಏಕೈಕ ಸೈನ್ಯ ಯಾವುದಾದರೂ ಇದ್ದರೆ ಅದು ಭಾರತೀಯ ಸೈನ್ಯ. ಇಂದಿನ ಯುವಕರು ಸಹಿತ ಭಾರತೀಯ ಸೇನೆಯಲ್ಲಿ ಕಾರ್ಯನಿರ್ವಹಿಸಲು ಉತ್ಸಾಹದಿಂದ ಮುಂದೆ ಬರುತ್ತಿದ್ದಾರೆ, ಭಾರತ ಸರ್ಕಾರ ಅಗ್ನಿವೀರ ಮೂಲಕ ಅತಿ ಹೆಚ್ಚು ಯುವಕರಿಗೆ ಭಾರತೀಯ ಸೇನೆಯಲ್ಲಿ ಕಾರ್ಯನಿರ್ವಹಿಸುವ ಅವಕಾಶವನ್ನು ನೀಡುತ್ತ ಬರುತ್ತಿರುವುದು ಇಂದಿನ ಯುವಕರಿಗೆ ಮತ್ತಷ್ಟು ದೇಶ ಸೇವೆಯನ್ನು ಮಾಡಲು ಹೆಚ್ಚಿನ ಜನರಿಗೆ ಅವಕಾಶ ಸಿಕ್ಕಂತಾಗಿದೆ ಎಂದರು.

ಭಾರತೀಯ ಸೇನೆಯು ವಿಶ್ವದ ಅತಿ ದೊಡ್ಡ ಮತ್ತು ಬಲಿಷ್ಠ ಸೇನೆಗಳಲ್ಲಿ ಒಂದಾಗಿದೆ. ಅಪ್ರತಿಮ ಶೌರ್ಯ ಕಾರ್ಗಿಲ್ ಯುದ್ಧ ಸೇರಿದಂತೆ ಅನೇಕ ಸಂಕಷ್ಟದ ಸಂದರ್ಭಗಳಲ್ಲಿ ತಮ್ಮ ಪ್ರಾಣವನ್ನು ಲೆಕ್ಕಿಸದೆ ದೇಶವನ್ನು ರಕ್ಷಿಸಿದ್ದಾರೆ. ಅಪರೇಷನ್ ಸಿಂಧೂರ, ಅಪರೇಷನ್ ಬಂದರ್, ಸರ್ಜಿಕಲ್ ಸ್ಟ್ರೈಕ್, ಮೂಲಕ ಶತ್ರು ದೇಶಗಳಿಗೆ ತಕ್ಕ ಉತ್ತರವನ್ನು ಭಾರತೀಯ ಸೇನೆ ನೀಡಿದೆ ಎಂದರು.

ಕಾರ್ಯಕ್ರಮದ ಮುಖ್ಯ ವಕ್ತಾರ ಮಂಜುನಾಥ ಜೂನಗೊಂಡ ಮಾತನಾಡಿ, ಭಾರತೀಯ ಸೈನಿಕರ ಶೌರ್ಯ ಮತ್ತು ದೇಶಕ್ಕೋಸ್ಕರ ಹುತಾತ್ಮರಾದ ಭಾರತೀಯ



> ಭಾರತೀಯ ಸೇನೆಯು ವಿಶ್ವದ ಅತಿ ದೊಡ್ಡ ಮತ್ತು ಬಲಿಷ್ಠ ಸೇನೆಗಳಲ್ಲಿ ಒಂದಾಗಿದೆ. ಅಪ್ರತಿಮ ಶೌರ್ಯ ಕಾರ್ಗಿಲ್ ಯುದ್ಧ ಸೇರಿದಂತೆ ಅನೇಕ ಸಂಕಷ್ಟದ ಸಂದರ್ಭಗಳಲ್ಲಿ ತಮ್ಮ ಪ್ರಾಣವನ್ನು ಲೆಕ್ಕಿಸದೆ ದೇಶವನ್ನು ರಕ್ಷಿಸಿದ್ದಾರೆ. ಅಪರೇಷನ್ ಸಿಂದೂರ, ಅಪರೇಷನ್ ಬಂದರ್, ಸರ್ಜಿಕಲ್ ಸ್ಟ್ರೈಕ್, ಮೂಲಕ ಶತ್ರು ದೇಶಗಳಿಗೆ ತಕ್ಕ ಉತ್ತರವನ್ನು ಭಾರತೀಯ ಸೇನೆ ನೀಡಿದೆ.
> ■ ಸಚಿನ್ ಕುಳಗೇರಿ ಸದಸ್ಯ, ಕೇಂದ್ರೀಯ ಕಾರ್ಯಸಮಿತಿ ಎಬಿವಿಪಿ

ಸೈನಿಕರ ಕಥೆಗಳನ್ನ ನೆನಪಿಸಿಕೊಂಡರೆ ಮೈರೋಮಾಂಚನವಾಗುತ್ತದೆ ಎಂದರು.

ಶಾರದಾ ವಿದ್ಯಾಪೀಠದ ಸ್ಥಾಪಕ ಮಲ್ಲಿಕಾರ್ಜುನ ಉಪ್ಪಾರ, ಸೈನಿಕ ಮಿತ್ರ ಸಂಸ್ಥಾಪಕ ಬಸವರಾಜ ಲಗಳಿ, ನಾಗರಾಜ ಬಾಗಲಕೋಟೆ, ಸುದೀಪ ಪಾಟೀಲ, ವಿಕಾಸ ಹಾವೇರಿ ಇದ್ದರು.

ಕಿರುಸುದ್ದಿ

ಉದ್ಯೋಗ ಮೇಳ ಜೂ.22ರಂದು



◆ **ಗಂಗಾವತಿ:** ಸೇಂಟ್ ಪಾಲ್ಸ್ ಡಿ-ಫಾರ್ಮಸಿ ಕಾಲೇಜ್ ಆವರಣದಲ್ಲಿ ಜೂ.22ರಂದು ಬೆಳಗ್ಗೆ 10ಕ್ಕೆ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ಸಂಸ್ಥೆ ಕಾರ್ಯದರ್ಶಿ ಸರ್ವೇಶ್ ವಸ್ತ್ರದ ಹೇಳಿದರು. ಅವರು ಪತ್ರಿಕೆಯೊಂದಿಗೆ ಮಾತನಾಡಿ, ಎಸ್ಸಿ, ಎಸ್ಟಿ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗಿದ್ದು, ಉದ್ಯೋಗಕ್ಕಾಗಿ ಆಸಕ್ತ ಅಭ್ಯರ್ಥಿಗಳು ಭಾಗವಹಿಸಲು ಕಾಲೇಜು ಆಡಳಿತ ಮನವಿ ಮಾಡಿದೆ.

ಎಸ್ಸೆಸ್ಸೆಲ್ಸಿ, ಪಿಯುಸಿ, ಯಾವುದೇ ಪದವಿ, ಡಿ.ಫಾರ್ಮ್, ಬಿ.ಫಾರ್ಮ್, ಬಿ.ಎಸ್ಸಿ ನರ್ಸಿಂಗ್ ಹಾಗೂ ಇತರೆ ಪ್ಯಾರಾ ಮೆಡಿಕಲ್ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳು ಭಾಗವಹಿಸಬಹುದು. ಸಂದರ್ಶನ ಹಾಗೂ ಆಯ್ಕೆ ಪ್ರಕ್ರಿಯೆ ಸ್ಥಳದಲ್ಲಿಯೇ ನಡೆಯಲಿದೆ. ಹೆಚ್ಚಿನ ಮಾಹಿತಿಗೆ 94497 77864 ಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

ಮೊಹರಂ ಸಾರ್ವಜನಿಕವಾಗಿ ಮೆರವಣಿಗೆಗೆ ನಿಷೇಧ



◆ **ರಾಯಚೂರು:** ಜಿಲ್ಲೆಯ ಸಿಂಧನೂರು, ಮಾನವಿ, ಸಿರವಾರ, ದೇವದುರ್ಗ ಹಾಗೂ ಮಸ್ಕಿ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಮೊಹರಂ ಹಬ್ಬವನ್ನು ಸಾರ್ವಜನಿಕವಾಗಿ ಗುಂಪು ಗುಂಪಾಗಿ ಆಚರಿಸುವುದು ಹಾಗೂ ಸಾರ್ವಜನಿಕವಾಗಿ ಮೆರವಣಿಗೆ ಮಾಡುವುದನ್ನು ಕರ್ನಾಟಕ ಪೊಲೀಸ್ ಕಾಯ್ದೆ 1963ರ ಕಲಂ 35ರನ್ವಯ ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಪೂವಿತಾ ಎಸ್. ಆದೇಶ ಹೊರಡಿಸಿದ್ದಾರೆ. ಜಿಲ್ಲೆಯ ಸಿಂಧನೂರು ಪೊಲೀಸ್ ಠಾಣೆ ವ್ಯಾಪ್ತಿಯ ಗಿಣಿವಾರ, ಉಪ್ಪಳ, ತುರ್ವಿಹಾಳ ಪೊಲೀಸ್ ಠಾಣೆ ವ್ಯಾಪ್ತಿಯ ನಿಡಿಗೋಳ-ತಿಡಿಗೋಳ, ಹತ್ತಿಗುಡ್ಡ, ಕುರಕುಂದಾ, ಚಿಕ್ಕಬೇರ್ಗಿ, ಬಳಗಾನೂರು ಪೊಲೀಸ್ ಠಾಣೆ ವ್ಯಾಪ್ತಿಯ ಉದ್ಬಳ್ (ಯು), ರಾಗಲಪರ್ವಿ, ಮಾನವಿ ಪೊಲೀಸ್ ಠಾಣೆ ವ್ಯಾಪ್ತಿಯ ನಂದಿಹಾಳ, ಜಾನೇಕಲ್, ಮದ್ಲಾಪೂರು, ಜಾಗೀರ ಪನ್ನೂರು, ಮಲ್ಲಿನ ಮಡಗು, ಸಿರವಾರ ಪೊಲೀಸ್ ಠಾಣೆ ವ್ಯಾಪ್ತಿಯ ಸಿರವಾರ ಪಟ್ಟಣ, ಕಡದಿನ್ನಿ, ಬೊಮ್ಮನಾಳ, ಕವಿತಾಳ ಪೊಲೀಸ್ ಠಾಣೆ ವ್ಯಾಪ್ತಿಯ ಕವಿತಾಳ ಪಟ್ಟಣ, ಹಿರೇಬಾದರದಿನ್ನಿ, ಬಾಗಲವಾಡ, ಅಮೀನಗಡ, ಗೂಗೆಬಾಳ, ಮಸ್ಕಿ ಪೊಲೀಸ್ ಠಾಣೆ ವ್ಯಾಪ್ತಿಯ ತಲೇಖಾನ್, ಸಂತೆಕಲ್ಲೂರು, ಮುಸಲಿ ಕಾರಲಕುಂಟೆ, ಜಾಲಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಚಿಂಚೋಡಿ, ಗಬ್ಬೂರು ಪೊಲೀಸ್ ಠಾಣೆ ವ್ಯಾಪ್ತಿಯ ಖಾನಾಪೂರು, ಬುದ್ದಿನ್ನಿ, ರಾಮದುರ್ಗ, ಹಿರೇಬೂದೂರು ಸೇರಿದಂತೆ ಒಟ್ಟು 29 ಗ್ರಾಮಗಳಲ್ಲಿ ಸಾರ್ವಜನಿಕರ ಶಾಂತಿ, ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಹಿತದೃಷ್ಟಿಯಿಂದ ಜೂ.26ರವರೆಗೆ ಆಚರಿಸಲಿರುವ ಮೋಹರಂ ಹಬ್ಬವನ್ನು ಸಾರ್ವಜನಿಕವಾಗಿ ಗುಂಪು ಗುಂಪಾಗಿ ಆಚರಿಸುವುದು ಹಾಗೂ ಈ ಗ್ರಾಮಗಳಲ್ಲಿ ಸಾರ್ವಜನಿಕವಾಗಿ ಮೆರವಣಿಗೆ ನಡೆಸುವುದನ್ನು ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ಆದೇಶದಲ್ಲಿ ತಿಳಿಸಿದ್ದಾರೆ.

ಕಾಂಗ್ರೆಸ್ಸಿನಲ್ಲಿ ನಾವೆಲ್ಲ ಒಂದೇ: ಬಾರಿಕೇರ



◆ **ಮಸ್ಕಿ:** ಕಾಂಗ್ರೆಸ್ ಪಕ್ಷದಲ್ಲಿ ಎಲ್ಲ ನಾಯಕರು ಹಾಗೂ ಕಾರ್ಯಕರ್ತರು ಒಂದೇ ಕುಟುಂಬದ ಸದಸ್ಯರಂತೆ ಕೆಲಸ ಮಾಡುತ್ತಿದ್ದು, ಭಿನ್ನಮತಗಳು ಸಹಜ. ಈ ರೀತಿಯ ಸಮಸ್ಯೆಗಳನ್ನು ಪಕ್ಷದ ಅಧ್ಯಕ್ಷರು ಹಾಗೂ ಶಾಸಕರು ಬಗೆಹರಿಸುತ್ತಾರೆ ಎಂದು ಕಾಂಗ್ರೆಸ್ ಮುಖಂಡ ನಾಗಭೂಷಣ್ ಬಾರಿಕೇರ ಹೇಳಿದರು. ಗುರುವಾರ ಪಟ್ಟಣದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಎಲ್ಲರೂ ಪಕ್ಷದ ಸಂಘಟನೆ ಬಲಪಡಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಕಾಂಗ್ರೆಸ್ ಪಕ್ಷವನ್ನು ಮತ್ತಷ್ಟು ಸದೃಢಗೊಳಿಸಲು ಒಗ್ಗಟ್ಟಿನಿಂದ ಕೆಲಸ ಮಾಡಲಾಗುತ್ತಿದೆ ಎಂದರು. ಶಾಸಕ ಬಸನಗೌಡ ತುರುವಿಹಾಳ ಅವರು ಕ್ಷೇತ್ರದ ಅಭಿವೃದ್ಧಿಗೆ ಆದ್ಯತೆ ನೀಡಿದ್ದು, ರಸ್ತೆ, ಕುಡಿಯುವ ನೀರು, ಶಿಕ್ಷಣ ಹಾಗೂ ಮೂಲಸೌಕರ್ಯ ಸೇರಿದಂತೆ ವಿವಿಧ ರೀತಿಯ ಅಭಿವೃದ್ಧಿಗೆ ಸಂಬಂಧಿಸಿದ ಹಲವು ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದಾರೆ ಎಂದು ಹೇಳಿದರು. ಇದಲ್ಲದೆ ಶಾಸಕರು ಕ್ಷೇತ್ರದ ಜನರ ನಿರೀಕ್ಷೆಗಳಿಗೆ ತಕ್ಕಂತೆ ಅಭಿವೃದ್ಧಿ ಕಾರ್ಯಗಳು ನಿರಂತರವಾಗಿ ನಡೆಯುತ್ತಿದ್ದು, ಜನರ ಸಹಕಾರದೊಂದಿಗೆ ಇನ್ನಷ್ಟು ಯೋಜನೆಗಳನ್ನು ಜಾರಿಗೊಳಿಸಲಾಗುವುದು ಎಂದರು. ಇನ್ನೂ ಪಕ್ಷದೊಳಗಿನ ಸಣ್ಣ ಪುಟ್ಟ ಭಿನ್ನಾಭಿಪ್ರಾಯಗಳನ್ನು ಪರಸ್ಪರ ಚರ್ಚೆಯ ಮೂಲಕ ಬಗೆಹರಿಸಿಕೊಳ್ಳಲಾಗುತ್ತಿದ್ದು, ಕಾಂಗ್ರೆಸ್ ಪಕ್ಷದಲ್ಲಿ ಎಲ್ಲರೂ ಒಂದೇ ಮನೆಯ ಸದಸ್ಯರಂತೆ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಅವರು ಹೇಳಿದರು. ಈ ವೇಳೆ, ನಾರಾಯಣಪ್ಪ ಕಾಸ್ಲಿ,ಮಲ್ಲಯ್ಯ ಮುರಾರಿ, ಬೀರಪ್ಪ, ರವಿ ಮಡಿವಾಳ ಇದ್ದರು.



ಕುಷ್ಟಗಿ: ಸೌರಭ ಸಾಂಸ್ಕೃತಿಕ ಕಲಾ ಬಳಗ ಹಿರೇಮನ್ನಾಪುರ ಅವರು ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ ಅಕ್ಕಮಹಾದೇವಿ ಸಭಾಂಗಣದಲ್ಲಿ ಸಾಹಿತಿ ಚಿಂತಕ ,ಆರ್.ಕೆ.ಸುಬೇದಾರ್ ಹಿರೇಮನ್ನಾಪುರ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಶ್ರೀರಾಮ್ ಶಂಕರಪ್ಪ ತಳವಾರ್, ಗಾಂಧಾರಿ ವಿದ್ಯೆ ಪ್ರವೀಣ ಹನಮಸಾಗರ ಅವರಿಗೆ ಗಾನ ಗಂಧರ್ವ ಡಾ.ರಾಜಕುಮಾರ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಯುವಪೀಳಿಗೆ ಜಾನಪದ ಕಲೆ ಬೆಳೆಸಲಿ: ಚಾಮಲಾಪುರ

◆ **ಗಂಗಾವತಿ:** ಯುವಪೀಳಿಗೆ ಮೂಲ ಜಾನಪದಕಲೆಯನ್ನು ಉಳಿಸಿಬೆಳೆಸಬೇಕಿದೆ ಎಂದು ಮಾರುತಿ ಚಾಮಲಾಪೂರ ಹೇಳಿದರು.

ಅವರು ಇಲ್ಲಿನ ಶರಣಬಸವೇಶ್ವರ ನಗರದನಾದ ಯೋಗಿ ಸಂಗೀತ ಹಾಗೂ ಸಾಂಸ್ಕೃತಿಕ ಸಂಸ್ಥೆ(ರಿ) ಸಂಯುಕ್ತ ಆಶ್ರಯದಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಮಾತನಾಡಿ, ಈಗಿನ ಕಾಲದಲ್ಲಿ ಸಂಗೀತ ಅನ್ನೋದು ನಶಿಸಿ ಹೋಗುತ್ತಿದೆ. ಪ್ರತಿಯೊಂದು ಮಕ್ಕಳು ಶಾಸ್ತ್ರಬದ್ಧವಾಗಿ ಸಂಗೀತ ಕಲಿಯಬೇಕು. ಪ್ರತಿಯೊಂದು ಹಳ್ಳಿಯಲ್ಲಿ ಸಂಗೀತದ ಅರಿವು ಮೂಡಬೇಕು. ಈಗಿನ ಯುವಪೀಳಿಗೆಯಲ್ಲಿ ಯುವಕರು ಅಶ್ಲೀಲ ಜಾನಪದವನ್ನು ಹಾಡುವುದನ್ನು ಬಿಟ್ಟು, ಮೂಲ ಜಾನಪದವನ್ನು ಕಾಪಾಡಬೇಕಿದೆ. ಕರೋಕೆ ಜಾನಪದವನ್ನು ಸರ್ಕಾರ ಬ್ಯಾನ್ ಮಾಡಬೇಕು ಎಂದರು.

ಈ ವೇಳೆಯಲ್ಲಿ ಶಾಲೆ ಎಸ್‌ಡಿಎಂಸಿ ಅಧ್ಯಕ್ಷ ಯಮನೂರಪ್ಪ ಗುದಗಿನ ವಹಿಸಿದ್ದರೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕರಣಕುಮಾರ್, ಶಾಲೆಯ ಎಸ್‌ಡಿಎಂಸಿ ಸದಸ್ಯರಾದಗುನ್ನಪ್ಪ ಗುಮಗೇರಿ, ಹಿರೇಬೊಮ್ಮನಾಳ ಶಾಲೆಯ ಮುಖ್ಯ ಶಿಕ್ಷಕರಾದ ಯಲ್ಲಪ್ಪ ಚೆನ್ನಮಟ್ಟಿ, ಯೋಗ ನರಸಿಂಹ, ಗದಗ ವಿರೇಶ್ವರ ಪುಣ್ಯಾಶ್ರಮದ ಸಂಗೀತ, ಶಿಕ್ಷಕರಾದ ಮಾರುತಿ ಬಿನ್ನಾಳ ದೊಡ್ಡನಿ, ವಚನ ಗಾಯನವನ್ನು ಹಿರಿಯ ಕಲಾವಿದ ರಾಮಚಂದ್ರಪ್ಪ ಉಪ್ಪಾರ ಕೊಪ್ಪಳ, ಜಾನಪದವನ್ನು ಅಂತಾರಾಷ್ಟ್ರೀಯ ಕಲಾವಿದ ಮರಿಯಪ್ಪ ಚಾಮಲಾಪುರ, ತತ್ವಪದವನ್ನು ಆಕಾಶವಾಣಿ ಕಲಾವಿದ ಶರಣಪ್ಪ ಗಂಗಾವತಿ, ಕಲಾವಿದರಾಗಿ ಶೇಖರಗೌಡ ಮ್ಯಾದನೇರಿ, ರೋಹಿತ್ ಕೊಪ್ಪಳ ನಡೆಸಿಕೊಟ್ಟರು.



ಗಂಗಾವತಿ: ಅವರು ಇಲ್ಲಿನ ಶರಣಬಸವೇಶ್ವರ ನಗರದನಾದ ಯೋಗಿ ಸಂಗೀತ ಹಾಗೂ ಸಾಂಸ್ಕೃತಿಕ ಸಂಸ್ಥೆ(ರಿ) ಸಂಯುಕ್ತ ಆಶ್ರಯದಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಮಾರುತಿ ಚಾಮಲಾಪೂರ ಮಾತನಾಡಿದರು.

ಪರೀಕ್ಷೆ ಸೂಸೂತ್ರವಾಗಿ ನಡೆಸಲು ಡಿಸಿ ಶರೀಫ್‌ಸೂಚನೆ

ಜೂನ್ 21ಕ್ಕೆ ನೀಟ್ ಪರೀಕ್ಷೆ

◆ **ಕಲಬುರಗಿ:** ಇದೇ ಜೂನ್ 21ಕ್ಕೆ ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ನೀಟ್ ಮರು ಪರೀಕ್ಷೆ ನಡೆಯಲಿದ್ದು, ಎಲ್ಲಿಯೂ ಲೋಪವಾಗದಂತೆ ಪರೀಕ್ಷೆ ಸುಸೂತ್ರವಾಗಿ ಹಾಗೂ ಕಟ್ಟುನಿಟ್ಟಾಗಿ ನಡೆಸುವಂತೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಸೂಚನೆ ನೀಡಿದರು.



ಬುಧವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪರೀಕ್ಷೆ ಹಿನ್ನೆಲೆಯಲ್ಲಿ ಅಧಿಕಾರಿಗಳು ಮತ್ತು ಪರೀಕ್ಷಾ ಕೇಂದ್ರದ ಮುಖ್ಯಸ್ಥರೊಂದಿಗೆ ಪೂರ್ವಭಾವಿ ಸಭೆ ನಡೆಸಿದ ಅವರು ನಗರದಾದ್ಯಂತ ಸುಮಾರು 20 ಕೇಂದ್ರದಲ್ಲಿ ಅಂದು ಪರೀಕ್ಷೆ ನಡೆಯಲಿದ್ದು, ಸುಮಾರು 9 ಸಾವಿರಕ್ಕೂ ಹೆಚ್ಚಿನ ಅಭ್ಯರ್ಥಿಗಳು ಪರೀಕ್ಷೆ ಬರೆಯಲು ಹೆಸರು ನೊಂದಾಯಿಸಿಕೊಂಡಿದ್ದಾರೆ ಎಂದರು.

ಪರೀಕ್ಷೆಗೆ ಮುನ್ನವೆ ನಿಗದಿತ ಪರೀಕ್ಷಾ ಕೇಂದ್ರಕ್ಕೆ ಭೇಟಿ ನೀಡಿ, ಅಭ್ಯರ್ಥಿ ಬರೆಯಲು ಅನುಕೂಲವಾಗುವಂತೆ ಆಸನ ವ್ಯವಸ್ಥೆ, ವಿದ್ಯುತ್, ಕುಡಿಯುವ ನೀರು ಸೇರಿದಂತೆ ಅಗತ್ಯ ಮೂಲಸೌಲಭ್ಯ ಇರುವಂತೆ ನೋಡಿಕೊಳ್ಳಬೇಕು. ಪರೀಕ್ಷೆ ಹಿನ್ನೆಲೆಯಲ್ಲಿ ಕೇಂದ್ರದ ಸುತ್ತ 200 ಮೀಟರ್ ಪ್ರದೇಶ ನಿಷೇಧಾಜ್ಞೆ ಇರಲಿದ್ದು, ಎಲ್ಲಿಯೂ ಅಕ್ರಮಕ್ಕೆ ಅವಕಾಶವಿಲ್ಲ. ಪೊಲೀಸ್ ಇಲಾಖೆ ಕೇಂದ್ರಗಳ ಸುತ್ತ ಹೆಚ್ಚಿನ ಭದ್ರತೆ ಒದಗಿಸಬೇಕು. ವಿದ್ಯಾರ್ಥಿಗಳು ಮೊಬೈಲ್ ಸೇರಿದಂತೆ ಯಾವುದೇ ಎಲೆಕ್ಟ್ರಾನಿಕ್ ಉಪಕರಣ ಪರೀಕ್ಷಾ ಕೇಂದ್ರಕ್ಕೆ ತರುವಂತಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಸಭೆಯಲ್ಲಿ ಎಸ್.ಪಿ ಅಡ್ಡೂರು ಶ್ರೀನಿವಾಸುಲು, ಡಿಸಿಪಿ ಶಾಲೂ, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಪ್ರೊಬೇಷನರ್ ಐಎಎಸ್ ಅಧಿಕಾರಿ ಶಿಖರ್ ಮೋಘಾ, ಪರೀಕ್ಷೆಯ ನಗರ ಸಂಯೋಜಕ ಕೇಂದ್ರೀಯ ವಿದ್ಯಾಲಯದ ಪ್ರಾಂಶುಪಾಲ ಭೂಪೇಂದ್ರ, ವಿಟಿಯು ಪ್ರಾಧ್ಯಾಪಕ ಶಂಭುಲಿಂಗ ಸೇರಿದಂತೆ ಇತರೆ ಅಧಿಕಾರಿಗಳು ಭಾಗವಹಿಸಿದ್ದರು.

ಸಾಹಿತಿ ಆರ್.ಕೆ.ಸುಬೇದಾರ್‌ಗೆ ಸನ್ಮಾನ

◆ **ಕುಷ್ಟಗಿ:** ಸೌರಭ ಸಾಂಸ್ಕೃತಿಕ ಕಲಾ ಬಳಗ ಹಿರೇಮನ್ನಾಪುರ ಅವರು ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ ಅಕ್ಕಮಹಾದೇವಿ ಸಭಾಂಗಣದಲ್ಲಿ ಸಾಹಿತಿ ಚಿಂತಕ ,ಆರ್.ಕೆ.ಸುಬೇದಾರ್ ಹಿರೇಮನ್ನಾಪುರ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭದ ಅಧ್ಯಕ್ಷತೆ ಆರ್.ಕೆ.ಸುಬೇದಾರ್ ವಹಿಸಿದರು. ಚಲನಚಿತ್ರ ನಟ ಶಿವಕುಮಾರ ಆರಾಧ್ಯ ಉದ್ಘಾಟಿಸಿದರು . ಡಾ.ಕಾಡಯ್ಯ ಶಿವಮೂರ್ತಿ ಸ್ವಾಮಿಗಳು ಹಿರೇಮಠ, ಸಾನ್ನಿಧ್ಯ ವಹಿಸಿದ್ದರು. ಹುಸೇನ್ ಸಾಬ್ ಕೋಳೂರು ರಂಗ ನಿರ್ದೇಶಕರು ರಾಜ್ಯ ಪ್ರಶಸ್ತಿ ಪುರಸ್ಕೃತರು ಹಿರೇಮನ್ನಾಪುರ , ಸಾಹಿತಿ ಹರುಷ ಅಲಿ, ಸಂಸ್ಥೆ ಉಪಾಧ್ಯಕ್ಷ ಭೀಮಸೇನ್ ರಾವ್ ಕುಲಕರ್ಣಿ, ಶರಣಗೌಡ, ಹುಸೇನ್ ಸಾಬ್ ಮುಜಾವರ್, ಲಕ್ಷ್ಮೀನಾರಾಯಣ ಎನ್.ಎಸ್., ವೀರಭದ್ರಯ್ಯ ಹಿರೇಮಠ, ಓಂ ಪ್ರಕಾಶ್ ನಾಯಕ್ ಶಂಕರ್ ನಾಗ್ ಚಲನಚಿತ್ರ ಶಾಲೆ ಬೆಂಗಳೂರು, ಗಾಯಕ ಡಾ.ಅಜಯ್ ಶಂಕರ್, ಜಿ.ಆರ್.ಜೈನಾಪುರ, ಡಾ.ಕರ್ಣ, ಸಂಘದ ಪದಾಧಿಕಾರಿಗಳು ಇದ್ದರು. ಸರ್ ಎಂ.ವಿಶ್ವೇಶ್ವರಯ್ಯ ನಾಡಪ್ರಭು ಕೆಂಪೇಗೌಡ, ಕಿತ್ತೂರುರಾಣಿ ಚೆನ್ನಮ್ಮ, ಅಕ್ಕಮಹಾದೇವಿ, ಗಾನಗಂಧರ್ವ ಡಾ. ರಾಜಕುಮಾರ್, ಡಾ. ವಿಷ್ಣುವರ್ಧನ್ ಅವರ ಹೆಸರಿನಲ್ಲಿ ರಾಜ್ಯ ಪ್ರಶಸ್ತಿ ನೀಡಲಾಯಿತು. ನಾಡಿನ ಖ್ಯಾತ ಕಲಾವಿದರಿಂದ ಕಾರ್ಯಕ್ರಮಗಳು ನಡೆದವು. ಸಂಘದ ಅಧ್ಯಕ್ಷ ರೆಹಮಾನ್ ಸಾಬ್ ಕೋಳೂರ, ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀರಾಮ್ ಶಂಕರಪ್ಪ ತಳವಾರ್, ಗಾಂಧಾರಿ ವಿದ್ಯೆ ಪ್ರವೀಣ ಹನಮಸಾಗರ ಅವರಿಗೆ ಗಾನ ಗಂಧರ್ವ ಡಾ.ರಾಜಕುಮಾರ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಸಹಕಾರಿ ಸಂಘ ಡಿಜಿಟಲೀಕರಣಗೊಳಿಸಿ: ಮಳಗಿ

◆ **ಗಂಗಾವತಿ:** ತಾಲೂಕಾ ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘವನ್ನು ಆಡಳಿತವನ್ನು ಪಾರದರ್ಶಕಗೊಳಿಸಲು ಕ್ರಮಕೈಗೊಳ್ಳಲಾಗಿದ್ದು, ಕಛೇರಿ ವ್ಯವಹಾರವನ್ನು ಸಂಪೂರ್ಣ ಡಿಜಿಟಲೀಕರಣಗೊಳಿಸಲಾಗಿದೆ ಎಂದು ಅಧ್ಯಕ್ಷ ಚನ್ನಪ್ಪ ಮಳಗಿ ವಕೀಲರು ಹೇಳಿದರು.

ಅವರು ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿ, ಕಳೆದ ಹಲವಾರು ದಿನಗಳಿಂದ ಚುನಾವಣೆ ನಡೆಸಲು ಇದ್ದ ಅಡೆತಡೆಗಳಿಗೆ ಕಡಿವಾಣ ಹಾಕಿ, ಹಿರಿಯರ ಸಲಹೆ ಮತ್ತು ಸಂಧಾನದ ಮೂಲಕ ಆಡಳಿತ ಮಂಡಳಿ ಅಸ್ತಿತ್ವಕ್ಕೆ ಬಂದಿದೆ. ಮೊದಲ ಬಾರಿ ಸಭೆ ನಡೆಸಿ ಸಂಸ್ಥೆಯ ಆರ್ಥಿಕ ಪ್ರಗತಿ, ಈ ಹಿಂದೆ ನಡೆದ ಲೋಪಗಳನ್ನು ಸರಿ ಪಡಿಸಲು ನಿರ್ಧಾರ ಕೈಗೊಳ್ಳಲಾಗಿದೆ. ಇದು ರೈತರ ಸಹಕಾರ ಸಂಸ್ಥೆಯಾಗಿದ್ದು, ರೈತರಿಗೆ ಇರುವ ಸಮಸ್ಯೆಗಳನ್ನು ಕೂಡ ಗಮನಕ್ಕೆ ಪಡೆದು ರಸಗೊಬ್ಬರ ಹಂಚಿಕೆಗೆ ಹೆಚ್ಚಿನ ಗಮನ ಹರಿಸಲಾಗಿದೆ.

ಸಂಸ್ಥೆ ಸುಮಾರು 100 ಕೋಟಿ ಆಸ್ತಿ ಹೊಂದಿದ್ದು, ನಗರದಲ್ಲಿರುವ ವಾಣಿಜ್ಯ ಮಳಿಗೆ, ಗೋಡಾನ್, ಮಿಲ್, ಬಾಡಿಗೆಯ ದರವನ್ನು ಪರಿಷ್ಕರಣೆ ಮಾಡಲಾಗುವುದು. ಸುಮಾರು 12 ಎಕರೆ ಜಾಗವನ್ನು ಅಕ್ರಮವಾಗಿ ಒತ್ತುವರಿ ನಡೆಸಿದ್ದು ಕಂಡು ಬಂದಲ್ಲಿ, ಜಾಗವನ್ನು ಕಾನೂನು ವ್ಯಾಪ್ತಿಯಲ್ಲಿ ವಶ ಪಡೆಯಲಾಗುವುದು. ಅಲ್ಲದೆ ನೂತನ ಆಡಳಿತ ಭವನ ನಿರ್ಮಿಸಲು ಉದ್ದೇಶಿಸಿದ್ದು, ಈಗಾಗಲೇ 50ಲಕ್ಷರೂ ಹಣವಿದೆ. ಅದಕ್ಕೆ ಸೂಕ್ತ ನೀಲನಕ್ಷೆಸಿದ್ಧ ಪಡಿಸಲಾಗುವುದು. ಖಾಲಿ ಇರುವ ಜಾಗದಲ್ಲಿ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಲಾಗುವುದು.

> **ತಾಲೂಕಾ ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರಸಂಸ್ಥೆಯು 21ಗೋಡೌನ್, 20 ವಾಣಿಜ್ಯ ಮಳಿಗೆಗಳು, 18 ನ್ಯಾಯಬೆಲೆ ಅಂಗಡಿಗಳು, ಮಿಲ್‌ಗಳಿಂದ ಆದಾಯ ಬಂದಿದ್ದು, ಕಳೆದ ಬಾರಿ 6ಕೋಟಿ ವ್ಯವಹಾರ ನಡೆಸಲಾಗಿದ್ದು, ಇದರಲ್ಲಿ 19 ಲಕ್ಷ ಲಾಭದಲ್ಲಿದೆ. ಈ ಬಾರಿ ಸುಮಾರು 25 ಲಕ್ಷ ಲಾಭದ ನಿರೀಕ್ಷೆಯಲ್ಲಿದ್ದೇವೆ.**
> ■ ಶಂಕರ, ಗಂಗಾವತಿ ಎಸಿಇಒ

ಭ್ರಷ್ಟಾಚಾರ ಪ್ರಕರಣವನ್ನು 64ರ ಅಡಿಯಲ್ಲಿ ತನಿಖೆಗೊಳಿಸಿದ್ದು, 68ರಲ್ಲಿ ಕ್ರಮಕ್ಕೆ ಮುಂದಾಗಿದೆ. 2024 ಆಡಳಿತ ಮಂಡಳಿವು ಪ್ರಕರಣ ತನಿಖೆಗೆ ದೂರು ಸಲ್ಲಿಸಿದ್ದು, ಎಲ್ಲರಿಗೂ ತಿಳಿದ ವಿಷಯವಾಗಿದೆ.

ಈ ವೇಳೆಯಲ್ಲಿ ನಿರ್ದೇಶಕ ಚಂದ್ರೇಗೌಡ, ಮಂಜುನಾಥ ಜನಾದ್ರಿ, ಶರಣಪ್ಪ ಚಕೋಟಿ, ಶೇರುದಾರ ಬಾಲನಗೌಡ, ಬಸವರಾಜ ಮಾಪಾ, ಹನುಮಂತಪ್ಪ ಉಪ್ಪಾರ ಸೇರಿದಂತೆ ಇನ್ನಿತರಿದ್ದರು.



ನೇಮಕಾತಿ ಆರೋಪ: ತನಿಖೆಗೆ ಡಿವೈಎಫ್ಐ ಆಗ್ರಹ

◆ **ಕುಷ್ಟಗಿ:** ಪಟ್ಟಣದ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜು (ಆರ್‌ಕೆ-0132) ಯಲ್ಲಿ ಅತಿಥಿ ಉಪನ್ಯಾಸಕರ ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮ, ನಿಯಮ ಉಲ್ಲಂಘನೆ ಹಾಗೂ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್ಐ) ಜಿಲ್ಲಾ ಸಮಿತಿಯು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ ಸಮಗ್ರ ತನಿಖೆಗೆ ಆಗ್ರಹಿಸಿದೆ.

ಕಾಲೇಜಿನ ಪ್ರಾಚಾರ್ಯರು 2026-27ನೇ ಶೈಕ್ಷಣಿಕ ಸಾಲಿನ ಅತಿಥಿ ಉಪನ್ಯಾಸಕರ ಆಯ್ಕೆ ಪ್ರಕ್ರಿಯೆಯಲ್ಲಿ ಅಧಿಕಾರ ದುರುಪಯೋಗ ಪಡಿಸಿಕೊಂಡು ತಮ್ಮ ಇಚ್ಛೆಯ ಅಭ್ಯರ್ಥಿಗಳನ್ನು ಮಾತ್ರ ಆಯ್ಕೆ ಮಾಡಿಕೊಂಡಿದ್ದು, ಅರ್ಹತೆ ಹಾಗೂ ಪ್ರತಿಭೆ ಹೊಂದಿರುವ ಹಲವಾರು ಉದ್ಯೋಗಾಕಾಂಕ್ಷಿಗಳಿಗೆ ಅನ್ಯಾಯ ಮಾಡಲಾಗಿದೆ ಎಂದು ಮನವಿಯಲ್ಲಿ ಆರೋಪಿಸಲಾಗಿದೆ.

ಸರ್ಕಾರದ ನಿಯಮಾನುಸಾರ ಅತಿಥಿ ಉಪನ್ಯಾಸಕರ ಆಯ್ಕೆಗಾಗಿ ಸಮಿತಿ ರಚಿಸಿ, ಎಲ್ಲಾ ಖಾಲಿ ಹುದ್ದೆಗಳಿಗೆ ಒಂದೇ ದಿನ ಸಂದರ್ಶನ ನಡೆಸಬೇಕಾಗಿದ್ದರೂ, ವಿವಿಧ ವಿಷಯಗಳಿಗೆ ಬೇರೆ ಬೇರೆ ದಿನಗಳಲ್ಲಿ ಆಯ್ಕೆ ಪ್ರಕ್ರಿಯೆ ನಡೆಸಿ ನಿಯಮ ಉಲ್ಲಂಘಿಸಲಾಗಿದೆ ಎಂದು ಡಿವೈಎಫ್ಐ ಆರೋಪಿಸಿದೆ.

ಸರ್ಕಾರಿ ಕಾಲೇಜುಗಳಲ್ಲಿ ಬಡ, ದಲಿತ ಹಾಗೂ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಸಿಗಬೇಕಾದ ಸಂದರ್ಭದಲ್ಲಿ ಅರ್ಹತೆ ಇಲ್ಲದ ಉಪನ್ಯಾಸಕರ ನೇಮಕ ಮತ್ತು ನಿಧಿ ದುರುಪಯೋಗದಿಂದ ವಿದ್ಯಾರ್ಥಿಗಳ ಭವಿಷ್ಯಕ್ಕೆ ಧಕ್ಕೆಯಾಗುತ್ತಿದೆ ಎಂದು ಡಿವೈಎಫ್ಐ ಕಳವಳ ವ್ಯಕ್ತಪಡಿಸಿದೆ.

ಈ ಎಲ್ಲ ಆರೋಪಗಳ ಕುರಿತು ಜಿಲ್ಲಾಡಳಿತ ಹಾಗೂ ಶಿಕ್ಷಣ ಇಲಾಖೆ ಉನ್ನತ ಮಟ್ಟದ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ಜಿಲ್ಲಾಡಳಿತ ಕಚೇರಿ ಎದುರು ಪ್ರತಿಭಟನೆ ನಡೆಸುವುದಾಗಿ ಡಿವೈಎಫ್ಐ ಜಿಲ್ಲಾ ಸಮಿತಿ ಎಚ್ಚರಿಕೆ ನೀಡಿದೆ.

ಮನವಿಗೆ ಡಿವೈಎಫ್ಐ ರಾಜ್ಯ ಸಮಿತಿ ಸದಸ್ಯ ಅಮರೇಶ ಕಡಗದ, ಜಿಲ್ಲಾ ಮುಖಂಡ ಲಕ್ಷ್ಮಣ ನವಲಹಳ್ಳಿ ಹಾಗೂ ಅತಿಥಿ ಉಪನ್ಯಾಸಕರ ಅಭ್ಯರ್ಥಿಗಳಾದ ವಿದ್ಯಾಶ್ರೀ ವಣಗೇರ, ರಮ್ಯ ಎಂ, ಯಮನೂರಪ್ಪ ಅಶೋಕ ಮತ್ತು ಉಮೇಶ ದೋಟಿಹಾಳ ಸಹಿ ಹಾಕಿದ್ದಾರೆ.



ಹತ್ತಿ, ತೊಗರಿ ಬೇಸಾಯ ಕ್ರಮಗಳು: ಹೊರಾವರಣ ತರಬೇತಿ

◆ **ಕೊಪ್ಪಳ:** ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ ಕೊಪ್ಪಳ ಮತ್ತು ಸಹಾಯಕ ಕೃಷಿ ನಿರ್ದೇಶಕರು ಕೊಪ್ಪಳ ಇವರ ಸಹಯೋಗದಲ್ಲಿ ತೊಗರಿ ಮತ್ತು ಹತ್ತಿ ಬೆಳೆಗಳಲ್ಲಿ ಸುರಕ್ಷಿತ ಕೀಟನಾಶಕ ಬಳಕೆ ಹಾಗೂ ಸಮತೋಲಿತ ರಸಗೊಬ್ಬರ ಬಳಕೆ ಕುರಿತು ಅಳವಂಡಿ ಹೋಬಳಿಯ ಬಿಕನಹಳ್ಳಿ ಗ್ರಾಮದಲ್ಲಿ ಹೊರಾವರಣ ತರಬೇತಿ ಜರುಗಿತು.



ಕೊಪ್ಪಳ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ವಿಸ್ತರಣಾ ಮುಂದಾಳು ಡಾ.ಬದರಿ ಪ್ರಸಾದ್ ಪಿ.ಆರ್. ಸಮಗ್ರ ಅವರು, ಅಧಿಕ ಸಾಂದ್ರತೆ ಹತ್ತಿ ಬೇಸಾಯ ಹಾಗೂ ತೊಗರಿ ಬೆಳೆಯ ನಿರ್ವಹಣೆ ಹಾಗೂ ಬರ ಭೂಮಿ ಬೆಳೆಯಾದ ಗೋಡಂಬಿಯ ಕುರಿತು ಮಾಹಿತಿ ನೀಡಿದರು. ಕೊಪ್ಪಳ ಸಹಾಯಕ ಕೃಷಿ ನಿರ್ದೇಶಕ ಜೀವಂತ ಸಾಬ್ ಅವರು, ರೈತರಿಗೆ ಬೀಜೋಪಚಾರ ಮಹತ್ವ ಪರ್ಯಾಯ ರಸಗೊಬ್ಬರಗಳ ಬಗ್ಗೆ ಮಾಹಿತಿ ನೀಡಿದರು.

ಸಹಾಯಕ ತೋಟಗಾರಿಕಾ ಅಧಿಕಾರಿ ಆರಿಫ್ ಅವರು, ಕೃಷಿ ಮತ್ತು ತೋಟಗಾರಿಕಾ ಪದ್ಧತಿ ಬಗ್ಗೆ ಮಾಹಿತಿ ಕೊಟ್ಟರು. ಕೋರಮಂಡಲ ಇಂಟರ್ನ್ಯಾಷನಲ್ ಅಧಿಕಾರಿ ಅವಿನಾಶ್ ಅವರು, ನ್ಯಾನೋ ರಸಗೊಬ್ಬರಗಳ ಹಾಗೂ ಡ್ರೋನ್ ಬಳಕೆ ಬಗ್ಗೆ ರೈತರಿಗೆ ಅರಿವು ಮೂಡಿಸಿದರು.

ಈ ವೇಳೆ ಕೃಷಿ ಅಧಿಕಾರಿಗಳಾದ ಪ್ರತಾಪಗೌಡ, ಮಾರುತಿ, ತಾಂತ್ರಿಕ ವ್ಯವಸ್ಥಾಪಕಿ ತಾರಾ ಹಾಗೂ ನೂರಾರು ರೈತರು ಭಾಗವಹಿಸಿದ್ದರು.

ಹೆಚ್ಚಿನ ಮಾಹಿತಿಗೆ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಕೊಪ್ಪಳದ ವಿಜ್ಞಾನಿಗಳನ್ನು (ಡಾ. ಬದರಿ ಪ್ರಸಾದಪಿ.ಆರ್., ವಿಸ್ತರಣಾ ಮುಂದಾಳು ಮೊ. ನಂ: 9900145705 ಸಂಪರ್ಕಿಸಬಹುದು.

ವಸತಿ ನಿಲಯಗಳ ಸಮಸ್ಯೆ ಪರಿಹಾರಕ್ಕೆ ಆಗ್ರಹ

◆ **ಕಲಬುರಗಿ:** ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯ ವಿದ್ಯಾರ್ಥಿ ವಸತಿ ನಿಲಯಗಳಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ, ಕಳಪೆ ಆಹಾರ ಪೂರೈಕೆ, ಶುಚಿ ಕಿಟ್ ವಿತರಿಸದಿರುವುದು ಸೇರಿದಂತೆ ವಿವಿಧ ಸಮಸ್ಯೆಗಳನ್ನು ಖಂಡಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಜಿಲ್ಲಾ ಘಟಕದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.



ಜಿಲ್ಲೆಯ ಅನೇಕ ವಸತಿ ನಿಲಯಗಳಲ್ಲಿ ಕಳೆದ 5-6 ತಿಂಗಳಿಂದ ವಿದ್ಯಾರ್ಥಿಗಳಿಗೆ ಶುಚಿ ಕಿಟ್ ವಿತರಿಸಿಲ್ಲ. ಕಳಪೆ ಆಹಾರದಿಂದ ವಿದ್ಯಾರ್ಥಿಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದ್ದು, ಶುದ್ಧ ಕುಡಿಯುವ ನೀರು, ವಿದ್ಯುತ್, ಸ್ವಚ್ಛತೆ ಹಾಗೂ ಸುರಕ್ಷತಾ ವ್ಯವಸ್ಥೆಗಳ ಕೊರತೆ ಕಂಡುಬರುತ್ತಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಈ ಹಿನ್ನೆಲೆಯಲ್ಲಿ ಜಿಲ್ಲೆಯ ಎಲ್ಲ ವಸತಿ ನಿಲಯಗಳ ಸಮಗ್ರ ಪರಿಶೀಲನೆ ನಡೆಸಿ ವಿದ್ಯಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ತಕ್ಷಣ ಪರಿಹರಿಸಬೇಕು. ಗುಣಮಟ್ಟದ ಆಹಾರ, ಶುಚಿ ಕಿಟ್, ಸಿಸಿಟಿವಿ, ಬಯೋಮೆಟ್ರಿಕ್ ಹಾಜರಾತಿ ಹಾಗೂ ಪ್ರವೇಶ ವ್ಯವಸ್ಥೆ, ಗ್ರಂಥಾಲಯ, ಭದ್ರತಾ ಸಿಬ್ಬಂದಿ, ವೈದ್ಯಕೀಯ ಸೌಲಭ್ಯ, ಕ್ರೀಡಾ ಸಾಮಗ್ರಿ ಮತ್ತು ವಿದ್ಯಾರ್ಥಿನಿಯರಿಗೆ ಉಚಿತ ಸ್ಯಾನಿಟರಿ ನ್ಯಾಪ್ಕಿನ್ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಎಬಿವಿಪಿ ನಗರ ಕಾರ್ಯದರ್ಶಿ ಶರಣು ಪೂಜಾರಿ, ರಾಜ್ಯ ಸಹ ಕಾರ್ಯದರ್ಶಿ ಹನುಮಂತ ಬಗಲಿ, ರಾಜ್ಯ ಕಾರ್ಯಕಾರಿಣಿ ಸದಸ್ಯ ಶ್ರವಣ್, ಅವಿನಾಶ ಗುತ್ತೇದಾರ, ಸಂದೇಶ್, ಮನೋಜ ಪಾಟೀಲ, ಮನೋಜ ಶೆಟ್ಟಿ, ಶಿವು ಸಜ್ಜನ ಹಾಗೂ ವಸತಿ ನಿಲಯದ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮಸ್ಕಿ ಹಳ್ಳದಲ್ಲಿ ಹುಲ್ಲಿನ ದೂದಿ ಹಾವಳಿ

▸ ಸಿದ್ದಯ್ಯ ಹೆಸರೂರು

ದಿಗಂತ ವಿಶೇಷ



◆ **ಮಸ್ಕಿ:** ಪಟ್ಟಣದ ಹೃದಯಭಾಗದಲ್ಲಿ ಹರಿಯುವ ಹಳ್ಳವು ಈಗ ಜಲ ಮೂಲವಾಗಿ ಉಳಿಯದೆ ಸಾರ್ವಜನಿಕರ ಆರೋಗ್ಯಕ್ಕೆ ಕಂಟಕವಾಗಿ ಪರಿಣಮಿಸಿದೆ.

ಯಾಕೆಂದರೆ ಹಳ್ಳದಲ್ಲಿ ದಟ್ಟವಾಗಿ ಬೆಳೆದಿರುವ ಆಪು ಹುಲ್ಲಿನಿಂದ ಹೊರಹೊಮ್ಮುತ್ತಿರುವ ಬಿಳಿ ಬಣ್ಣದ ದೂದಿ (ಹತ್ತಿಯಂತಹ ಸೂಕ್ಷ್ಮ ಕಣಗಳು) ಕಣಗಳ ಹಾವಳಿ ತೀವ್ರಗೊಂಡಿದ್ದು, ಪಟ್ಟಣದ ಜನತೆ ಉಸಿರಾಟದ ತೊಂದರೆಯಿಂದ ತತ್ತರಿಸಿ ಹೋಗಿದ್ದಾರೆ. ಗಾಳಿ ಬೀಸಿದಾಗಲೆಲ್ಲಾ ಹಳ್ಳದಿಂದ ಎದ್ದು ಬರುವ ಈ ಕಣಗಳು ಇಡೀ ಪಟ್ಟಣವನ್ನು ಆವರಿಸಿಕೊಳ್ಳುತ್ತಿದ್ದು, ಸ್ಥಳೀಯ ನಿವಾಸಿಗಳು, ವ್ಯಾಪಾರಸ್ಥರು ಮತ್ತು ವಾಹನ ಸವಾರರು ದಿನನಿತ್ಯ ನರಕಯಾತನೆ ಅನುಭವಿಸುವಂತಾಗಿದೆ.

ಮನೆ-ಅಂಗಡಿಗಳಿಗೂ ನುಗ್ಗುತ್ತಿರುವ ಬಿಳಿ ಕಣ ಹಳ್ಳದ ಆಸುಪಾಸಿನ ವಾರ್ಡ್‌ಗಳ ನಿವಾಸಿಗಳು ತಮ್ಮ ಮನೆಗಳ ಕಿಟಕಿ-ಬಾಗಿಲುಗಳನ್ನು ಮುಚ್ಚಿಕೊಂಡೇ ಬದುಕಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಸ್ವಲ್ಪ ಬಾಗಿಲು ತೆರೆದರೂ ಸಾಕು, ದೂದಿ ಕಣಗಳು ಮನೆತುಂಬಾ ಹರಡಿ ಆಹಾರ ಪದಾರ್ಥ ಹಾಗೂ ಹಾಸಿಗೆಗಳ ಮೇಲೆ ಕೂರುತ್ತಿವೆ. ಇನ್ನೂ ಹಳ್ಳದ ರಸ್ತೆಯಲ್ಲಿರುವ ಹೋಟೆಲ್, ಬೇಕರಿ ಹಾಗೂ ಕಿರಾಣಿ ಅಂಗಡಿಗಳ ವ್ಯಾಪಾರಸ್ಥರು ಮುಖಕ್ಕೆ ಮಾಸ್ಕ್ ಧರಿಸಿಯೇ ವ್ಯಾಪಾರ ಮಾಡಬೇಕಾಗಿದೆ. ಇನ್ನೂ ಇದರಿಂದಾಗಿ ಗ್ರಾಹಕರು ಅಂಗಡಿಗಳಿಗೆ ಬರಲು ಹಿಂಜರಿಯುತ್ತಿರುವುದರಿಂದ ವ್ಯಾಪಾರಕ್ಕೂ ಭಾರಿ ಹೊಡೆತ ಬಿದ್ದಿದೆ.

ದೂದಿ ಕಣಗಳು ಕಣ್ಣಿಗೆ ಬಿದ್ದು ಕಣ್ಣು ಕೆಂಪಾಗುವುದು ಹಾಗೂ ಉರಿ ಕಾಣಿಸಿಕೊಳ್ಳುತ್ತಿರುವುದರಿಂದ ದ್ವಿಚಕ್ರ ವಾಹನ ಸವಾರರು ರಸ್ತೆಯಲ್ಲಿ ಚಲಿಸುವುದೇ ಸಾಹಸದ ಕೆಲಸವಾಗಿದೆ. ಪ್ರತಿ ವರ್ಷವೂ ಈ ಆಪು ಹುಲ್ಲಿನ ಸಮಸ್ಯೆ ಎದುರಾಗುತ್ತಿದ್ದರೂ ಪುರಸಭೆ ಹಾಗೂ ಸ್ಥಳೀಯ ಆಡಳಿತ ಮಾತ್ರ ಶಾಶ್ವತ ಪರಿಹಾರ ಕೈಗೊಳ್ಳುತ್ತಿಲ್ಲ, ಹಳ್ಳದಲ್ಲಿ ಹೂಳು ತುಂಬಿ,ಪಟ್ಟಣದ ಕೊಳಚೆ ನೀರೆಲ್ಲಾ ಇಲ್ಲಿಗೆ ಸೇರುತ್ತಿರುವುದರಿಂದ ಜೊಂಡು ಸಸ್ಯಗಳು ಮಿತಿ ಮೀರಿ ಬೆಳೆದಿವೆ. ಆದ್ದರಿಂದ ತಕ್ಷಣವೇ ಈ ಆಪು ಹುಲ್ಲನ್ನು ತೆರವುಗೊಳಿಸದಿದ್ದರೆ ಪುರಸಭೆ ಕಾರ್ಯಾಲಯದ ಎದುರು ಬೃಹತ್ ಪ್ರತಿಭಟನೆ ನಡೆಸುವುದಾಗಿ ವಿಜಯಕುಮಾರ ಬಡಿಗೇರ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರುಸೇನೆ ತಾಲೂಕು ಅಧ್ಯಕ್ಷ ಎಚ್ಚರಿಸಿದ್ದಾರೆ.

> ▸▸ ಆಪನ್ನು ತೆರವುಗೊಳಿಸಲು ಶೀಘ್ರದಲ್ಲಿಯೇ ಕ್ರಮ ಜರುಗಿಸಲಾಗುವುದು.
> ▸▸ ನರಸರೆಡ್ಡಿ, ಮುಖ್ಯಾಧಿಕಾರಿಗಳು, ಪುರಸಭೆ

ದುಶ್ಚಟಗಳಿಗೆ ಬಲಿಯಾಗದಿರಿ: ಮಾಲಗಿತ್ತಿ



◆ **ಯಲಬುರ್ಗಾ:** ತಂಬಾಕು, ಗುಟುಕಾ, ಸರಾಯಿ, ಸಿಗರೇಟ ಮತ್ತು ಮದ್ಯದ ದಾಸರಾಗಿ ತಮ್ಮ ದುಡಿದ ಸಂಪತ್ತನ್ನೆಲ್ಲ ಹಾಳುಮಾಡಿಕೊಳ್ಳಬೇಡಿ ಎಂದು ಸ್ಥಳೀಯ ಠಾಣೆ ಎಎಸ್ಐ ಬಸವರಾಜ ಮಾಲಗಿತ್ತಿ ಹೇಳಿದರು.

ಪಟ್ಟಣದ ಮಂಜುನಾಥ ಪ್ರೌಢಶಾಲೆಯಲ್ಲಿ ಗುರುವಾರ ಸ್ಥಳೀಯ ಪೊಲೀಸ್ ಠಾಣೆ ಸಹಯೋಗದಲ್ಲಿ ಮಾದಕ ವಸ್ತುಗಳ ದುರಪಯೋಗ ಮತ್ತು ಅಕ್ರಮ ಸಾಗಾಣಿಕೆ ವಿರುದ್ಧ ಜನಜಾಗೃತಿ ಅಭಿಯಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿ, ನಿಮ್ಮ ಮನೆಯಲ್ಲಿ ಮತ್ತು ಮನೆಯ ಸುತ್ತಮುತ್ತ ಯಾರಾದರೂ ದುಶ್ಚಟಗಳಿಗೆ ಬಲಿಯಾಗಿರುವುದು ಕಂಡು ಬಂದರೆ ಅಂತವರಿಗೆ ಮಾರ್ಗದರ್ಶನ ಮಾಡಲು ವಿದ್ಯಾರ್ಥಿಗಳಿಗೆ ಮುಂದಾಗಬೇಕು ಎಂದರು.

ಪೊಲೀಸ್ ಪೇದೆ ವಿಠ್ಠಲ ಮಾತನಾಡಿ, ವಿದ್ಯಾರ್ಥಿಗಳು ದುಶ್ಚಟಗಳಿಂದ ದೂರವಿದ್ದು, ಅಭ್ಯಾಸದ ಕಡೆಗೆ ಹೆಚ್ಚು ಗಮನಹರಿಸುವ ಮೂಲಕ ಹೆತ್ತವರ ಹಾಗೂ ಶಾಲೆಗೆ ಕೀರ್ತಿ ತರುವಂತಹ ಮಕ್ಕಳಾಗಬೇಕು ಎಂದು ಹೇಳಿದರು.

ಪ್ರಾಚಾರ್ಯರಾದ ಗಂಗಾಧರ ದಫೇದ ಮಾತನಾಡಿದರು.

ಈ ವೇಳೆಯಲ್ಲಿ ಮುಖ್ಯಗುರುಗಳಾದ ಮಂಜುನಾಥ ಅಕ್ಕಸಾಲಿಗ, ಶಿಕ್ಷಕರಾದ ಎಸ್.ಕೆ.ಪಾಟೀಲ,ಅಮರೇಶ ಹಿರೇಮಠ, ಸುಮಂಗಲಾ ಹುನಗುಂದ ಮತ್ತಿತರರು ಇದ್ದರು.

ಮೊಬೈಲ್‌ಗಳಿಂದ ಮಕ್ಕಳನ್ನು ದೂರವಿಡಿ: ಕಾರಕನೂರು

◆ **ರಾಯಚೂರು:** ಮೊಬೈಲ್ ಬಳಕೆಯ ಅಭ್ಯಾಸದಿಂದ ಸಮಯ ಮತ್ತು ಸೃಜನಶೀಲ ಸಾಮರ್ಥ್ಯವನ್ನು ಹಾಳು ಮಾಡುತ್ತಿದ್ದು, ಮೊಬೈಲ್ ಬಳಕೆಯ ಅಭ್ಯಾಸದಿಂದ ಮಕ್ಕಳನ್ನು ದೂರ ಇಡಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕಿ ಶರಣಮ್ಮ ಕಾರಕನೂರು ಹೇಳಿದರು.

ಜಿಲ್ಲಾಡಳಿತ, ಜಿಪಂ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರಾಯಚೂರು ಸೇರಿದಂತೆ ವಿವಿಧ ಸಂಘಟನೆಗಳ ಸಹಯೋಗದಲ್ಲಿ ಬಾಲವಿಕಾಸ ನಡಿಗೆ ಪಾಲಕರ ಕಡೆಗೆ ಒಂದು ದಿನ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಮೊಬೈಲ್‌ನ ಬಳಕೆಯಿಂದ ದೈಹಿಕ ಮತ್ತು ಮಾನಸಿಕ ಸಮತೋಲನಕ್ಕೆ ಮೊಬೈಲ್ ಬಳಕೆ ಅಡ್ಡಿಯಾಗುತ್ತಿದೆ. ಹಾಗಾಗಿ ಪೋಷಕರು ಮಕ್ಕಳ ಕೈಗೆ ಸಿಗದಂತೆ ನೋಡಿಕೊಳ್ಳಬೇಕು. ವಯಸ್ಕರು ಕೂಡ ಅಗತ್ಯ ಮೀರಿ ಮೊಬೈಲ್ ಬಳಸಬಾರದು ಎಂದರು.

ಈವೇಳೆ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮಂಜುನಾಥ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧೀಕ್ಷರು ದರ್ಜೆ-2ರ ಚಾಮರಾಜ, ಸಂಪನ್ಮೂಲ ವ್ಯಕ್ತಿಗಳಾದ ಭರತಕುಮಾರ ಚಂದನಕರ, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷ ಸುದರ್ಶನ ಸೇರಿದಂತೆ ಇತರರಿದ್ದರು.

ಶಿಶು ಅಭಿವೃದ್ಧಿ ಯೋಜನೆ ಮೇಲ್ವಿಚಾರಕಿ ಮಲ್ಲಮ್ಮ ಪ್ರಾರ್ಥನೆ ಗೀತೆ ಹಾಡಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಜಿಲ್ಲಾ ಸಂಯೋಜಕಿ ದೀಪಾ ನಿರೂಪಿಸಿದರು.



ಕಿರುಸುದ್ದಿ

ನಶಮುಕ್ತ ಭಾರತ ಅಭಿಯಾನ

• **ಹೂವಿನಹಡಗಲಿ:** ದುಶ್ಚಟಗಳಿಗೆ ಬಲಿಯಾಗದಿದ್ದರೆ ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯ ಎಂದು ಪುರಸಭೆ ವ್ಯವಸ್ಥಾಪಕ ಉಮೇಶ ಹಿರೇಮಠ ಹೇಳಿದರು.

ಪಟ್ಟಣದ ತುಂಗಭದ್ರಾ ಸರ್ಕಾರಿ ಅನುದಾನಿತ ಪ್ರೌಢಶಾಲೆಯಲ್ಲಿ ಗುರುವಾರ ತಾಲೂಕು ಆಡಳಿತ ಪುರಸಭೆ ಆರೋಗ್ಯ ಇಲಾಖೆ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಹಯೋಗದಲ್ಲಿ ನಶ ಮುಕ್ತ ಭಾರತ ಅಭಿಯಾನದಲ್ಲಿ ಮಾತನಾಡಿದರು. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ನಶಮುಕ್ತ ಭಾರತ ನಿರ್ಮಾಣಕ್ಕೆ ಯೋಜನೆ ರೂಪಿಸಿದ್ದು, ಸಾರ್ವಜನಿಕರ ಸಹಕಾರವೂ ಮುಖ್ಯ ಎಂದು ತಿಳಿಸಿದರು.

ಶಾಲಾ-ಕಾಲೇಜುಗಳಲ್ಲಿ ನಶಮುಕ್ತ ಭಾರತ ಅಭಿಯಾನದಲ್ಲಿ ಆರೋಗ್ಯದ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ ಎಂದು.

ಪುರಸಭೆ ಆರೋಗ್ಯ ನಿರೀಕ್ಷಕ ಮಾರುತಿ, ತಾಪಂ ಎಂಆರ್‌ಡಬ್ಲ್ಯುಬಿ ಮಂಜುನಾಥ ಆರೋಗ್ಯ ನಿರೀಕ್ಷಣಾಧಿಕಾರಿ ಮೇಘರಾಜ, ಮಾನಸಿಕ ಆರೋಗ್ಯ ಸಾಮಾಜಿಕ ಕಾರ್ಯಕರ್ತ ನಾಗರಾಜ ಮಂಗಳಾ ಎಂ, ಶಾಲೆಯ ಮುಖ್ಯ ಗುರುಗಳಾದ ಸುರೇಶ ಅಂಗಡಿ, ದೈಹಿಕ ಶಿಕ್ಷಕ ಸ್ವಾಮಿನಾಥ ರಾಮಸ್ವಾಮಿ ಶಿಕ್ಷಕ ಸಿಬ್ಬಂದಿ ಹಾಜರಿದ್ದರು. ನಂತರ ಎಲ್ಲಾ ವಿದ್ಯಾರ್ಥಿಗಳು ಪ್ರತಿಜ್ಞಾವಿಧಿ ಸ್ವೀಕರಿಸಿದರು.

ಜೆ.ಎನ್.ಗಣೇಶಗೆ ಸಚಿವ ಸ್ಥಾನ ನೀಡಲು ಒತ್ತಾಯ

• **ಕುರುಗೋಡು:** ಶಾಸಕ ಜೆ.ಎನ್.ಗಣೇಶ ಅವರಿಗೆ ಈ ಬಾರಿಯ ಡಿ.ಕೆ.ಶಿವಕುಮಾರ ಅವರ ಸಚಿವ ಸಂಪುಟದಲ್ಲಿ ಎರಡನೇ ಸಂಪುಟ ಪುನಾರಚನೆಯಲ್ಲಿ ಪಕ್ಷ ಅವರ ಕಾರ್ಯಕ್ಷಮತೆ ನೋಡಿ ಸಚಿವ ಸ್ಥಾನ ನೀಡಬೇಕು ಎಂದು ಎಮ್ಮಿಗನೂರಿನ ಗ್ರಾಮದ ಕಾಂಗ್ರೆಸ್‌ನ ಮುಖಂಡ ಎಳ್ಳಾರ್ತಿ ವೈ.ರಾಘವೇಂದ್ರ ರೆಡ್ಡಿ ಪಕ್ಷದ ಹೈಕಮಾಂಡ್ ನಾಯಕರಿಗೆ ಮನವಿ ಮಾಡಿದರು.



ಸಮೀಪದ ಎಮ್ಮಿಗನೂರಿನಲ್ಲಿ ಮಾತನಾಡಿ, ರಾಜಕೀಯ ಜೀವನದಲ್ಲಿ ಬಹಳಷ್ಟು ಜನಪರವಾದ ಆಡಳಿತವನ್ನು ನೀಡಿದ ಶಾಸಕ ಜೆ.ಎನ್.ಗಣೇಶ ಅವರು ಇನ್ನೂ ಯುವಕರಾಗಿದ್ದು ರೈತರಿಗೆ ಹಲವಾರು ಮಹತ್ವಾಕಾಂಕ್ಷೆ ಉಳ್ಳವರು ಕ್ಷೇತ್ರದಲ್ಲಿ ಆಗಿದ್ದಾರೆ. ಅಂತವರಿಗೆ ಅವಕಾಶ ಕಲ್ಪಿಸಿದರೆ ಒಂದು ಬಾರಿಯಾದರೂ ಸಚಿವರಾಗಿ ಅಖಂಡ ಕರ್ನಾಟಕ ರಾಜ್ಯದ ಜನರ ಸೇವೆ ಮಾಡಬೇಕು ಎಂದು ನಮ್ಮೆಲ್ಲರ ಮಹದಾಸೆ. ಅವರಿಗೆ ತಾಲ್ಲೂಕಿನ ಮತದಾರರು ಮತ ನೀಡಿ ಶಾಸಕರಾಗಿ ಸತತ 2 ಅವಧಿಯಲ್ಲಿ ಆಯ್ಕೆ ಮಾಡಲಾಗಿದ್ದು ಕ್ಷೇತ್ರದಲ್ಲಿ ಎರಡು ತಾಲ್ಲೂಕು ಅಭಿವೃದ್ಧಿ ಮತ್ತು ಜನರಿಗೆ ಕೊಟ್ಟ ಭರವಸೆಗಳನ್ನು ಈಡೇರಿಸುವ ಕೆಲಸ ಮಾಡುತ್ತಿದ್ದಾರೆ. ಆ ಕಾರಣದಿಂದ ಪುನರ್ ಸಚಿವ ಸಂಪುಟದಲ್ಲಿ ಈ ಭಾಗದಲ್ಲಿ ಹೆಚ್ಚು ಕ್ರಿಯಾಶೀಲರು ಆಗಿದ್ದಾರೆ ಎಂದು ಅವರು ಹೇಳಿದರು. ಈ ವೇಳೆ ಕಾರ್ಯಕರ್ತರಿದ್ದರು.

ವೇಶ್ಯಾವಾಟಿಕೆ: 8 ಜನರ ವಿರುದ್ಧ ದೂರು

• **ವಿಜಯನಗರ:** ಹೊಸಪೇಟೆಯ ಬಡಾವಣೆ ಪೊಲೀಸ್ ಠಾಣೆಯ ಕೂಗಳತೆ ದೂರದಲ್ಲೇ ಇರುವ ಲಾಡ್ಜ್ ಒಂದರಲ್ಲಿ ನಡೆಯುತ್ತಿದ್ದ ವೇಶ್ಯಾವಾಟಿಕೆ ದಂಧೆಯನ್ನು ಮೈಸೂರಿನ ಒಡನಾಡಿ ಸಂಸ್ಥೆ ಬಯಲು ಮಾಡಿದೆ.



ಮೈಸೂರಿನ ಒಡನಾಡಿ ಸಂಸ್ಥೆಯ ಮಾಹಿತಿ ಮೇರೆಗೆ ನಗರದ ಎಪಿಎಂಸಿ ಮಾರುಕಟ್ಟೆ ಸಮೀಪದ ಲಾಡ್ಜ್ ಒಂದರ ಮೇಲೆ ಬುಧವಾರ ಸಂಜೆ ದಾಳಿ ನಡೆಸಿದ ಪೊಲೀಸರು, ವೇಶ್ಯಾವಾಟಿಕೆ ದಂಧೆಯಲ್ಲಿ ಸಿಲುಕಿದ್ದ ಮಹಾರಾಷ್ಟ್ರ, ಬೆಂಗಳೂರು ಹಾಗೂ ಸ್ಥಳೀಯ ಓರ್ವಳು ಸೇರಿದಂತೆ ಒಟ್ಟು ಮೂವರು ಮಹಿಳೆಯರನ್ನು ರಕ್ಷಿಸಿದ್ದು, 8 ಜನರ ವಿರುದ್ಧ ದೂರು ದಾಖಲಿಸಲಾಗಿದೆ.

ಈ ಲಾಡ್ಜ್‌ನಲ್ಲಿ ವೇಶ್ಯಾವಾಟಿಕೆ ದಂಧೆ ಹಲವು ಸಮಯದಿಂದ ನಡೆಯುತ್ತಿರುವ ಬಗ್ಗೆ ಮೈಸೂರಿನ ಒಡನಾಡಿ ಸಂಸ್ಥೆಯ ಸ್ಟಾನ್ಲಿ ಮತ್ತು ಪರಶುರಾಂ ಅವರಿಗೆ ದೂರುಗಳು ಬರುತ್ತಿದ್ದವು. ಅವರು ಎಸ್‌ಪಿ ಎಸ್. ಜಾಹ್ನವಿ ಅವರಿಗೆ ಮಾಹಿತಿ ನೀಡಿದ ಬಳಿಕ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಜಿ.ಮಂಜುನಾಥ್ ನೇತೃತ್ವದಲ್ಲಿ ಈ ದಾಳಿ ನಡೆದಿದೆ. ಎಪಿಎಂಸಿಗೆ ತಮ್ಮ ಕೃಷಿ ಸಾಮಗ್ರಿ ಮಾರಾಟ ಮಾಡಲು ಬರುವ ರೈತರು ಈ ಲಾಡ್ಜ್‌ನ ಸೆಳೆತಕ್ಕೆ ಸಿಕ್ಕಿ, ದುಡ್ಡನ್ನು ಪೋಲು ಮಾಡುತ್ತಿರುವ ಬಗ್ಗೆ ನಮಗೆ ಬಹಳಷ್ಟು ದೂರುಗಳು ಬರುತ್ತಿದ್ದವು. ರೈತರು ತಮ್ಮ ದುಡಿಮೆ ಹಣ ಮನೆಗೆ ಒಯ್ಯದೆ ಇಂತಹ ದಂಧೆಗೆ ಸುರಿಯುವುದು ಬಹಳ ಆತಂಕದ ಸಂಗತಿಯಾಗಿತ್ತು. ಹೀಗಾಗಿ ನಾವು ಸ್ವತಃ ಎಸ್ಪಿಗೆ ತಿಳಿಸಿ ಈ ದಾಳಿ ಮಾಡಿಸಬೇಕಾಯಿತು. ಲಾಡ್ಜ್‌ನ್ನು ಶಾಶ್ವತವಾಗಿ ಮುಚ್ಚಬೇಕೆಂದು ಎಸ್ಪಿ ಅವರಲ್ಲಿ ಒತ್ತಾಯಿಸಿದ್ದೇವೆ ಎಂದು ಒಡನಾಡಿ ಸಂಸ್ಥೆಯ ಸ್ಟಾನ್ಲಿ ಮತ್ತು ಪರಶುರಾಂ ಅವರು ತಿಳಿಸಿದರು. ಈ ಕುರಿತು ಬಡಾವಣೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಹೂವಿನಹಡಗಲಿ: ಪಟ್ಟಣದ ತುಂಗಭದ್ರಾ ಸರ್ಕಾರಿ ಅನುದಾನಿತ ಪ್ರೌಢಶಾಲೆಯಲ್ಲಿ ಗುರುವಾರ ತಾಲೂಕು ಆಡಳಿತ ಪುರಸಭೆ ಆರೋಗ್ಯ ಇಲಾಖೆ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಹಯೋಗದಲ್ಲಿ ನಶ ಮುಕ್ತ ಭಾರತ ಅಭಿಯಾನ ಹಮ್ಮಿಕೊಂಡಿದರು. ಎಲ್ಲ ವಿದ್ಯಾರ್ಥಿಗಳು ಪ್ರತಿಜ್ಞಾವಿಧಿ ಸ್ವೀಕರಿಸಿದರು.

ದತ್ತು ಸ್ವೀಕಾರ ಕಾರ್ಯಕ್ರಮ ಇಂದು

• **ಬಳ್ಳಾರಿ:** ಗ್ರಾಮೀಣ ವಿಧಾನಸಭಾ ಕ್ಷೇತ್ರದ ಶಾಸಕ ಬಿ.ನಾಗೇಂದ್ರ ಅವರು ಸರ್ಕಾರಿ ಶಾಲೆಗಳ ಸಮಗ್ರ ಅಭಿವೃದ್ಧಿಗೆ ಮಹತ್ತರ ಹೆಜ್ಜೆ ಇಟ್ಟಿದ್ದಾರೆ. ತಮ್ಮ ಶಾಸಕರ ನಿಧಿಯಿಂದ ಕ್ಷೇತ್ರದ 2 ಸರ್ಕಾರಿ ಶಾಲೆಗಳ ಸಂಪೂರ್ಣ ಅಭಿವೃದ್ಧಿಗಾಗಿ ತಲಾ 10 ಲಕ್ಷ ರೂ. ಅನುದಾನವನ್ನು ಬಿಡುಗಡೆಗೊಳಿಸಿದ್ದು, ಜೂ.19ರಂದು ಈ ಶಾಲೆಗಳನ್ನು ದತ್ತು ಪಡೆಯುವ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಬಳ್ಳಾರಿ ಪೂರ್ವ ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ವ್ಯಾಪ್ತಿಗೆ ಒಳಪಡುವ ಎತ್ತಿನಬೂದಿಹಾಳು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಪಶ್ಚಿಮ ವಲಯದ ವ್ಯಾಪ್ತಿಗೆ ಒಳಪಡುವ ಬಂಡಿಹಟ್ಟಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು ಶಾಸಕರ ಈ ವಿಶೇಷ ಅನುದಾನಕ್ಕೆ ಪಾತ್ರವಾಗಿವೆ.

ಈ ಎರಡೂ ಶಾಲೆಗಳನ್ನು ಶಾಸಕರು ಸಂಪೂರ್ಣವಾಗಿ ದತ್ತು ಪಡೆಯಲಿದ್ದು, ಈ ನಿಮಿತ್ತ ಜೂ. 19 ರಂದು ಎತ್ತಿನಬೂದಿಹಾಳು ಮತ್ತು ಬಂಡಿಹಟ್ಟಿ ಗ್ರಾಮಗಳಲ್ಲಿ ದತ್ತು ಸ್ವೀಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಆಯಾ ವಲಯಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಿಳಿಸಿದ್ದಾರೆ.

ಅಭಿವೃದ್ಧಿಗೆ ದೊಡ್ಡ ಮೊತ್ತದ ಧನಸಹಾಯ ನೀಡಿ, ಶಾಲೆಗಳನ್ನು ದತ್ತು ಪಡೆಯುತ್ತಿರುವ ಶಾಸಕ ಬಿ.ನಾಗೇಂದ್ರರಿಗೆ ಬಳ್ಳಾರಿ ಪೂರ್ವ ಮತ್ತು ಪಶ್ಚಿಮ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಾಲಾ ಎಸ್‌ಡಿಎಂಸಿ ಪದಾಧಿಕಾರಿಗಳು, ಗ್ರಾಮಸ್ಥರು ಹಾಗೂ ವಿದ್ಯಾರ್ಥಿಗಳು ಅಭಿನಂದಿಸಿದ್ದಾರೆ.



ಕುರುಗೋಡು: ಮಾಜಿ ಮುಖ್ಯಮಂತ್ರಿ ರಾಜಕೀಯ ಗುರು ಸಿದ್ದರಾಮಯ್ಯ ಅವರೊಂದಿಗೆ ಶಾಸಕ ಜೆ.ಎನ್.ಗಣೇಶ ಕುಶಲೋಪರಿ ಜರುಗಿತು. ಬೆಂಗಳೂರು-ರಾಮನಗರ ಮಧ್ಯೆ ಇರುವ ಬಿಡದಿ ಖಾಸಗಿ ರೆಸಾರ್ಟ್ ಒಂದರಲ್ಲಿ ನಡೆದ ಕಾಂಗ್ರೆಸ್ ಶಾಸಕಾಂಗ ಸಭೆಯಲ್ಲಿ ವಿಶ್ರಾಂತಿ ಸಮಯದಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯನವರು ತಮ್ಮ ಪರಮಾಪ್ತ ಶಿಷ್ಯ ಬಳಗಕ್ಕೆ ರಾಜಕೀಯದ ಮುತ್ಸದ್ದಿತನದ ಪಟ್ಟುಗಳ ಅರಿವು ಮೂಡಿಸಿದರು. ಶಾಸಕ ಕೆ.ರಾಘವೇಂದ್ರ ಹಿಟ್ನಾಳ್, ಶಾಸಕ ಜೆ.ಎನ್.ಗಣೇಶ, ಶಾಸಕ ನಾರಾ ಭರತ್ ರೆಡ್ಡಿ ಸಿದ್ದರಾಮಯ್ಯನವರೊಂದಿಗೆ ಸಂತಸದ ಕ್ಷಣಗಳನ್ನು ಕಳೆದರು.

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ | ಜಿಪಂ ಸಿಇಒ ಸೂಚನೆ

ಸ್ವೀಪ್ ಚಟುವಟಿಕೆ ಕಡ್ಡಾಯ

• **ಬಳ್ಳಾರಿ:** ಜಿಲ್ಲೆಯ ವ್ಯಾಪ್ತಿಗೆ ಬರುವ ಎಲ್ಲ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಶಾಲೆಗಳು, ಪದವಿ ಪೂರ್ವ ಮತ್ತು ಪದವಿ ಕಾಲೇಜುಗಳು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಸ್ಥಾಪಿಸಲಾಗಿರುವ ಎಲೆಕ್ಟೋರಲ್ ಲಿಟರಸಿ ಕ್ಲಬ್‌ಗಳ ಮೂಲಕ ಕಡ್ಡಾಯವಾಗಿ ಸ್ವೀಪ್ ಚಟುವಟಿಕೆಗಳನ್ನು ಆಯೋಜಿಸಬೇಕು ಎಂದು ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷ, ಜಿಪಂ ಸಿಇಒ ಮಹಮ್ಮದ್ ಹಾರೀಸ್ ಸುಮೇರ್ ಹೇಳಿದರು.

ನಗರದ ಜಿಪಂನ ಹಳೆಯ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಗುರುವಾರ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ನಿಮಿತ್ತ ಎಲೆಕ್ಟೋರಲ್ ಲಿಟರಸಿ ಕ್ಲಬ್ ಗಳ ಮೂಲಕ ಸ್ವೀಪ್ ಚಟುವಟಿಕೆ ಆಯೋಜಿಸುವ ಕುರಿತು ಆಯೋಜಿಸಿದ್ದ ಸಭೆಯಲ್ಲಿ ಮಾತನಾಡಿದರು.

ಯುವ ಜನತೆಯಲ್ಲಿ, ವಿಶೇಷವಾಗಿ ಪ್ರಥಮ ಬಾರಿಗೆ ಮತದಾನ ಮಾಡುವವರಲ್ಲಿ (18 ವರ್ಷ ತುಂಬಲಿರುವ ವಿದ್ಯಾರ್ಥಿಗಳಲ್ಲಿ) ಚುನಾವಣಾ ಸಾಕ್ಷರತೆಯನ್ನು ಮೂಡಿಸುವುದು ಈ ಯೋಜನೆ ಮುಖ್ಯ ಉದ್ದೇಶವಾಗಿದೆ. ಕಾಲೇಜ್ ಮತ್ತು ವಿಶ್ವವಿದ್ಯಾಲಯ ಹಂತದಲ್ಲಿ ವಿದ್ಯಾರ್ಥಿಗಳನ್ನು ಕೇವಲ ಶೈಕ್ಷಣಿಕವಾಗಿ ಮಾತ್ರವಲ್ಲದೆ, ಜವಾಬ್ದಾರಿಯುತ ನಾಗರಿಕರನ್ನಾಗಿ ರೂಪಿಸಲು ಈ ಕ್ಲಬ್‌ಗಳು ನೆರವಾಗಲಿವೆ ಎಂದರು.ದು ತಿಳಿಸಿದರು.

ಮುಂದಿನ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ಅರ್ಹ ನಾಗರಿಕನೂ ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದನ್ನು ಖಚಿತ ಪಡಿಸಿಕೊಳ್ಳಲು ಮಹತ್ವದ ಕ್ರಮ ಕೈಗೊಳ್ಳಲಾಗಿದೆ.



> 18 ವರ್ಷ ಪೂರ್ಣಗೊಂಡ ಅಥವಾ ಪೂರ್ಣಗೊಳದ ಪ್ರತಿಯೊಬ್ಬ ವಿದ್ಯಾರ್ಥಿಯ ಹೆಸರನ್ನು ಮತದಾರರ ಪಟ್ಟಿಗೆ ಸೇರಿಸಲು ವಿಶೇಷ ನೋಂದಣಿ ಡ್ರೈವ್‌ಗಳನ್ನು ನಡೆಸುವುದು. ಮತದಾನದ ಮಹತ್ವ ಸಾರುವ ಪ್ರಬಂಧ ಸ್ಪರ್ಧೆ, ಭಾಷಣ, ಚಿತ್ರಕಲೆ, ರಂಗೋಲಿ ಹಾಗೂ ಬೀದಿ ನಾಟಕಗಳನ್ನು ಆಯೋಜಿಸುವುದು. ವಿದ್ಯಾರ್ಥಿಗಳ ಮೂಲಕ ಅವರ ಪೋಷಕರು, ಸಾರ್ವಜನಿಕರಲ್ಲಿ ಮತದಾನದ ಜಾಗೃತಿ ಮೂಡಿಸುವುದು ಇಎಲ್‌ಸಿ ಸಂಯೋಜಕರ ಚಟುವಟಿಕೆಗಳಾಗಿವೆ.
>
> ■ ಮಹಮ್ಮದ್ ಹಾರೀಸ್ ಸುಮೇರ್, ಜಿಪಂ ಸಿಇಒ

ಇದು ಭಾರತೀಯ ಚುನಾವಣಾ ಆಯೋಗದ ಅತ್ಯಂತ ಪ್ರಮುಖ ಕಾರ್ಯಕ್ರಮವಾಗಿದ್ದು, ಮತದಾರರ ಶಿಕ್ಷಣ, ಮತದಾನದ ಜಾಗೃತಿ ಮೂಡಿಸುವುದು, ದೇಶದಲ್ಲಿ ಸಾಕ್ಷರತಾ ಮತದಾನವನ್ನು ಹೆಚ್ಚಿಸುವ ಗುರಿ ಹೊಂದಿದೆ ಎಂದರು.

ಜಿಲ್ಲಾದ್ಯಂತ ಜೂ.22ರಂದು ಹಬ್ಬದ ವಾತಾವರಣದಲ್ಲಿ ವಿಶೇಷ ಗ್ರಾಮ ಸಭೆಯನ್ನು ಆಯೋಜಿಸಲಾಗುತ್ತಿದ್ದು, ಅಂದು ಎಲ್ಲ ಕಾಲೇಜು ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ಮತದಾರರ ಸಾಕ್ಷರತಾ ಕ್ಲಬ್‌ಗಳ ವತಿಯಿಂದ ಎಸ್‌ಐಆರ್ ಕುರಿತು ವಿಶೇಷ ತರಬೇತಿ ಮತ್ತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು. ಅಂದು ಕನಿಷ್ಠ ಒಂದು ಗಂಟೆಯ ಅವಧಿಗೆ ವಿದ್ಯಾರ್ಥಿಗಳು ಸೇರಿದಂತೆ ಎಲ್ಲಾ ಸಿಬ್ಬಂದಿಗಳು ಕಡ್ಡಾಯವಾಗಿ ಹಾಜರಿದ್ದು, ಎಸ್‌ಐಆರ್ ಪ್ರಕ್ರಿಯೆಯ ಬಗ್ಗೆ ಸಂಪೂರ್ಣ ಮಾಹಿತಿ ಪಡೆದುಕೊಳ್ಳಬೇಕು ಎಂದು ಸೂಚಿಸಿದರು.

ಈ ವಿಶೇಷ ಅಭಿಯಾನದ ಮೂಲಕ ಎಸ್‌ಎಸ್‌ಐಆರ್ ಪಟ್ಟಿಯಲ್ಲಿ ಒಬ್ಬನೇ ಒಬ್ಬ ಯುವ ಮತದಾರ ಅಥವಾ ಅನಕ್ಷರಸ್ಥ ಕುಟುಂಬದ ಸದಸ್ಯನ ಹೆಸರು ಸೇರ್ಪಡೆಯಾದರೂ, ಅಥವಾ ಅನಗತ್ಯ ಹೆಸರುಗಳನ್ನು ಕೈಬಿಟ್ಟರೂ ಅದು ಈ ಕಾರ್ಯಕ್ರಮದ ಬಹುದೊಡ್ಡ ಯಶಸ್ಸು ಎಂದು ಅವರು ಅಭಿಪ್ರಾಯವ್ಯಕ್ತಪಡಿಸಿದರು.

ಜಿಲ್ಲಾ ಮಟ್ಟದ ತರಬೇತಿದಾರರಾದ ಶಿವಲಿಂಗ ರೆಡಿ, ಅಕ್ಕಿ ಮಲ್ಲಿಕಾರ್ಜುನ ಮಾತನಾಡಿದರು.

ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಜಲಾಲಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ಕಸ್ತೂರಿ, ಜಿಪಂ ಸಹಾಯಕ ನಿರ್ದೇಶಕ ಬಸವರಾಜ ಹಿರೇಮಠ ಸೇರಿದಂತೆ ಇತರರಿದ್ದರು.

ವಿದ್ಯುತ್ ಖಾಸಗೀಕರಣ ವಿರೋಧಿಸಿ ಪ್ರತಿಭಟನೆ

• **ವಿಜಯನಗರ:** ಕರ್ನಾಟಕದಲ್ಲಿ ವಿದ್ಯುತ್ ಜಾಲವನ್ನು ಖಾಸಗೀಕರಣಗೊಳಿಸಿ, ಅದನ್ನು ಟಾಟಾ ಪವರ್ ಕಂಪನಿಗೆ ನೀಡುವ ಸರ್ಕಾರದ ನಿರ್ಧಾರವನ್ನು ಸರ್ಕಾರ ತಕ್ಷಣ ಕೈಬಿಡಬೇಕು. ಇಲ್ಲವೇ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ರಾಜ್ಯಾದ್ಯಂತ ಬಾರುಕೋಲು ಚಳವಳಿ ನಡೆಸಬೇಕಾಗುತ್ತದೆ ಎಂದು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಎಚ್ಚರಿಸಿದೆ.

ರಾಜ್ಯದಲ್ಲಿ ವಿದ್ಯುತ್ ವಲಯವನ್ನು ಖಾಸಗೀಕರಣಗೊಳಿಸುವ ಸರ್ಕಾರದ ಚಿಂತನೆಯನ್ನು ವಿರೋಧಿಸಿ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ನೇತೃತ್ವದಲ್ಲಿ ಹೊಸಪೇಟೆಯ ಜೆಸ್ಕಾಂ ಕಚೇರಿ ಎದುರು ಪ್ರತಿಭಟನೆ ನಡೆಸಿದ ರೈತರು, ಯಾವುದೇ ಕಾರಣಕ್ಕೂ ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣಗೊಳಿಸಬಾರದು. ವಿದ್ಯುತ್ ವಲಯವನ್ನು ಖಾಸಗೀಕರಣಗೊಳಿಸಿದರೆ ರೈತರ ಪಂಪ್‌ಸೆಟ್‌ಗಳಿಗೆ ಸಿಗುತ್ತಿರುವ ಉಚಿತ ವಿದ್ಯುತ್ ಸೌಲಭ್ಯಕ್ಕೆ ಧಕ್ಕೆಯಾಗಲಿದೆ. ಇದು ನೇರವಾಗಿ ಅನ್ನದಾತನ ಬದುಕಿಗೆ ಮಾರಕವಾಗಲಿದೆ.

ಸಾರ್ವಜನಿಕರ ಗೃಹ ಬಳಕೆಯ ವಿದ್ಯುತ್ ದರವೂ ಗಗನಕ್ಕೇರಲಿದೆ. ಖಾಸಗೀಕರಣದಿಂದ ಉದ್ಯೋಗಾವಕಾಶಗಳು ಕಡಿಮೆಯಾಗಿ ನಿರುದ್ಯೋಗ ಸಮಸ್ಯೆ ಸೃಷ್ಟಿಯಾಗುವುದರ ಜೊತೆಗೆ ಮೀಸಲಾತಿ ನಿಯಮಗಳಿಗೂ ತೊಂದರೆಯಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಸಾರ್ವಜನಿಕರು, ರೈತರ ಹಿತವನ್ನು ಕಡೆಗಣಿಸಿ ಟಾಟಾ ಪವರ್ ಕಂಪನಿಗೆ ರಾಜ್ಯದ ವಿದ್ಯುತ್ ವಲಯವನ್ನು ವಹಿಸಲು ಮುಂದಾದರೆ ರಾಜ್ಯ ರೈತ ಸಂಘ ಸಹಿಸುವುದಿಲ್ಲ. ರಾಜ್ಯಾದ್ಯಂತ ಸರ್ಕಾರದ ವಿರುದ್ಧ 'ಬಾರುಕೋಲು ಚಳುವಳಿ' ಹಮ್ಮಿಕೊಳ್ಳಲಾಗುವುದು ಎಂದು ಪ್ರತಿಭಟನಾಕಾರರು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ವಿಜಯನಗರ ಜಿಲ್ಲಾಧ್ಯಕ್ಷರಾದ ಟಿ. ನಾಗರಾಜ್, ಜಿಲ್ಲಾ ಉಪಾಧ್ಯಕ್ಷರಾದ ಆರ್. ಆರ್. ತಾಯಪ್ಪ, ಮುಖಂಡರುಗಳಾದ ದೊಡ್ಡ ಗಾಳೆಪ್ಪ, ರೇವಣಸಿದ್ದಪ್ಪ, ಕೆ. ಮೂರ್ತಿ, ಅಯ್ಯಣ್ಣ, ಮಹಾರುದ್ರ, ಗಂಟೆ ಬಸವರಾಜ, ಗಾದಿಲಿಂಗಪ್ಪ, ಸತೀಶ್, ರಾಮಾಂಜನಿ, ಸಾಗರ್ ಮತ್ತಿತರು ಇದ್ದರು.



ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ: ಪ್ರತಿಭಟನೆ

• **ವಿಜಯನಗರ:** ನೀಟ್ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆ ಹಗರಣವನ್ನು ಖಂಡಿಸಿ ಮತ್ತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ ತಕ್ಷಣವೇ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಶನ್ ನೇತೃತ್ವದಲ್ಲಿ ವಿದ್ಯಾರ್ಥಿಗಳು ಗುರುವಾರ ಹೊಸಪೇಟೆಯ ತಹಸೀಲ್ದಾರ್ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಎಐಡಿಎಸ್‌ಒ ಜಿಲ್ಲಾಧ್ಯಕ್ಷ ರವಿಕಿರಣ್ ಜೆ.ಪಿ. ಅವರು, ಸರ್ಕಾರದ ಬೇಜವಾಬ್ದಾರಿತನದಿಂದಾಗಿ ದೇಶದ ವೈದ್ಯಕೀಯ ಶಿಕ್ಷಣದ ಕನಸು ಹೊತ್ತಿರುವ ಬರೋಬ್ಬರಿ 23 ಲಕ್ಷ ವಿದ್ಯಾರ್ಥಿಗಳು ಜೂ.21ರಂದು ಮತ್ತೊಮ್ಮೆ ಪರೀಕ್ಷೆ ಬರೆಯುವಂತಾಗಿದೆ. ಪರೀಕ್ಷೆಗೂ ಮುನ್ನವೇ ಟೆಲಿಗ್ರಾಮ್ ಗ್ರೂಪ್‌ಗಳಲ್ಲಿ ಪತ್ರಿಕೆ ಸೋರಿಕೆಯಾದ ಆರೋಪ ಕೇಳಿ ಬಂದರೂ ಎನ್.ಟಿ.ಎ ಉಡಾಫೆಯಿಂದ ಪರೀಕ್ಷೆ ನಡೆಸಿತು. ಕೊನೆಗೆ ಸಾರ್ವಜನಿಕ ಮತ್ತು ವಿದ್ಯಾರ್ಥಿಗಳ ಆಕ್ರೋಶಕ್ಕೆ ಹೆದರಿ 9 ದಿನಗಳ ನಂತರ ಪರೀಕ್ಷೆ ರದ್ದುಗೊಳಿಸಿದೆ ಎಂದು ಕಿಡಿಕಾರಿದರು.

ಎಐಡಿಎಸ್‌ಒ ಜಿಲ್ಲಾ ಕಾರ್ಯದರ್ಶಿ ಉಮಾದೇವಿ ಮಾತನಾಡಿ, ವಿದ್ಯಾರ್ಥಿಗಳು ನೀಟ್ ಕೋಚಿಂಗ್‌ಗಾಗಿ ವಾರ್ಷಿಕ 80 ಸಾವಿರದಿಂದ 3 ಲಕ್ಷ ರೂಪಾಯಿಗಳವರೆಗೆ ಖರ್ಚು ಮಾಡುತ್ತಿದ್ದಾರೆ. 3-4 ವರ್ಷಗಳಿಂದ ಹಗಲಿರುಳು ಕಷ್ಟಪಟ್ಟು ಓದಿದ ವಿದ್ಯಾರ್ಥಿಗಳ ಭವಿಷ್ಯ ಈಗ ಕತ್ತಲಿಗೆ ತಳ್ಳಲ್ಪಟ್ಟಿದೆ. ಕೇವಲ ಕೆಲವು ಕಾರ್ಪೊರೇಟ್‌ಗಳ ಲಾಭಕ್ಕಾಗಿ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ವ್ಯವಸ್ಥಿತವಾಗಿ ನಾಶಪಡಿಸುತ್ತಿರುವುದನ್ನು ನಮ್ಮ ಸಂಘಟನೆ ತೀವ್ರವಾಗಿ ಖಂಡಿಸಿದರು.

ಪರೀಕ್ಷೆಗಳನ್ನು ಪ್ರಾಮಾಣಿಕವಾಗಿ ನಡೆಸಲು ಪದೇ ಪದೇ ವಿಫಲವಾಗಿರುವ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯನ್ನು ವಿಸರ್ಜಿಸಬೇಕು. ಪ್ರಶ್ನೆ ಪತ್ರಿಕೆ ಸೋರಿಕೆ ಹಗರಣದಲ್ಲಿ ಭಾಗಿಯಾದ ಎಲ್ಲಾ ತಪ್ಪಿತಸ್ಥರಿಗೂ ಮಾದರಿ ಶಿಕ್ಷೆಯಾಗಬೇಕು. ದೇಶದ ಶಿಕ್ಷಣ ವ್ಯವಸ್ಥೆಗೆ ಆಗಿರುವ ಈ ಅಪಮಾನದ ನೈತಿಕ ಹೊಣೆ ಹೊತ್ತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ತಕ್ಷಣವೇ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಈ ಪ್ರತಿಭಟನೆಯಲ್ಲಿ ಸಂಘಟನೆಯ ಪದಾಧಿಕಾರಿಗಳಾದ ಪ್ರಕಾಶ್ ನಾಯಕ್, ಶ್ರೀನಿವಾಸ್, ರಮ್ಯಾ, ಸ್ನೇಹ ಸೇರಿದಂತೆ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು.



ದತ್ತಿ ಉಪನ್ಯಾಸ ಕೊಡುಗೆ ಕಾರ್ಯಕ್ರಮ

• **ಸಿರುಗುಪ್ಪ:** ಜನರಿಗೆ ಆರ್ಥಿಕ ಸ್ವಾವಲಂಬನೆ ಕೈಗೆಟುಕುವ ದರದಲ್ಲಿ ಸೇವೆಗಳು ಮತ್ತು ಗ್ರಾಮೀಣಾಭಿವೃದ್ಧಿಯನ್ನು ಸಾರ್ವಜನಿಕ ವಲಯದಲ್ಲಿ ಸಹಕಾರಿ ಸಂಸ್ಥೆಗಳು ಒದಗಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ ಎಂದು ಹೊಸಪೇಟೆ ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಹಾಗೂ ಪಿ.ಕಾರ್ಡ್ ಬ್ಯಾಂಕ್ ಅಧ್ಯಕ್ಷ ಚೊಕ್ಕಬಸವನಗೌಡ ಹೇಳಿದರು.

ನಗರದ ಧಾತ್ರಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ ಸಭಾಂಗಣದಲ್ಲಿ ಗುರುವಾರ ಜರುಗಿದ ಕನ್ನಡ ಸಾಹಿತ್ಯ ಪರಿಷತಗೆ ದತ್ತಿ ಉಪನ್ಯಾಸ ಕೊಡುಗೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ ತಾಲೂಕು ಅಧ್ಯಕ್ಷ ವೈದ್ಯ ಮಧುಸೂದನ್ ಕಾರುಗನೂರು, ಧಾತ್ರಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ ಅಧ್ಯಕ್ಷ ಮಂಜುನಾಥ ಯಾಡ್ಕೆ, ಜಿಲ್ಲಾ ಸಹಕಾರಿ ಭಾರತಿ ಘಟಕಾಧ್ಯಕ್ಷ ಎ.ಮಲ್ಲಿಕಾರ್ಜುನ ಮಟ್ಟೆಪ್ಪ ಮಾತನಾಡಿದರು.

ಸಿರುಗುಪ್ಪ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತದ ಹಿರಿಯ ಅಧಿಕಾರಿ ಯು.ಯಶೋಧ ಮಾತನಾಡಿ, ಸಾರ್ವಜನಿಕ ವಲಯದಲ್ಲಿ ಸಹಕಾರಿಗಳ ಪಾತ್ರ ಕುರಿತು ವಿಶೇಷ ಉಪನ್ಯಾಸ ನೀಡಿದರು.



ಕನ್ನಡ ಸಾಹಿತ್ಯ ಪರಿಷತ್ ಕೇಂದ್ರ ಘಟಕಕ್ಕೆ ಧಾತ್ರಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ಹಾಗೂ ಆಡಳಿತ ಮಂಡಳಿಯು ದತ್ತಿ ಉಪನ್ಯಾಸ ಕೊಡುಗೆ ಪತ್ರ ನೀಡಿದರು.

ಹಾಸ್ಯ ಕಲಾವಿದ ಜೆ.ನರಸಿಂಹ ಮೂರ್ತಿ, ಸಾಹಿತಿ ವೀರೇಂದ್ರ ರಾವಿಹಾಳ್, ಆರ್ಯ ವೈಶ್ಯ ಸಂಘದ ಅಧ್ಯಕ್ಷ ಚಾಗಿ ಸುಬ್ಬಯ್ಯ, ನಿವೃತ ಪ್ರಾಂಶುಪಾಲ ಶಿವಕುಮಾರ್ ಬಳಿಗಾರ, ಮಾರೇಗೌಡ ಭಾಗವಹಿಸಿದರು.

ಸುಸ್ಥಿರ ಆರೋಗ್ಯ ವೃದ್ಧಿಗೆ ಯೋಗ ದಿವ್ಯೌಷಧಿ: ಅಕ್ಕಿ ತೋಟೇಶ

• **ಹಗರಿಬೊಮ್ಮನಹಳ್ಳಿ:** ವೇಗದ ಜಗತ್ತಿನಲ್ಲಿ ಒತ್ತಡ ಬದುಕಿನಲ್ಲಿ ಹಲವು ಜಂಜಾಟಗಳ ಮಧ್ಯೆ ಶಾಂತಿ, ಸಂಯಮ, ತಾಳ್ಮೆಯನ್ನು ಕಳೆದುಕೊಂಡು ಚಿಕ್ಕ ವಯಸಿನಲ್ಲಿಯೇ ಬಿ.ಪಿ.ಶುಗರ್ ಇನ್ನಿತರ ಖಾಯಿಲೆಗಳಿಂದ ಬಳಲುವ ನಾವು ನಿತ್ಯ ಕೆಲಸದಂತೆ ಯೋಗವನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಆರೋಗ್ಯವನ್ನು ಸುಸ್ಥಿರವಾಗಿಡಲು ಸಾಧ್ಯ ಎಂದು ಜಿ.ಪಂ ಮಾಜಿ ಸದಸ್ಯ ಅಕ್ಕಿ ತೋಟೇಶ ತಿಳಿಸಿದರು.

ವಿಶ್ವ ಯೋಗ ದಿನಾಚರಣೆಯ ಅಂಗವಾಗಿ ತಾಲೂಕಿನ ತಂಬ್ರಹಳ್ಳಿ ಗ್ರಾಮದಲ್ಲಿ ಆಯುಷ್ ಇಲಾಖೆ ಹಾಗೂ ದೇವಿಪ್ರಸಾದ್ ಇವರುಗಳು ಆಯೋಜಿಸಿದ ಯೋಗ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು.

ತಂಬ್ರಹಳ್ಳಿ ಪಿಎಫ್ಐ ನಾಗರಾಜ ಮಾತನಾಡಿ ಯೋಗ ಎಂಬುದು ನಮ್ಮ ದೇಶದಲ್ಲಿಯೇ ಹುಟ್ಟಿದ ಯೋಗ ಪುರಾತನಕಾಲದಿಂದ ಇರುವ ಪೂರ್ವಜರಿಂದ ಬಂದ ಯೋಗಾಭ್ಯಾಸ ಉತ್ತಮ ಆರೋಗ್ಯಕ್ಕಾಗಿ ಅನುಕೂಲ ಎಂದರು.

ಆಯುಷ್ ಇಲಾಖೆಯ ವೈದ್ಯಾಧಿಕಾರಿ ಹಾಲಮ್ಮ ಮಾತನಾಡಿ ಆರೋಗ್ಯ ಸಮತೋಲನ ಕಾಯ್ದುಕೊಳ್ಳಲು ಯೋಗ ಉತ್ತಮ ಚಿಕಿತ್ಸಾ ವಿಧಾನವಾಗಿದೆ ಎಂದರು.



ಯೋಗ ಶಿಬಿರದ ಆಯೋಜಕರಾದ ದೇವಿ ಪ್ರಸಾದ್ ಮಾತನಾಡಿ ಸದೃಢ ದೇಹ ಸದೃಢ ಮನಸ್ಸು ಆರೋಗ್ಯಕರ ಜೀವನಕ್ಕೆ ಯೋಗಾ ಸಹಕಾರಿಯಾಗಿದ್ದು ನಮ್ಮ ದೇಶದಲ್ಲಿ ಯೋಗವನ್ನು ಜಗತ್ತಿನ ಹಲವು ದೇಶಗಳು ಯೋಗವನ್ನು ಅಳವಡಿಸಿಕೊಂಡಿವೆ ಯೋಗದ ವಿಷಯದಲ್ಲಿ ದೇಶ ವಿಶ್ವ ಗುರುವಾಗಿ ಮುನ್ನಡೆದಿದೆ ಪ್ರತಿಯೊಬ್ಬರೂ ಯೋಗವನ್ನು ರೂಢಿಸಿಕೊಳ್ಳಿ ಎಂದರು.

ಈ ಸಂದರ್ಭದಲ್ಲಿ ವಿ ಎಸ್ ಎಸ್ ಎನ್ ಅಧ್ಯಕ್ಷ ಮಾಬುಸಾಬ್ ಮುಖಂಡರಾದ ಬಣಕಾರ್ ಕೊಟ್ರೇಶಪ್ಪ, ಸೊಬಟಿ ಹರೀಶ್ ,ಸುಣಗಾರ್ ಪರಶುರಾಮ್, ಡಿ.ಎಂ ಆನಂದ ,ಆಂಜನೇಯ ಶೆಟ್ಟರ್ ,ಸೋಮಣ್ಣ ಸೇರಿದಂತೆ ತಂಬ್ರಹಳ್ಳಿ ಗ್ರಾಮದ ಹಿರಿಯರು ಮಹಿಳೆಯರು ನಾಗರಿಕರು ಪಾಲ್ಗೊಂಡಿದ್ದರು.

ರಸಗೊಬ್ಬರ ವ್ಯಾಪಾರಿ ವಿರುದ್ಧ ಕ್ರಮ ಕೈಗೊಳ್ಳಲು ಒತ್ತಾಯ

• **ಕುರುಗೋಡು:** ಸಮೀಪದ ಎಮ್ಮಿಗನೂರಿನಲ್ಲಿ ರಸಗೊಬ್ಬರ ಕೊಳ್ಳುವ ರೈತರಿಗೆ ಲಿಂಕ್ ಕೊಳ್ಳುವಂತೆ ರಸಗೊಬ್ಬರ ಮಾರಾಟಗಾರ ಒತ್ತಾಯಿಸಿ ದ್ದಾನೆಂದು ಆರೋಪಿಸಿ, ರೈತರು ವ್ಯಾಪಾರಿಯೊಂದಿಗೆ ವಾಗ್ವಾದ ನಡೆಸಿದರು.

ವೀರಾರೆಡ್ಡಿ ಎನ್ನುವ ರೈತನಿಗೆ ರಸಗೊಬ್ಬರಕ್ಕೆ ಲಿಂಕ್ ಕೊಳ್ಳಲು ರಸಗೊಬ್ಬರಿ ವ್ಯಾಪಾರಿ ಒತ್ತಾಯಿಸಿದ್ದಾನೆ. ಅಲ್ಲದೆ, ಕೃಷಿ ಅಧಿಕಾರಿಗಳನ್ನು ಅವಾಚ್ಯ ಶಬ್ದಗಳಿಂದ ವ್ಯಾಪಾರಿ ನಿಂದಿಸಿದ್ದಾನೆ. ಜೊತೆಗೆ ರೈತರು ದೊಡ್ಡ ಪ್ರಮಾಣದಲ್ಲಿ ಯೂರಿಯಾ ಸಂಗ್ರಹ ಮಾಡಿಟ್ಟಿದ್ದಾರೆಂದು ಆರೋಪಿಸಿದ ರಸ ವ್ಯಾಪಾರಿ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ತಪ್ಪಿದಲ್ಲಿ ಹೋರಾಟ ಹಮ್ಮಿಕೊಳ್ಳಲಾಗುವುದು. ವ್ಯಾಪಾರಿಗಳ ಉಪಟಳದಿಂದ ರೈತರು ಬೇಸತ್ತಿದ್ದಾರೆ. ಗೊಬ್ಬರವನ್ನು ರೈತರು ಹೆಚ್ಚಾಗಿ ಕೊಳ್ಳುವುದಿಲ್ಲ. ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದ ರಸಗೊಬ್ಬರ ಮಾರಾಟವಾಗುತ್ತಿದ್ದು ಅಧಿಕಾರಿಗಳು ಇದನ್ನು ಪತ್ತೆ ಹಚ್ಚಬೇಕು ಎಂದು ಒತ್ತಾಯಿಸಿದರು.

ರೈತ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಬಿ.ವಿ.ಗೌಡ ಮಾತನಾಡಿ, ರೈತರು ಸಂಘಟಿತರಾಗಿ ಲಿಂಕ್ ವಿರೋಧಿಸಬೇಕು.

ಹೆಚ್ಚಿನ ಧರಕ್ಕೆ ರಸಗೊಬ್ಬರ ಮಾರಾಟ ಮಾಡುವ ವ್ಯಾಪಾರಿಗಳ ವಿರುದ್ಧ ಅಧಿಕಾರಿಗಳು ಕ್ರಮವಹಿಸಬೇಕು. ರೈತರು ಕೃಷಿ ಅಧಿಕಾರಿಗಳ ಶಿಫಾರಸಿನಂತೆ ರಸಗೊಬ್ಬರ ಕೊಳ್ಳಬೇಕೆ ಹೊರತು ಅಂಗಡಿಯವರ ಹೇಳಿದಂತೆ, ಲಿಂಕ್‌ಗೆ ರೈತರು ಒಪ್ಪಬಾರದು. ರೈತರು ಕಳಪೆ ರಸಗೊಬ್ಬರ ಕುರಿತು ಜಾಗೃತಿವಹಿಸಬೇಕು. ಕೃಷಿ ಅಧಿಕಾರಿಗಳು ಕೃಷಿ ಪರಿಕರಗಳ ಬಗ್ಗೆ ತಪಾಸಣೆ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.



ರಸಗೊಬ್ಬರ ವ್ಯಾಪಾರಿ ರಾಮಕೃಷ್ಣರಾಜು ಮಾತನಾಡಿ, ಯೂರಿಯಾ ಕೊಡುವಾಗಲೇ ನಾನ್ ಯೂರಿಯಾ ನಮಗೆ ಲಿಂಕ್ ಮಾಡಿ ಕೊಟ್ಟಿದ್ದಾರೆ. ರೈತರ ಮನವೊಲಿಸಿ ಲಿಂಕ್ ಮಾಡಿ ರಸಗೊಬ್ಬರ ಮಾರಾಟ ಮಾಡುತ್ತೇವೆ. ಯಾವುದೇ ಕಾರಣಕ್ಕು ರೈತರನ್ನು ಲಿಂಕ್‌ಗೆ ಒತ್ತಾಯಿಸಿಲ್ಲ ಎಂದು ಸ್ಪಷ್ಟಪಡಿಸಿದರು.

ರೈತ ಸಂಘದ ನಗರ ಅಧ್ಯಕ್ಷ ಕೊಟ್ಟೂರು ರಮೇಶ, ರೈತರಾದ ಗುರು, ಕಾಗೆ ಈರಣ್ಣ, ರ್ರಿಸ್ವಾಮಿ, ಶರಣಬಸಪ್ಪ, ಸಣ್ಣ ಜಡೆಪ್ಪ, ಮಂಜುನಾಥ, ತಿಪ್ಪಣ್ಣ, ಏಳುಬೆಂಚಿ ಶರಣಬಸವರಾಜ ಇತರರಿದ್ದರು.

ಸರ್ಕಾರಿ ಜಾಗೆ ಅತಿಕ್ರಮಣಕ್ಕೆ ಯತ್ನ: ಆರೋಪ

• **ಬೀದರ್:** ನಗರದ ಕುಂಬಾರವಾಡ ಪ್ರದೇಶದಲ್ಲಿರುವ ಸರ್ಕಾರಿ ಗೈರಾಣ ಜಮೀನು ಹಾಗೂ ಖಾಸಗಿ ಜಮೀನುಗಳನ್ನು ಅತಿಕ್ರಮಿಸುವ ಉದ್ದೇಶದಿಂದ ಕೆಲವರು ಜಾತಿ ಮತ್ತು ಕೋಮು ಉದ್ವಿಗ್ನತೆಸೃಷ್ಟಿಸುತ್ತಿದ್ದಾರೆ ಎಂದು ಆರೋಪಿಸಿರುವ ಕುಂಬಾರವಾಡದ ಕ್ರಿಶ್ಚಿಯನ್ ಸಮುದಾಯದ ಮಹಿಳೆಯರು ಗ್ರಾಮೀಣಾಭಿವೃದ್ಧಿ ಮತ್ತು ಪಂರಾ ಸಚಿವರು, ಜಿಲ್ಲಾಧಿಕಾರಿ, ಮಹಾನಗರ ಪಾಲಿಕೆ ಆಯುಕ್ತರು ಹಾಗೂ ತಹಶೀಲ್ದಾರರಿಗೆ ಮನವಿ ಸಲ್ಲಿಸಿದ್ದಾರೆ.

ಮನವಿಯಲ್ಲಿ, ಸರ್ವೆ ನಂ. 51/★ ರ ಸರ್ಕಾರಿ ಜಮೀನಿನಲ್ಲಿ ಸುಮಾರು 50 ವರ್ಷಗಳಷ್ಟು ಹಳೆಯ ನೀರಿನ ಟ್ಯಾಂಕ್ ಹಾಗೂ ಬೋರ್‌ವೆಲ್ ಇದ್ದು, ಈ ಭಾಗದ ನೂರಾರು ಕುಟುಂಬಗಳಿಗೆ ಅದು ಪ್ರಮುಖ ನೀರಿನ ಮೂಲವಾಗಿದೆ ಎಂದು ತಿಳಿಸಲಾಗಿದೆ.

ಕಳೆದ ಮೇ 18ರಂದು ಕೆಲ ಕಿಡಿಗೇಡಿಗಳು ಸರ್ಕಾರಿ ಜಮೀನಿನಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರ ಮತ್ತು ನೀಲಿ ಧ್ವಜ ಅಳವಡಿಸಿ ಉದ್ವಿಗ್ನ



ವಾತಾವರಣ ಸೃಷ್ಟಿಸಲು ಯತ್ನಿಸಿದ್ದಾರೆ ಎಂದು ಆರೋಪಿಸಲಾಗಿದೆ.

ಮಾಹಿತಿ ಪಡೆದ ಗಾಂಧಿಗಂಜ್ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಧ್ವಜ ತೆರವುಗೊಳಿಸಿ ಪರಿಸ್ಥಿತಿ ನಿಯಂತ್ರಿಸಿದ್ದಾರೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಸರ್ವೆ ನಂ. 51/★ ರಲ್ಲಿರುವ ಸರ್ಕಾರಿ ಜಮೀನನ್ನು ತಕ್ಷಣ ಸಂಬಂಧಿತ ಇಲಾಖೆಯ ವಶಕ್ಕೆ ಪಡೆದು, ಅಲ್ಲಿರುವ ಹಳೆಯ ನೀರಿನ ಟ್ಯಾಂಕ್ ಹಾಗೂ ಬೋರ್‌ವೆಲ್ ಪ್ರದೇಶವನ್ನು ಸಾರ್ವಜನಿಕ ಬಳಕೆಗೆ ಕಾಯ್ದಿರಿಸಬೇಕು. ಜೊತೆಗೆ, ಅದೇ ಜಾಗದಲ್ಲಿ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ (ಪಿಎಚ್‌ಸಿ) ಸ್ಥಾಪಿಸಿ ಸಾವಿರಾರು ಜನರಿಗೆ ಆರೋಗ್ಯ ಸೇವೆ ಒದಗಿಸಬೇಕು ಎಂದು ಮಹಿಳೆಯರು ಒತ್ತಾಯಿಸಿದ್ದಾರೆ.

ರಸಗೊಬ್ಬರ ಮಳಿಗೆಗಳಿಗೆ ತೇಜವರ್ಧನ್ ಭೇಟಿ

• **ಕೊಟ್ಟೂರು:** ಪಟ್ಟಣದಲ್ಲಿರುವ ರಸಗೊಬ್ಬರ ಮಳಿಗೆಗಳಿಗೆ ಮತ್ತು ಗೋಧಾಮಿನ ಮಾಲೀಕರೊಂದಿಗೆ ಕೊಟ್ಟೂರು ತಾಲೂಕಿನ ಸಹಾಯಕ ನಿರ್ದೇಶಕ ಆರ್.ವಿ.ತೇಜವರ್ಧನ್ ರವರು ಸಂಬಂಧಪಟ್ಟ ಮಳಿಗೆಯ ಮಾಲೀಕರೊಂದಿಗೆ ರಸಗೊಬ್ಬರ ಮಳಿಗೆಗಳಿಗೆ ಹಾಗೂ ಗೋದಾಮುಗಳಿಗೆ ಭೇಟಿ ನೀಡಿ ಬಿತ್ತನೆ ಬೀಜ, ರಸಗೊಬ್ಬರ, ದಾಸ್ತಾನನ್ನು ಪರಿಶೀಲಿಸಿದಾಗ ಈಅಕ್ಕ್ಟಟಿಇಟ್ಟುಟ್ಟಿ ರಸಗೊಬ್ಬರಗಳ 20:20:0:13, 10:26:26, 15:15:15, 19:19:19 ಎಲ್ಲ ಸೇರಿ 2500 ಮೆಟ್ರಿಕ್ ಟನ್ ದಾಸ್ತಾನು ಲಭ್ಯವಿದೆ.

ಯಾವುದೇ ಅನಧಿಕೃತ ರಸಗೊಬ್ಬರ ಪರಿಶೀಲನೆಯಲ್ಲಿ ಕಂಡುಬಂದಿರುವುದಿಲ್ಲ, ಇದರಿಂದಾಗಿ ಗುಣಮಟ್ಟದ ಬಿಟ್ಟಣೆಬೀಜ ರಸಗೊಬ್ಬರ ದಾಸ್ತಾನನ್ನು ಖಾತರಿಸಿಕೊಂಡಂತಾಗಿದೆ. ರೈತರು ಬಿತ್ತನೆ ಬೀಜ ಮತ್ತು ರಸಗೊಬ್ಬರ , ಕೀಟನಾಶಕಗಳನ್ನು ಖರೀದಿ ಮಾಡಿದಾಗ, ಕಡ್ಡಾಯವಾಗಿ ಬಿಲ್ ನೀಡಲು ನೀಡಲು ಮಾಹಿತಿ ನೀಡಿದರು. ಭೂಮಿಯಲ್ಲಿ ಸಂಪೂರ್ಣ ತೇವಾಂಶ ಇದ್ದಾಗ ಮಾತ್ರ ಬಿತ್ತನೆ ಮಾಡಲು ಸಲಹೆ ನೀಡಿದರು.

ಹೆಚ್ಚಿನ ಬೆಲೆಗೆ ಮಾರಾಟ ಮಾಡದಂತೆ ತಾಕೀತು ಮಾಡಿದರು. ಮಳೆ ಅಭಾವವಿರುವುದರಿಂದ ರೈತರು ರಸಗೊಬ್ಬರವನ್ನು ವೈಜ್ಞಾನಿಕ ಶಿಫಾರಸಿನಂತೆ ಬಳಸಬೇಕೆಂದು ತಿಳಿಸಿದರು. ಪೂರ್ಣ ಪ್ರಮಾಣದ ತೇವಂಶವಾದರೆ ಮಾತ್ರ ರೈತರು ಬಿತ್ತನೆ ಮಾಡಬೇಕು.



ಯಾವುದೇ ರೀತಿಯ ಕೃತಕ ಅಭಾವ ಸೃಷ್ಟಿಸದಂತೆ, ಸರಿಯಾದ ರೀತಿಯಲ್ಲಿ ರಸಗೊಬ್ಬರ ವಿತರಿಸಲು ತಾಕೀತು ಮಾಡಿದರು, ನ್ಯಾನೋ ಯೂರಿಯಾ, ನ್ಯಾನೋ ಈಅಕಯನ್ನು ಉಪಯೋಗ ಮಾಡಲು ರೈತರಿಗೆ ಸಲಹೆ ನೀಡಿದರು.

ಕೃಷಿ ಇಲಾಖೆಯಲ್ಲಿ ಬಿತ್ತನೆ ಬೀಜ ಲಭ್ಯವಿದ್ದು ಇದರ ಸದುಪಯೋಗ ಪಡೆಯಲು ತಿಳಿಸಿದರು. ರಸಗೊಬ್ಬರ ದಾಸ್ತಾನು ಪರಿಶೀಲನೆಯಲ್ಲಿ ಶ್ಯಾಮಸುಂದರ್ ಕೃಷಿ ಅಧಿಕಾರಿ, ರಸಗೊಬ್ಬರ ಮಳಿಗೆಗಳ ಮಾಲಿಕ ಶ್ರೀಧರ್ ಶೆಟ್ಟಿ, ಕೊಟ್ರೇಶ ಬಿ, ಕೊಟ್ರೇಶ ನಾಯ್ಕ, ಪಂಪಾಪತಿ, ಜಗದೀಶ, ಪ್ರವೀಣ ಕುಮಾರ್, ನಾರಾಯಣ, ಶಿವುಕುಮಾರ ಹಾಗೂ ಇತರರು ಹಾಜರಿದ್ದರು.